# ಹಾನಗಲ್ಲು: ಕನ್ನಡವೇ ಸತ್ಯ ಕನ್ನಡವೇ ನಿತ್ಯ

ವಿದ್ಯೆಯ ಸೃಷ್ಟಿ ಕನ್ನಡ ವಿಶ್ವವಿದ್ಯಾಲಯದ ಒಂದು ಪ್ರಮುಖ ಉದ್ದೇಶ. ವಿಶ್ವದ ಜ್ಞಾನವನ್ನು ಕನ್ನಡಿಗರಿಗೆ ಮುಟ್ಟಿಸುವ ಕನ್ನಡ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸುವ ಮಹತ್ವದ ಹೊಣೆಗಾರಿಕೆ ಕನ್ನಡ ವಿಶ್ವವಿದ್ಯಾಲಯಕ್ಕಿದೆ. ವಿದ್ಯೆಯ ಸೃಷ್ಟಿ ಮತ್ತು ಪ್ರಸರಣ ಎಂದರೆ ಅದು ಕೇವಲ ವಿಶ್ವವಿದ್ಯಾಲಯದಲ್ಲಿರುವ ಅಧ್ಯಾಪಕರಿಂದ ಮಾತ್ರ ಎಂಬ ಹಮ್ಮು ನಮ್ಮದಲ್ಲ. ಇಲ್ಲಿನ ವಿವಿಧ ವಿಭಾಗಗಳ ಒಳಗಿನ ಪ್ರತಿಭಾವಂತರ ಜೊತೆಗೆ ಕರ್ನಾಟಕದ ಎಲ್ಲ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭಾ ಸಂಪನ್ನತೆಯನ್ನು ಬೆಸೆಯುವ ಕೊಂಡಿಯಂತೆ ಪ್ರತಿಯೊಂದು ವಿಭಾಗವೂ ಕೆಲಸ ಮಾಡುತ್ತದೆ. ಈ ಸುಂದರ ಬೆಸುಗೆ ಹೊಸ ಜ್ಞಾನದ ಸೃಷ್ಟಿಗೆ ಹಾಗೆಯೇ ಅರ್ಥಪೂರ್ಣ ಮೌಲ್ಯಗಳ ಪುನರ್ ಸ್ಥಾಪನೆಗೆ ಕಾರಣವಾಗಿದೆ. ವಿದ್ಯೆಯ ಸೃಷ್ಟಿಗೆ ಪೂರಕವಾದ ಹಲವು ಬಗೆಯ ಜ್ಞಾನವಾಹಿನಿಗಳ ತಿಳುವಳಿಕೆ ವಿಶ್ವವಿದ್ಯಾಲಯದ ಒಳಗೆ ರೂಪುಗೊಳ್ಳುತ್ತಿದೆ. ಕನ್ನಡ ಸಂಶೋಧನೆಯ ವಿಧಿವಿಧಾನಗಳನ್ನು ಸೃಷ್ಟಿಸುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಇವುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅನೇಕ ಕಮ್ಮಟ, ತರಬೇತಿ ಮುಂತಾದಂತೆ ಹತ್ತಾರು ಶಿಬಿರಗಳು ಇಲ್ಲಿ ನಡೆಯುತ್ತಿವೆ. ಈ ಎಲ್ಲ ಕುಲುಮೆಗಳಲ್ಲಿ ಪಕ್ವಗೊಂಡ ಜ್ಞಾನ ಪುಸ್ತಕದ ರೂಪದಲ್ಲಿ ಪ್ರಸಾರಾಂಗದ ಮೂಲಕ ಆಕಾರ ಪಡೆಯುತ್ತಿದೆ. ಕನ್ನಡ ವಿಶ್ವವಿದ್ಯಾಲಯವು ಜನಸಾಮಾನ್ಯರು, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಂಶೋಧಕರನ್ನು ತನ್ನ ಗುರಿಯನ್ನಾಗಿಟ್ಟುಕೊಂಡು ಹಲವು ಬಗೆಯ ಕಾರ್ಯಯೋಜನೆಗಳನ್ನು ಜಾರಿಗೆ ತಂದಿದೆ. ಜನಸಾಮಾನ್ಯರ ತಿಳುವಳಿಕೆಗಾಗಿ ನವಸಾಕ್ಷರ ಮಾಲೆ ಮತ್ತು ಮಂಟಪ ಮಾಲೆ ಎಂಬ ಪುಸ್ತಕಗಳು, ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳು, ಸಂಶೋಧಕರಿಗೆ ಹಲವು ಬಗೆಯ ವಿಶ್ವಕೋಶಗಳು ಮುಂತಾದಂತೆ ವೈವಿಧ್ಯಮಯ ಜ್ಞಾನ ಸೃಷ್ಟಿ ಇಲ್ಲಿ ನಡೆಯತ್ತಿದೆ. ಇವೆಲ್ಲವನ್ನೂ ಮೀರಿ ಮತ್ತೊಂದು ಗುರಿ ಕನ್ನಡ ವಿಶ್ವವಿದ್ಯಾಲಯಕ್ಕೆ ಇದೆ. ಅದೇನೆಂದರೆ ಕನ್ನಡ ಸಂಸ್ಕೃತಿಯ ಅಮೂಲಾಗ್ರ ಶೋಧ ನಡೆಸುವ ಮೂಲಕ ದೇಸಿ ಚಿಂತನಾಕ್ರಮವೊಂದನ್ನು ರೂಪಿಸುವುದು. ಭಾರತೀಯ ಸಂಸ್ಕೃತಿ ಎಂದು ಏಕಮುಖವಾಗಿ ಸಾರ್ವತ್ರೀಕರಿಸುವ ಭ್ರಮೆಯಿಂದ ಹೊರಬಂದು ಪ್ರತಿಯೊಂದು ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆಯೆಂಬ ವಾಸ್ತವವಾದ ನೆಲೆಯಲ್ಲಿ ಕನ್ನಡ ನೆಲದ ಗುಣ ಹುಡುಕುವ ಕಾರ್ಯದಲ್ಲಿ ನಾವು ಈಗ ಮಗ್ನರಾಗಿದ್ದೇವೆ. ಆ ಮೂಲಕ ನಿರ್ಲಕ್ಷಿಸಲ್ಪಟ್ಟ ಕ್ಷೇತ್ರಗಳನ್ನು ಪ್ರಧಾನ ನೆಲೆಗೆ ತರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ದೇಶದ ಅಥವಾ ನಾಡಿನ ಅಂಚಿನ ಜನಕ್ಕೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆಯೆಂದು, ಆ ಸಂಸ್ಕೃತಿಗೆ ತನ್ನದೇ ವಿಶಿಷ್ಟ ಪರಂಪರೆಯಿದೆ ಎಂದು, ಆ ಪರಂಪರೆಯೇ ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆ ಎಂದು ಸ್ಪಷ್ಟ ಮಾತುಗಳಿಂದ ನಿರ್ವಚಿಸಬೇಕಾದ ಕಾಲವೊಂದು ಈಗ ಬಂದಿದೆ. ಆ ಮೂಲಕ ಕನ್ನಡ ನಾಡಿನ ಸರ್ವತೋಮುಖ ಬೆಳವಣಿಗೆಯನ್ನು ಯಾವ ಯಾವ ದಿಸೆಯಲ್ಲಿ ಸಾಧಿಸಬೇಕೆಂಬ ದೂರದೃಷ್ಟಿ ಮತ್ತು ಆಶಾವಾದ ಕೂಡ ನಮ್ಮ ಅಧ್ಯಯನಗಳ ಹಿಂದೆ ಇದೆ.

ಒಂದು ಕಡೆಯಿಂದ ವಸಾಹತುಶಾಹಿ ಧೋರಣೆಯ ಪಾಶ್ಚಾತ್ಯ ಪ್ರಭಾವ, ಮತ್ತೊಂದು ಕಡೆ ವೈದಿಕಶಾಹಿಗಳ ವೈಭವೀಕರಣ ಇವುಗಳಿಂದ ಆವರಿಸಿದ ವಿಸ್ಮೃತಿಯಿಂದ ಬಿಡುಗಡೆಗೊಳ್ಳುವ ಮೂಲಕ ಕನ್ನಡ ಸಂಸ್ಕೃತಿಯೊಂದನ್ನು ಪ್ರತಿಷ್ಠಪಿಸುವ ಕೆಲಸ ಆಗಬೇಕಾಗಿದೆ. ಇಂದಿನ ಜಾಗತೀಕರಣ, ಕೋಮುವಾದ ಹಿಂಸೆಯ ವಾತಾವರಣದಲ್ಲಿ ನಲುಗುತ್ತಿರುವ ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಹುಟ್ಟುಹಾಕುವ ಬರಹಗಳನ್ನು ಪ್ರೋತ್ಸಾಹಿಸುವ ಕೆಲಸವೂ ಆಗಬೇಕಾಗಿದೆ. ಒಟ್ಟಾರೆಯಾಗಿ ಆಲೋಚನೆಗಳ ಮತ್ತು ಸಿದ್ಧಾಂತಗಳ ಮೌಲ್ಯೀಕರಣದ ಅಗತ್ಯವನ್ನು ಮನಗಂಡಿರುವ ಕನ್ನಡ ವಿಶ್ವವಿದ್ಯಾಲಯ ದೇಸಿ ಮತ್ತು ಸಾಂಪ್ರದಾಯಿಕ ಮೌಲ್ಯಗಳ ನಡುವೆ ಮುಖಾಮುಖಿಯೊಂದನ್ನು ಹುಟ್ಟು ಹಾಕುವ ಮೂಲಕ ಸತ್ಯದ ಬೆಳಕಿನೆಡೆಗೆ ಕೊಂಡೊಯ್ಯುವ ಕೆಲಸವನ್ನು ಮಾಡುತ್ತಿದೆಯೆಂಬ ಆಶಯ ನಮ್ಮದಾಗಿದೆ.

ಸ್ಥಳೀಯ ಚರಿತ್ರೆ ಮತ್ತು ಪುರಾತತ್ತ್ವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಲಾಗುತ್ತಿರುವ ಸ್ಥಳಿಯ ಚರಿತ್ರೆ ಮತ್ತು ಪುರಾತತ್ತ್ವ ಮಾಲೆಯ ಗ್ರಂಥಗಳು ಆಯಾಯ ಪ್ರದೇಶದ ಐತಿಹಾಸಿಕ ಅನನ್ಯತೆಯನ್ನು ಸೂಕ್ತ ರೀತಿಯಲ್ಲಿ ನೆನಪಿಸುವ ಕೆಲಸ ಮಾಡುತ್ತಿವೆ. ಒಂದು ಪ್ರದೇಶದ ಮೌಖಿಕ ಚರಿತ್ರೆಯನ್ನು ಪರಿಗಣನೆಗೆ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಅದು ಅರ್ಧಸತ್ಯದ ಇತಿಹಾಸವಾಗುತ್ತದೆ. ವಸಾಹತು ಪೂರ್ವಕಾಲದ ಚರಿತ್ರೆಯ ರಚನೆ ಹೆಚ್ಚಾಗಿ ಈ ನೆಲೆಯಲ್ಲಿ ಆದ ಕಾರಣ ಇತಿಹಾಸದ ಸಮಗ್ರ ನೋಟ ಸಾಧ್ಯವಾಗಲಿಲ್ಲ. ಆದರೆ ಇತ್ತೀಚಿನ ದಶಕಗಳಲ್ಲಿ ಸ್ಥಳಿಯ ಚರಿತ್ರೆ ಮತ್ತು ಮೌಖಿಕ ಆಕರಗಳನ್ನು ಪ್ರಧಾನವಾಗಿ ಪರಿಗಣಿಸುವ ಮೂಲಕ ಚರಿತ್ರೆಯ ರಚನಾ ಶಾಸ್ತ್ರಕ್ಕೆ ಹೊಸ ಆಯಾಮ ನೀಡಲಾಗಿದೆ. ಅಂತಹ ಪ್ರಯತ್ನಗಳಲ್ಲಿ ಈ ಮಾಲೆಯ ಎರಡನೆಯ ಗ್ರಂಥವಾದ 'ಹಾನಗಲ್ಲು' ಸೇರುತ್ತದೆ. ಇದರ ಸಂಪಾದಕರಾದ ಡಾ. ವಾಸುದೇವ ಬಡಿಗೇರ ಅವರು ವೈವಿಧ್ಯಮಯ ಲೇಖನಗಳನ್ನು ಸಂಕಲಿಸಿ ಕೊಡುವುದರ ಮೂಲಕ ಸ್ಥಳಿಯ ಚರಿತ್ರೆ ಅಧ್ಯಯನಕ್ಕೆ ಮೌಲಿಕ ಕಾಣಿಕೆಯೊಂದನ್ನು ನೀಡಿದ್ದಾರೆ. ಅವರಿಗೆ ಹಾಗೂ ಲೇಖನಗಳನ್ನು ಬರೆದಿರುವ ಎಲ್ಲ ಲೇಖಕರಿಗೆ ಕೃತಜ್ಞತೆಗಳು ಸಲ್ಲುತ್ತವೆ. ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

ಡಾ. ಹಿ. ಚಿ. ಬೋರಲಿಂಗಯ್ಯ

ಕುಲಪತಿ

## ಸಂಪಾದಕರ ಮಾತು

ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗವು, ಸ್ಥಳೀಯ ಸಂಸ್ಕೃತಿಯ ಸೊಗಡನ್ನು ಮೈಗೂಡಿಸಿಕೊಂಡು ಬೆಳವಣಿಗೆ ಹೊಂದಿದ್ದರೂ, ಮುಖ್ಯವಾಹಿನಿಗೆ ಬಂದು ಮುಟ್ಟಲು ಸಾಧ್ಯವಾಗದೇ ಇರುವ ಪ್ರದೇಶಗಳನ್ನು ಸಂಶೋಧನೆ ಮತ್ತು ಅಧ್ಯಯನದ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದೆ. ಇಂಥ ಅಧ್ಯಯನದ ಫಲಿತಗಳು ಸಮಗ್ರ ಇತಿಹಾಸ ರಚನೆಯಲ್ಲಿ ಆಶಾದಾಯಕವಾಗಿ ಕಾಣುತ್ತಿವೆ.

ನಮ್ಮ ವಿಭಾಗವು ಅಲಕ್ಷಿತ ಕ್ಷೇತ್ರಗಳ ಅಧ್ಯಯನದಲ್ಲಿ ತೊಡಗಿಕೊಂಡಿರುವುದಲ್ಲದೇ ಸ್ಥಳೀಯ ಮಟ್ಟದಲ್ಲಿ ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಪರಿಣಿತ ವಿದ್ವಾಂಸರಿಂದ ಮಂಡಿತವಾದ ಲೇಖನಗಳನ್ನು ಪ್ರಕಟಿಸುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸುತ್ತ ಬರಲಾಗಿದೆ.

ಇತಿಹಾಸ ಅಧ್ಯಯನ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಂತೆ, ಸ್ಥಳಿಯ ಚರಿತ್ರೆ ವಿಶಿಷ್ಟ ಸ್ಥಾನ ಪಡೆದುಕೊಳ್ಳುತ್ತಿದೆ. ಪ್ರಾದೇಶಿಕ ಅಧ್ಯಯನದಲ್ಲಿ ಭೌಗೋಳಿಕ ಪರಿಸರ, ಮಾನವನ ಬದುಕು, ಅವನ ಸಾಂಸ್ಕೃತಿಕ ಅಭಿವೃದ್ಧಿಯ ನಿಲುವು, ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿಕಸನ ಹಾಗೂ ನಂಬಿಕೆ - ಸಂಪ್ರದಾಯ ಮೊದಲಾದುವು ಮುಖ್ಯವಾಹಿನಿಯತ್ತ ಮುಖಮಾಡಿ ನಿಲ್ಲುತ್ತವೆ.

ಪುರಾತತ್ತ್ವ ಮತ್ತು ಪ್ರಾಚೀನ ಆಕರಗಳನ್ನೇ ಪ್ರಧಾನವಾಗಿಟ್ಟುಕೊಂಡು ಬೆಳವಣಿಗೆ ಕಂಡಿರುವ ಇತಿಹಾಸ ಅಧ್ಯಯನದಲ್ಲಿ, ಆಯಾ ಪರಿಸರದ ಸಂಸ್ಕೃತಿಯ ಸಿರಿಯನ್ನು ಮನದಾಳದಲ್ಲಿಟ್ಟುಕೊಂಡು ನಿರಂತರವಾಗಿ ಮುಂದುವರಿಸಿಕೊಂಡು ಬಂದಿರುವ ಮೌಖಿಕ ಆಕರಗಳು ಮತ್ತು ಅವುಗಳ ಮಹತ್ವವನ್ನು ಗುರುತಿಸುವಲ್ಲಿ ಸ್ಥಳೀಯ ಚರಿತ್ರೆ ಪ್ರಧಾನ ಅಂಶವನ್ನಾಗಿರಿಸಿಕೊಂಡಿದೆ. ಇದರಿಂದ ತೆರೆಮರೆಯಲ್ಲಿದ್ದ ಅನೇಕ ವಿಷಯಗಳು ಸೇರ್ಪಡೆಯಾಗುವ ಮೂಲಕ ವಿಸ್ತೃತ ಬೆಳವಣಿಗೆಗೆ ಸಾಧ್ಯವಾಗಿದೆ.

ಪ್ರಸ್ತುತ ಜಾಗತೀಕರಣದಿಂದ ಸಾಂಸ್ಕೃತಿಕ ಸಂಪತ್ತು ನಶಿಸುತ್ತಿರುವ ಈ ಸಂದರ್ಭದಲ್ಲಿ ಮೌಖಿಕ ಆಕರಗಳು ಮರೆಯಾಗುವ ಆತಂಕವೂ ಇದೆ. ಈ ದೃಷ್ಟಿಯಿಂದ ಸ್ಥಳೀಯ ಮಟ್ಟದಲ್ಲಿ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು ಪ್ರಾಚೀನ ಅವಶೇಷಗಳ ಮಹತ್ವ,

ಇತಿಹಾಸ ಪ್ರಜ್ಞೆ ಮತ್ತು ಜಾಗೃತಿಯನ್ನು ಮೂಡಿಸುವ ಮೂಲಕ ಆ ಪರಿಸರದಲ್ಲಿ ಇದುವರೆಗೂ ನಡೆದ ಅಧ್ಯಯನಗಳನ್ನು ಮುಖ್ಯವಾಗಿಟ್ಟುಕೊಂಡು, ಲಭ್ಯವಿರುವ ಆಕರಗಳನ್ನು ಸಂಯೋಜಿಸಿ ವಿಚಾರ ಸಂಕಿರಣದಲ್ಲಿ ಮಂಡಿಸಲಾಗುವುದು. ಅಲ್ಲಿ ಚರ್ಚಿತವಾದ ಪ್ರತಿಕ್ರಿಯೆಗಳನ್ನು ಅಳವಡಿಸಿ, ವಿಮರ್ಶೆ - ವಿಶ್ಲೇಷಣೆಯ ಮೂಲಕ ಸಿದ್ಧಪಡಿಸಿದ ಲೇಖನಗಳನ್ನು ಪ್ರಕಟಿಸಿ ಓದುಗರಿಗೆ ತಲುಪಿಸುವ ಪ್ರಮುಖ ಯೋಜನೆ ಇದಾಗಿದೆ. ಈ ಹಿನ್ನೆಲೆಯಲ್ಲಿ ಈಗ ರೂಪ ತಳೆದಿರುವುದೇ ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ - ಹಾನಗಲ್ಲು ಗ್ರಂಥ.

ಮಲೆನಾಡು ಸೆರಗಿಗೆ ಹೊಂದಿಕೊಂಡಿರುವ ಹಾನಗಲ್ಲು ಪ್ರಾಚೀನ ಕಾಲದಿಂದಲೂ ಶ್ರೀಮಂತ ಸಂಸ್ಕೃತಿಗೆ ಹೆಸರುವಾಸಿಯಾಗಿದೆ. ಬಯಲುಸೀಮೆ ಮತ್ತು ಮಲೆನಾಡು ಪ್ರದೇಶಗಳ ಕೊಂಡಿಯಾಗಿರುವ ಇದು ಪ್ರಮುಖ ವ್ಯಾಪಾರ ಕೇಂದ್ರವೂ ಹೌದು. ಪ್ರಾಗಿತಿಹಾಸ ಕಾಲದಿಂದಲೂ ಈ ಪರಿಸರದಲ್ಲಿ ಉತ್ಪಾದನೆಯಾಗುತ್ತಿದ್ದ ಕಬ್ಬಿಣದ ಉಪಕರಣಗಳು ಮತ್ತು ಆನಂತರ ಸಾಂಬಾರ ಪದಾರ್ಥಗಳು ದೇಶ - ವಿದೇಶಗಳಲ್ಲಿ ಬಹು ಬೇಡಿಕೆಯನ್ನು ಪಡೆದಿದ್ದವು. ಈ ಕಾರಣ ರೋಮ್ ದೇಶದೊಂದಿಗೆ ನಿರಂತರ ಸಂಪರ್ಕ ಪಡೆಯಲು ಸಾಧ್ಯವಾಯಿತು. ಇದಕ್ಕೆ ಪೂರಕವೆಂಬಂತೆ ಆ ದೇಶದ ನಾಣ್ಯಗಳು ಹಾನಗಲ್ಲು ಸಮೀಪ ಅಕ್ಕಿಆಲೂರಿನಲ್ಲಿ ದೊರೆತಿವೆ. ವ್ಯಾಪಾರದ ಮೂಲಕವೇ ಹಾನಗಲ್ಲು ನಗರ ನಿರಂತರ ಬೆಳವಣಿಗೆ ಕಂಡಿರುವುದು ಗಮನಾರ್ಹ.

ಹಾನಗಲ್ಲು ನಗರದಲ್ಲಿ ಸಾತವಾಹನ - ಕದಂಬರ ಕಾಲಾವಧಿಯಲ್ಲಿ ನಿರ್ಮಾಣವಾದ ಮಣ್ಣಿನ ಕೋಟೆ, ಕರ್ನಾಟಕದ ಕೋಟೆಗಳ ಅಧ್ಯಯನದಲ್ಲಿ ವಿಶೇಷ ಸ್ಥಾನ ಪಡೆದುಕೊಂಡಿದೆ. ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಧಿಕಾರಕ್ಕೆ ಬಂದ ಕದಂಬರಿಗೆ ಹಾನಗಲ್ಲು - ತಾಳಗುಂದ ಪ್ರಮುಖ ಆಡಳಿತ ಕೇಂದ್ರಗಳಾಗಿದ್ದವು. ಬಾದಾಮಿ ಚಾಲುಕ್ಯರು ಮತ್ತು ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಚಿಕ್ಕಪುಟ್ಟ ಪ್ರದೇಶಗಳ ಅಧಿಕಾರ ವಹಿಸಿಕೊಂಡಿದ್ದ ಕದಂಬ ವಂಶದವರು ಕಲ್ಯಾಣದ ಚಾಲುಕ್ಯರ ವೇಳೆಗೆ ಹಾನಗಲ್ಲನ್ನು ಕೇಂದ್ರವನ್ನಾಗಿ ಮಾಡಿಕೊಂಡು ಮಹಾಮಂಡಳೇಶ್ವರ ಪದವಿಗೇರಿದರು. ಆಗ ಹಾನಗಲ್ಲು ೫೦೦ ಹಳ್ಳಿಗಳನ್ನೊಳಗೊಂಡು ಪಾನುಂಗಲ್ಲ ಐನೂರು ಎಂಬ ಖ್ಯಾತಿಗೆ ಒಳಗಾಯಿತು. ಇದರಲ್ಲಿ ಸುತ್ತಮುತ್ತಲಿನ ಸ್ಥಳಗಳಾದ ಹೊಸನಾಡು-೭೦, ಎಡವೊಳಲ್-೭೦, ಪಲಂಬಿ-೭೦, ಕೊಂಡರಟ್ಟಿ-೭೦, ಬಾಗಲ್-೭೦, ಎರಡು ಜೊಹಳಿಗೆ-೭೦, ಕುಂದುವರ-೩೦, ಎಳಂಬಿ-೧೦, ನಿಡಗುಂದಿಗೆ-೧೨ ಹೀಗೆ ಅನೇಕ ಆಡಳಿತ ಉಪ ವಿಭಾಗಗಳು ಸಮಾವೇಶಗೊಂಡಿದ್ದವು.

ಚಾಲುಕ್ಯರಿಗೆ ನಿಷ್ಠರಾಗಿದ್ದ ಕದಂಬರು ನಿರಂತರವಾಗಿ ಹೊಯ್ಸಳರ ಧಾಳಿಗೆ ಒಳಗಾಗಬೇಕಾಯಿತು. ಕದಂಬ ರಾಜ್ಯವನ್ನು ಉಳಿಸಲು ಸೈನಿಕರು-ಸೇನಾಧಿಪತಿಗಳು ಕೋಟೆಕಾಳಗದಲ್ಲಿ ತಮ್ಮನ್ನು ಅರ್ಪಿಸಿಕೊಂಡರು. ಅವರ ನೆನಪಿಗಾಗಿ ರಚನೆಯಾಗಿರುವ ವೀರಗಲ್ಲುಗಳು ಕಥಾನಕ ಭಾಗಗಳನ್ನು ಬಿಚ್ಚಿ ಹೇಳುವಂತಿವೆ. ನಿರಂತರವಾಗಿ ಸ್ವಾಭಿಮಾನದ ಪ್ರತೀಕವೆಂಬಂತೆ ಬಾಳಿ ಬದುಕಿದ ಇಲ್ಲಿಯ ಜನರು ಸ್ವತಂತ್ರ ಭಾರತದ ರಚನೆಗೆ ಬ್ರಿಟಿಷರ ವಿರುದ್ಧ ನಡೆದ ಅನೇಕ ಸಂಘಟನೆ, ಪ್ರತಿಭಟನೆಗಳಲ್ಲಿ ಪಾಲ್ಗಂಡು ದುಡಿದಿದ್ದಾರೆ. ಇಂಥ ಪ್ರಮುಖ ಮತ್ತು ಪೂರ್ಣ ಘಟನಾವಳಿಗಳನ್ನು ಒಳಗೊಂಡಂತೆ ರಚನೆಯಾಗಿರುವು ಹಾನಗಲ್ಲು ಗ್ರಂಥ.

ಇಂಥ ಮಹತ್ತರ ಯೋಜನೆಯನ್ನು ಮುಂದುವರಿಸಿಕೊಂಡು ಬರುವಲ್ಲಿ ಸ್ಫೂರ್ತಿಯ ನೆಲೆಯಾಗಿ ನಿಂತವರು ಅಂದಿನ ಕುಲಪತಿಗಳಾಗಿದ್ದ ಡಾ. ಬಿ. ಎ. ವಿವೇಕ ರೈ, ಡಾ. ಕೆ. ವಿ. ನಾರಾಯಣ ಮತ್ತು ಇಂದಿನ ಕುಲಪತಿಗಳಾದ ಡಾ. ಹಿ. ಚಿ. ಬೋರಲಿಂಗಯ್ಯ ಅವರುಗಳು ಹಾಗೆಯೇ ಕುಲಸಚಿವರಾದ ಶ್ರೀ ವಿ. ಶಂಕರ್, ಪ್ರಸಾರಾಂಗದ ನಿರ್ದೇಶಕರಾದ ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಯನಾಂಗದ ನಿರ್ದೇಶಕರಾದ ಡಾ. ಪಾಂಡುರಂಗ ಬಾಬು, ಡಾ. ಪ್ರೇಮಕುಮಾರ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಹಾನಗಲ್ಲಿನಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಲು ಸ್ಥಳೀಯ ಜನತಾ ಶಿಕ್ಷಣ ಸಂಸ್ಥೆಯ ಶ್ರೀ ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಹಯೋಗದ ಮೂಲಕ ಸಹಾಯ ಸಹಕಾರವನ್ನು ನೀಡಿದ ಜನಪ್ರಿಯ ನಾಯಕರಾದ ಸನ್ಮಾನ್ಯ ಶ್ರೀ ಸಿ. ಎಂ. ಉದಾಸಿಯವರನ್ನು ಮರೆಯುವಂತಿಲ್ಲ. ಜನತಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎ. ಎಸ್. ಬಳ್ಳಾರಿ, ಶ್ರೀ ಎಂ. ಬಿ. ಕಲಾಲ್, ಶ್ರೀ

ಬಸವರಾಜ ಅಕ್ಕಿವಳ್ಳಿ, ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಸಿ. ಎಸ್. ಬಡಿಗೇರ, ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೊ. ವ್ಹಿ. ಜಿ. ಶಾಂತಪುರಮಠ ಹಾಗೂ ಜನತಾ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಸದಸ್ಯರು, ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ವಿಚಾರ ಸಂಕಿರಣದ ಜವಾಬ್ದಾರಿಯನ್ನು ಹೊತ್ತು ಯಶಸ್ವಿಗೊಳಿಸಿದ್ದಾರೆ. ಈ ವಿಚಾರ ಸಂಕಿರಣಕ್ಕೆ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಸಹಯೋಗದೊಂದಿಗೆ ಸಹಕಾರ ನೀಡಿದ ನಿರ್ದೇಶಕರಾದ ಡಾ. ಆರ್. ಗೋಪಾಲ ಮತ್ತು ಸಿಬ್ಬಂದಿ ವರ್ಗಕ್ಕೂ, ಬಳ್ಳಾರಿಯ ಎ.ಸಿ.ಸಿ. ಸಿಮೆಂಟ್ ಪ್ರಾದೇಶಿಕ ವ್ಯವಸ್ಥಾಪಕರಾದ ಶ್ರೀ ಚಂದ್ರಕಾಂತ ಎಸ್. ಸೋನಾರ ಅವರಿಗೂ ಆಭಾರಿಯಾಗಿದ್ದೇನೆ.

ವಿಚಾರ ಸಂಕಿರಣದ ದಿವ್ಯ ಸಾನಿಧ್ಯ ವಹಿಸಿದ್ದ ಹುಬ್ಬಳ್ಳಿ ಮೂರುಸಾವಿರ ಮಠದ ಪೂಜ್ಯ ಶ್ರೀ ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳಿಗೆ ನಮನಗಳು. ಅಧ್ಯಕ್ಷತೆಯನ್ನು ವಹಿಸಿದ್ದ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಎಂ. ಎಂ. ಕಲಬುರ್ಗಿ, ಆಶಯ ಭಾಷಣ ಮಾಡಿದ ಡಾ. ಅ. ಸುಂದರ ಮತ್ತು ಗೋಷ್ಠಿಗಳ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಎಸ್. ರಾಜಶೇಖರ, ಡಾ. ರು. ಮಾ. ಷಡಕ್ಷರಯ್ಯ, ಬಸವರಾಜ ಮಲಶೆಟ್ಟಿ, ಡಾ. ದೇವರಕೊಂಡಾರೆಡ್ಡಿ ಅವರಿಗೂ ಹಾಗೂ ಸಕಾಲದಲ್ಲಿ ಲೇಖನಗಳನ್ನು ಕೊಟ್ಟು ಸಹಕರಿಸಿದ ಎಲ್ಲ ವಿದ್ವಾಂಸರಿಗೂ,


ಪುಸ್ತಕ ಪ್ರಕಟಣೆಯಲ್ಲಿ ಸಹಕರಿಸಿದ ಪ್ರಸಾರಾಂಗದ ಸಹಾಯಕ ನಿರ್ದೇಶಕರಾದ ಶ್ರೀ ಸುಜ್ಞಾನಮೂರ್ತಿ, ಮುಖಪುಟ ತಯಾರಿಸಿದ ಕೆ. ಕೆ. ಮಕಾಳಿ, ಅಕ್ಷರ ಸಂಯೋಜನೆ ಮಾಡಿದ ಇಂಟ್ಯೆಡ್ ಗ್ರಾಫಿಕ್ಸ್ ಅವರಿಗೂ,

ವಿಚಾರ ಸಂಕಿರಣದ ವ್ಯವಸ್ಥೆ ಮತ್ತು ಪುಸ್ತಕ ಪ್ರಕಟಣೆಯಲ್ಲಿ ಸಹಕರಿಸಿದ ಡಾ. ಗಂಗಾಧರ ದೈವಜ್ಞ, ಡಾ. ವ್ಹಿ. ಎಲ್. ಪಾಟೀಲ, ವಿಭಾಗದ ಸದಸ್ಯರಾದ ಡಾ. ಸಿ. ಮಹದೇವ, ಡಾ. ಸಿ. ಎಸ್. ವಾಸುದೇವನ್, ಡಾ. ರಮೇಶ ನಾಯಕ, ಡಾ. ಎಸ್. ವೈ. ಸೋಮಶೇಖರ ಹಾಗೂ ಶ್ರೀ ಎಚ್. ಬಿ. ನಾಗಯ್ಯ, ಶ್ರೀ ಗುರುಮೂರ್ತಿ, ಶ್ರೀ ಬರಲಿಂಗಪ್ಪ, ಶ್ರೀ ರಮೇಶ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು ಸಲ್ಲುತ್ತವೆ.

ಡಾ. ವಾಸುದೇವ ಬಡಿಗೇರ

# ಛಾಯಾಚಿತ್ರಗಳು



































# ೧. ಆಶಯ ಭಾಷಣ

ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ - ಹಾನಗಲ್ಲು ಎಂಬ ಈ ವಿಚಾರ ಸಂಕಿರಣದಲ್ಲಿ ಕರ್ನಾಟಕ ದೇವಾಲಯ ಕೋಶ : ವಿಜಾಪುರ ಜಿಲ್ಲೆ ಮತ್ತು ಧಾರವಾಡ ಜಿಲ್ಲೆ ಎಂಬ ಎರಡು ಪುಸ್ತಕಗಳು ಬಿಡುಗಡೆಗೊಂಡಿರುವುದು ಸಂತಸದ ಸಂಗತಿ. ಈ ದೇವಾಲಯ ಕೋಶಗಳ ವಿಶೇಷತೆ, ಇದುವರೆಗೂ ಅಧ್ಯಯನಕ್ಕೆ ಒಳಪಡದಿರುವ ಅನೇಕ ದೇವಾಲಯಗಳು ಇದರಲ್ಲಿ ಸೇರ್ಪಡೆಗೊಂಡಿರುವುದು. ಈ ಕೋಶಗಳಲ್ಲಿ ಉಲ್ಲೇಖಿತವಾದ ದೇವಾಲಯಗಳು ಸೂಕ್ಷ್ಮ ಮತ್ತು ವಿಸ್ತೃತ ಅಧ್ಯಯನ ಮಾಡುವವರಿಗೆ ಪ್ರಮುಖ ಆಕರಗಳಾಗುತ್ತವೆ. ಶ್ರೀಸಾಮಾನ್ಯನಿಗೂ ತನ್ನ ಪರಿಸರದಲ್ಲಿರುವ ಪ್ರಾಚೀನ ದೇವಾಲಯಗಳ ಇತಿಹಾಸ ಮತ್ತು ಕಲಾವಂತಿಕೆಯನ್ನು ಅರಿಯಲು ಇಂಥ ಗ್ರಂಥಗಳು ಮಾದರಿಯ ಪೀಠಿಕೆಯಾಗುತ್ತವೆ. ಈ ಪ್ರಕಾರದ ಉಪಯುಕ್ತ ಮೌಲ್ಯ ಕೃತಿಗಳನ್ನು ರಚಿಸಿ ಸಮಾಜಕ್ಕೆ ಕೊಡುತ್ತಿರುವ ಕನ್ನಡ ವಿಶ್ವವಿದ್ಯಾಲಯಕ್ಕೆ ಮತ್ತು ಪರಿಶ್ರಮ, ಶ್ರದ್ಧೆ, ಆಳ ಹಾಗೂ ವ್ಯಾಪಕ ಅಧ್ಯಯನ ಮಾಡಿ ಗ್ರಂಥಗಳನ್ನು ರಚಿಸಿದ ಲೇಖಕರಿಗೆ ನಮ್ಮೆಲ್ಲರ ಹೃತ್ಪೂರ್ವಕ ಅಭಿನಂದನೆಗಳು.

ಈ ಸಂದರ್ಭದಲ್ಲಿ ದೇವಾಲಯದ ವಾಸ್ತು ವಿನ್ಯಾಸದ ಬಗ್ಗೆ ಒಂದೆರಡು ಮಾತುಗಳು. ವಾಸ್ತು ವಿನ್ಯಾಸದಲ್ಲಿ ನಾನಾ ಪ್ರಕಾರಗಳಿವೆ. ಅದರಲ್ಲಿ ಒಂದಕ್ಕೊಂದು ಪೂರಕವಾದ ಎರಡು ಅಭೇದ ಅಂಶಗಳು : ತಳವಿನ್ಯಾಸ ಮತ್ತು ಊರ್ಧ್ವ ವಿನ್ಯಾಸ. ಇವೆರಡರ ಆಧಾರದ ಮೇಲೆ ದೇವಾಲಯ ಮಾದರಿಗಳನ್ನು ವರ್ಗೀಕರಿಸಲಾಗಿದೆ. ತಳ ವಿನ್ಯಾಸ ದೃಷ್ಟಿಯಿಂದ ಒಂದು ಗರ್ಭಗೃಹದ ದೇವಾಲಯವು ಸಾಮಾನ್ಯ. ಎರಡರಿಂದ ಐದು ಗರ್ಭಗೃಹಗಳಿರುವ ದೇವಾಲಯಗಳು ಅಪರೂಪ. ಶಿವ ಮತ್ತು ಸೂರ್ಯ ಇಲ್ಲವೆ ಬ್ರಹ್ಮ, ವಿಷ್ಣು, ಮಹೇಶ್ವರ ಇಲ್ಲವೆ ಆಯ್ದ ತೀರ್ಥಂಕರರ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಲು ಕ್ರಮವಾಗಿ ಎರಡು, ಮೂರು ಹಾಗೂ ಐದು ಗರ್ಭಗೃಹಗಳುಳ್ಳ ದೇವಾಲಯಗಳು ನಿರ್ಮಾಣವಾದವು. ಲಕ್ಕುಂಡಿಯ ಕಾಶಿವಿಶ್ವೇಶ್ವರ, ಬಾದಾಮಿಯ ಜಂಬುಲಿಂಗೇಶ್ವರ, ಹೂಲಿಯ ಪಂಚಲಿಂಗೇಶ್ವರ (ಮೂಲತಃ ಬಸದಿ) ಹಾಗೂ ಹುಂಚದ ಪಂಚಕೂಟ ಬಸದಿ ಈ ಮಾದರಿಯ ದೇವಾಲಯಗಳಿಗೆ ಉತ್ತಮ ನಿದರ್ಶನ. ಎರಡನೆಯದನ್ನು ಚಾಲುಕ್ಯ ವಿನಯಾದಿತ್ಯ, ತನ್ನ ತಾಯಿಯ ಹೆಸರಿನಲ್ಲಿ ನಿರ್ಮಿಸಿದನು. ಮುಂದೆ ಈ ಪ್ರಕಾರದ ದೇವಾಲಯಗಳು ಕರ್ನಾಟಕದಾದ್ಯಂತ ಅಲ್ಲಲ್ಲಿ ನಿರ್ಮಾಣವಾದವು. ತೀರ ಅಪರೂಪವಾಗಿ ನಾಲ್ಕು ಗರ್ಭಗೃಹಗಳುಳ್ಳ ದೇವಾಲಯಗಳೂ ಇವೆ. ಉದಾ: ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿ ಹಾಗೂ ಸಿರಿವಾಳ (ಶಹಪುರ ತಾಲೂಕು, ಕಲ್ಬುರ್ಗಿ ಜಿಲ್ಲೆ)ದ ಸಿದ್ಧಲಿಂಗೇಶ್ವರ ದೇವಾಲಯಗಳು. ಷಟ್ಕೂಟ ದೇವಾಲಯವು ಅತಿ ಅಪರೂಪ. ಸಿಂದಗಿ ತಾಲೂಕಿನ (ವಿಜಾಪುರ ಜಿಲ್ಲೆ) ಯಂಕಂಚಿಯಲ್ಲಿ ಏಳು ಗರ್ಭಗೃಹಗಳುಳ್ಳ ದೇವಾಲಯವೊಂದಿದೆ. ಇಂಥ ಅಪರೂಪದ ದೇವಾಲಯ ಈಗ ತಿಳಿದಿರುವಂತೆ ಕರ್ನಾಟಕದಲ್ಲಿ ಇದೊಂದೆ. ಕುಕ್ಕನೂರಿನ ಒಂಬತ್ತು ಗರ್ಭಗೃಹಗಳುಳ್ಳ ನವಲಿಂಗೇಶ್ವರ ದೇವಾಲಯ ಅಸಾಮಾನ್ಯ. ಹೆಸರೇ ಸೂಚಿಸುವಂತೆ ಪ್ರತಿಯೊಂದರಲ್ಲಿಯೂ ಶಿವಲಿಂಗಗಳಿವೆ. ಈ ಮಾದರಿಯ ದೇವಾಲಯಗಳನ್ನು ಏಕ, ದ್ವಿ, ಚತುಷ್, ಪಂಚ, ಸಪ್ತ ಮತ್ತು ನವಕೂಟ ದೇವಾಲಯಗಳೆಂದು ವಿಂಗಡಿಸಲಾಗಿದೆ. ಈ ಮಾದರಿಯ ದೇವಾಲಯಗಳಲ್ಲಿ ನಾಲ್ಕರಿಂದ ಅರವತ್ನಾಲ್ಕು ಕಂಬಗಳುಳ್ಳ ಸಭಾ ಮಂಟಪ, ಒಂದರಿಂದ ನಾಲ್ಕು ಮುಖಮಂಟಪಗಳು ಇರಬಹುದು. ಮಧ್ಯದಲ್ಲಿ ಒಂದು ಗರ್ಭಗೃಹವಿದ್ದು, ನಾಲ್ಕೂ ಬದಿಯಲ್ಲಿ ಒಂದೊಂದು ಮುಖಮಂಟಪವಿರುವ ದೇವಾಲಯವೂ ಅಲ್ಲೊಂದು ಇಲ್ಲೊಂದು ಇವೆ. ಉದಾ: ಉಣಕಲ್ಲಿನ ೧೧ನೆಯ ಶತಮಾನದ ಚಂದ್ರಮೌಳೇಶ್ವರ ದೇವಾಲಯ, ೧೬ನೆಯ ಶತಮಾನದ ಗೇರುಸೊಪ್ಪೆಯ ಚತುರ್ಮುಖ ಬಸದಿ. ಈ ಪ್ರಕಾರದ ದೇವಾಲಯ ಮಾದರಿಯನ್ನು ಸರ್ವತೋಭದ್ರ ಎಂದು ವಾಸ್ತು ಗ್ರಂಥಗಳಲ್ಲಿ ಹೆಸರಿಸಿದೆ.

ನರಗುಂದ ತಾಲೂಕಿನ (ಗದಗ ಜಿಲ್ಲೆ) ಕೊಣ್ಣೂರು ಗ್ರಾಮದಲ್ಲಿರುವ ಪರಮೇಶ್ವರ ದೇವಾಲಯವನ್ನು ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷನ ದಂಡನಾಯಕ ಬಂಕೆಯ ಅರಸ ಕಟ್ಟಿಸಿದ್ದು, ಸುಮಾರು ಕ್ರಿ.ಶ. ೮೬೦ರಲ್ಲಿ ನಿರ್ಮಾಣವಾದ ಇದು ಮೂಲತಃ ಜೈನ ಬಸದಿ. ಇದಕ್ಕೆ ಬಂಕೆಯ ಅರಸ ತನ್ನ ಸ್ವಾಮಿ (ಚಕ್ರವರ್ತಿ)ಯಿಂದ ದಾನ - ದತ್ತಿಗಳನ್ನು ಕೊಡಿಸಿದನು. ಈ ಎಲ್ಲಾ ವಿಷಯಗಳನ್ನು

ಒಂದು ತಾಮ್ರಪಟ ಶಾಸನದಲ್ಲಿ ಬರೆಯಿಸಲಾಗಿತ್ತು. ಈ ಶಾಸನದ ಎಲ್ಲ ವಿಷಯಗಳನ್ನು ಪೂರ್ಣವಾಗಿ ಯಥಾವತ್ತಾಗಿ ಆ ದೇವಾಲಯದಲ್ಲಿರುವ ೧೧ನೆಯ ಶತಮಾನದ ಶಿಲಾಶಾಸನದಲ್ಲಿದೆ. ತಾಮ್ರ ಶಾಸನವು ಈಗ ಇಲ್ಲದಾಗಿದೆ. ಈ ದೇವಾಲಯ ನೋಡುವುದಕ್ಕೆ ಸಾಧಾರಣವಾಗಿದ್ದರೂ, ೧೨-೧೩ನೆಯ ಶತಮಾನದ ಹೊಯ್ಸಳ ವಾಸ್ತುಶಿಲ್ಪದ ಒಂದು ವಿಶಿಷ್ಟ ಲಕ್ಷಣವಾದ ಗರ್ಭಗೃಹವು ನಕ್ಷತ್ರಾಕಾರ ತಳವಿನ್ಯಾಸದಲ್ಲಿರುವುದು ಕುತೂಹಲಕಾರಿ. ನಕ್ಷತ್ರಾಕಾರ ವಾಸ್ತುವಿನ್ಯಾಸವು ಹೊಯ್ಸಳರ ಕೊಡುಗೆಯೆಂದು ೧೯೬೦ರವರೆಗೂ ತಿಳಿಯಲಾಗಿತ್ತು. ಈ ಕೊಡುಗೆ ಕೊಣ್ಣೂರಿನ ಬಸದಿಯ ಶ್ರೇಷ್ಠ ವಾಸ್ತು ಶಿಲ್ಪಿಯದು. ಅದು ಬೆಳೆಯುತ್ತ ಈ ಪ್ರದೇಶಕ್ಕೆ ಹತ್ತಿರದಲ್ಲಿರುವ ಸವಡಿಯ (೧೦ನೆಯ ಶತಮಾನದ ಆದಿ ಭಾಗ) ಬ್ರಹ್ಮೇಶ್ವರ (ತ್ರೈಪುರುಷ = ಬ್ರಹ್ಮ, ಶಿವಲಿಂಗ, ವಿಷ್ಣು) ದೇವಾಲಯದಲ್ಲಿ ಕಾಣಿಸಿಕೊಳ್ಳುವುದು. ಇದರ ಗರ್ಭಗೃಹವು ಕೂಡಾ ನಕ್ಷತ್ರಾಕಾರ ವಿನ್ಯಾಸದಲ್ಲಿದೆ. ನಂತರ ನಿರ್ಮಾಣವಾದ, ಭಾರತದಲ್ಲಿಯೇ ವಿಶಿಷ್ಟ ಮಾದರಿಯದೆಂಬ ಹೆಗ್ಗಳಿಕೆಗೆ ಪಾತ್ರವಾದ ಡಂಬಳದ ದೊಡಬಸವಣ್ಣ ದೇವಾಲಯದ ಗರ್ಭಗೃಹವೂ ಇದೆ ವಿನ್ಯಾಸದಲ್ಲಿದೆ. ಅತ್ಯಂತ ವಿಸ್ಮಯಕಾರಿ ಅಂಶವೆಂದರೆ ಇದರ ಸಭಾಮಂಟಪವೂ ನಕ್ಷತ್ರಾಕೃತಿ ತಳವಿನ್ಯಾಸದಲ್ಲಿರುವುದು. ಗರ್ಭಗೃಹ ಮತ್ತು ಸಭಾಮಂಟಪ ನಕ್ಷತ್ರಾಕಾರದಲ್ಲಿರುವ ಏಕೈಕ ದೇವಾಲಯ ಇದಾಗಿದೆ. ಕ್ರಿ. ಶ. ೧೧ನೆಯ ಶತಮಾನದ ಆದಿ ಭಾಗದಲ್ಲಿ ಹೊಯ್ಸಳ ವಾಸ್ತು ಕಲೆಯಲ್ಲಿ ಕೆಲಸ ಮಾಡಿದ ಕೆಲವು ಶಿಲ್ಪಿಗಳು ಲಕ್ಕುಂಡಿ - ಬಳ್ಳಿಗಾವೆ ಪ್ರದೇಶದವರು. ಇದರಿಂದ ಒಂದು ಪರಿಸರದ ವಿಶಿಷ್ಟ ನಿರ್ಮಿತಿ ಮತ್ತೊಂದೆಡೆಗೆ ಪ್ರಸರಣವಾಗಿರುವುದನ್ನು ದೇವಾಲಯಗಳ ಸೂಕ್ಷ್ಮ ಅಧ್ಯಯನಗಳಿಂದ ತಿಳಿದುಕೊಳ್ಳಬಹುದಾಗಿದೆ. ರೋಣ ತಾಲೂಕಿನ (ಗದಗ ಜಿಲ್ಲೆ) ನರೆಗಲ್ಲಿನಲ್ಲಿರುವ ವಿಷ್ಣುದೇವಾಲಯದ ಸಭಾಮಂಟಪದೊಳಗಿನ ಎರಡೂ ಬದಿಗಳಲ್ಲಿ ಆಯತಾಕಾರದ ಗರ್ಭಗೃಹವಿದ್ದು, ಒಂದೊಂದರೊಳಗೆ ತೀರ್ಥಂಕರ ಮೂರ್ತಿಗಳಿದ್ದ ೧೨ ಕುಳಿಗಳುಳ್ಳ ಉದ್ದನೆಯ ಪೀಠವಿದೆ. ಈ ಒಂದು ಮಾದರಿ ೯ನೆಯ ಶತಮಾನದ ಕೊನೆಯ ಭಾಗದಿಂದ ೧೬ನೆಯ ಶತಮಾನದ ಕೊನೆಯವರೆಗೆ ವಿಶೇಷವಾದ ಬೆಳವಣಿಗೆ ಕಂಡಿತು.

ಊರ್ಧ್ವ ವಿನ್ಯಾಸದ ಆಧಾರದ ಮೇಲೆ ವಿಜಾಪುರ - ಧಾರವಾಡ ಪ್ರದೇಶದಲ್ಲಿ ಮೂಲಭೂತ ಐದು ಮಾದರಿಗಳನ್ನು ಕಾಣಬಹುದು. ಅವು ದ್ರಾವಿಡ ವಿಮಾನ, ರೇಖಾನಾಗರ, ವೇಸರ, ಫಾಂಸನ (ಕದಂಬನಾಗರ) ಮತ್ತು ಮಂಟಪ. ಇವೆಲ್ಲ ಮಾದರಿಗಳನ್ನು ಬಾದಾಮಿ - ಪಟ್ಟದಕಲ್ಲು - ಐಹೊಳೆಯಲ್ಲಿ ಕಾಣಬಹುದು. ಉದಾಃ ಕ್ರಮವಾಗಿ ಪಟ್ಟದಕಲ್ಲಿನ ಸಂಗಮೇಶ್ವರ, ಗಳಗನಾಥ, ವಿರೂಪಾಕ್ಷ, ಐಹೊಳೆಯ ಮಲ್ಲಿಕಾರ್ಜುನ ಮತ್ತು ಲಾಡ್ ಖಾನ್. ಹಾನಗಲ್ಲಿನ ಗಣೇಶ ದೇವಾಲಯವು ಒಂದು ವಿಶಿಷ್ಟ ಅನೇಕಾಂಡ ರೇಖಾನಾಗರ ಮಾದರಿ. ಮಂಡ್ಯ ಜಿಲ್ಲೆಯ ಕಂಬದ ಹಳ್ಳಿಯ ದ್ವಿಕೂಟ ಮತ್ತು ತ್ರಿಕೂಟ ಮಾದರಿಯ ಎರಡು ದೇವಾಲಯಗಳು ಒಂದರ ಪಕ್ಕದಲ್ಲೊಂದು ಇರುವ ಒಂದು ಸಂಕೀರ್ಣ. ಗರ್ಭಗುಡಿಯ ಮೇಲಿನ ಕಟ್ಟಡ (ಶಿಖರ)ದ ಸ್ವರೂಪದ ಮೇಲೆ ಗುರುತಿಸಲಾಗುತ್ತದೆ. ದ್ರಾವಿಡ ವಿಮಾನ ಮಾದರಿಯ ತ್ರಿಕೂಟ ದೇವಾಲಯದ ಶಿಖರ(ಸ್ತೂಪಿ)ಗಳು ವೈಶಿಷ್ಟ್ಯಪೂರ್ಣವಾಗಿವೆ. ಒಂದರದು ಚೌಕೋನವಾಗಿದ್ದರೆ, ಇನ್ನೊಂದರದ್ದು ವೃತ್ತಾಕಾರ, ಮತ್ತೊಂದರದ್ದು ಅಷ್ಟಕೋನ. ಇಂಥ ಹಲವಾರು ದೇವಾಲಯಗಳ ಮಾದರಿಗಳನ್ನು ಕಾಣಬಹುದು.

ಯಾವುದೇ ಒಂದು ಕಲೆ ವಿಕಾಸ ಹಂತ ತಲುಪುವುದಕ್ಕೆ ಅನೇಕ ಘಟ್ಟಗಳಲ್ಲಿ ಪರಿವರ್ತನೆಯಾಗುತ್ತ ಬರುತ್ತದೆ. ಈ ಹಂತಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ಅದರ ಪರಿಪೂರ್ಣ ಇತಿಹಾಸ ನಿರ್ಮಿಸಲು ಹಾಗೂ ಶಿಲ್ಪಿ ಕಲ್ಪನಾ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಮೆಚ್ಚಿಕೊಳ್ಳಲು ಸಾಧ್ಯ.

ಹೀಗೆ ಪ್ರತಿ ಜಿಲ್ಲೆಯ ದೇವಾಲಯಗಳ ಪ್ರಧಾನ ವಿಷಯಗಳನ್ನು ಕ್ರೋಢಿಕರಿಸಿರುವ ಇಂಥ ಕೋಶಗಳು ಮಹತ್ವದ್ದಾಗಿರುತ್ತವೆ. ಇವುಗಳನ್ನು ಅಧ್ಯಯನ ಮಾಡುವಾಗ, ದೇವಾಲಯಗಳ ಸೂಕ್ಷ್ಮ ವಿವರಣೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಈ ದೇವಾಲಯಗಳ ವಾಸ್ತು ಕಲೆಯು, ನೋಡುವುದಕ್ಕೆ ಸಾಧಾರಣವಾಗಿ ಕಾಣಬಹುದು. ಕೆಲವುದರಲ್ಲಿ ಅಲಂಕರಣ ಇಲ್ಲದಿರಬಹುದು ಅಥವಾ ಹಾಳಾಗಿರಬಹುದು. ಆದರೂ ವಾಸ್ತು ವಿನ್ಯಾಸದಲ್ಲಿಯೇ ಶಿಲ್ಪಿಯ ಪ್ರತಿಭೆ ಅಡಗಿರುತ್ತದೆ. ಸೂಕ್ಷ್ಮ ದೃಷ್ಟಿಯಿಂದ ಇದನ್ನು ಗ್ರಹಿಸಲು ಸಾಧ್ಯ.

## ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ

ಅಲ್ಲಲ್ಲಿ ಐತಿಹಾಸಿಕ ಗ್ರಾಮೀಣ ಪರಿಸರದಲ್ಲಿ ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ಆಯಾ ಕ್ಷೇತ್ರಗಳಲ್ಲಿಯ ಪರಿಣಿತ ವಿದ್ವಾಂಸರೊಡನೆ ಚರ್ಚಿಸುವುದು ತುಂಬಾ ಉಪಯುಕ್ತ. ಅವರು ಇದುವರೆಗೆ ನಡೆದ ಅಧ್ಯಯನಗಳನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯದ ಮೂಲಕ ಸಂಶೋಧನೆಯಲ್ಲಿ ಕಂಡುಬಂದ ಅಮೂಲ್ಯ ವಿಷಯಗಳನ್ನು ಸಭೆಯ ಮುಂದೆ ಇಡುತ್ತಾರೆ. ಇದರಿಂದ ಮೊದಲು ಈ ಪರಿಸರದಲ್ಲಿ ಏನು ಅಧ್ಯಯನವಾಗಿದೆ; ಈಗಿನ ಹೊಸ ಸಂಶೋಧನೆಗಳೇನು ಮತ್ತು ಮುಂದೇನು ಮಾಡಬೇಕೆಂಬ ಹೊಸ ವಿಚಾರಗಳು ಸ್ಪಷ್ಟವಾಗುತ್ತವೆ. ಸ್ಥಳಿಯರಿಗೆ ತಮ್ಮ ತಮ್ಮ ಪ್ರದೇಶಗಳ ಸ್ಪೂರ್ತಿದಾಯಕ ವಸ್ತುನಿಷ್ಠ ಇತಿಹಾಸ ಮತ್ತು ಸಂಸ್ಕೃತಿಯು ಗೊತ್ತಾಗುತ್ತದೆ. ಅಭಿಮಾನದಿಂದ ಅವುಗಳನ್ನು ಉಳಿಸಿಕೊಂಡು ರಕ್ಷಿಸಿಕೊಳ್ಳುವ ರಾಷ್ಟ್ರೀಯ ಕಾರ್ಯದಲ್ಲಿ ಉತ್ಸಾಹದಿಂದ ನೆರವಾಗುತ್ತಾರೆ. ಇಂಥ ಸತತ ಪ್ರಯತ್ನಗಳಿಂದ ನಮ್ಮ ದೇಶದ ಇತಿಹಾಸದ ಪುನರ್ರಚನೆಯು ಹೆಚ್ಚು ಹೆಚ್ಚು ವಸ್ತುನಿಷ್ಠ ಹಾಗೂ ಅರ್ಥಪೂರ್ಣವಾಗುತ್ತ ಹೋಗುತ್ತದೆ.

ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದಲ್ಲಿ ಅನೇಕ ಕ್ಷೇತ್ರಗಳ ಇತಿಹಾಸ ಈಗಾಗಲೇ ತಕ್ಕಮಟ್ಟಿಗೆ ಪುನರ್ರಚಿಸಲಾಗುತ್ತಿದೆ. ಹೀಗಿರುವಾಗ ಪ್ರಸ್ತುತ ಅಧ್ಯಯನದ ಅವಶ್ಯಕತೆಯನ್ನು ಪರಿಶೀಲಿಸಬೇಕಾಗುವುದು. ನಾನು ಸುಮಾರು ೪೫ ವರ್ಷಗಳ ಕಾಲ ಪುರಾತತ್ವ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಾ ಬಂದಿದ್ದೇನೆ. ಅದರಲ್ಲೂ ಪ್ರಾದೇಶಿಕ ಪುರಾತತ್ವ ಅನ್ವೇಷಣೆ ನನ್ನ ಕಾರ್ಯಕ್ಷೇತ್ರ. ನನ್ನ ಅನುಭವಕ್ಕೆ ಬಂದಂತೆ, ಭಾರತದಲ್ಲಿ ಪುರಾತತ್ವ ಸಂಪತ್ತಿನಲ್ಲಿ ಶೇ.೧೫ ರಿಂದ ೨೦ ಭಾಗ ಮಾತ್ರ ಬೆಳಕಿಗೆ ಬಂದಿದೆ. ಇನ್ನೂ ಶೇ.೮೦ರಷ್ಟನ್ನು ಶೋಧಿಸಿ ಅಧ್ಯಯನ ಮಾಡಬೇಕಾಗಿದೆ. ಆದ್ದರಿಂದ ಇದುವರೆಗೂ ತಿಳಿದಿರುವ ನಮ್ಮ ದೇಶದ ಇತಿಹಾಸದಲ್ಲಿ ಲೋಪದೋಷಗಳಿವೆ. ಆದ್ದರಿಂದ ಅದು ಅಪೂರ್ಣವಾಗಿದೆಯೆಂಬುದು ಸ್ಪಷ್ಟವಾಗುತ್ತದೆ. ಕೇವಲ ಪುರಾತತ್ವ ಮಾತ್ರವಲ್ಲ ಸಾಹಿತ್ಯ ಮತ್ತು ಅಧಿಕೃತ ದಾಖಲೆಗಳ, ಮೌಖಿಕ ಇತಿಹಾಸ ಅಧ್ಯಯನ ಕ್ಷೇತ್ರಗಳಲ್ಲಿಯೂ ಪರಿಸ್ಥಿತಿ ಹೀಗೆಯೇ ಇದೆ. ಮುಖ್ಯವಾಗಿ ತಾಡವೋಲೆ ಗ್ರಂಥಗಳ ಅಧ್ಯಯನವೂ ಇದೇ ಪ್ರಮಾಣದಲ್ಲಿದೆ. ಇವುಗಳನ್ನು ಸಂಗ್ರಹಿಸಿ ಅಧ್ಯಯನ ಮಾಡುವುದರಿಂದ ಸ್ಥಳೀಯ ಇತಿಹಾಸದ ಮೇಲೆ ಹೆಚ್ಚಿನ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ. ಬಿಲ್ಹಣನ 'ವಿಕ್ರಮಾಂಕ ವಿಜಯ', ಲಿಂಗಣ್ಣ ಕವಿಯ 'ಕೆಳದಿ ನೃಪವಿಜಯ' ಕ್ರಮವಾಗಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯ ಮತ್ತು ಕೆಳದಿ ನಾಯಕರ ಇತಿಹಾಸಕ್ಕೆ ಅಮೂಲ್ಯ ಆಕರಗಳೆಂಬುದು ಇತಿಹಾಸಕಾರರಿಗೆ ತಿಳಿದ ವಿಷಯ.

ಒಂದು ಪ್ರದೇಶದಲ್ಲಿಯ ಪ್ರತಿಯೊಂದು ಭಾಗದ ಇತಿಹಾಸ ಮತ್ತು ಸಂಸ್ಕೃತಿ ಅಧ್ಯಯನದ ಸಮನ್ವಯದಿಂದ ಅದರ ಒಟ್ಟಾರೆ ಇತಿಹಾಸ ತಿಳಿಯುತ್ತದೆ. ಒಂದು ದೇಶದಲ್ಲಿಯ ಇಂಥ ಎಲ್ಲ ಪ್ರದೇಶಗಳ ಇತಿಹಾಸ ಮತ್ತು ಸಂಸ್ಕೃತಿಗಳ ವ್ಯವಸ್ಥಿತ ಸಮಗ್ರ ಸಮನ್ವಯದಲ್ಲಿ ಹೊರಹೊಮ್ಮುವ ಚಿತ್ರವೆ ಅದರ ಇತಿಹಾಸ. ಆದ್ದರಿಂದ ಒಂದು ಪ್ರದೇಶದ/ದೇಶದ ಕೆಲವು ಭಾಗಗಳನ್ನು ಅರಿತುಕೊಂಡರೆ ಸಾಲದು. ಈ ಹಿನ್ನೆಲೆಯಲ್ಲಿ ಸ್ಥಳೀಯ ಇತಿಹಾಸ ಬಹಳ ಮಹತ್ವದ್ದಾಗಿ ಕಾಣುತ್ತದೆ. ಪ್ರತಿಯೊಂದು ಸ್ಥಳದ ಮಾಹಿತಿ ಲಭ್ಯವಿದ್ದರೆ, ಯಾವ ಯಾವ ಪ್ರದೇಶಗಳ ಸಂಸ್ಕೃತಿಗಳು ಹೇಗೆ ವಿಶಿಷ್ಟವಾಗಿತ್ತು, ಅವುಗಳ ವಿಕಸನ ಪ್ರಸರಣ ಮುಂತಾದ ಮಹತ್ವದ ಸಂಗತಿಗಳನ್ನು ಸಮನ್ವಯ ಮಾಡಿ ಸಮಗ್ರವಾಗಿ ಆಲೋಚನೆ ಮಾಡಲು ಸಾಧ್ಯವಾಗುತ್ತದೆ. ಈ ರೀತಿಯ ಅಧ್ಯಯನಕ್ಕೆ ಸ್ಥಳೀಯ ಇತಿಹಾಸ ಬೆನ್ನೆಲುಬಾಗಿ ನಿಲ್ಲುತ್ತದೆ. ಆದ್ದರಿಂದ ಇತ್ತೀಚೆಗೆ ಸ್ಥಳೀಯ ಇತಿಹಾಸಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತಿದೆ.

ಪುರಾತತ್ವ ಹಾಗೂ ಇತಿಹಾಸ ವಿಷಯಗಳ ಅಧ್ಯಯನಕಾರರು, ಸ್ಥಳೀಯ ಸಂಶೋಧನೆ ಕೈಗೊಳ್ಳುವ ಪೂರ್ವದಲ್ಲಿ ಒಂದು ವ್ಯಾಪಕ ಅಧ್ಯಯನಬದ್ಧ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ತತ್ಸಂಬಂಧ ಪೂರ್ವ ಅಧ್ಯಯನಗಳ ವಿಮರ್ಶೆಯಿಂದ ಕಂಡುಬರುವ ಸಮಸ್ಯೆಗಳನ್ನು, ಛಿದ್ರ ಭಾಗಗಳನ್ನು, ನಿರೀಕ್ಷಿತ ಪುರಾತತ್ವ ಮತ್ತು ಐತಿಹಾಸಿಕ ಅಂಶಗಳನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಅನ್ವೇಷಣೆ, ವಿಶ್ಲೇಷಣೆ, ಅಧ್ಯಯನವನ್ನು ಮುಂದುವರಿಸಬೇಕಾಗುತ್ತದೆ. ಹೀಗೆ ಕ್ರಮಬದ್ಧ ನಿರಂತರ ಪ್ರಯತ್ನಗಳಿಂದ ಕ್ರಮೇಣ ಇಡೀ ಪ್ರಾಂತದ/ದೇಶದ ವಸ್ತುನಿಷ್ಠ ಸಮಗ್ರ ವಿವರಣೆಗಳಿಂದ ಕೂಡಿದ ಇತಿಹಾಸವನ್ನು ತಿಳಿಯಲು ಸಾಧ್ಯವಾಗುತ್ತದೆ.

ನಮ್ಮ ದೇಶದ ಚರಿತ್ರೆಯ ಅಧ್ಯಯನದಲ್ಲಿ ಹಾನಗಲ್ಲು ಪ್ರದೇಶದ ಇತಿಹಾಸವೂ ಒಂದು ಭಾಗ. ಆದ್ದರಿಂದ ಸ್ಥಳೀಯ ಇತಿಹಾಸಕ್ಕೆ ಅದು ತುಂಬಾ ಮಹತ್ವದ್ದು. ಈ ಯೋಜನೆಯನ್ನು ಕನ್ನಡ ವಿಶ್ವವಿದ್ಯಾಲಯವು ಹಮ್ಮಿಕೊಂಡು, ಉತ್ಸಾಹದಿಂದ ನಿರ್ವಹಿಸುತ್ತಿರುವುದು ಪ್ರಶಂಸನೀಯ. ಹಾನಗಲ್ಲು ಪ್ರದೇಶವೂ ಸೇರಿದಂತೆ ಡೈನಾಸ್ಟಿಕ್ ಹಿಸ್ಟರಿ ಆಫ್ ಕೆನರೀಜ್ ಡಿಸ್ಟ್ರಿಕ್ಟ್ಸ್ (೧೮೮೧) ಎಂಬ ಗ್ರಂಥವನ್ನು ಬರೆದವರು ಜೆ. ಎಫ್. ಫ್ಲೀಟ್. ಇದು ಕರ್ನಾಟಕ ಉತ್ತರ ಭಾಗ ಇತಿಹಾಸದ ಪ್ರಥಮ ಗ್ರಂಥ. ನಂತರ ಜೆ. ಎಂ. ಮೋರೆಸ್ ಅವರು ಬರೆದ ಕದಂಬ ಕುಲ (೧೯೩೫) ಎಂಬ ಪುಸ್ತಕದಲ್ಲಿಯೂ ಹಾನಗಲ್ಲು ಕದಂಬರ ಬಗ್ಗೆ ವಿಷಯ ಪ್ರಸ್ತಾಪ ಇದೆ. ಹೊಸ ಶೋಧನೆ ಅಧ್ಯಯನಗಳಾಗುತ್ತ ಹೋದ ಹಾಗೆಲ್ಲ ಹಿಂದಿನ ವಿಷಯಗಳ ವಿಮರ್ಶೆ, ತಿದ್ದುಪಡಿ ಹಾಗೂ ಹೊಸ ವಿಷಯಗಳ ಸೇರ್ಪಡೆ ನಿರಂತರ ನಡೆದೆಯಿರುತ್ತವೆ. ಇಂಥ ವಿಚಾರ ಸಂಕಿರಣಗಳಲ್ಲಿ ಇವೆಲ್ಲವುಗಳನ್ನು ಪರಾಮರ್ಶಿಸುವ ಸಂದರ್ಭ ಒದಗುತ್ತದೆ. ಅಲ್ಲದೆ ಇದು ಮುಂದಿನ ಶೋಧನೆ ಮತ್ತು ಅಧ್ಯಯನಕ್ಕೆ ಎಡೆಮಾಡಿಕೊಡುವುದು.

ನಮಗೆ ತಿಳಿದಿರುವ ಹಾಗೆ ಹಾನಗಲ್ಲು ಪ್ರದೇಶದಲ್ಲಿ ಸಾತವಾಹನರಿಂದ ಇತ್ತೀಚಿನವರೆಗೆ, ಅಂದರೆ ಸುಮಾರು ೨೦೦೦ ವರ್ಷಗಳ ವರೆಗಿನ ಇತಿಹಾಸ ಪೂರ್ಣವಾಗಿಯಲ್ಲದಿದ್ದರೂ, ತಕ್ಕ ಮಟ್ಟಿಗೆ ತಿಳಿದು ಬಂದಿದೆ. ಆದರೆ ಸಾತವಾಹನ ಪೂರ್ವ ಕಾಲದಲ್ಲಿ ಈ ಭಾಗದಲ್ಲಿ ಜನವಾಸ್ತವ್ಯವಿರಲಿಲ್ಲವೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದಕ್ಕೆ ೨೫೦ ವರ್ಷಗಳ ಹಿಂದೆ ಜಟಿಲವಾಗಿತ್ತು. ಅದರಲ್ಲೂ ನಮ್ಮ ದೇಶಕ್ಕಿಂತ ಪರದೇಶಗಳಲ್ಲಿ ಇದು ಸಾಧ್ಯವೇ ಇರಲಿಲ್ಲ. ಕ್ರಿ.ಶ. ೧೬೫೦ರ ಸುಮಾರಿನಲ್ಲಿ ಐರ್ಲೆಂಡಿನ ಜೇಮ್ಸ್ ಉಶರ್ ಎಂಬುವನು ಬೈಬಲ್ಲಿನ ಕೆಲವು ಭಾಗಗಳ ಕೂಲಂಕುಶ ಅಧ್ಯಯನದಲ್ಲಿ ತಾನು ಕಂಡುಕೊಂಡ ಒಂದು ವಿಷಯವನ್ನು ಜನಸಾಮಾನ್ಯರಿಗೆ ತಿಳಿಯ ಹೇಳಿದನು. ವಿಶ್ವಸೃಷ್ಟಿ ಆರಂಭವಾದದ್ದು ಕ್ರಿ.ಪೂ. ೪೦೦೪ರ ಅಕ್ಟೋಬರ್ ತಿಂಗಳಲ್ಲಿ. ಈ ಸೃಷ್ಟಿ ಏಳು ದಿನಗಳ ಕಾಲ ಮುಂದುವರೆದಿತ್ತು. ಅನೇಕ ಪ್ರಾಣಿ ಸಂಕುಲಗಳಲ್ಲಿ ಕೊನೆಗೆ ದಿನಾಂಕ ೨೩ರ ರಂದು ಮನುಷ್ಯನ ಸೃಷ್ಟಿ ಬೆಳಿಗ್ಗೆ ೯ ಗಂಟೆಗಾಯಿತೆಂದು ಕರಾರುವಾಕ್ಕಾಗಿ ಪ್ರಚುರಪಡಿಸಿದನು. ಇದಕ್ಕೂ ಪೂರ್ವದಲ್ಲಿ ೮ನೆಯ ಶತಮಾನದ ಆಂಗ್ಲ ಇತಿಹಾಸಕಾರ ವೆನೆರಬಲ್ ಬೆಡೆ ಕ್ರಿ.ಪೂ. ೩೯೫೨ರಲ್ಲಿ ಈ ವಿಶ್ವವು ಸೃಷ್ಟಿಯಾಯಿತೆಂದು ಹೇಳಿದ್ದನು. ಜನ ಸಮುದಾಯದ ಪಂಚಾಂಗದಲ್ಲಿ ಇವತ್ತಿಗೂ ಕ್ರಿ.ಪೂ. ೩೭೬೧ ಸೃಷ್ಟಿಯ ವರ್ಷವೆಂದು ನಮೂದಿಸಲಾಗಿರುತ್ತದೆ. ಜೇಮ್ಸ್ ಉಶರ್ ಲೆಕ್ಕಾಚಾರ ಮಾತ್ರ ಇಡೀ ಯೂರೋಪ್ ದೇಶದ ಜನರ ಮೇಲೆ ಬಹು ಗಂಭೀರವಾದ ಪ್ರಭಾವವನ್ನು ಬೀರಿತು. ೧೭ನೆಯ ಶತಮಾನದಲ್ಲಿ ಜಾನ್ ಲೈಟ್ ಪುಟ್, ಉಶರ್ ಅವರ ವಿವರಣೆಗಳನ್ನು ಯಥಾವತ್ತಾಗಿ ಒಪ್ಪಿಕೊಂಡು ಹೆಚ್ಚು ಸ್ಪಷ್ಟಪಡಿಸಿದನು. ಕ್ರಮೇಣ ಇದೊಂದು ಪಾರಂಪರಿಕ ಧಾರ್ಮಿಕ ನಂಬಿಕೆಯಾಗಿ ಗಟ್ಟಿಯಾಗಿ ಜನರ ಮನಸ್ಸಿನಲ್ಲಿ ಬೇರೂರಿತು. ಕ್ರಿ. ಶ. ೧೮೪೨ ಮಾನವ ಮತ್ತು ಅವನ ಸಂಸ್ಕೃತಿಯ ಪ್ರಾಚೀನತೆ ಅಧ್ಯಯನದಲ್ಲಿ ಒಂದು ಮರೆಯಲಾಗದ ಘಟ್ಟ. ಬೂಶರ್ ದ ಪರ್ತ್ ಒಬ್ಬ ಪ್ರೆಂಚ್ ಸಂಶೋಧಕ ಸಾಮ್ ನದಿ ದಂಡೆಯ ಮೇಲಿನ ಲೆ ಅಬೆವಿಲೆ ಎಂಬಲ್ಲಿ 'ದಿಲುವಿಯಲ್' ಕಾಲದ ಪದರಿನಲ್ಲಿ ಕ್ರಮಬದ್ಧವಾಗಿ ಎರಡು ಬದಿಗಳ ಮೇಲ್ಮೈಯಿಂದ ಚಕ್ಕೆಗಳನ್ನು ಎಬ್ಬಿಸಿದ ನಿರ್ದಿಷ್ಟಾಕಾರದ ಒಂದು ಫ್ಲಿಂಟ್ ತಿರುಳುಗಲ್ಲು ಸಸ್ತನಿಯ ಪ್ರಾಣಿಯ ದವಡೆಯ ಪಳೆಯುಳಿಕೆಯೊಂದಿಗೆ ಶೋಧಿಸಿದನು. ಅನಂತರ ಸ್ವಲ್ಪ ಸಮಯದಲ್ಲೇ ನಿಗದಿತ ಆಕಾರದಲ್ಲಿ ರೂಪಿಸಲ್ಪಟ್ಟ ಇಂಥ ಕಲ್ಲಿನ ಗಟ್ಟಿಗಳು ದಿಲುವಿಯಲ್ ಕಾಲಘಟ್ಟಕ್ಕಿಂತಲೂ ಪೂರ್ವದ ಪ್ರಾಣಿಗಳ ಪಳೆಯುಳಿಕೆಗಳೊಡನೆ ದೊರಕಿದವು. ತಮ್ಮ ಈ ಎಲ್ಲ ಶೋಧನೆಗಳ ಆಧರದ ಮೇಲೆ ೧೮೪೭ – ೪೮ರಲ್ಲಿ ಮೂರು ಸಂಪುಟಗಳಲ್ಲಿ 'ಕೆಲ್ಟಿಕ್ ಆಂಡ್ ಆಂಟಿ ದಿಲುವಿಯನ್' ಎಂಬ ಗ್ರಂಥವನ್ನು ಪ್ರಕಟಿಸಿದನು. ಇವನ ತೀರ್ಮಾನಗಳನ್ನು ಪುಷ್ಟೀಕರಿಸುವಂತೆ ದಿಲುವಿಯನ್ ಪದರಿನಲ್ಲಿಯೇ ಸಸ್ತನಿ ಪ್ರಾಣಿಗಳ, ಮೈತುಂಬ ದಟ್ಟ ಕೂದಲಿದ್ದ ಘೆಂಡಾಮೃಗದ ಪಳೆಯುಳಿಕೆಗಳೊಂದಿಗೆ ಕಲ್ಲಿನ ಉಪಕರಣಗಳು ಶೋಧವಾದವು. ಕ್ರಮೇಣ ಈ ನೆಲೆಗಳಲ್ಲಿ ದೊರೆತ ಅವಶೇಷಗಳನ್ನು ಸರ್ಕಾರದ ಸಮಿತಿಯ ಅಳಿದುಹೋದ ಪ್ರಾಣಿಗಳ ತಜ್ಞ ಹ್ಯು ಪಾಲ್ಕನರ್, ಭೂ ವಿಜ್ಞಾನಿ ಜೋಸೆಫ್ ಪ್ರೆಸ್ಟ್ವಿಚ್, ಚಾರ್ಲ್ಸ್ ಲೈಲ್ ಮತ್ತು ಪುರಾತತ್ವಜ್ಞ ಜಾನ್ ಎವಾನ ಎಂಬುವವರು ಕೂಲಂಕುಶವಾಗಿ ಪರಿಶೀಲಿಸಿ ಅಧಿಕೃತವಾಗಿ ಬೂಶರ್ ದ ಪರ್ತ್ ಅವನ ತೀರ್ಮಾನಗಳು ಸರಿಯೆಂದು ಘೋಷಿಸಿದರು. ಇದೊಂದು ನಿಸ್ಸಂದೇಹ ನಿರ್ಣಾಯಕ ಘಟ್ಟ. ಅದುವರೆಗೆ ವಿಶ್ವಸೃಷ್ಟಿ ೬ ಸಾವಿರ ವರ್ಷಗಳ ಹಿಂದೆ ನಡೆಯಿತೆಂದು ವಿನಮ್ರವಾಗಿ ನಂಬಿದ್ದ ಜನಸಾಮಾನ್ಯರಿಗಲ್ಲದೆ ವಿದ್ವಾಂಸರಿಗೂ ವಿಸ್ಮಯ ಆತಂಕವನ್ನುಂಟುಮಾಡಿತು. ಈ ವಿಷಯ ಕುರಿತು ವಿಸ್ತೃತ ಸಂಶೋಧನೆ ಮುಂದುವರೆಯಿತು. ಕ್ರಮೇಣ ಒಂದೊಂದೆ ವಿಷಯವು ಬೆಳಕಿಗೆ

ಬಂದು ಮಾನವನ ಹುಟ್ಟಿನ ಪ್ರಾಚೀನತೆ, ವಿಕಸನ, ಜೀವನ ಶೈಲಿ, ಸಾಂಸ್ಕೃತಿಕ ಪ್ರಗತಿ ಮೊದಲಾದವುಗಳನ್ನು ನಿರ್ಧರಿಸಲಾಯಿತು. ಈಗ ಈ ಅಧ್ಯಯನವು ವಿಶ್ವದಲ್ಲೆಲ್ಲಾ ಅತ್ಯಂತ ಕೂಲಂಕುಶವಾಗಿ ವೈಜ್ಞಾನಿಕವಾಗಿ ನಡೆಯುತ್ತಿದೆ.

ಭಾರತದಲ್ಲಿ ಈ ಪ್ರಕಾರದ ಸಂಶೋಧನೆ ಆರಂಭವಾದದ್ದು ೧೮೬೩ರಲ್ಲಿ. ರಾಬರ್ಟ್ ಬ್ರೂಸ್ ಫೂಟ್ ಪುರಾತತ್ವಜ್ಞನಿಗೆ ತಮಿಳುನಾಡಿನ ಪಲ್ಲವರಂ (ಕೊರ್ತಲಯರ್ ನದಿ ಪ್ರದೇಶ)ದಲ್ಲಿ ಈ ಮಾದರಿಯ ಶಿಲಾಯುಗದ ಅವಶೇಷಗಳನ್ನು ಪ್ರಪ್ರಥಮವಾಗಿ ೩೦ ಮೇ ೧೮೬೩ರಂದು ಶೋಧಿಸಿದನು. ಕ್ರಮೇಣ ದಕ್ಷಿಣ ಮತ್ತು ಪಶ್ಚಿಮ ಭಾರತದಲ್ಲಿ ವಿವಿಧ ಸಾಂಸ್ಕೃತಿಕ ಕಾಲದ ಸುಮಾರು ೪೫೦ ನೆಲೆಗಳನ್ನು ಶೋಧಿಸಿ, ಅಧ್ಯಯನ ಮಾಡಿ ಅನುಕ್ರಮವಾಗಿ ಹಳೆ ಶಿಲಾಯುಗ, ಹೊಸ ಶಿಲಾಯುಗ ಮತ್ತು ಕಬ್ಬಿಣ ಯುಗ ಎಂದು ಇತಿಹಾಸ ಪೂರ್ವದ ಮೂರು ಪ್ರಮುಖ ಸಾಂಸ್ಕೃತಿಕ ಘಟ್ಟಗಳನ್ನು ಗುರುತಿಸಿದನು. ಕರ್ನಾಟಕದಲ್ಲಿ ಅವನು ಶೋಧಿಸಿದ ಅತಿ ಮಹತ್ವದ ನೆಲೆಗಳೆಂದರೆ ನ್ಯಾಮತಿ (ಶಿವಮೊಗ್ಗ ಜಿಲ್ಲೆ), ಲಿಂಗದಹಳ್ಳಿ (ಚಿಕ್ಕಮಗಳೂರು ಜಿಲ್ಲೆ), ಖ್ಯಾಡ್, ಡಾಣಕ್ ಶಿರೂರ (ಬಿಜಾಪುರ ಜಿಲ್ಲೆ)ನ ಹಳೆ ಶಿಲಾಯುಗ, ತಿ.ನರಸಿಪುರ (ಮೈಸೂರು ಜಿಲ್ಲೆ), ಸಂಗನಕಲ್ಲು (ಬಳ್ಳಾರಿ ಜಿಲ್ಲೆ) ನೂತನ ಶಿಲಾಯುಗ ಮತ್ತು ಹಂಪಸಾಗರದಲ್ಲಿ ಆದಿ ಕಬ್ಬಿಣ ಯುಗದ ಬೃಹತ್ ಶಿಲಾಯುಗ ಸಂಸ್ಕೃತಿ. ಈ ರೀತಿಯ ಶೋಧಗಳಿಂದ ಮುಂದೆ ಮಾನವನ ದೈಹಿಕ, ಮಾನಸಿಕ, ಸಾಂಸ್ಕೃತಿಕ ವಿಕಾಸಗಳನ್ನು ಗುರುತಿಸುವ ಪ್ರಯತ್ನಗಳು ನಡೆದವು/ಯುತ್ತಲಿದೆ.

ಪ್ರಾಗಿತಿಹಾಸ ಕಾಲವನ್ನು ಅಧ್ಯಯನದ ಅನುಕೂಲತೆಗಾಗಿ ಅವಶೇಷಗಳ ಮಾದರಿಗಳನ್ನು, ಅವುಗಳು ದೊರೆತ ಸಾಂಸ್ಕೃತಿಕ ಸಂದರ್ಭವನ್ನು ಗಮನಿಸಿ, ಆದಿ ಹಳೆ ಶಿಲಾಯುಗದಿಂದ ಆದಿ ಇತಿಹಾಸ ಕಾಲದವರೆಗಿನ ಅವಧಿಯನ್ನು ಆರು ಹಂತಗಳನ್ನಾಗಿ ವಿಂಗಡಿಸಲಾಗಿದೆ. ೨೦೦೩ರ ನಂತರ ಆಫ್ರಿಕಾ ಖಂಡದ ಚಾಡ್ ಸರೋವರ ಪ್ರದೇಶದಲ್ಲಿ ಸಿಕ್ಕ ಒಂದು ತಲೆಬುರುಡೆಯನ್ನು ವಿಶ್ವದ ನಾನಾ ವಿಜ್ಞಾನಿಗಳು ಪರೀಕ್ಷೆಗೆ ಒಳಪಡಿಸಿದ್ದಾರೆ. ಪುರಾತತ್ವಜ್ಞರು, ಮಾನವಶಾಸ್ತ್ರಜ್ಞರು, ಭೂವಿಜ್ಞಾನಿಗಳ ವೈಜ್ಞಾನಿಕ ವಿಶ್ಲೇಷಣೆಯ ಫಲವಾಗಿ ಅದು ಸುಮಾರು ೭೦ ಲಕ್ಷ ವರ್ಷಗಳ ಹಿಂದಿನದೆಂದು ತಿಳಿದುಬಂದಿದೆ. ಇದಕ್ಕೂ ಸ್ವಲ್ಪ ಮುಂಚೆ ಈ ಖಂಡದ ಇಥಿಯೋಪಿಯ ಪ್ರದೇಶದಲ್ಲಿ ೨೫ - ೩೦ ಲಕ್ಷ ವರ್ಷಗಳ ಹಿಂದಿನ ಅಂದರೆ ಮನುಷ್ಯನ ಇತಿಹಾಸ ಪುರಾಣಗಳಲ್ಲಿಯ ಉಲ್ಲೇಖಗಳಂತೆ ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗ - ಹೀಗೆ ಲಕ್ಷ ಲಕ್ಷ ವರ್ಷಗಳ ಹಿಂದಿನಿಂದಲೂ ಇರಬಹುದೇ ಎಂಬ ಅನುಮಾನ ಉಂಟಾಗುವುದು ಸಹಜ.

ಈ ಎಲ್ಲ ಅಧ್ಯಯನಗಳಿಂದ ಮಾನವನ ಅಲೆಮಾರಿ ಆಹಾರ ಸಂಗ್ರಹಣ ಸಂಸ್ಕೃತಿಯ ಹಂತದಿಂದ ಇಂದಿನವರೆಗಿನ ವಿಕಸನ ಹಂತಗಳನ್ನು ತಿಳಿಯಲು ಸಾಧ್ಯವಾಗಿದೆ. ಮಾನವ ಕುಲದ ಬೆಳವಣಿಗೆಯ ಕಾಲ ಘಟ್ಟವನ್ನು ಒಟ್ಟಾರೆ ಸುಮಾರು ೨೪ ಲಕ್ಷ ವರ್ಷಗಳೆಂದು ಪರಿಗಣಿಸಿದಲ್ಲಿನ ೨೩ ಲಕ್ಷ ೯೧ ಸಾವಿರ ವರ್ಷಗಳ ಸತತ ಪ್ರಯತ್ನದಿಂದ, ಅತ್ಯಂತ ಶ್ರಮದಿಂದ ನಾಗರಿಕತೆ ಹಂತವನ್ನು ತಲುಪಿ ಕೇವಲ ೯ ಸಾವಿರ ವರ್ಷಗಳಾಗಿವೆ. ಅಂದರೆ ಈ ೨೪ ಲಕ್ಷ ವರ್ಷಗಳನ್ನು ಗಡಿಯಾರದ ೨೪ ಗಂಟೆಗಳಿಗೆ ಅಳವಡಿಸಿದಾಗ, ಗಂಟೆಗೆ ಒಂದೊಂದು ಲಕ್ಷ ವರ್ಷಗಳಾಗುತ್ತವೆ. ನಾಗರಿಕತೆಯ ಹಂತವನ್ನು ಕೇವಲ ೨೦ ನಿಮಿಷಗಳ ಹಿಂದೆ ಮುಟ್ಟಲಾಯಿತೆಂದಾಯಿತು. ಈ ನಾಗರಿಕತೆಯ ಹಿಂದೆ ಮನುಷ್ಯನ ಅತಿ ದೀರ್ಘ ಕಾಲದ ನಿರಂತರ ಪ್ರಯತ್ನ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ಈಗಿನ ಸಾಧನೆಗಳನ್ನು ವಿಮರ್ಶೆ ಮಾಡುವುದು ತುಂಬಾ ಅವಶ್ಯವೆಂದು ತೋರುತ್ತದೆ. ಸುಮಾರು ೨೦ ವರ್ಷಗಳ ಹಿಂದೆ ಎರಡನೆಯ ಮಹಾಯುದ್ಧದಿಂದ ಜನತೆಯ ಮೇಲೆ ಯಾವ ಪರಿಣಾಮ ಉಂಟಾಯಿತು ಹಾಗೂ ಇದರಿಂದ ಕಲಿತ ಪಾಠವೇನೆಂದು ತಿಳಿಯಲು ಒಂದು ವಿಚಾರ ಸಂಕಿರಣವನ್ನು ನಡೆಸಲಾಯಿತು. ಈ ವಿಚಾರ ಸಂಕಿರಣದಲ್ಲಿ ಕಂಡು ಬಂದ ಭೀಕರ ಚಿತ್ರ ಎರಡನೆಯ ಮಹಾಯುದ್ಧ ನಡೆಸುವುದಕ್ಕೆ ಯಾವ ಸಿದ್ಧತೆ ಬೇಕಾಗಿತ್ತೋ ಅದರ ೨೦೦ ಪಟ್ಟು ಹೆಚ್ಚಿನ ಪ್ರಮಾಣದಲ್ಲಿ ವಿನಾಶಕಾರಿ ಶಸ್ತ್ರಾಸ್ತ್ರಗಳನ್ನು ಸಿದ್ಧಮಾಡಲಾಗಿದೆಯೆಂದು ತಿಳಿದುಬಂದುದು.

ಈ ಎಲ್ಲ ಸಂಗತಿಗಳನ್ನು ವಿಮರ್ಶೆಗೆ ಒಳಪಡಿಸಿದಾಗ, ಪ್ರಸ್ತುತ ಸುಧಾರಿಸಿದ ನಾಗರಿಕತೆಯ ಮನುಷ್ಯನ ಕಾರ್ಯಚಟುವಟಿಕೆಗಳ ಬಗ್ಗೆ ಪ್ರಶ್ನೆ ಉದ್ಭವಿಸುತ್ತದೆ. ಹಿಂದಿನ ಜನರು ನೋಡಲಿಕ್ಕೆ ಅಷ್ಟೇನು ಚೆಲುವಾಗಿರದೆ ಅನಾಗರಿಕ ಜೀವನಶೈಲಿಯವರೆಂದು ಇತಿಹಾಸದಿಂದ ತಿಳಿಯಲಾಗಿದೆ. ಆದರೆ ಅವರು ನಾಗರಿಕತೆಯತ್ತ ಮಾನವ ಜನಾಂಗವನ್ನು ಒಯ್ದರು. ಈಗಿನ ಅತಿ ಮುಂದುವರೆದ ಸುಂದರ ಜನಾಂಗ

ವಿಶ್ವವನ್ನೆ ವಿನಾಶದತ್ತ ಒಯ್ಯುವಂತೆ ಕಾಣುತ್ತಿದೆ. ಅನಾಗರಿಕರೆಂದು ವರ್ಣಿಸಲಾದ ಅವರ ಮುಂದೆ ಇಂದಿನ ಜನಾಂಗ ನಾಚಿಕೆಯಿಂದ ತಲೆ ತಗ್ಗಿಸಿ ನಿಲ್ಲಬೇಕಾಗುತ್ತದೆ. ಇಂಥ ಹಲವಾರು ವಿಚಾರಗಳನ್ನು ವಿಮರ್ಶೆ ಮಾಡಲು ಮತ್ತು ಮುಂದಿನ ಸವಾಲುಗಳನ್ನು ಎದುರಿಸಲು ಇತಿಹಾಸ ಸಂಶೋಧನೆ ಅತಿ ಮುಖ್ಯವೆಂದು ಕಾಣುತ್ತದೆ.

ಈ ಎಲ್ಲ ಅಧ್ಯಯನದ ಹಿನ್ನೆಲೆಯಲ್ಲಿ ಹಾನಗಲ್ಲು ಪರಿಸರದಲ್ಲಿಯ ಸಾತವಾಹನರ ಪೂರ್ವದ ಮತ್ತು ಅನಂತರದ ನಾಗರಿಕತೆ ಮತ್ತು ಜನಜೀವನವನ್ನು ಪರಿಶೀಲಿಸಬೇಕಾಗುತ್ತದೆ. ಇಲ್ಲಿಯ ಕದಂಬ ರಾಜ್ಯ ದಕ್ಷಿಣೋತ್ತರದಲ್ಲಿ ಸಾಗರದಿಂದ ಶಿಗ್ಗಾಂವಿ ತಾಲೂಕಿನವರೆಗೆ, ಪೂರ್ವ - ಪಶ್ಚಿಮದಿಂದ ಶಿರಸಿ, ಯಲ್ಲಾಪುರ ತಾಲೂಕುಗಳವರೆಗೆ ವಿಸ್ತರಿಸಿತ್ತು. ಕ್ರಿ.ಶ. ೧೧೬೮ ರಿಂದ ೧೨೦೩ರ ಅವಧಿಯಲ್ಲಿ ವಿಶಾಲವಾಗಿದ್ದ ಕದಂಬ ಸಾಮ್ರಾಜ್ಯಕ್ಕೆ ಬನವಾಸಿ ಹಾಗೂ ಹಾನಗಲ್ಲು ರಾಜಧಾನಿಗಳಾಗಿದ್ದವು. ಈ ಪ್ರದೇಶದಲ್ಲಿ ಸಾತವಾಹನ ಪೂರ್ವ ಕಾಲದ ಮಹತ್ವದ ವಿಷಯಗಳು ಬೆಳಕಿಗೆ ಬಂದಿಲ್ಲ. ಇಲ್ಲಿಂದ ಉತ್ತರಕ್ಕೆ ಸುಮಾರು ೧೦೦ ಕಿ.ಮಿ. ದೂರದ ಮಲಪ್ರಭಾ ಮತ್ತು ೪೦ ಕಿ.ಮಿ. ದೂರದ ತುಂಗಭದ್ರೆ ಪರಿಸರದಲ್ಲಿ ಆದಿ ಹಳೆಶಿಲಾಯುಗದಿಂದ ಹಿಡಿದು ಆದಿ ಇತಿಹಾಸ ಕಾಲದವರೆಗಿನ ಅವಶೇಷಗಳ ಹಲವಾರು ನೆಲೆಗಳು ಶೋಧವಾಗಿವೆ. ಅಲ್ಲದೆ ನೈರುತ್ಯಕ್ಕೆ ಕಡಲ ತೀರದ ನೇತ್ರಾವತಿ ಪ್ರದೇಶದಲ್ಲೂ ಆದಿ ಮತ್ತು ಸೂಕ್ಷ್ಮ, ಹೊಸ ಶಿಲಾಯುಗದ ಹಾಗೂ ಆದಿ ಕಬ್ಬಿಣ ಯುಗದ ಬೃಹತ್ ಶಿಲಾಯುಗದ ನೆಲೆಗಳು/ಅವಶೇಷಗಳು ಕಂಡುಬಂದಿವೆ. ಇಲ್ಲಿಯ ನೈಸರ್ಗಿಕ ಪರಿಸರ ಸುತ್ತಮುತ್ತಲಿನ ಪ್ರದೇಶದಲ್ಲಿರುವಂತೆಯೇ ಇದೆ. ಆದ್ದರಿಂದ ಇಲ್ಲಿ ಕೂಲಂಕುಷ ಕ್ಷೇತ್ರಕಾರ್ಯ ಮತ್ತು ಅಧ್ಯಯನ ನಡೆಯಬೇಕಾಗಿದೆ. ಈ ಪರಿಸರದಲ್ಲಿ ಸಂಶೋಧನೆ ಕೈಗೊಳ್ಳಲು ಕೆಲವು ತೊಡಕುಗಳುಂಟು. ಕಾರಣ ಇದು ಮಲೆನಾಡು ಪ್ರದೇಶ. ಕಾಡು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಮರದ ರೆಂಬೆ, ಕೊಂಬೆ, ಸೊಪ್ಪುಗಳು ಬಿದ್ದು ಮಣ್ಣಾಗುತ್ತವೆ. ಈ ಮಣ್ಣಿನಲ್ಲಿ ಪ್ರಾಚೀನ ಅವಶೇಷ/ನೆಲೆಗಳು ಹುದುಗಿ ಹೋಗಿರುವ ಸಾಧ್ಯತೆ ಹೆಚ್ಚು. ಬಯಲು ಸೀಮೆಯಲ್ಲಿ ಹೀಗಾಗುವುದಿಲ್ಲ. ಪ್ರಾಚೀನ ಅವಶೇಷಗಳು ಮೇಲ್ಪದರಿನಲ್ಲಿಯೇ ಸ್ಪಷ್ಟವಾಗಿ ಗೋಚರಿಸುತ್ತವೆ.

ಈ ಹಿಂದೆ ಹೊಸನಗರದ ಹತ್ತಿರ ನಿಲಸಕಲ್ ಬ್ಯಾಣದಲ್ಲಿ ನಾನು ಕ್ಷೇತ್ರಕಾರ್ಯ ಮಾಡುತ್ತಿದ್ದೆ. ಈ ಬ್ಯಾಣದ ಮಧ್ಯದಲ್ಲಿ ತೀರ್ಥಹಳ್ಳಿ - ಕುಂದಾಪುರ ರಸ್ತೆ ಹಾದು ಹೋಗುತ್ತದೆ. ಆಗ ರಸ್ತೆಯುದ್ದಕ್ಕೂ ಕಾಲುವೆಗಾಗಿ ಗುಂಡಿಯನ್ನು ಅಗೆಯಲಾಗಿತ್ತು. ಕಾಲುವೆಯ ೫೦ ಸೆ.ಮೀ. ಆಳದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅಭ್ರಕ ಮಿಶ್ರಣದ ಬೂದು ವರ್ಣದ ಮಣ್ಣಿನ ಪಾತ್ರೆಗಳ ಚೂರುಗಳಿದ್ದವು. ಆದರೆ ಮೇಲ್ಪದರಿನಲ್ಲಿ ಮತ್ತು ನೆಲದ ಮೇಲೆ ಈ ಸಂಸ್ಕೃತಿಯ ಯಾವುದೇ ಅವಶೇಷಗಳು ಸ್ವಲ್ಪವೂ ಇರಲಿಲ್ಲ. ನೆಲದ ಮೇಲಿನ ಪರೀಕ್ಷೆಯನ್ನಷ್ಟೆ ಪರಿಗಣಿಸಿದರೆ, ಇಲ್ಲಿ ನೂತನ ಶಿಲಾಯುಗದ ಜನಜೀವನದ ಕುರುಹುಗಳು ಇಲ್ಲವೆಂದೇ ಹೇಳಬೇಕಾಗುತ್ತದೆ. ಆದ್ದರಿಂದ ಈ ಪ್ರದೇಶದ ಸಂಶೋಧನೆಗೆ ವಿಭಿನ್ನ ತಂತ್ರವನ್ನು ಬಳಸಬೇಕಾಗುತ್ತದೆ. ಬಯಲು ಸೀಮೆಯ ತಂತ್ರ ಇಲ್ಲಿ ಉಪಯೋಗಕ್ಕೆ ಬರುವುದಿಲ್ಲ. ಇತ್ತೀಚೆಗೆ ಹೈ ರೆಸೆಲ್ಯೂಶನ್ ಗ್ರೌಂಡ್ ಸೆನ್ಸಿಂಗ್ ರಡಾರ್ ಈ ತಾಂತ್ರಿಕ ವಿಧಾನದಿಂದ ಒಂದು ಪ್ರಾಚೀನ ನಗರದ ನೆಲೆಯನ್ನು ಉತ್ಖನನ ಮಾಡದೆಯೆ ಭೂಮಿಯೊಳಗಿನ ಕೆರೆ, ಕಟ್ಟೆ, ಕಾಲುವೆ, ರಸ್ತೆ, ಬಾವಿ, ಮನೆ, ದೇವಾಲಯ, ಇತರೆ ಕಟ್ಟಡ ಮೊದಲಾದವುಗಳನ್ನು ಸರಿಯಾಗಿ ಗುರುತಿಸಿ ನಕಾಶೆಯನ್ನು ಸಿದ್ಧ ಮಾಡಬಹುದು. ಈಚೆಗೆ ಆಗ್ನೇಯ ರಾಷ್ಟ್ರಗಳಲ್ಲೊಂದಾದ ಕಂಬೋಡಿಯದಲ್ಲಿಯ ಅಂಗ್ಕೋರ್ ಥಾಮಿನ ಬೃಹತ್ ದೇವಾಲಯದ ಬಳಿ ಈ ತಂತ್ರದಿಂದ ಮುಚ್ಚಿಹೋಗಿದ್ದ, ಮಧ್ಯಯುಗೀನ ಕಾಲದಲ್ಲಿ ಸುಮಾರು ೫೦,೦೦೦ ಜನ ಸಂಖ್ಯೆಯಿದ್ದ ವಿಶಾಲವಾದ ಒಂದು ನಗರದ ನಕಾಶೆಯನ್ನು ಉತ್ಖನನ ಮಾಡದೆಯೇ ಅತ್ಯಂತ ಯಶಸ್ವಿಯಾಗಿ ಸಿದ್ಧಪಡಿಸಲಾಗಿದೆ. ಇಂಥ ನಕಾಶೆಯ ಆಧಾರದ ಮೇಲೆ ನಿರೀಕ್ಷಿತ ಫಲಿತಾಂಶಗಳನ್ನು ನೀಡುವ ನೆಲೆಯ ಭಾಗಗಳನ್ನು ಗುರುತಿಸಿಕೊಂಡು ವ್ಯವಸ್ಥಿತವಾಗಿ ಉತ್ಖನನ ಮಾಡಿ ಹೊರತೆಗೆದ ಸ್ಮಾರಕಗಳನ್ನು ಉಳಿಸಿಕೊಂಡು ಸಂರಕ್ಷಿಸಿಕೊಳ್ಳಬಹುದು. ಇಂಥ ವಿಧಾನಗಳಿಂದ ಕೋಟೆಯೂ ಸೇರಿದಂತೆ ಪ್ರಾಚೀನ ಹಾನಗಲ್ ನೆಲೆಯ ನಕಾಶೆಯನ್ನು ಸಿದ್ಧ ಮಾಡಲು ಸಾಧ್ಯ. ಈ ವೈಜ್ಞಾನಿಕ ವಿಧಾನಕ್ಕೆ ಒಂದೇ ಸಲಕ್ಕೆ ಹೆಚ್ಚು ವೆಚ್ಚ ಆಗುವುದೇನೋ ನಿಜ. ಆದರೆ ಇಲ್ಲಿಯ ಸಾಂಸ್ಕೃತಿಕ ವಿವರಗಳನ್ನು ಗಮನಿಸಿದಾಗ, ಹಲವಾರು ವರ್ಷಗಳ ಹಿಂದೆ ಗಣನೀಯ ಪ್ರಮಾಣದಲ್ಲಿ ಕಬ್ಬಿಣದ ಉಪಕರಣಗಳನ್ನು ಸಿದ್ಧಮಾಡಿ ಬಳಸಲಾರಂಭಿಸಲಾಯಿತು. ತತ್ಪರಿಣಾಮವಾಗಿ ಶಿಲಾಯುಗ ಕೊನೆಗೊಂಡು ಕಬ್ಬಿಣ ಯುಗ

ಆರಂಭವಾಯಿತು. ಇದನ್ನು ಆದಿ ಕಬ್ಬಿಣ ಯುಗವೆಂದು ಕರೆಯಲಾಗಿದೆ. ಕಬ್ಬಿಣ ತಯಾರಿಸುವ ಪ್ರಕ್ರಿಯೆಯಲ್ಲಿ ಈ ಪರಿಸರ ಬಹಳ ಮಹತ್ವದ್ದೆಂಬುದನ್ನು ನಮ್ಮ ಪೂರ್ವಜರು ಬಹಳ ಹಿಂದೆಯೇ ಅರಿತಿದ್ದರು. ಇಲ್ಲಿಗೆ ಹತ್ತಿರದಲ್ಲಿ ಹಿರೇಕೆರೂರು ತಾಲೂಕಿನ ಹಳ್ಳೂರು, ತಡಕನಹಳ್ಳಿ, ಸ್ವಲ್ಪ ದೂರದಲ್ಲಿ ಮಲೆಬೆನ್ನೂರು ತಾಲೂಕಿನ ಕೊಮಾರನಹಳ್ಳಿ ಗ್ರಾಮಗಳಿವೆ. ೧೯೬೫ - ೭೭ ಅವಧಿಯಲ್ಲಿ ಈ ಮೂರು ಸ್ಥಳಗಳಲ್ಲಿ ಉತ್ಖನನ ಮಾಡಲಾಯಿತು. ಇದರಿಂದ ಅಪರೂಪದ ಸಂಗತಿಗಳು ಬೆಳಕಿಗೆ ಬಂದವು. ಹಿಂದೆ ಆದಿ ಕಬ್ಬಿಣ ಯುಗದ ಜನಸಮುದಾಯವು ಮಹಾರಾಷ್ಟ್ರದ ವಿದರ್ಭವೂ ಸೇರಿದಂತೆ ದಕ್ಷಿಣ ಭಾರತದ ಹಲವಾರು ಎಡೆಗಳಲ್ಲಿ ಕಂಡುಬಂದಂತೆ ದೊಡ್ಡ ದೊಡ್ಡ ಕಲ್ಮನೆಗಳನ್ನು ಕಲ್ಲು ವೃತ್ತಗಳನ್ನು ನಿರ್ಮಿಸಿ, ಅದರಲ್ಲಿ ಅಸ್ಥಿ ಅವಶೇಷಗಳನಿಟ್ಟು ಶವಸಂಸ್ಕಾರ ಮಾಡಿದ ಕುರುಹುಗಳು ಭೈರವನಪಾದ, ಹಳ್ಳೂರು, ತಡಕನಹಳ್ಳಿ, ನಾಗವಂದ ಮೊದಲಾದೆಡೆಗಳಲ್ಲಿ ಬೆಳಕಿಗೆ ಬಂದಿವೆ. ತಜ್ಞರಿಂದ ಇದನ್ನು ಬೃಹತ್ ಶಿಲಾ ಸಂಸ್ಕೃತಿ ಎಂದು ಕರೆಯಲಾಗಿದೆ. ಈ ಬೃಹತ್ ಶಿಲಾ ಸಂಸ್ಕೃತಿಯ ಜನರ ಮುಖ್ಯ ಉದ್ಯೋಗ ಗಣಿಗಾರಿಕೆಯಿಂದ ಕಬ್ಬಿಣ ಅದಿರು ಸಂಗ್ರಹಿಸಿ, ಸಂಸ್ಕರಿಸಿ, ಲೋಹವನ್ನಾಗಿ ಪರಿವರ್ತಿಸುವ ತಂತ್ರಗಾರಿಕೆಯನ್ನು ಇವರು ಬಲ್ಲವರಾಗಿದ್ದರು.

ಲೋಹ ತಯಾರಿಸುವ ತಂತ್ರಗಾರಿಕೆ ಅತಿ ಪ್ರಾಚೀನ ಕಾಲದಲ್ಲಿ ಈ ದೇಶದಲ್ಲಿ ಬಳಕೆಯಲ್ಲಿದ್ದ ಬಗ್ಗೆ ೧೯೭೦ರ ವರೆಗೆ ತಿಳಿದಿರಲಿಲ್ಲ. ಇದು ಪರದೇಶದಿಂದ ಬಂದದ್ದು, ಅದರಲ್ಲೂ ಕ್ರಿ.ಪೂ. ೧೨೦೦ರಲ್ಲಿ ಹಿಟೈಟ್ ಈಗಿನ ಟರ್ಕಿ ಸಾಮ್ರಾಜ್ಯ ಪತನಾನಂತರ, ಇದು ಇರಾನ್, ಅಫಘಾನಿಸ್ತಾನದ ಮೂಲಕ ಉತ್ತರ, ಕ್ರಮೇಣ ದಕ್ಷಿಣ ಭಾರತದಲ್ಲಿ ಸುಮಾರು ಕ್ರಿ.ಪೂ. ೧೦೦೦ - ೬೦೦ರ ಅವಧಿಯಲ್ಲಿ ಪ್ರಸರಿಸಿತೆಂಬ ದೃಢವಾದ ಅಭಿಪ್ರಾಯ ತಜ್ಞರಲ್ಲಿತ್ತು. ಹಾನಗಲ್ ನೆರೆಹೊರೆ ಪ್ರದೇಶದ ಕೊಮಾರನಹಳ್ಳಿ ಮೊದಲಾದ ನೆಲೆಗಳಲ್ಲಿ ನಡೆದ ಉತ್ಖನನ ಮತ್ತು ವಿಶ್ಲೇಷಣೆಯಿಂದ ಕಬ್ಬಿಣದ ಉಪಕರಣಗಳನ್ನು ಸ್ಥಳೀಯವಾಗಿ ಸಿಗುವ ಅದಿರಿನಿಂದಲೇ ತಯಾರಿಸಲಾಗಿದೆಯೆಂದು ತಿಳಿದುಬಂತು. ಇಲ್ಲಿ ಕಬ್ಬಿಣ ತಯಾರಿಕೆಗೆ "ಲ್ಯಾಮಿನೇಶನ್ ಟೆಕ್ನಿಕ್" ಬಳಸಲಾಗಿದೆ. ಅಂದರೆ ಮೊದಲು ತೆಳ್ಳನೆ ತಗಡುಗಳನ್ನು ತಯಾರಿಸಿ, ಅವುಗಳನ್ನು ಒಂದಕ್ಕೊಂದು ಸೇರಿಸಿ, ಅತಿ ಉಷ್ಣತೆಯಲ್ಲಿ ಬಡಿದು ಗಟ್ಟಿಗೊಳಿಸುವುದು.

ಈ ಕಬ್ಬಿಣ ಉಪಕರಣಗಳೊಂದಿಗೆ ದೊರೆತ ಮಣ್ಣಿನ ಪಾತ್ರೆಗಳನ್ನು ಪರೀಕ್ಷೆಗೊಳಪಡಿಸಿದಾಗ, ಇವು ಕ್ರಿ.ಪೂ. ೧೫೦೦ ರಿಂದ ಕ್ರಿ.ಶ. ೧೦೦೦ ಮಧ್ಯಾವಧಿಯಲ್ಲಿ ತಯಾರಿಸಲಾಗಿದೆಯೆಂದು ಗೊತ್ತಾಗಿದ್ದರಿಂದ ಸುಮಾರು ೩ ಸಾವಿರ ವರ್ಷಗಳ ಹಿಂದೆಯೇ ಈ ತಂತ್ರಗಾರಿಕೆ ಈ ದೇಶದಲ್ಲಿ ಹಾಗೂ ಈ ಪ್ರದೇಶದಲ್ಲಿ ಬಳಕೆಯಲ್ಲಿದ್ದುದು ಸ್ಪಷ್ಟವಾಗಿ ಕಂಡುಬಂತು. ಇಲ್ಲಿಯದು ಉತ್ತಮ ಕಬ್ಬಿಣವಾಗಿದ್ದು, ಶೇ. ೯೦ರಷ್ಟು ಉಕ್ಕು ಎಂದು ಕಂಡುಬಂದಿದೆ. ಈ ಪ್ರದೇಶದ ಇನ್ನೊಂದು ಗ್ರಾಮ ಕಮ್ಮಾರಗಟ್ಟೆ. ಹೆಸರೇ ಸೂಚಿಸುವಂತೆ ಈ ಸ್ಥಳದಲ್ಲಿ ಉತ್ತಮ ಕಬ್ಬಿಣ ತಯಾರಿಸಿದ್ದುದರ ಮತ್ತು ಈ ಬೃಹತ್ ಶಿಲಾಯುಗ ಸಂಸ್ಕೃತಿಯ ಸಾಕ್ಷಿಗಳಿವೆ. ಈ ಹೆಸರೂ ಕೂಡ ಅಷ್ಟು ಪ್ರಾಚೀನವಿರಬಹುದೇ ಎಂಬ ಕುತೂಹಲಕಾರಿ ಪ್ರಶ್ನೆ ಏಳುತ್ತದೆ.

ಉಕ್ಕು ಎನ್ನುವ ಶಬ್ದ ಜರ್ಮನ್ ಭಾಷೆಯಲ್ಲಿ ವುಡ್ಜ್ ಎಂದಾಗಿದೆಯೆಂದು ಅಭಿಪ್ರಾಯವಿದೆ. ನಮ್ಮ ದೇಶದ ಉತ್ತಮ ಕಬ್ಬಿಣ ಪರದೇಶಗಳಿಗೆ ಕ್ರಿ.ಪೂ. ೧ನೆಯ ಶತಮಾನದಿಂದ ರೋಮ್ ದೇಶದ ವರ್ತಕರು ಕೊಂಡೊಯ್ಯುತ್ತಿದ್ದರು. ಇದಕ್ಕೆ ಆದಿ ಇತಿಹಾಸ ಕಾಲದ ಕೆಲವು ದಾಖಲೆಗಳಿವೆ. ಈ ಅವಧಿಯಲ್ಲಿ ರೋಮನ್ನರು ಬಾರತದೊಂದಿಗೆ ನಿಕಟ ವ್ಯಾಪಾರಿ ಸಂಬಂಧವನ್ನು ಹೊಂದಿದ್ದರು. ಆ ದೇಶದ ಮಣ್ಣಿನ ಪಾತ್ರೆಗಳು ಇಲ್ಲಿಯ ಚಂದ್ರವಳ್ಳಿ (ಚಿತ್ರದುರ್ಗದ ಹೊರವಲಯದ) ಹಾಗೂ ಅರಿಕಮೇಡು (ಚೆನ್ನೈ ಹತ್ತಿರ, ತಮಿಳುನಾಡು) ಮೊದಲಾದ ಪ್ರಾಚೀನ ನೆಲೆಗಳ ಉತ್ಖನನಗಳಲ್ಲಿ ದೊರೆತಿವೆ. ಅಕ್ಕಿಆಲೂರಿ(ಹಾನಗಲ್ಲು ತಾಲೂಕು)ನಲ್ಲಿ ೧೯೭೭ರಲ್ಲಿ ಕಂಡುಬಂದಿರುವ ೪೫ ಬೆಳ್ಳಿ ನಾಣ್ಯಗಳು ರೋಮ್ ಮತ್ತು ಬೈಜಾಂಟಿಯ ಚಕ್ರಾಧಿಪತ್ಯಗಳಿಗೆ ಸೇರಿದವು. ಕ್ರಿ.ಪೂ ೨೯ ರಿಂದ ಕ್ರಿ.ಶ. ೫೨೭ರ ಕಾಲಾವಧಿಯಲ್ಲಿ ಆಳ್ವಿಕೆ ಮಾಡಿದ ಅಗಸ್ಟಸ್ (ಕ್ರಿ.ಪೂ. ೨೯ ಕ್ರಿ.ಶ. ೧೪), ಅಂಟೋನಿಯಸ್ ಪಯಸ್ (ಕ್ರಿ.ಶ. ೧೩೮ - ೧೬೧), ಎರಡನೆಯ ಥಿಯೊಡೊಸಿಯಸ್ (ಕ್ರಿ.ಶ. ೪೦೮ - ೪೫೦), ಮರ್ಸಿಯನ್ (ಕ್ರಿ.ಶ. ೪೫೦ - ೪೫೭), ಒಂದನೆಯ ಲಿಯೊ (ಕ್ರಿ.ಶ. ೪೫೭ - ೪೭೪), ಜೆನೊ (ಕ್ರಿ.ಶ. ೪೭೪ - ೪೯೧), ಅನಸ್ತಸಿಯಸ್ (ಕ್ರಿ.ಶ. ೪೯೧ - ೫೧೮) ಮತ್ತು ಜಸ್ಟಿನಸ್ (ಕ್ರಿ.ಶ. ೫೧೮ - ೫೨೭) ಎಂಬ ಚಕ್ರವರ್ತಿಗಳಿಗೆ ಸಂಬಂಧಿಸಿದ ನಾಣ್ಯಗಳು. ಇವು ಈ ಪ್ರದೇಶಕ್ಕೆ ಬರಲು ಕಾರಣ, ರೋಮ್ ಸಾಮ್ರಾಜ್ಯದ ವ್ಯಾಪಾರ ಸಂಪರ್ಕ ದೊಡ್ಡ

ಪ್ರಮಾಣದಲ್ಲಿ ಕರ್ನಾಟಕದೊಂದಿಗೆ ವಿಶೇಷವಾಗಿತ್ತು. ಅಂದಿನ ಸಮೃದ್ಧಿ ಯುಗದಲ್ಲಿ ಬೃಹತ್ ಪ್ರಮಾಣದ ಅನೇಕ ವಾಸ್ತುಶಿಲ್ಪಗಳು ನಿರ್ಮಾಣವಾದವು. ಸಾಂಚಿ, ಬಾರಹುತ್ ಮೊದಲಾದ ಸ್ತೂಪಗಳಲ್ಲಿ ಅಂದಿನ ಶ್ರೀಮಂತ ವರ್ತಕರ ಐಷಾರಾಮ ಜನಜೀವನದ ಚಿತ್ರಣವನ್ನು ಶಿಲ್ಪಗಳಲ್ಲಿ ತೋರಿಸಲಾಗಿದೆ. ರೋಮ್ ಚಕ್ರವರ್ತಿ ಅಗಸ್ಟಸ್ ನು ಇದೇ ರೀತಿ ಇಂಡಿಯಾಕ್ಕೆ ಚಿನ್ನ - ಬೆಳ್ಳಿಯನ್ನು ವ್ಯಾಪಾರದ ಮೂಲಕ ಮಾರಾಟ ಮಾಡಿದರೆ, ಒಂದಾನೊಂದು ಕಾಲಕ್ಕೆ ಅವರ ರಾಜ್ಯವನ್ನು ಹರಾಜು ಹಾಕಬೇಕಾಗಿ ಬರಬಹುದೆಂದು ಸೆನೆಟ್ ಸಭೆಯಲ್ಲಿ ಹೇಳಿದ್ದನಂತೆ. ರೋಮ್ ಸಾಮ್ರಾಜ್ಯಕ್ಕೆ ಈ ಮಲೆನಾಡು ಪ್ರದೇಶದಿಂದ ಮಾರಾಟವಾಗುತ್ತಿದ್ದ ವಸ್ತುಗಳಲ್ಲಿ ಸಾಂಬಾರ ಪದಾರ್ಥಗಳು ಮತ್ತು ಕಬ್ಬಿಣ ಪ್ರಮುಖವಾಗಿದ್ದವು. ಹೀಗೆ ರಫ್ತಾದ ವಸ್ತುಗಳು ಅಲೆಗ್ಸಾಂಡ್ರಿಯಾದ ಸೆನರಿಕೋಟೆ ಎಂಬ ರೇವುಪಟ್ಟಣದಲ್ಲಿ ದಾಖಲಾಗುತ್ತಿದ್ದವು.

ಭಾರತದ ಕಬ್ಬಿಣ ರೋಮ್ ಚಕ್ರಾಧಿಪತ್ಯದಲ್ಲಿ ವಿಶೇಷ ಮನ್ನಣೆ ಪಡೆದಿತ್ತು. ಮಿಲಿಟರಿ ಆಡಳಿತ ಮತ್ತು ಸೈನ್ಯಕ್ಕೆ ಬೇಕಾದ ಉಪಕರಣಗಳ ತಯಾರಿಕೆಗೆ ಭಾರತದ ಉತ್ತಮ ಕಬ್ಬಿಣವನ್ನು ಬಳಸುತ್ತಿದ್ದರು. ಇಲ್ಲಿ ತಯಾರಿಸುತ್ತಿದ್ದ ಉತ್ತಮ ಕಬ್ಬಿಣಕ್ಕೆ ಮೆಹರೌಲಿಯ ಕಬ್ಬಿಣ ಸ್ತಂಭ ಇಂದಿಗೂ ಒಂದು ಉತ್ತಮ ಉದಾಹರಣೆ. ಗುಪ್ತ ವಂಶದ ಎರಡನೆಯ ಚಂದ್ರಗುಪ್ತನ ಕಾಲ (ಕ್ರಿ.ಶ. ೩೭೯ - ೪೧೫)ದ ಏಳು ಟನ್ ತೂಕದ ಈ ಸ್ತಂಭವನ್ನು ಬಿಲ್ಲೆಗಳನ್ನು ಮಾಡಿ ಒಂದಕ್ಕೊಂದು ಸೇರಿಸಿ ತಯಾರಿಸಲಾಗಿದೆಯೆಂದೂ, ಎರಕ ಹೊಯ್ದು ಮಾಡಲಾಗಿದೆಯೆಂದೂ ವಿಭಿನ್ನ ಅಭಿಪ್ರಾಯಗಳಿವೆ. ಇದು ಏನೇ ಇರಲಿ, ಇಂದಿಗೂ ಇದು ತುಕ್ಕು ಹಿಡಿದಿಲ್ಲ. ಇದು ಹೇಗೆ ಸಾಧ್ಯ ಎಂಬುದನ್ನು ಇತ್ತೀಚೆಗೆ ಕಾನ್ಪುರದ ಬಾಲಸುಬ್ರಮಣಿಯಮ್ ತಮ್ಮ ಸಂಶೋಧನೆಯ ಮೂಲಕ ಸ್ವಲ್ಪ ಮಟ್ಟಿಗೆ ಬಗೆಹರಿಸಿದ್ದಾರೆ. ಇವರ ಪ್ರಕಾರ ಇದರ ಮೇಲೆ ಸುಮಾರು ೦.೦೦೧ರಷ್ಟು ದಪ್ಪದ ಅತಿ ಸೂಕ್ಷ್ಮ ಲೇಪನವಿದೆ. ಇದರಿಂದ ಸ್ತಂಭಕ್ಕೆ ತುಕ್ಕು ಹಿಡಿಯುವ ಸಾಧ್ಯತೆ ಇಲ್ಲ. ಇದೊಂದು ಅಪೂರ್ವ ತಂತ್ರಗಾರಿಕೆ. ಕೆಲವರು ಈ ಸ್ತಂಭವಿರುವ ಪರಿಸರ ಇದಕ್ಕೆ ತುಕ್ಕು ಹಿಡಿಯದಿರುವುದಕ್ಕೆ ಕಾರಣವೆಂದು ಅಭಿಪ್ರಾಯವೂ ಇದೆ. ಆದರೆ ಇದನ್ನು ಈ ಪರಿಸರದಲ್ಲಿಯ ಇತರ ಕಬ್ಬಿಣದ/ಉಕ್ಕಿನ ಸರಕುಗಳನ್ನು ನಿರ್ದಿಷ್ಟ ಸಮಯದವರೆಗೆ ಸರಿಯಾಗಿ ಪರಿಶೀಲಿಸಿ ನೋಡಲಾಗಿದೆಯೇ ಎಂಬುದು ಸ್ಪಷ್ಟವಿಲ್ಲ. ಈ ಸ್ತಂಭ ಮೊದಲು ಇಲ್ಲಿ ಇರಲಿಲ್ಲ. ಸ್ತಂಭದ ಮೇಲಿನ ಶಾಸನದಲ್ಲಿ ಹೇಳಿದಂತೆ ಇದು ವಿಷ್ಣುಪಾದ ಎಂಬ ಒಂದು ಗುಡ್ಡದ ಮೇಲೆ ವಿಷ್ಣು ದೇವಾಲಯದ ಮುಂದೆ ಇದ್ದ ಗರುಡಗಂಭ/ಧ್ವಜ. ಕಂಬದ ತುದಿಯಲ್ಲಿದ್ದ ಗರುಡನ ಮೂರ್ತಿ ಅಳಿದು ಹೋಗಿದೆ. ಈ ವಿಷ್ಣುಪಾದ ಸ್ಥಳವನ್ನು ಇನ್ನೂ ಗುರುತಿಸಿಲ್ಲ. ಅಲ್ಲಿಂದ ಮಧ್ಯಯುಗೀನ ಕಾಲದಲ್ಲಿ ರಾಜನಿಂದ ಮೆಹರೌಲಿಗೆ ತರಿಸಲ್ಪಟ್ಟಿತು. ಮೂಲ ಸ್ಥಳದಲ್ಲಿಯೂ ಮೆಹರೌಲಿಯ ಪರಿಸರವಿದ್ದಿತ್ತೆ ಎಂಬುದನ್ನೂ ಪರಿಶೀಲಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಇದನ್ನು ತರುವ ಹೊತ್ತಿಗಾಗಲೆ ತುಕ್ಕು ಹಿಡಿದಿರಬೇಕಾಗಿತ್ತು. ಇತ್ತೀಚೆಗೆ ಈ ಕಂಬಕ್ಕೆ ತುಕ್ಕು ಹಿಡಿಯದ ವೈಜ್ಞಾನಿಕ ಅಂಶವನ್ನು, ಇದನ್ನು ಅಧ್ಯಯನ ಮಾಡುತ್ತಲೇ ಇರುವ ಬಾಲಸುಬ್ರಮಣಿಯಮ್ ಮತ್ತು ಅವರ ಹಿಂದಿನ ವಿದ್ಯಾರ್ಥಿ ಗದಾಧರ ಯು. ಕಂಡುಹಿಡಿದಿದ್ದಾರೆ. ಇವರ ಸಂಶೋಧನೆಯ ಪ್ರಕಾರ ಉದ್ದೇಶ ಪೂರ್ವಕವಾಗಿ ಕಂಬದ ಹೊರಮೈಯಲ್ಲಿ ಲೆಕ್ಕಾಚಾರವಾಗಿ ರಂಜಕದ ಸೇರ್ಪಡೆಯಿದ್ದು, ಇದು ತುಕ್ಕು ಹಿಡಿಯದಂತೆ ಮಾಡಿದೆ. ಸಾಮಾನ್ಯವಾಗಿ ಬಲಿಷ್ಠ ಉಕ್ಕಿನ ತಯಾರಿಕೆಯಲ್ಲಿ ರಂಜಕದ ಅಂಶವನ್ನು ತೆಗೆದು ಇಂಗಾಲ ಮತ್ತು ಮ್ಯಾಂಗನೀಸ್ ಇವನ್ನು ಸೇರಿಸಲಾಗುತ್ತದೆ. ರಂಜಕ ಇದ್ದಲ್ಲಿ ಉಕ್ಕು ಗಟ್ಟಿಯಾಗಿರುವುದಿಲ್ಲ. ಈ ಸಂಶೋಧನೆ ಪೂರ್ಣ ಯಶಸ್ವಿಯಾಗಿ ಮಾರುಕಟ್ಟೆಗೆ ಬರುವುದಾದಲ್ಲಿ ಇದು ಇಂದಿನ ಪ್ರಪಂಚಕ್ಕೆ ತುಂಬ ಉಪಯುಕ್ತವೆಂದು ಅಮೆರಿಕದ ಪ್ರಾಧ್ಯಾಪಕ ಮತ್ತು ಇತರ ತಜ್ಞರು ಪ್ರಶಂಸಿಸಿದ್ದಾರೆ. ೧೯ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ (ಲಂಡನ್ ಹತ್ತಿರ) ಒಂದು ನದಿಗೆ ಸೇತುವೆ ಕಟ್ಟಬೇಕಾಗಿತ್ತು. ಇದಕ್ಕೆ ಬೇಕಾಗುವ ಬಲವಾದ ಬೃಹತ್ ಅಡ್ಡ ತೊಲೆಗಳ ತಯಾರಿಕೆಗೆ ಬೇಕಾದ ಕಬ್ಬಿಣಕ್ಕಾಗಿ ಇಡೀ ಯೂರೋಪ್ ಮತ್ತು ಭಾರತದಲ್ಲಿ ಪರಿಶೀಲನೆ ಮಾಡಲಾಯಿತು. ಆಗ ತುಲನಾತ್ಮಕವಾಗಿ ಭಾರತದ ಕಬ್ಬಿಣ ಅತ್ಯಂತ ಉತ್ತಮವಾದದ್ದೆಂದು ತಿಳಿದುಬಂದು ಬ್ರಿಟಿಷರು ನಮ್ಮ ದೇಶದಿಂದ ಕಬ್ಬಿಣವನ್ನು ಆಮದು ಮಾಡಿಕೊಂಡರು. ೧೮೨೪ರಲ್ಲಿ ವೈದ್ಯಕೀಯ ಉಪಕರಣಗಳನ್ನು ಮಾರುವ ಲಂಡನ್ನಿನ ಒಬ್ಬ ವರ್ತಕ ಒಂದು ಪ್ರಚಾರ ಕಾರ್ಡ್ ಮಾಡಿಸಿದ್ದನು. ಅದರಲ್ಲಿ "The instruments are made on Indian steel which is found to be most superior to any known sreel from Europe" ಎಂದಿತ್ತು. ಅಂದರೆ ಕನಿಷ್ಠ ಎರಡೂವರೆ ಸಾವಿರ ವರ್ಷಗಳಿಂದ ಪ್ರಾಚೀನ ಜಗತ್ತಿನಲ್ಲಿಯೇ ಶ್ರೇಷ್ಠ ತಂತ್ರಗಾರಿಕೆಯನ್ನು ಇಲ್ಲಿಯ

ಸಾಮಾನ್ಯ ಕಮ್ಮಾರರು ಇತ್ತೀಚಿನವರೆಗೂ ಬೆಳೆಸಿಕೊಂಡು ಬಂದರು. ಇವೆಲ್ಲವನ್ನು ಗಮನಿಸಿದಾಗ, ಈ ಪರಿಸರದಲ್ಲಿದ್ದ ಪ್ರಾಚೀನ ಕಮ್ಮಾರರ ಕಾಣಿಕೆ ಬಹುದೊಡ್ಡದು. ಈ ಕುರಿತು ಇನ್ನು ಹೆಚ್ಚಿನ ಸಂಶೋಧನೆ ಮತ್ತು ಅಧ್ಯಯನವಾಗಬೇಕಾಗಿದೆ. ಇದಕ್ಕೆ ಈ ಪ್ರದೇಶದಲ್ಲಿ ಅವಕಾಶವಿದೆ. ಡಾ. ರಘುನಾಥ ಭಟ್ ಅವರು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಒಂದೆಡೆಯಲ್ಲಿ ಜಂಬಿಟ್ಟಿಗೆ ಸಮತಟ್ಟಿನ ಭೂಮಿಯಲ್ಲಿ ಸ್ಥಳೀಯವಾಗಿ ಕೊಟ್ಟಾ ಎಂದು ಕರೆಯಲಾದ ಸುಮಾರು ೩ ಮಿ. ಆಳದ ಕೆಲವು ಗುಂಡಿಗಳನ್ನು ಕಂಡುಹಿಡಿದಿದ್ದಾರೆ. ಪ್ರಾಯಶಃ ಇವು ವಿಶೇಷವಾಗಿ ಕೇರಳ, ದಕ್ಷಿಣ ಕನ್ನಡದಲ್ಲಿ ಬಹಳಷ್ಟು ಪ್ರಾಚೀನ ನೆಲೆಗಳಲ್ಲಿ ಕಂಡುಬಂದಂತೆ ಆದಿ ಕಬ್ಬಿಣ ಯುಗದ ಬೃಹತ್ ಶಿಲಾ ಸಂಸ್ಕೃತಿಯ ಶವ ಗುಂಡಿಗಳಿರಬಹುದು. ಬನವಾಸಿ ಹತ್ತಿರವಿರುವ ಕಂತ್ರಾಜ್ ಎಂಬ ಸ್ಥಳದಲ್ಲಿ ಈ ಸಂಸ್ಕೃತಿಯ ಜನರ ಮಣ್ಣಿನ ಪಾತ್ರೆಗಳ ಅವಶೇಷಗಳು ಸಿಕ್ಕಿವೆ. ಇವೆಲ್ಲವನ್ನು ಗಮನಿಸಿದಾಗ, ಈ ಪರಿಸರದ ಸಾಂಸ್ಕೃತಿಕ ಸಂಶೋಧನೆ ಆಗಬೇಕಾಗಿರುವುದು ತುಂಬಾ ಅವಶ್ಯ.

ಮಲೆನಾಡಿನ ಒಂದು ಮೂಲೆಯಲ್ಲಿರುವ ಈ ಪ್ರದೇಶದಲ್ಲಿ ವ್ಯಾಪಾರ ಸಮೃದ್ಧಿ ಹೇಗಾಯಿತು. ಬನವಾಸಿ ಕದಂಬರು ಸಾಮ್ರಾಜ್ಯವನ್ನು ಸ್ಥಾಪಿಸಲು ಈ ಸ್ಥಳವನ್ನು ಏಕೆ ಆಯ್ಕೆ ಮಾಡಿದರೆಂಬ ಪ್ರಶ್ನೆಗಳೇಳುವುದು ಸಹಜ. ಪಶ್ಚಿಮ ತೀರ ಸಮುದ್ರದಲ್ಲಿ ಹಲವಾರು ಪ್ರಾಚೀನ ಬಂದರುಗಳಿದ್ದವು. ಆ ಬಂದರುಗಳ ಮೂಲಕ ಒಳನಾಡಿನ ಪ್ರಮುಖ ವ್ಯಾಪಾರ ಕೇಂದ್ರಗಳೊಡನೆ ರೋಮ್ ಸಾಮ್ರಾಜ್ಯದ ವ್ಯಾಪಾರ ನಡೆಯುತ್ತಿತ್ತು. ಕರಾವಳಿಯ ಕುಂದಾಪುರ ತಾಲೂಕಿನ ಹಟ್ಟಿಯಂಗಡಿ ಎಂಬ ಗ್ರಾಮದಲ್ಲಿರುವ ಶಿವ ದೇವಾಲಯದ ಹತ್ತಿರ ಮಧ್ಯಮ ವರ್ಗದ ಹಡಗುಗಳು ಚಲಿಸಲಾಗುವ, ಸಮುದ್ರಕ್ಕೆ ಹರಿಯುತ್ತಿದ್ದ ಒಂದು ನದಿಯಿತ್ತು. ಈ ನೆಲೆಯ ನನ್ನ ಅನ್ವೇಷಣೆಯಲ್ಲಿ ಪ್ರಾಚಿನ ಕಾಲದಲ್ಲಿ ಇಲ್ಲೊಂದು ನಗರವಿದ್ದುದು ತಿಳಿಯಿತು. ಇದನ್ನು ಎರಡು ಭಾಗ ಮಾಡಲಾಗಿದೆ. ಒಂದು ಸಾಮಾನ್ಯರು ವಾಸಮಾಡುವಂಥ ಭಾಗ, ಇನ್ನೊಂದು ಆಡಳಿತಾಧಿಕಾರಿಗಳು ಇರುವ ಭಾಗ. ಹರಪ್ಪ ಸಂಸ್ಕೃತಿಯ ನಗರ ವಿನ್ಯಾಸದಲ್ಲೂ ಇಂಥ ಎರಡು ಭಾಗಗಳನ್ನು ನೋಡುತ್ತೇವೆ. ಎರಡನೆಯ ಭಾಗದಲ್ಲಿ ೧ - ೨ನೆಯ ಶತಮಾನದ ಇಟ್ಟಿಗೆ ಕಟ್ಟಡಗಳು, ಬಹುಶಃ ರಕ್ಷಣಾ ಪ್ರಾಕಾರದ ಅವಶೇಷಗಳಿವೆ. ಇಲ್ಲಿಂದ ಉತ್ತರಕ್ಕೆ ಹೊನ್ನಾವರ ತಾಲೂಕಿನ ಶರಾವತಿ ನದಿಯ ನಡುಗಡ್ಡೆಯೊಂದರ ಮೇಲೆ ಹೈಗುಂದವೆಂಬ ಗ್ರಾಮವಿದೆ. ಇಲ್ಲಿ ದೊಡ್ಡ ದೊಡ್ಡ ಇಟ್ಟಿಗೆ ಸೌಧಗಳಿದ್ದ ಕುರುಹುಗಳಿವೆ. ಇಡೀ ದಕ್ಷಿಣ ಭಾರತದಲ್ಲಿಯೇ ಅಪರೂಪದ ೨ ಮೀ. ಎತ್ತರದ ಒಂದು ಶಿಲಾ ಯಕ್ಷನ ಹಾಗೂ ೫ನೆಯ ಶತಮಾನದ ಎರಡು ನಿಂತ ಭಂಗಿಯಲ್ಲಿರುವ ಬುದ್ಧನ ಮೂರ್ತಿಗಳಿವೆ. ಎಲ್ಲಿ ವ್ಯಾಪಾರ ಅಭಿವೃದ್ಧಿಯಲ್ಲಿರುತ್ತಿತ್ತೋ ಅಲ್ಲಿ ರಕ್ಷಣೆಗೋಸ್ಕರ ಇಂಥ ಯಕ್ಷನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುತ್ತಾರೆಂಬುದು ಸಾಮಾನ್ಯ ತಿಳುವಳಿಕೆ. ಒಳನಾಡು ಪ್ರದೇಶಗಳಿಂದ ಹಟ್ಟಿಯಂಗಡಿ, ಹೊನ್ನಾವರ, ಕಾರವಾರ ಮೊದಲಾದ ಸ್ಥಳಗಳಿಗೆ ಬನವಾಸಿ ಮತ್ತು ಹಾನಗಲ್ಲಿನ ಮಾರ್ಗವಾಗಿ ಸರಕುಗಳು ವಿನಿಮಯವಾಗುತ್ತಿತ್ತು. ಬನವಾಸಿ, ಹಾನಗಲ್ಲು ಪ್ರಮುಖ ವ್ಯಾಪಾರ ಹಿರಿಯ ಹೆದ್ದಾರಿ ಮಾರ್ಗದಲ್ಲಿದ್ದವು. ಈ ಹೆದ್ದಾರಿ ಬೆಳಗಾವಿ ಹೊರವಲಯದ ವಡಗಾಂವ್ - ಮಾಧವಪುರ, ಕೊಲ್ಲಾಪುರ, ಅಲ್ಲಿಂದ ಠಾಣೆ, ಉಜ್ಜಯಿನಿಯ ಮೂಲಕ ಮುಂದೆ ಸಾಗಿತ್ತು. ಈ ಎಲ್ಲ ನಗರಗಳು ವ್ಯಾಪಾರಿ ಕೇಂದ್ರ ಮಾರ್ಗಗಳ ಪ್ರಮುಖ ಸ್ಥಳಗಳಾಗಿದ್ದವು.

ಹಾನಗಲ್ಲಿನಲ್ಲಿ ಸಾತವಾಹನರ ಕಾಲದ ಅವಶೇಷಗಳಿವೆ. ಇಲ್ಲಿಯ ಕೋಟೆಯ ತಳ ಹಾಗೂ ಒಳ ಭಾಗಗಳಲ್ಲಿ ಶಾತವಾಹನ ಮತ್ತು ಕದಂಬರ ಕಾಲದ ಇಟ್ಟಿಗೆಯ ಕಟ್ಟಡಗಳಿವೆ. ಈ ಕೋಟೆಯನ್ನು ಮೊದಲು ಇಟ್ಟಿಗೆ, ನಂತರ ಜಂಬಿಟ್ಟಿಗೆಯಿಂದ ಕಟ್ಟಿ, ನಂತರ ಮಣ್ಣಿನಿಂದ ದೊಡ್ಡದಾಗಿ ವಿಸ್ತಾರ ಮಾಡಲಾಗಿದೆ. ಮೂಲ ಕೋಟೆ ಒಂದೆ ಇತ್ತು. ಒಂದೊಂದು ಕಾಲಘಟ್ಟದಲ್ಲಿ ಇದು ವಿಸ್ತಾರವಾಗಿದೆ. ಮೊದಲ ಕೋಟೆಯಲ್ಲಿ ಉತ್ಖನನ ಮಾಡಿದರೆ, ಸಾತವಾಹನ - ಕದಂಬ ಕಾಲದ ನಗರದ ಅವಶೇಷಗಳು ಸಿಗುವ ಸಾಧ್ಯತೆ ಇದೆ. ಹಾನಗಲ್ಲಿನಲ್ಲಿಯೇ ಆದಿ ಕದಂಬ ಇಮ್ಮಡಿ ಕೃಷ್ಣವರ್ಮನ ಒಂದು ತಾಮ್ರ ಶಾಸನವೂ ಲಭ್ಯವಾಗಿದೆ. ಇದರಲ್ಲಿ ಹಾನಗಲ್ಲನ್ನು ಪಾಂಕ್ತಿಪುರವೆಂದು ಹೆಸರಿಸಿದೆ. ಪಾಂಕ್ತಿಪುರ ಪಾನುಂಗಲ್ ಹಾನಗಲ್ ಎಂದು ಈ ಹೆಸರಿನ ಕಾಲಾನುಕ್ರಮದ ಮಾರ್ಪಾಡುಗಳನ್ನು ಗುರುತಿಸಬಹುದು. ಈ ನಗರ ಆದಿ ಕದಂಬರ ಉಪ ರಾಜಧಾನಿಯಾಗಿತ್ತು. ಆದ್ದರಿಂದ ಇಲ್ಲಿಯ ಎರಡು ಸಾವಿರ ವರ್ಷಗಳ ಹಿಂದಿನ ನಗರ ಸ್ವರೂಪವನ್ನು ತಿಳಿದುಕೊಳ್ಳಲು ಉತ್ಖನನ ಮಾಡುವುದು ಅವಶ್ಯವೆಂದು ಕಾಣುತ್ತದೆ. ಅಕ್ಕಿಆಲೂರಿನಲ್ಲಿ ೫ ಶತಮಾನಗಳ

ವ್ಯಾಪಾರದ ಪ್ರಗತಿಯನ್ನು ತಿಳಿಸುವಂಥ ಅನೇಕ ತಲೆಮಾರಿನ ಚಕ್ರವರ್ತಿಗಳ ನಾಣ್ಯಗಳು ಒಂದೇ ಕಡೆಗೆ ಹೇಗೆ ಸಂಗ್ರಹವಾಯಿತೆಂಬ ಪ್ರಶ್ನೆ ಉದ್ಭವವಾಗುತ್ತದೆ. ಯಾವುದೋ ಒಂದು ವ್ಯಾಪಾರಸ್ಥ ಮನೆತನ ನಾಣ್ಯಗಳನ್ನು ಸಂಗ್ರಹಮಾಡುತ್ತ ಬಂದಿದೆ. ಹೀಗಾಗಿ ೬ ಶತಮಾನಗಳ ನಾಣ್ಯಗಳು ಒಂದೇ ಮಡಿಕೆಯಲ್ಲಿ ಸಿಗಲು ಕಾರಣವಾಗಿದೆ. ವ್ಯಾಪಾರ ಸಂಮೃದ್ಧಿಯಾಗಿರುವವರೆಗೆ ಕದಂಬರ ರಾಜ್ಯ ಅಸ್ತಿತ್ವದಲ್ಲಿತ್ತು. ಯಾವಾಗ ವ್ಯಾಪಾರ ಕುಸಿಯಿತೊ ಆಗ ಕದಂಬ ರಾಜ್ಯವು ಅವನತಿಯಾಗಲು ಒಂದು ಮುಖ್ಯ ಕಾರಣ.

ಸಾತವಾಹನರ ಕಾಲದಲ್ಲಿ ನಿರ್ಮಾಣವಾದ ದೇವಾಲಯ, ಸ್ನಾನ ಘಟ್ಟಗಳು ಈ ಪರಿಸರದ ಬನವಾಸಿ, ತಾಳಗುಂದ ಮೊದಲಾದೆಡೆಗಳಲ್ಲಿವೆ. ೧೯೭೦ - ೭೯ರಲ್ಲಿ ನಡೆದ ಬನವಾಸಿ ಉತ್ಖನನದಲ್ಲಿ ಗಜಪೃಷ್ಠಾಕಾರದ ೨ ಇಟ್ಟಿಗೆಯ ಕಟ್ಟಡಗಳು ಬೆಳಕಿಗೆ ಬಂದಿವೆ. ಈ ಕಟ್ಟಡದ ಹಿಂದಿನ ಭಾಗ ಅರ್ಧ ವೃತ್ತಾಕಾರವಾಗಿದ್ದು, ಆನೆಯ ಪೃಷ್ಠದಂತೆ ಕಾಣುತ್ತದೆ. ವಾಸ್ತುಶಾಸ್ತ್ರದಲ್ಲಿ ಇದನ್ನು ಗಜಪೃಷ್ಠಾಕಾರ ಎಂದು ಕರೆಯಲಾಗಿದೆ. ಇದನ್ನು ಸ್ಥಳೀಯ ಶಬ್ದದಲ್ಲಿಯೇ ಕರೆಯಬಹುದಾಗಿತ್ತು. ಆದರೆ ೧ರಿಂದ ೫ನೆಯ ಶತಮಾನದವರೆಗೆ ಸಂಸ್ಕೃತ ಭಾಷೆ ವಿದ್ಯಾವಂತರ ವರ್ಗಗಳಲ್ಲಿ ಹೆಚ್ಚು ಬಳಕೆಯಲ್ಲಿತ್ತು. ಆನಂತರ ಸ್ಥಳಿಯ ಭಾಷೆಗಳ ಬಳಕೆ ಸಾಮಾನ್ಯವಾಗುತ್ತಾ ಬಂತು.

ಇದುವರೆಗೆ ನಾನು ಹಾನಗಲ್ಲು ಪ್ರದೇಶದ, ಬಾದಾಮಿ ಚಾಲುಕ್ಯ ಪೂರ್ವದ, ಆದಿ ಕದಂಬ ಪೂರ್ವದ ವಿಷಯಗಳ ಬಗ್ಗೆ ವಿಶೇಷವಾಗಿ ಪುನರಾವಲೋಕನ ಮಾಡಿದ್ದೇನೆ. ಈ ಪ್ರಾಚೀನ ಮಹತ್ವದ ಸಾಂಸ್ಕೃತಿಕ ಹಂತಗಳ ಬಗ್ಗೆ ತೀರ ಕಡಿಮೆ ಸಂಶೋಧನೆ ಮತ್ತು ಅಧ್ಯಯನವಾಗಿದೆ. ಚೆನ್ನಕ್ಕ ಪಾವಟೆಯವರು ಈಚಿನ ವರ್ಷಗಳಲ್ಲಿ ಹಾನಗಲ್ಲು ಪ್ರದೇಶದ ಬಗ್ಗೆಯೇ ಒಂದು ಉತ್ತಮ ಕೃತಿಯನ್ನು ಪ್ರಕಟಿಸಿದ್ದಾರೆ. ಕೇಂದ್ರ ಸರ್ಕಾರದ ಪುರಾತತ್ವ ಸರ್ವೇಕ್ಷಣ ಇಲಾಖೆ ಹಾನಗಲ್ಲು ತಾಲೂಕಿನ ಎಲ್ಲ ಹಳ್ಳಿಗಳಲ್ಲಿಯ ಪುರಾತತ್ವ ಅನ್ವೇಷಣೆ ಕೈಗೊಂಡಿತ್ತು. ಈ ಅನ್ವೇಷಣೆಯಲ್ಲಿ ಹೆಚ್ಚಾಗಿ ಇತಿಹಾಸ ಕಾಲದ ಸ್ಮಾರಕಗಳು, ಶಾಸನಗಳು ಇತ್ಯಾದಿ ಬೆಳಕಿಗೆ ಬಂದಿವೆ. ಆದ್ದರಿಂದ ನನ್ನ ಈ ಪುನರಾವಲೋಕನದಲ್ಲಿ ಆದಿ ಕದಂಬ ಪೂರ್ವದ ಸಾಂಸ್ಕೃತಿಕ ಘಟ್ಟಗಳ ಬಗ್ಗೆ ಸಂಶೋಧನೆ ಮತ್ತು ಅಧ್ಯಯನದ ಅವಶ್ಯಕತೆ, ಮಹತ್ವ ಮತ್ತು ಉಪಯುಕ್ತತೆಯನ್ನು ವಿಶಾಲ ಭೌಗೋಳಿಕ ವ್ಯಾಪ್ತಿಯಲ್ಲಿ ಉದಾಹರಣೆಗಳೊಂದಿಗೆ ವಿವರಿಸಿದ್ದೇನೆ. ಇದು ಯುವ ಸಂಶೋಧಕರಿಗೆ ಮುಂದಿನ ಅನ್ವೇಶಣೆ ಮತ್ತು ಅಧ್ಯಯನಗಳಿಗೆ ಸ್ಪೂರ್ತಿದಾಯಕ ಮಾರ್ಗಸೂಚಿಯಾಗಬಹುದೆಂದು ನನ್ನ ಆಶಯ.

# ೧. ಭೌಗೋಳಿಕತೆ - ಪ್ರಾಗಿತಿಹಾಸ

ಕರ್ನಾಟಕ ವಿಭಿನ್ನ ರೀತಿಯ ಭೌಗೋಳಿಕ ಅಂಶಗಳನ್ನೊಳಗೊಂಡ ಪ್ರದೇಶ. ಇದರಲ್ಲಿ ನಿಸರ್ಗದ ವಿಶೇಷ ಭೌತಿಕ ಲಕ್ಷಣಗಳನ್ನು ಪಡೆದು, ಹಾವೇರಿ ಜಿಲ್ಲೆಯಿಂದ ಪಶ್ಚಿಮಕ್ಕೆ ಸುಮಾರು ೩೫ ಕಿ.ಮೀ. ದೂರದಲ್ಲಿರುವ ತಾಲೂಕು ಆಡಳಿತ ಕೇಂದ್ರಸ್ಥಳವೇ ಹಾನಗಲ್ಲು. ಹಾವೇರಿ ಜಿಲ್ಲೆ ಮತ್ತು ಹಾನಗಲ್ಲಿನ ಸುತ್ತಮುತ್ತಲಿನ ಪ್ರದೇಶವು ಪ್ರಾಗಿತಿಹಾಸ ಕಾಲದಿಂದಲೇ ಜನವಸತಿ ಬೆಳೆದು, ನಂತರ ವಿವಿಧ ರಾಜಮನೆತನಗಳ ಆಳ್ವಿಕೆಯಿಂದ ಇದೊಂದು ಸಾಂಸ್ಕೃತಿಕ ಕೇಂದ್ರವಾಗಿ ನೆಲೆಗೊಳ್ಳಲು ಇಲ್ಲಿನ ಭೌಗೋಳಿಕ ಪರಿಸರವೇ ಪೂರಕ ಅಂಶವಾಗಿ ಕಾಣುತ್ತದೆ.

**ಒಟ್ಟು ವಿಸ್ತೀರ್ಣ**

ಹಾನಗಲ್ಲು ೧೪೩ ಗ್ರಾಮಗಳನ್ನೊಳಗೊಂಡು, ೭೭೫೨೦ ಹೆಕ್ಟೇರ್ ಅಥವಾ ೪೭೮೬.೮೩ ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಹಾವೇರಿ ಜಿಲ್ಲೆಯಲ್ಲಿ ಬ್ಯಾಡಗಿ, ಹಾನಗಲ್ಲು, ಹಾವೇರಿ, ಹಿರೇಕೆರೂರು, ರಾಣಿಬೆನ್ನೂರು, ಸವಣೂರು, ಮತ್ತು ಶಿಗ್ಗಾಂವ ತಾಲೂಕುಗಳು ಸೇರಿವೆ. ಹಾನಗಲ್ಲು ನಗರ ಅಕ್ಷಾಂಶ ೧೪ ಡಿಗ್ರಿ - ೪೫ ಡಿಗ್ರಿ ಮತ್ತು ರೇಖಾಂಶ ೭೫ ಡಿಗ್ರಿ - ೦೫ ಡಿಗ್ರಿ ಯ ಮಧ್ಯದಲ್ಲಿದೆ.

**ಮೇಲ್ಮೈ ಲಕ್ಷಣ**

ಹಾವೇರಿ ಜಿಲ್ಲೆಯ ಮೇಲ್ಮೈ ಲಕ್ಷಣದಲ್ಲಿ ಪೂರ್ವ ಭಾಗ ಸ್ವಲ್ಪ ಸಮತಟ್ಟಾಗಿ ಕಪ್ಪು ಮತ್ತು ಕೆಂಪು ಮಣ್ಣಿನಿಂದ ಕೂಡಿದೆ. ಪಶ್ಚಿಮ ಭಾಗದ ಹಾನಗಲ್ಲು ತಾಲೂಕು ಉಬ್ಬು, ತಗ್ಗುಗಳಿಂದ, ಚಿಕ್ಕ - ಪುಟ್ಟ ಗುಡ್ಡಗಳಿಂದ ಆವೃತವಾಗಿದೆ. ಹಾನಗಲ್ಲು, ಹಿರೇಕೆರೂರು, ಶಿಗ್ಗಾಂವ ತಾಲೂಕುಗಳು ಹೆಚ್ಚಾಗಿ ಕೆಂಪು ಮತ್ತು ಕೆಂಪು ಮರಳು ಮಿಶ್ರಿತ ಮಣ್ಣಿನ ಪ್ರದೇಶಗಳಾಗಿವೆ. ಸವಣೂರಿನ ಪಶ್ಚಿಮ ಭಾಗ ಮತ್ತು ರಾಣಿಬೆನ್ನೂರು ತಾಲೂಕುಗಳು ಕಪ್ಪು ಜೇಡಿಯ ಮಣ್ಣು ಮತ್ತು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಆವೃತವಾಗಿವೆ. ಹಾನಗಲ್ಲು ತಾಲೂಕು ಒಟ್ಟಾರೆ ಶೇ.೮೦ರಷ್ಟು ಕೆಂಪು ಮತ್ತು ಶೇ.೨೦ರಷ್ಟು ಮಧ್ಯಮ ಕಪ್ಪು ಮಣ್ಣಿನಿಂದ ಕೂಡಿದೆ.

**ಬೆಟ್ಟ – ಗುಡ್ಡ**

ಹಾವೇರಿ ಜಿಲ್ಲೆಯನ್ನು ಅರೆಮಲೆನಾಡು ಪ್ರದೇಶವೆಂದು ಕರೆಯುವುದುಂಟು. ಪಶ್ಚಿಮ ಭಾಗದಲ್ಲಿ ಹರಡಿರುವ ಗುಡ್ಡಗಳು ಉತ್ಕರ್ಶಿತ ಅಗ್ನಿ ಶಿಲೆ, ಅಲ್ಲಲ್ಲಿ ಜಂಬಟ್ಟಿಗೆ ಕಲ್ಲುಗಳಿಂದ ಕೂಡಿವೆ. ದುಂಡಸಿ ಮತ್ತು ಹಾನಗಲ್ಲಿನ ಬಳಿ ಕಡಿದಾದ ಎರಡು ಸಣ್ಣ ಗುಡ್ಡಗಳಿದ್ದು, ಕ್ರಮವಾಗಿ ೭೩೨ ಮೀ. ಮತ್ತು ೮೩೨ ಮೀ. ಎತ್ತರವಾಗಿವೆ. ರಾಣಿಬೆನ್ನೂರ ಹತ್ತಿರದ ಐರಣಿಗುಡ್ಡ, ಬ್ಯಾಡಗಿ ಪೂರ್ವದ ದೇವರಗುಡ್ಡ, ಆಡೂರಿನ ಪೂರ್ವ ಮತ್ತು ಪಶ್ಚಿಮ ಭಾಗ, ಬಾಳಂಬೀಡದಿಂದ ಅಕ್ಕಿಆಲೂರುವರೆಗಿನ ಗುಡ್ಡ ಮತ್ತು ಬಂಕಾಪುರದ ಕಿರುಗುಡ್ಡಗಳು ಗಮನ ಸೆಳೆಯುತ್ತವೆ. ಹಾನಗಲ್ಲು ತಾಲೂಕಿನ ಪಶ್ಚಿಮ ಭಾಗ ಕುರುಚಲು ಗುಡ್ಡಗಳಿಂದ ಕೂಡಿದೆ.

**ಅರಣ್ಯ ಸಂಪತ್ತು**

ಹಾವೇರಿ ಜಿಲ್ಲೆಯಲ್ಲಿ ನಿಸರ್ಗದತ್ತವಾದ ಅರಣ್ಯ ಸಂಪತ್ತನ್ನು ಹಾನಗಲ್ಲು ಮತ್ತು ಹಿರೇಕೆರೂರು ತಾಲೂಕುಗಳಲ್ಲಿ ಕಾಣುತ್ತೇವೆ. ಎಲೆ ಉದುರುವ ವೃಕ್ಷಗಳು, ಮುಳ್ಳು, ಕುರುಚಲು ಗಿಡಗಳು ಅಲ್ಲಲ್ಲಿ ಹರಡಿವೆ. ದಟ್ಟವಾದ ಕಾಡುಗಳಲ್ಲಿ ತೇಗ, ಶ್ರೀಗಂಧ, ಅಳಲೆ, ಹಲಸು, ಆಲ, ಹತ್ತಿ, ಹೊಳೆನಂದಿ, ಬೀಟೆ, ದಿಂಡಿಲು, ಶಿವನಿ, ಹೊನ್ನೆ, ಮಾವು, ಬೇವು, ಹುಣಸೆ, ಮುತ್ತುಗ, ನೇರಲೆ, ಬಿದಿರು ಹಾಗೂ ಈಚಲು ಮರಗಳು ಈ ಅರಣ್ಯ ಪ್ರದೇಶದಲ್ಲಿವೆ.

ಕಾಡು ಪ್ರಾಣಿಗಳಾದ ಕಾಡುಕೋಣ, ಚಿರತೆ, ಕರಡಿ, ಜಿಂಕೆ, ಕಾಡುಹಂದಿ, ಕಾಡುಬೆಕ್ಕು ಮೊದಲಾದವು ಕಂಡುಬರುತ್ತವೆ. ಜಿಲ್ಲೆಯಲ್ಲಿ ಜಿಂಕೆಗಳ ಸಂತತಿ ಕ್ಷೀಣಿಸುತ್ತಿರುವುದನ್ನು ಕಂಡು ಇವುಗಳ ಸಂತತಿಯ ಅಭಿವೃದ್ಧಿಗಾಗಿ ಸರಕಾರವು ರಾಣಿಬೆನ್ನೂರು ಸಮೀಪ(ಐರಣಿಗುಡ್ಡ)ದಲ್ಲಿ ಸುಮಾರು ೧೨೦ ಚ.ಕಿ.ಮೀ. ಪ್ರದೇಶದಲ್ಲಿ ಜಿಂಕೆಧಾಮವನ್ನು ನಿರ್ಮಿಸಲಾಗಿದೆ.

ಈಗ ಹಾನಗಲ್ಲು ತಾಲೂಕಿನಲ್ಲಿ ಒಟ್ಟು ೮೪೭ ಹೆಕ್ಟೇರ್ ಅರಣ್ಯ ಪ್ರದೇಶವಿದೆ. ಮೂಲತಃ ಹಾನಗಲ್ಲು ನಗರದ ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ದಟ್ಟವಾದ ಅರಣ್ಯವಿತ್ತೆಂದು ಸ್ಥಳೀಕರ ಹೇಳಿಕೆ. ಪ್ರಾಚೀನ ಕಾಲದಲ್ಲಿ ದಟ್ಟವಾದ ಅರಣ್ಯವಾಗಿದ್ದ ಈಗಿನ ತಾರಕೇಶ್ವರ ದೇಗುಲ ಹಿಂಭಾಗದ ಚಿಕ್ಕನಕಾವಲವು ಇಂದು ನೆಡು ತೋಪು ಅರಣ್ಯ ಪ್ರದೇಶವಾಗಿ ಮಾರ್ಪಟ್ಟಿದೆ.

**ಖನಿಜ ಸಂಪನ್ಮೂಲ**

ಹಾವೇರಿ ಜಿಲ್ಲೆಯ ಆರ್ಥಿಕರಂಗದ ಮೇಲೆ ಮಹತ್ತರವಾದ ಪ್ರಭಾವ ಬೀರುವ ಮತ್ತು ಲಾಭ ತರಬಹುದಾದ ಮುಖ್ಯ ಖನಿಜಗಳು ಈ ಪರಿಸರದಲ್ಲಿ ಹೇರಳವಾಗಿಲ್ಲ. ಹೀಗಾಗಿ ಹಾನಗಲ್ಲು ಮತ್ತು ರಾಣಿಬೆನ್ನೂರು ತಾಲ್ಲೂಕುಗಳನ್ನು ಬಿಟ್ಟರೆ, ಉಳಿದ ಕಡೆಗೆ ಖನಿಜೋತ್ಪತ್ತಿ ಇಲ್ಲ. ಈ ಪ್ರದೇಶದಲ್ಲಿ ಪದರುಶಿಲೆ, ಬೆಣಚುಕಲ್ಲು, ಪ್ರಾಚೀನ ಅಗ್ನಿಶಿಲೆ, ಕಣಶಿಲೆ, ಡಾಲರೈಟ್ ದಿಂಡು, ಚೆರ್ಟ್, ಕ್ವಾರ್ಟ್ಸ್, ಹಾಲುಗಲ್ಲು, ಹರಳುಗಲ್ಲು, ಕ್ಯಾಲ್ಸಿಡೋನಿಯಂತಹ ಶಿಲೆಗಳು ಕಾಣಸಿಗುತ್ತವೆ. ಇಂತಹ ಶಿಲೆಗಳನ್ನು ಬಳಸಿಕೊಂಡು ಶಿಲಾಯುಗದ ಮಾನವ ಶಿಲಾ ಉಪಕರಣಗಳನ್ನು ತಯಾರಿಸಿಕೊಂಡಿರುವುದನ್ನು ಉದಾಹರಿಸಬಹುದು.

**ಜಲಸಂಪನ್ಮೂಲ**

ಈ ಜಿಲ್ಲೆಯ ನದಿ, ಕೆರೆ ಹಾಗೂ ಸಣ್ಣ - ಪುಟ್ಟ ಹಳ್ಳಗಳೇ ಜಲಸಂಪನ್ಮೂಲಗಳಾಗಿವೆ. ತುಂಗಭದ್ರಾ, ವರದಾ, ಕುಮದ್ವತಿ, ಧರ್ಮಾ ನದಿಗಳ ಬಯಲು ಪ್ರದೇಶಗಳಲ್ಲಿ ವಾಸಮಾಡುವ ಜನರ ಬದುಕಿನ ಮೇಲೆ ಮಹತ್ತರ ಪ್ರಭಾವ ಬೀರಿವೆ. ಪ್ರಾಚೀನ ಕಾಲದಿಂದಲೇ ಪ್ರಮುಖ ನಾಗರೀಕತೆಗಳು ನದಿ ತೀರ ಪ್ರದೇಶಗಳಲ್ಲಿ ಬೆಳೆದುಬಂದಿರುವುದನ್ನು ಸ್ಮರಿಸಬಹುದು.

**ತುಂಗಭದ್ರಾ ನದಿ**

ಶಿವಮೊಗ್ಗ ಜಿಲ್ಲೆಯ ಕೂಡಲ ಎಂಬಲ್ಲಿ ತುಂಗ ಮತ್ತು ಭದ್ರಾ ಎಂಬ ಎರಡು ನದಿಗಳು ಸಂಗಮಗೊಂಡು, ಪ್ರಸ್ತುತ ಜಿಲ್ಲೆಯ ಹೊಳೆ ಅನ್ವೇರಿಯಲ್ಲಿ ಪ್ರವೇಶಿಸುತ್ತದೆ. ಚಿಕ್ಕ ಅರಳಿಹಳ್ಳ, ಚಂದಾಪುರ ಹಳ್ಳಗಳು ಹರಿಯುತ್ತ ತುಂಗಭದ್ರಾ ನದಿಯನ್ನು ಕೂಡುತ್ತವೆ.

**ವರದಾ ನದಿ**

ತುಂಗಭದ್ರೆಯ ಉಪನದಿಯಾಗಿರುವ ಇದು ಹಾನಗಲ್ಲು, ಸವಣೂರು ಮತ್ತು ಹಾವೇರಿ ತಾಲೂಕುಗಳಲ್ಲಿ ಹರಿದು, ಗಳಗನಾಥ ಎಂಬ ಹಳ್ಳಿಯಲ್ಲಿ ತುಂಗಭದ್ರಾ ನದಿಯನ್ನು ಸೇರುತ್ತದೆ. ಶಿವಮೊಗ್ಗ ಜಿಲ್ಲೆಯ ಇಕ್ಕೇರಿ ಬಳಿ ಹುಟ್ಟಿ, ಸೊರಬ ತಾಲೂಕಿನ ಮೂಲಕ ಹಾದು, ಹಾನಗಲ್ಲು ತಾಲೂಕಿನ ಹೊಂಕಣ ಗ್ರಾಮದ ಬಳಿ ಹಾವೇರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಹಾವೇರಿ ಜಿಲ್ಲೆಯಲ್ಲಿ ಸುಮಾರು ೧೦೦ ಕಿ.ಮೀ. ದವರೆಗೆ ಹರಿದಿರುವ ಇದು ಹಾವೇರಿ ಹಾಗೂ ಸವಣೂರು ತಾಲೂಕುಗಳ ಗಡಿಯಾಗಿ ವಿಂಗಡಿಸಿದೆ.

**ಧರ್ಮಾ ನದಿ**

ಹಾನಗಲ್ಲು ತಾಲೂಕಿಗೆ ವರದಾನವಾಗಿರುವ ಧರ್ಮಾನದಿಯು ಉತ್ತರ ಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಡೊಲ್ಲರಟ್ಟಿ ಎಂಬಲ್ಲಿ ಹಾನಗಲ್ಲು ತಾಲೂಕನ್ನು ಪ್ರವೇಶಿಸುತ್ತದೆ. ಹೀಗೆ ಹರಿಯುವಾಗ ಕೆರೆ - ಕಟ್ಟೆ ನಾಲೆಗಳಿಗೆ ನೀರು ಪೂರೈಸುತ್ತಾ ಸಾಗಿ, ಕೂಡಲ ಎಂಬಲ್ಲಿ ವರದಾ ನದಿಯನ್ನು ಸೇರುತ್ತದೆ.

**ಕೆರೆ – ಕಟ್ಟೆ**

ಈ ಪರಿಸರದಲ್ಲಿರುವ ೭೬೮ ಕೆರೆಗಳಲ್ಲಿ ೪೪೫ ಸಣ್ಣ ಕೆರೆಗಳು, ೧೧೨ ಮಧ್ಯಮ ಕೆರೆಗಳು ಮತ್ತು ೨೧೧ ದೊಡ್ಡ ಕೆರೆಗಳೆಂದು ವಿಂಗಡಿಸಬಹುದು. ಸ್ಥಳೀಯವಾಗಿ ಆನೆಕೆರೆ, ಅಚ್ಚಕೆರೆ, ನಾಗವಳ್ಳಿಕೆರೆ, ಕಂಬಳಿಕೆರೆ ಹೀಗೆ ೪ ಕೆರೆಗಳು ಹಾಗೂ ಕೆಂಪುಕಟ್ಟೆ, ಅಕ್ಕತಂಗಿಯರಕಟ್ಟೆ, ಮುಕ್ಕಾರ್ತಿ, ಕುಂಬಾರಗುಂಡಿ, ಮುಲ್ಲಾನಗುಂಡಿ, ಕಂಚಿಗೇರಿ ಹೊಂಡ ಎಂಬ ೬ ಕಟ್ಟೆಗಳಿವೆ.

**ಮಳೆ ಮತ್ತು ಹವಾಮಾನ**

ಹಾವೇರಿ ಜಿಲ್ಲೆಯ ಪಶ್ಚಿಮ ಭಾಗ ಕಿರುಗುಡ್ಡ ಮತ್ತು ಕಾಡುಗಳಿಂದ ಆವೃತವಾದ ಹಾನಗಲ್ಲು ಮತ್ತು ಹಿರೇಕೆರೂರು ತಾಲೂಕುಗಳಲ್ಲಿ ಬೀಳುವ ಮಳೆಯ ಪ್ರಮಾಣ ಉಳಿದ ತಾಲೂಕುಗಳಿಗಿಂತಲೂ ಅಧಿಕವಾಗಿ ಕಂಡುಬರುತ್ತದೆ. ಆದ್ದರಿಂದ ಇದನ್ನು ಅರೆಮಲೆನಾಡು ಪ್ರದೇಶವೆಂದು ಕರೆಯಲಾಗಿದೆ. ಕಳೆದ ೫೦ ವರ್ಷಗಳಿಂದ ಈ ಜಿಲ್ಲೆಯ ಅತೀ ಹೆಚ್ಚು ಮಳೆ ಬೀಳುವ ತಾಲೂಕುಗಳಲ್ಲಿ ಹಾನಗಲ್ಲು ಪ್ರಥಮ ಹಾಗೂ ಹಿರೇಕೆರೂರು ದ್ವಿತೀಯ ಸ್ಥಾನದಲ್ಲಿವೆ. ವಾರ್ಷಿಕ ಸರಾಸರಿ ೯೩೩.೪ ಮಿ.ಮೀ. ಮಳೆಯಾಗುತ್ತದೆ.

ಈ ಪ್ರದೇಶದಲ್ಲಿ ಮೇ ತಿಂಗಳಿಂದ ಅಕ್ಟೋಬರ್ ವರೆಗೆ ಮಳೆ ಬೀಳುವ ಸಮಯವಾದರೆ, ನವೆಂಬರ್, ಡಿಸೆಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ವಾತಾವರಣ ಚಳಿಯಿಂದ ಕೂಡಿರುತ್ತದೆ. ಹಾವೇರಿ ಜಿಲ್ಲೆಯ ಉಳಿದ ತಾಲೂಕುಗಳಿಗಿಂತಲೂ ಹಾನಗಲ್ಲು ತಂಪಾದ ಹೆಚ್ಚು ಸೆಖೆ ಎನಿಸದ ಹಿತಕರವಾದ ಹವಾಗುಣ ಹೊಂದಿರುವ ಪ್ರದೇಶವಾಗಿದೆ.

**ಕೃಷಿ**

ಇಲ್ಲಿಯ ಮುಖ್ಯ ಉದ್ಯೋಗ ವ್ಯವಸಾಯ. ಈ ಜಿಲ್ಲೆಯ ಪಶ್ಚಿಮ ಭಾಗವು ಅರೆಮಲೆನಾಡಾಗಿರುವುದರಿಂದ, ಹೆಚ್ಚಾಗಿ ಮಳೆಯನ್ನಾಧರಿಸಿ ಮತ್ತು ಕೆರೆಕಟ್ಟೆ ನದಿಗಳಿಂದ ನೀರಾವರಿ ಸೌಲಭ್ಯ ಪಡೆದು, ಭತ್ತ, ರಾಗಿ, ಕಬ್ಬು, ಅಡಿಕೆ, ಹತ್ತಿ, ಬಾಳೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಜಿಲ್ಲೆಯ ಪೂರ್ವ, ದಕ್ಷಿಣ ಮತ್ತು ಉತ್ತರ ಭಾಗಗಳಲ್ಲಿ ಎಣ್ಣೆಕಾಳು, ಜೋಳ, ಮೆಕ್ಕೆಜೋಳಗಳನ್ನು ಬೆಳೆದರೆ, ರಾಣಿಬೆನ್ನೂರು ಮತ್ತು ಬ್ಯಾಡಗಿ ತಾಲೂಕುಗಳಲ್ಲಿ ವಿವಿಧ ತರಕಾರಿ ಹಾಗೂ ಧಾನ್ಯಗಳ ಬೀಜೋತ್ಪಾದನೆ ಮಾಡುವುದು ಮುಖ್ಯ ಉದ್ಯೋಗವಾಗಿದೆ.

ಹಳ್ಳೂರು (ಹಿರೇಕೆರೂರು ತಾಲೂಕು) ಉತ್ಖನನದಲ್ಲಿ ದೊರೆತ ಅವಶೇಷಗಳಲ್ಲಿ ಕಪ್ಪು ರಾಗಿಯ ಕಾಳುಗಳನ್ನು ಇಂಗಾಲ - ೧೪ರ ಕಾಲಮಾನಕ್ಕೆ ಒಳಪಡಿಸಿದಾಗ, ಅವು ಕ್ರಿ.ಪೂ. ೧೮ನೆಯ ಶತಮಾನಕ್ಕೆ ಸೇರಿದವೆಂದು ತಿಳಿದುಬಂದಿದೆ. ಆದ್ದರಿಂದ ಈ ಪ್ರದೇಶದಲ್ಲಿ ರಾಗಿ ಅತೀ ಪ್ರಾಚೀನ ಬೆಳೆಯಾಗಿದೆ. ಒಟ್ಟಾರೆ ಹಾನಗಲ್ಲು ಪ್ರದೇಶ ೩೮೦೫ ಹೆಕ್ಟೇರು ತೋಟಗಾರಿಕೆ ಬೆಳೆಯ ವಿಸ್ತಾರ ಪಡೆದುಕೊಂಡಿದೆ.

**ಪ್ರಾಗಿತಿಹಾಸ ಅವಶೇಷಗಳು**

ಕರ್ನಾಟಕದಲ್ಲಿ ಚಾರಿತ್ರಿಕವಾಗಿ ಮಹತ್ವ ಪಡೆದ ಸ್ಥಳಗಳಲ್ಲಿ ಹಾನಗಲ್ಲೂ ಒಂದು. ನೀರಿನ ಸರಬರಾಜು, ದಟ್ಟವಾದ ಕಾಡು, ಬೆಟ್ಟ ಮೊದಲಾದ ಭೌಗೋಳಿಕ ಲಕ್ಷಣಗಳನ್ನು ಹೊಂದಿದ್ದರಿಂದ, ಈ ಪರಿಸರದಲ್ಲಿ ಪ್ರಾಗಿತಿಹಾಸ ಕಾಲದಿಂದಲೂ ಮಾನವನ ಚಟುವಟಿಕೆಗಳು ನಡೆದುಬಂದಿವೆ. ಹೀಗಾಗಿ ಆಯಾ ಕಾಲದಲ್ಲಿನ ಘಟನಾವಳಿಗಳ ಕುರುಹುಗಳೇ ಇಂದು ಕಾಣುವ ಪ್ರಾಚ್ಯಾವಶೇಷಗಳು.

ಹಾನಗಲ್ಲು ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಮಾನವನು ಬಳಸಿದ ಅವಶೇಷಗಳಿಂದ ಹಳೆ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ, ಶಿಲಾ - ತಾಮ್ರಯುಗ, ಕಬ್ಬಿಣ - ಬೃಹತ್ ಶಿಲಾಯುಗ ಮತ್ತು ಇತಿಹಾಸ ಕಾಲದ ನೆಲೆಗಳನ್ನು ಗುರುತಿಸಬಹುದು.

**ಆದಿ ಹಳೆ ಶಿಲಾಯುಗ**

ದಕ್ಷಿಣ ಭಾರತದಲ್ಲಿ ಹಳೆ ಶಿಲಾಯುಗದ ನಿವೇಶನಗಳು ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರಗಳ ವಿವಿಧ ಭಾಗಗಳಲ್ಲಿ ಕಂಡುಬಂದಿವೆ. ಈ ಕಾಲದ ನೆಲೆಗಳನ್ನು ಪತ್ತೆಹಚ್ಚುವಲ್ಲಿ ಪ್ರಮುಖನಾಗಿದ್ದ ರಾಬರ್ಟ ಬ್ರೂಸ್ ಫೂಟ್, ಹಾವೇರಿ ಜಿಲ್ಲೆಯ ರಾಣಿಬೆನ್ನೂರು, ಬ್ಯಾಡಗಿ, ಹಿರೇಕೆರೂರು ತಾಲೂಕುಗಳ ಹಳ್ಳಿಗಳಲ್ಲಿ ಸರ್ವೇಕ್ಷಣ ಮಾಡಿ ಅನೇಕ ಪ್ರಾಚೀನ ನೆಲೆಗಳನ್ನು ಗುರುತಿಸಿದ್ದಾನೆ.

ಸಾಮಾನ್ಯವಾಗಿ ಹಳೆ ಶಿಲಾಯುಗವನ್ನು ಬೆಳವಣಿಗೆಯ ಆಧಾರದ ಮೇಲೆ ಮೂರು ಹಂತಗಳಲ್ಲಿ ವಿಂಗಡಿಸಿ ಆದಿ, ಮಧ್ಯ, ಅಂತ್ಯ ಹಳೆ ಶಿಲಾಯುಗಗಳೆಂದು ಕರೆಯಲಾಗಿದೆ.

ಹಾನಗಲ್ಲು ಪ್ರದೇಶದಲ್ಲಿ ಆದಿ ಹಳೆ ಶಿಲಾಯುಗದ ೮ ನೆಲೆಗಳು ವರ್ದಿ (ಹಾನಗಲ್ಲು ತಾ.), ಬೆಣ್ಣೆಹಳ್ಳ (ಬ್ಯಾಡಗಿ ತಾ.), ಚೆನ್ನಾಪುರ (ಸವಣೂರು ತಾ.), ನದಿಹರಳಹಳ್ಳಿ, ನಲವಾಗಲ (ರಾಣಿಬೆನ್ನೂರು ತಾ.) ಮತ್ತು ಮಧ್ಯ ಶಿಲಾಯುಗದ ನೆಲೆಗಳನ್ನು ತೋಟಗಂಟೆ, ರಟ್ಟೆಹಳ್ಳಿ (ಹಿರೇಕೆರೂರು ತಾ.)ಗಳಲ್ಲಿ ಗುರುತಿಸಲಾಗಿದೆ.

ಕರ್ನಾಟಕದ ವಿವಿಧೆಡೆಗಳಲ್ಲಿ ಪತ್ತೆಯಾದ (ಹಲಸಗಿ ಗುಲಬರ್ಗಾ ಜಿ. ಕಿಬ್ಬನಹಳ್ಳಿ ತುಮಕೂರು ಜಿ. ನ್ಯಾಮತಿ ಶಿವಮೊಗ್ಗ ಜಿ.) ರೋಸ್ಟ್ರೋಕ್ಯಾರಿನೇಟ ಎಂಬ ಹಳೆಯದಾದ ಆಯುಧಗಳು, ಅಬ್ಬವಿಲಿಯನ್ ಮತ್ತು ಮುಂದುವರೆದ ಅಶೂಲಿಯನ್ ಮಾದರಿಯ ಆಯುಧಗಳು, ಕ್ಲಾಕಟನ್ ರೀತಿಯ ಚೆಕ್ಕೆಗಳಲ್ಲಿ ತಯಾರಿಸಿದ ಉಪಕರಣಗಳು ಹಾನಗಲ್ಲು ಪ್ರದೇಶದ ವರ್ದಿಯಲ್ಲಿವೆ.

ತೋಟಗಂಟೆ, ರಟ್ಟೆಹಳ್ಳಿಗಳಲ್ಲಿ ದೊರೆತ ಶಿಲಾಯುಧಗಳು ಚೆರ್ಟ ಮತ್ತು ಕ್ವಾರ್ಟ್ಸ ಶಿಲೆಯಲ್ಲಿ ರೂಪಿತವಾಗಿವೆ. ನದಿಹರಳಹಳ್ಳಿ, ನಲವಾಗಲು, ಚಲ್ಲಾಪುರ ಮತ್ತು ಚೆನ್ನಿನದಿ ನೆಲೆಗಳಲ್ಲಿ ದೊರೆತ ಉಪಕರಣಗಳು ಯಾವುದೇ ನಿರ್ದಿಷ್ಟ ಸ್ವರೂಪಗಳನ್ನು ಹೊಂದಿಲ್ಲ. ಆದರೆ ಚೆನ್ನಾಪುರದ ಉಪಕರಣಗಳು ಅಶೂಲಿಯನ್ ಮಾದರಿಯನ್ನು ಹೋಲುತ್ತವೆ. ಈ ಕಾಲದಲ್ಲಿ ಆಯುಧಗಳ ಲಕ್ಷಣಗಳಿಂದ ಮತ್ತು ಕಾಲಮಾನದಿಂದ ಪ್ರತ್ಯೇಕಿಸಿ ಅಧ್ಯಯನಿಸಬಹುದಾದ ಮಾನವನ ಜೀವನದ ಕ್ರಮವು ಕಠಿಣವಾಗಿತ್ತು. ಕಿರು ಗುಡ್ಡ - ಬೆಟ್ಟಗಳಿಂದ ಮತ್ತು

ಧರ್ಮಾ, ವರದಾ, ಕುಮದ್ವತಿ, ತುಂಗಭದ್ರಾ ನದಿಗಳಿಂದ ಆವೃತವಾದ ಈ ಪ್ರದೇಶದಲ್ಲಿ ಮಾನವ ತನ್ನ ಆಹಾರಕ್ಕಾಗಿ ಬೇಟೆಯಾಡುತ್ತ, ಸ್ಥಳದಿಂದ ಸ್ಥಳಕ್ಕೆ ಸಂಚಾರ ಮಾಡುವ ಜೀವನ ಕ್ರಮವಾಗಿತ್ತೆಂದು ಹೇಳಬಹುದು.

**ಸೂಕ್ಷ್ಮ ಶಿಲಾಯುಗ**

ಈ ಯುಗಕ್ಕೆ ಸೇರಿದ ೬ ನೆಲೆಗಳು ಜಿಲ್ಲೆಯಾದ್ಯಂತ ಕಂಡುಬಂದರೆ, ಮುಖ್ಯವಾಗಿ ೩ ನೆಲೆಗಳು (ಅರೇಕೊಪ್ಪ, ಗಿರಿಸನಕೊಪ್ಪ, ಹಾನಗಲ್ಲು) ಹಾನಗಲ್ಲು ತಾಲೂಕಿನಲ್ಲಿವೆ. ಆಯುಧಗಳ ನಿರ್ಮಾಣದಲ್ಲಿ ಸೂಕ್ಷ್ಮ ತಂತ್ರಗಾರಿಕೆ ಮತ್ತು ಸಂಕೀರ್ಣತೆಗೆ ಹೆಸರಾದ ಈ ಯುಗಕ್ಕೆ ಸೂಕ್ಷ್ಮ ಶಿಲಾಯುಗವೆಂದು ಕರೆಯಲಾಗಿದೆ. ಆಯುಧಗಳ ತಯಾರಿಕೆಗಾಗಿ ಕ್ವಾರ್ಟ್ಸ, ಕ್ಯಾಲಿಡೋನಿ, ಹರಳುಗಲ್ಲು, ಹಾಲುಗಲ್ಲುಗಳನ್ನು ಬಳಸಿಕೊಳ್ಳಲಾಗಿದೆ. ಹಾನಗಲ್ಲು ಕೋಟೆಯ ಒಳ ಭಾಗದ ಗದ್ದೆಗಳಲ್ಲಿ ಈ ಯುಗಕ್ಕೆ ಸೇರಿದ ಶಿಲಾ ಉಪಕರಣಗಳಾದ ನೀಳಚಕ್ಕೆ, ಮೊನೆ, ಕೊರೆಯುಳಿ, ಮೊನೆ ಮಾದರಿ ಡಬ್ಬಣ, ಅರ್ಧಚಂದ್ರಾಕೃತಿಯ ಉಪಕರಣಗಳು ಹರಡಿವೆ.

**ನೂತನ ಶಿಲಾಯುಗ**

ದಖನ್ ಪ್ರಸ್ಥಭೂಮಿ ನವಶಿಲಾಯುಗದ ನಿವೇಶನಗಳಿಗೆ ಹೆಸರಾಗಿದೆ. ಅದರಲ್ಲೂ ಕರ್ನಾಟಕದ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಪ್ರದೇಶವು ನವಶಿಲಾಯುಗದ ತವರುಮನೆಯಾಗಿದೆ. ಹಾವೇರಿ ಜಿಲ್ಲೆಯಲ್ಲಿ ಒಟ್ಟು ೫ ನೂತನ ಶಿಲಾಯುಗದ ನೆಲೆಗಳಿವೆ. (ಮುದೇನೂರ, ಹಾದರಗೇರಿ, ರಾಣಿಬೆನ್ನೂರು ತಾ. ಪುರದಕೇರಿ, ಶಿರಗಂಟೆ, ಹಳ್ಳೂರು ಹೆರೇಕೆರೂರು ತಾ.) ಹಾನಗಲ್ಲು ನಗರಕ್ಕೆ ಹೊಂದಿಕೊಂಡಿರುವ ಕೋಟೆಯ ಅವಶೇಷದ ಒಳ ಪ್ರದೇಶದಲ್ಲಿ ನವ ಶಿಲಾಯುಗದ ಬೂದು ಬಣ್ಣದ ಮಡಿಕೆಯ ಅವಶೇಷಗಳು ದೊರೆತಿವೆ.

ನವಶಿಲಾಯುಗದ ಆಕರ್ಷಕವಾದ ಹಂತ ಕಂಡುಬರಲು ಇಲ್ಲಿ ದೊರೆಯುವ ಬೆಸಾಲ್ಟ್, ಡೊಲರೈಟ್, ಡೆಕ್ಕನ್ ಟ್ರ್ಯಾಪ್ ಶಿಲೆಗಳು ನಯವಾದ ಕಣಗಳಿಂದ ಕೂಡಿದ್ದರಿಂದ ಉಜ್ಜಿ ನಯಗೊಳಿಸಿ ಮೆರಗು ಕೊಟ್ಟು ಶಿಲಾಯುಧಗಳನ್ನು ತಯಾರಿಸಲು ಅನುಕೂಲವಾಗಿತ್ತು. ಈ ಯುಗದ ಉಪಕರಣಗಳಲ್ಲಿ ಕೊಡಲಿ, ಬಾಚಿ, ಉಳಿ, ಅರೆಯುವ ಕಲ್ಲು, ಕವಣೆ ಕಲ್ಲು ಹಾಗೂ ಮೂಳೆಗಳಲ್ಲೂ ಮಾಡಿದ ಕೊರೆಯುವ, ಸೀಳುವ ಮತ್ತು ಡಬ್ಬಣದಂತಹ ಆಯುಧಗಳನ್ನು ಉಪಯೋಗಿಸಲಾಗುತ್ತಿತ್ತು.

ಈ ಯುಗದಲ್ಲಿ ಕುಂಬಾರಿಕೆ, ಪಶುಸಂಗೋಪನೆ, ಬೇಟೆ, ಮೀನುಗಾರಿಕೆ, ಕೃಷಿ ಉದ್ಯೋಗಗಳು ಪ್ರಮುಖವಾಗಿದ್ದವು. ಅಲ್ಲದೆ ಮಾನವನು ಒಂದೇ ಸ್ಥಳದಲ್ಲಿ ನೆಲೆನಿಂತು ಸಾಂಘಿಕ ಜೀವನವನ್ನು ಆರಂಭಿಸಿದನು.

ಹಾನಗಲ್ಲು ನಗರ ಮತ್ತು ಸುತ್ತಲಿನ ಪ್ರದೇಶದಲ್ಲಿ ಈ ಕಾಲದ ನಿಚ್ಚಳ ಲಕ್ಷಣಗಳು ಕಾಣುತ್ತವೆ. ಮುದೇನೂರಿನಲ್ಲಿ ಉಜ್ಜಿ ನಯಗೊಳಿಸಿದ ಕೊಡಲಿ, ಕಂದು ಬಣ್ಣದ ಮಡಿಕೆ, ಹಾದರಗೇರಿ, ಗಳಗನಾಥ, ಪುರದಕೇರಿ, ಶಿರಗಂಟೆ, ಹಳ್ಳೂರುಗಳಲ್ಲಿ ಬ್ರಹ್ಮಗಿರಿ ಮಾದರಿಯ ಕಂದು ಬಣ್ಣ ಮತ್ತು ಕೆಂಪು ಬಣ್ಣದ ಚಿತ್ರಿತ ಮಡಿಕೆಗಳು ಕಂಡುಬಂದಿವೆ. ಈ ಯುಗದ ಕೃಷಿಯಲ್ಲಿ ರಾಗಿ ಪ್ರಮುಖ ಬೆಳೆಯಾಗಿತ್ತೆಂದು, ಹತ್ತಿರದ ಹಳ್ಳೂರು ಉತ್ಖನನದಲ್ಲಿ ದೊರೆತ ರಾಗಿ ಕಾಳುಗಳ ಅವಶೇಷದಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ಇಂದಿಗೂ ರಾಗಿ, ಈ ಭಾಗದ ಪ್ರಮುಖ ಬೆಳೆಯಾಗಿರುವುದನ್ನು ಕಾಣಬಹುದು.

**ಶಿಲಾ – ತಾಮ್ರಯುಗ**

ನೂತನ ಶಿಲಾಯುಗದ ಮುಂದಿನ ಹಂತ ಶಿಲಾ - ತಾಮ್ರಯುಗ. ಈ ಯುಗಕ್ಕೆ ಸೇರಿದ ನೆಲೆಗಳಲ್ಲಿ ಪ್ರಮುಖವೆಂದು ಗುರುತಿಸಿಕೊಂಡಿರುವ ಬ್ರಹ್ಮಗಿರಿ ಮತ್ತು ಸಂಗನಕಲ್ಲುಗಳನ್ನು ಉದಾಹರಿಸಬಹುದು. ಹಾವೇರಿ ಜಿಲ್ಲೆಯಲ್ಲಿ ಒಟ್ಟು ೧೬ ನೆಲೆಗಳಿವೆ. ಅವುಗಳಲ್ಲಿ ಹಾನಗಲ್ಲು ಪರಿಸರದ ಹಾದರಗೇರಿ, ನದಿಹರಳಹಳ್ಳಿ, ಆಸುಂಡಿ, ಕೂನಬೇವು, ನಲವಾಗಲ (ರಾಣಿಬೆನ್ನೂರು ತಾ.), ತಳ್ಳಿಹಳ್ಳಿ ನಲ್ಲಾಪುರ (ಸವಣೂರು ತಾ.), ಕದರಮಂಡಲಗಿ (ಬ್ಯಾಡಗಿ ತಾ.)ಗಳಲ್ಲಿ ಈ ಯುಗದ ನೆಲೆಗಳನ್ನು ಹೆಸರಿಸಬಹುದು.

ಮಡಿಕೆಗಳ ತಯಾರಿಕೆಯ ತಾಂತ್ರಿಕತೆಯಲ್ಲಿ ಬಳಸಿದ ಬಣ್ಣಗಾರಿಕೆ ಹಾಗೂ ಆಯುಧಗಳನ್ನು ಉಜ್ಜಿ ನಯಗೊಳಿಸುವ ನಯಗಾರಿಕೆಗಳು ಈ ಕಾಲದ ವಿಶೇಷಗಳು. ಜೋರ್ವೆ ಮತ್ತು ಬ್ರಹ್ಮಗಿರಿಯ ಮಾದರಿಯ ದಪ್ಪ, ಒರಟಾದ ಕಂದು ಬಣ್ಣದ ಪಾತ್ರಾವಶೇಷಗಳು ಕವಲೆತ್ತು, ನದಿಹರಳಹಳ್ಳಿ, ನಲವಾಗಲಗಳಲ್ಲಿ ದೊರೆತಿವೆ. ಕಪ್ಪು ವರ್ಣದಲ್ಲಿ ಚಿತ್ರಿಸಿದ ಕೆಂಪು ಬಣ್ಣದ ಮಡಿಕೆ, ಇಬ್ಬದಿ ನೀಳ ಚಕ್ಕೆ ಹಾಗೂ ನಯಗೊಳಿಸಿರುವ ಕೈಗೊಡಲಿಗಳು ಈ ಕಾಲಕ್ಕೆ ಸೇರಿದವು.

**ಕಬ್ಬಿಣ – ಬೃಹತ್ ಶಿಲಾಯುಗ**

ಕರ್ನಾಟಕದಲ್ಲಿ ಕಬ್ಬಿಣ - ಬೃಹತ್ ಶಿಲಾಯುಗದ ಅವಶೇಷಗಳು ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಹೇರಳವಾಗಿ ಹರಡಿವೆ. ಹಾವೇರಿ ಜಿಲ್ಲೆಯಾದ್ಯಂತ ಈ ಯುಗದ ನೆಲೆಗಳು ಅಲ್ಲಲ್ಲಿ ಕಾಣುತ್ತವೆ. ಕಬ್ಬಿಣ ತಯಾರಿಸುವ ತಂತ್ರಗಾರಿಕೆ, ಅದರಿಂದ ಉಪಕರಣಗಳ ತಯಾರಿಕೆ, ದೊಡ್ಡ ದೊಡ್ಡ ಶಿಲಾಬಂಡೆಗಳನ್ನು ಬಳಸಿ ಶಿಲಾವೃತ್ತ, ಕಲ್ಮನೆ, ನಿಲಿಸುಗಲ್ಲುಗಳ ಸಮಾಧಿಗಳ ನಿರ್ಮಾಣ ಹಾಗೂ ಕಪ್ಪು - ಕೆಂಪು, ಚಿತ್ರಿತ ಮಡಿಕೆ, ಮೃತ್ ಪಾತ್ರೆ, ವರ್ಣಚಿತ್ರ ಮೊದಲಾದವು ಈ ಕಾಲದ ಪ್ರಮುಖ ಲಕ್ಷಣಗಳು.

ಈ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ೧೧ ನೆಲೆಗಳಿವೆ. ಹಾನಗಲ್ಲು ತಾಲೂಕಿನ ಕೆರನಾಡಿಯಲ್ಲಿ ಶಿಲಾಸಮಾಧಿ ಮತ್ತು ಅವಶೇಷಗಳು ಕಂಡುಬಂದಿವೆ. ಅಲ್ಲದೇ ಹತ್ತಿರದಲ್ಲಿರುವ ತಡಕನಹಳ್ಳಿ (ಹಿರೇಕೆರೂರು ತಾ.) ಹಾಗೂ ಸ್ವಲ್ಪ ದೂರದ ಕೋಮರನಹಳ್ಳಿ (ಮಲೆಣ್ಣೂರು ತಾ.)ಗಳ ಉತ್ಖನನದಲ್ಲಿ ದೊರೆತ ಅವಶೇಷಗಳಿಂದ ಬೃಹತ್ ಶಿಲಾಯುಗದ ಜನರು ಉತ್ತಮ ಕಬ್ಬಿಣ ತಯಾರಿಸುವ ತಂತ್ರಗಾರಿಕೆಯನ್ನು ಬಲ್ಲವರಾಗಿದ್ದರೆಂದು ತಿಳಿದುಬಂದಿದೆ. ಇವುಗಳೆಲ್ಲವುಗಳ ಆಧಾರದ ಮೇಲೆ ಬೃಹತ್ ಶಿಲಾಯುಗದ ಸಂಸ್ಕೃತಿಯು ವಿಸ್ತ್ರತವಾಗಿ ಹರಡಿತ್ತೆಂದು ಸ್ಪಷ್ಟವಾಗುತ್ತದೆ.

**ಇತಿಹಾಸ ಕಾಲದ ಅವಶೇಷಗಳು**

ಪ್ರಾಗಿತಿಹಾಸದ ನಂತರ ಇತಿಹಾಸ ಆರಂಭ ಕಾಲದ ನೆಲೆಗಳು ಈ ಪ್ರದೇಶದಲ್ಲಿ ವಿಸ್ತ್ರತವಾಗಿ ಹರಡಿವೆ. ಇದುವರೆಗೂ ಕಂಡುಬಂದಿರುವಂತೆ, ಹಾವೇರಿ ಜಿಲ್ಲೆಯ ४೫ ನೆಲೆಗಳಲ್ಲಿ, ಹಾನಗಲ್ಲು - ೨, ಹಿರೇಕೆರೂರು - ೯, ರಾಣಿಬೆನ್ನೂರು - ೨४, ಹಾವೇರಿ - ೮ ಮತ್ತು ಸವಣೂರು - ೧ ಹೀಗೆ ತಾಲೂಕುವಾರು ವಿಂಗಡಿಸಬಹುದು. ಇವುಗಳಲ್ಲಿ ಕೆಲವು ನೆಲೆಗಳು ಆದಿ, ಮಧ್ಯ, ಆಧುನಿಕ ಕಾಲದವರೆಗಿನ ಅವಶೇಷಗಳನ್ನು ಹೊಂದಿ, ಸಾಂಸ್ಕೃತಿಕ ಸುದೀರ್ಘತೆಯನ್ನು ಸಾರುತ್ತವೆ.

ಆದಿ ಇತಿಹಾಸ ಕಾಲದ ಅವಶೇಷಗಳಲ್ಲಿ ಕಪ್ಪು - ಕೆಂಪು ವರ್ಣದ ಮತ್ತು ಕೆಂಪು ಲೇಪನದಡಿ ಬಿಳಿವರ್ಣದ ಚಿತ್ರಿತ ಮಡಿಕೆ, ಕಂದು - ಕೆಂಪು ಬಣ್ಣದ ಮಡಿಕೆ, ಸುಟ್ಟ ಮಣ್ಣಿನ ಗೊಂಬೆ ಹಾಗೂ ಕೆಂಪು ಆಯಾಕಾರದ ಇಟ್ಟಿಗೆಗಳು ಸಾಮಾನ್ಯವಾಗಿ ಕಾಣುತ್ತವೆ.

ಹಾನಗಲ್ಲಿನಲ್ಲಿ ಕಂಡುಬಂದಿರುವ ಅವಶೇಷಗಳಲ್ಲಿ ಕೋಟೆ, ಅದರ ಒಳಭಾಗ ಜನವಸತಿ ನೆಲೆಗಳು, ಹಾಳುಮಣ್ಣಿನ ದಿಬ್ಬ, ಕಪ್ಪು - ಕೆಂಪು, ಬೂದುಬಣ್ಣ ವಿವಿಧ ಆಕಾರದ ಮಡಿಕೆ ಭಾಗಗಳು ಹಾಗೂ ಬಸಪ್ಪ ಎಣ್ಣೆಯವರ ಹೊಲದಲ್ಲಿರುವ ಇಟ್ಟಿಗೆ ಬಾವಿ ಮೊದಲಾದವುಗಳಿಂದ ಹಾನಗಲ್ಲು ಆದಿ, ಮಧ್ಯ ಮತ್ತು ಆಧುನಿಕ ಕಾಲದವರೆಗೂ ಸುದೀರ್ಘ ಸಾಂಸ್ಕೃತಿಕ ಕೇಂದ್ರವಾಗಿರುವುದನ್ನು ನಿರೂಪಸುತ್ತವೆ.

ರೈತರು ಬೇಸಾಯ ಮಾಡುವಾಗ, ಪ್ರಾಚೀನ ಕಾಲದ ಮಡಿಕೆ ಭಾಗಗಳು, ಎಲುಬು ಮತ್ತು ನಾಣ್ಯಗಳು ಇಂದಿಗೂ ಸಿಗುತ್ತವೆ. ಕ್ಷೇತ್ರಕಾರ್ಯದಲ್ಲಿ ನನಗೆ ದೊರೆತ ೧೨ ನಾಣ್ಯಗಳನ್ನು ತಾಮ್ರದಿಂದ ತಯಾರಿಸಿದ್ದು, ಅವುಗಳ ಮೇಲೆ ದೇವನಾಗರಿ, ಅರಬ್ಬಿ ಮತ್ತು ಪರ್ಶಿಯನ್ ಬರಹಗಳಿವೆ. ಈ ನಾಣ್ಯಗಳು ೬, ೮, ೧೦, ೧೨ ಮತ್ತು ೧೬ ಗ್ರಾಂ ತೂಕಗಳಿಂದ ಕೂಡಿವೆ.ಅವುಗಳಲ್ಲಿ ೧೬ ಗ್ರಾಂ ತೂಕದ ನಾಣ್ಯದ ಮೇಲೆ ಅಂಜಲಿ ಮುದ್ರೆಯಲ್ಲಿ, ರೆಕ್ಕೆಗಳನ್ನು ಹೊಂದಿ ತ್ರಿಭಂಗಿಯಲ್ಲಿ ನಿಂತ ಗರುಡನ ಚಿತ್ರವಿದೆ. ಮುಂಚಾಚಿದ ನಾಸಿಕವನ್ನು ಗರುಡ ಪಕ್ಷಿಯ ಕೊಕ್ಕರೆಯಂತೆ ಹೊರಚಾಚಿ ಬಾಗಿಸಲಾಗಿದೆ. ಇದರ ಮೇಲ್ಭಾಗದಲ್ಲಿ ಅಸ್ಪಷ್ಟವಾದ ದೇವನಾಗರಿ ಲಿಪಿ ಇರುವುದರಿಂದ ಇದು ಹಾನಗಲ್ಲು ಕದಂಬರ ಕಾಲಕ್ಕೆ ಸೇರಿರಬಹುದಾದ ಸಾಧ್ಯತೆಗಳಿವೆ.

೧೦ ಗ್ರಾಂ ತೂಕದ ನಾಣ್ಯದಲ್ಲಿ ಎಡಬದಿಗೆ ಮುಖಮಾಡಿನಿಂತ ಆನೆ ಚಿತ್ರ, ಅದರ ಮೇಲ್ಭಾಗ ಹಿಜರಿ ಶಕೆ ೧೨೧೬ ಎಂದಿದೆ. ಇದು ಕ್ರಿ.ಶ. ೧೮೮೩ರ ಕಾಲಕ್ಕೆ ಸರಿಹೊಂದುತ್ತದೆ. ಇದೇ ಅಳತೆಯ ಇನ್ನೊಂದು ನಾಣ್ಯದಲ್ಲಿ ಮುಂಗಾಲು ಮುಂದೆ ಚಾಚಿ, ಬಾಲ ಮೇಲಕ್ಕೆತ್ತಿರುವ ಸಿಂಹದ ಚಿತ್ರವಿದೆ. ಕೆಳಭಾಗ ಕ್ರಿ.ಶ. ೧೮೩೮ ಎಸ್.ಬಿ. ಎಂಬ ಇಂಗ್ಲಿಷ್ ಬರಹವಿದೆ. ಆನೆ ಚಿತ್ರವಿರುವ ನಾಣ್ಯಕ್ಕೂ ಮತ್ತು ಹುಲಿಯ ಚಿತ್ರದ ನಾಣ್ಯಕ್ಕೂ ಕಾಲಗಣನೆ ಹೊಂದುತ್ತಿರುವುದು ವೈಶಿಷ್ಟ್ಯವಾಗಿದೆ. ಇದರಿಂದ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶದ ಅಧಿಕಾರಿಯಾಗಿದ್ದ ಸವಣೂರು ನವಾಬನು ಪರ್ಶಿಯನ್ ಭಾಷೆಯೊಂದಿಗೆ ಇಂಗ್ಲಿಷ್ ಭಾಷೆ ಮತ್ತು ಅಂಕಿ ಸಂಖ್ಯೆಗಳನ್ನು ಬಳಕೆಗೆ ತಂದನೆಂದು ಗ್ರಹಿಸಬಹುದು.

೧೬ ಗ್ರಾಂ ತೂಕವುಳ್ಳ ನಾಣ್ಯದ ಮೇಲೆ " ಝು ಯಮನೌ ಅಲ್ ಸುಲ್ತಾನ್ ಅಲ್ಲಾಹಿ ಮಾಮಸ್ರ ಸಲ್ತನತ್" ಎಂಬ ಅರಬ್ಬಿ ಭಾಷೆಯ ಅಲೇಖ್ಯವಿದೆ. ೬ ಗ್ರಾಂ ತೂಕವುಳ್ಳ ನಾಣ್ಯದ ಮೇಲೆ "ಲಿಲ್ಲಾ ಅಲ್ ಅಲಿ" ಎಂಬ ಅರಬ್ಬಿ ಭಾಷೆಯ ಅಲೇಖ್ಯ ಮತ್ತು ಅದೇ ತೂಕವಿರುವ ಇನ್ನೊಂದು ನಾಣ್ಯದ ಮೇಲೆ "ಇನ್ ಲ್ಲಾ ಬಿಸ್ಮಿತ್ ಲಫಿ ಅನು" ಎಂಬ ಬರಹವಿದೆ.

ಈ ಪ್ರದೇಶದ ಅಕ್ಕಿಆಲೂರಿನಲ್ಲಿ ದೊರೆತ ರೋಮನ್ ರ ನಾಣ್ಯಗಳು ಸಾತವಾಹನರ ಕಾಲದಿಂದಲೇ ರೋಮ್ ಸಾಮ್ರಾಜ್ಯದೊಂದಿಗಿನ ವ್ಯಾಪಾರ ಸಂಬಂಧವನ್ನು ಹೇಳುವ ಪುರಾವೆಗಳಾಗಿವೆ. ಅನಂತರ ಆಳ್ವಿಕೆ ಮಾಡಿದ ಅನೇಕ ಅರಸುಮನೆತನಗಳಿಗೆ ಸೇರಿದ ನಾಣ್ಯಗಳು ಇಲ್ಲಿ ದೊರೆತಿರುವುದರಿಂದ, ಹಾನಗಲ್ಲು ನಗರ ಪ್ರಮುಖ ವ್ಯಾಪಾರ ಕೇಂದ್ರವಾಗಿ ಮುಂದುವರೆಯಿತೆಂದು ಹೇಳಬಹುದು.

ಕದಂಬರ ಕಾಲದಲ್ಲಿ ಕೋಟೆಯ ಹೊರ ಮತ್ತು ಒಳ ಭಾಗಗಳಲ್ಲಿ ನಿರ್ಮಾಣಗೊಂಡಿರುವ ಉತ್ತರಿ ಮಂಟಪ, ಕೀಚಕನ ಗರಡಿ, ಈಶ್ವರ, ರಾಮಲಿಂಗೇಶ್ವರ, ಬಿಲ್ಲೇಶ್ವರ, ತಾರಕೇಶ್ವರ, ಗಣಪತಿ, ಕಾಳಿಕಾ ದೇಗುಲಗಳು ಹಾಗೂ ಚೌಕೀದಾರರ ಕೊಠಡಿಗಳಲ್ಲಿರುವ ವಿಷ್ಣುವಿನ ಶಿಲ್ಪಗಳು ಅಂದಿನ ಶಿಲ್ಪಕಲೆಯ ವೈಶಿಷ್ಟ್ಯಗಳಾಗಿವೆ.

ಕೋಟೆ ದಿಬ್ಬವನ್ನು ಮತ್ತು ಆನೆಕೆರೆ ಒಡ್ಡಿನ ಗೋಡೆ ಕಟ್ಟಲು ಬಳಸಿದ ಶಿಲೆಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ದೇಗುಲಗಳ ಬಿಡಿ ಭಾಗಗಳು ಅಸಂಖ್ಯಾತವಾಗಿವೆ. ನಗರದ ಅಲ್ಲಲ್ಲಿ ಶಿಲ್ಪ, ಶಾಸನ, ವೀರಗಲ್ಲು, ದೇಗುಲದ ಭಾಗ ಮೊದಲಾದ ಪ್ರಾಚೀನ ನಿರ್ಮಿತಿಗಳು ಹೇರಳವಾಗಿ ಹರಡಿವೆ. ಅವೆಲ್ಲವುಗಳನ್ನು ಸಂರಕ್ಷಿಸಲು ನಗರದಲ್ಲಿ ಒಂದು ವಸ್ತು ಸಂಗ್ರಹಾಲಯದ ಅವಶ್ಯಕತೆ ಎದ್ದು ಕಾಣುತ್ತದೆ. ಕೋಟೆ ಪ್ರದೇಶದಲ್ಲಿಯ ಹಾಳು ಮಣ್ಣಿನ ದಿಬ್ಬಗಳಲ್ಲಿ ಉತ್ಖನನ ಕೈಗೊಂಡರೆ, ಪ್ರಾಚೀನ ಸಂಸ್ಕೃತಿಯ ಮೇಲೆ ಹೆಚ್ಚಿನ ಬೆಳಕು ಚೆಲ್ಲಬಹುದಾದ ಅಂಶಗಳು ಸಿಗಬಹುದು.

ಕ್ಷೇತ್ರಕಾರ್ಯದಲ್ಲಿ ಮತ್ತು ನಾಣ್ಯಗಳನ್ನು ಒದಗಿಸುವಲ್ಲಿ ಸಹಾಯ ಮಾಡಿದ ಪ್ರೊ. ವಿ.ಜಿ. ಶಾಂತಪುರಮಠ ಮತ್ತು ಸ್ಥಳೀಕರಿಗೂ, ಶ್ರೀ ಕುಮಾರೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರು, ಗ್ರಂಥಾಲಯ ಸಿಬ್ಬಂದಿಯವರಿಗೂ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಸಿಬ್ಬಂದಿಯವರಿಗೂ ನನ್ನ ಕೃತಜ್ಞತೆಗಳು.

**ಅಡಿಟಿಪ್ಪಣಿ**

೧. Sundara A., Early Chanber Tombs of South India, Delhi – 1975.

೨. Nagaraj Rao M.S., Prehistoric Culture of the Tungabhadra Valley, Dharwar – 1975.

೩. Robert Broos Foot, Indian Prehistoric and Protohistoric Antiquities, Madras – 1916.

೪. ಇತಿಹಾಸ ದರ್ಶನ, ಸಂ. ೧೧ ಪು. ೮-೧೪ ಮತ್ತು ೨೩-೨೫.

೫. ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲೆಯ ಶಾಸನ ಸೂಚಿ.

೬. ಚನ್ನಕ್ಕ ಪಾವಟೆ, ಹಾನಗಲ್ಲ ಕದಂಬರು.

೭. ಶಿವತಾರಕ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು.

೮. ಶಾಂತಪುರಮಠ ವಿ.ಜಿ., ವಿರಾಟನಗರ ಇತಿಹಾಸ (ಅಪ್ರಕಟಿತ) ಮಾಹಿತಿ ಸಂಗ್ರಹಣೆ.

೯. ಸಣ್ಣ ನೀರಾವರಿ ಇಲಾಖೆ, ಹಾನಗಲ್ಲು.

೧೦. ಅರಣ್ಯ ಇಲಾಖೆ, ಹಾನಗಲ್ಲು.

೧೧. ಹಾನಗಲ್ಲು ಪರಿಸರದಲ್ಲಿ ಕೈಗೊಂಡ ಕ್ಷೇತ್ರಕಾರ್ಯ.

# ೩. ಸ್ಥಳನಾಮ

ಇತ್ತೀಚಿನ ದಿನಗಳಲ್ಲಿ ಸ್ಥಳನಾಮ ಅಧ್ಯಯನ ವಿಶೇಷ ಮಹತ್ವ ಪಡೆದುಕೊಳ್ಳುತ್ತಿದೆ. ಒಂದಕ್ಕಿಂತ ಹೆಚ್ಚು ಜ್ಞಾನಶಾಖೆಗಳನ್ನು ಬಳಸಿಕೊಂಡು ಸಮಗ್ರ ದೃಷ್ಟಿಕೋನದಿಂದ (Holistic approach) ಸ್ಥಳನಾಮಗಳನ್ನು ಅಧ್ಯಯನ ಮಾಡುವ ಪದ್ಧತಿ ಇದೀಗ ಹೆಚ್ಚು ಜನಪ್ರಿಯವಾಗತೊಡಗಿದೆ. ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸದ ಅಧ್ಯಯನದಲ್ಲಿ ಅವಶ್ಯವಾಗಿ ಗಮನಿಸಬೇಕಾದ ಅಂಶಗಳಲ್ಲಿ ಸ್ಥಳನಾಮವೂ ಒಂದು. ಬದಲಾದ ಭೌಗೋಳಿಕ ಸ್ವರೂಪದ ಚರಿತ್ರೆಗೆ ಇದು ಸುಳುಹನ್ನು ಕೊಡಬಲ್ಲದು; ಅಲ್ಲದೇ ಐತಿಹಾಸಿಕ ಘಟನೆಗೆ ಪುಷ್ಟಿಯನ್ನು ನೀಡಬಲ್ಲದು. ಹೀಗೆ ಸ್ಥಳನಾಮಗಳು ಪೂರಕ ಮಾಹಿತಿಗಳಾಗಿ ಮಹತ್ವದ ಕಾರ್ಯ ನಿರ್ವಹಿಸಬಲ್ಲವು. ಜೊತೆಗೆ ಜನತೆಯ ಮನಸ್ಸನ್ನು ಅರ್ಥಮಾಡಿಕೊಳ್ಳಲು ಇವುಗಳ ಅಧ್ಯಯನ ಸಹಾಯಕ. ಸ್ಥಳನಾಮಗಳಲ್ಲಿ ಮುಖ್ಯವಾಗಿ ಎರಡು ಭಾಗಗಳಿದ್ದು, ಒಂದನ್ನು 'ನಿರ್ದಿಷ್ಟ'ವೆಂದು, ಮತ್ತೊಂದನ್ನು 'ವಾರ್ಗಿಕ'ವೆಂದೂ ಕರೆಯಲಾಗುತ್ತದೆ. ಮೊದಲ ನಿರ್ದಿಷ್ಟ ಭಾಗಗಳು ಸಾಮಾನ್ಯವಾಗಿ ನಿಸರ್ಗವಾಚಿ, ವ್ಯಕ್ತಿವಾಚಿ, ನಿರ್ಮಾಣವಾಚಿ ಅಥವಾ ಆದರ್ಶವಾಚಿಗಳಾಗಿರುತ್ತವೆ. ಉದಾ: ಬೆಟ್ಟದಳ್ಳಿ (ನಿಸರ್ಗವಾಚಿ), ಆದರ್ಶನಗರ (ಆದರ್ಶವಾಚಿ) ಇತ್ಯಾದಿ. ಎರಡನೆಯ ಭಾಗವಾದ ವಾರ್ಗಿಕಗಳು ನಿಸರ್ಗವಾಚಿ, ವಸತಿವಾಚಿ ಅಥವಾ ನಿರ್ಮಾಣವಾಚಿಗಳಾಗಿದ್ದು, ಆ ಪ್ರದೇಶದ ಭೌಗೋಳಿಕತೆ, ಮಾನವ ಸಂಸ್ಕೃತಿಯ ವಿಕಾಸದ ವಿವಿಧ ಘಟ್ಟಗಳು ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುವಂತಿರುತ್ತವೆ. ಉದಾ: ಹಳ್ಳಿಬಯಲು (ನಿಸರ್ಗವಾಚಿ), ಬೆಳ್ಳೂರು (ವಸತಿವಾಚಿ), ಹೊಸಕೋಟೆ (ನಿರ್ಮಾಣವಾಚಿ) ಇತ್ಯಾದಿ.

ಐತಿಹಾಸಿಕ ಗ್ರಾಮನಾಮಗಳ ಅಧ್ಯಯನದಲ್ಲಿ ಮೂರು ಮುಖ್ಯ ಘಟ್ಟಗಳನ್ನು ಗುರುತಿಸಬಹುದಾಗಿದೆ.

**ಸಹಜಸೃಷ್ಟಿಯ ಘಟ್ಟ**

ಇದು ಸ್ಥಳನಾಮಗಳ ಸೃಷ್ಟಿಯಲ್ಲಿ ಅತ್ಯಂತ ಪ್ರಾಚೀನವಾದ ಹಾಗೂ ಮೊದಲ ಹಂತವನ್ನು ನಿದರ್ಶಿಸುತ್ತದೆ. ಕಾರಣ, ಈ ಹಂತದಲ್ಲಿ ನಿರ್ದಿಷ್ಟದಲ್ಲಿ ಅಥವಾ ವಾರ್ಗಿಕದಲ್ಲಿ ಅಥವಾ ಅವೆರಡರಲ್ಲಿಯೂ ಸಾಮಾನ್ಯವಾಗಿ ನಿಸರ್ಗವಾಚಿಯನ್ನೇ ಬಳಸಲಾಗಿರುವುದನ್ನು ಗುರುತಿಸುತ್ತೇವೆ. ಆ ಪ್ರದೇಶದ ಭೌಗೋಳಿಕ ಗುಣ - ಸ್ವಭಾವಗಳನ್ನು ಬಿಂಬಿಸುವ ಆಡು ಮಾತಿನ ಶಬ್ದಗಳೇ ಇಲ್ಲಿ ಸ್ಥಳನಾಮಗಳಾಗಿ ಪರಿಣಮಿಸಿರುತ್ತವೆ. ಉದಾ: ಬನಹಟ್ಟಿ, ಹುಣಸೆಬಾವಿ, ನವಲಗುಂದ, ಹಾವೇರಿ, ಹೆದ್ದುರ್ಗ, ಕೋಡುಗುಡ್ಡ ಇತ್ಯಾದಿ.

**ಸಂಸ್ಕೃತೀಕರಣದ ಘಟ್ಟ**

ಇಲ್ಲಿ ಸ್ಥಳೀಯ ಆಡುಭಾಷೆಯ ಮೂಲದ ಸ್ಥಳನಾಮವನ್ನು ಸಂಸ್ಕೃತ ಭಾಷೆಗೆ ಪರಿವರ್ತಿಸುವ ಸಂಸ್ಕೃತೀಕರಣದ ಪ್ರಕ್ರಿಯೆ ನಡೆಯುತ್ತದೆ. ಈ ಪ್ರಕ್ರಿಯೆಯ ಹಿಂದೆ ಮುಖ್ಯವಾಗಿ ಪ್ರತಿಷ್ಠೆ ಕೆಲಸ ಮಾಡುತ್ತದೆ. ಸಂಸ್ಕೃತ ಭಾಷೆ ಪ್ರತಿಷ್ಠಿತರ ಭಾಷೆ ಎಂಬ ಭಾವನೆ ಪ್ರಬಲವಾಗಿ ಇದ್ದಾಗ, ಈ ಘಟ್ಟದಲ್ಲಿ ಕನ್ನಡದ ಅನೇಕ ಊರುಗಳನ್ನು ಸಂಸ್ಕೃತ ಭಾಷೆಗೆ ಪರಿವರ್ತಿಸಿ ಬಳಸುವ ಪ್ರಯತ್ನ ನಡೆಯಿತು. ಈ ಪ್ರಕ್ರಿಯೆ

ಕನ್ನಡ ನಾಡಿನಲ್ಲಿ ಸಂಸ್ಕೃತ ಭಾಷೆಯಲ್ಲಿ ಶಾಸನಗಳನ್ನು ಬರೆಸುವ ಹಂತದಲ್ಲಿಯೇ ಪ್ರಾರಂಭವಾಗಿರಬೇಕೆಂದು ತೋರುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ, ಜನಸಾಮಾನ್ಯರು ಮಾತ್ರ ಇದಕ್ಕೆ ಹೆಚ್ಚು ಮಹತ್ವ ನೀಡದೇ ಮೊದಲಿನಿಂದಲೂ ಬಳಕೆಯಲ್ಲಿದ್ದ ದೇಶೀ ಸ್ಥಳನಾಮಗಳನ್ನೇ ಬಳಸುತ್ತ ಬಂದುದು. ಸಂಸ್ಕೃತೀಕರಣಕ್ಕೆ ಉದಾ: ಧಾರವಾಡ - ತಂತುಪುರಿ, ಮುಳಬಾಗಿಲು - ಕಂಕಟದ್ವಾರ, ಮೈಸೂರು - ಮಾಹಿಷ್ಮತೀಪುರ ಇತ್ಯಾದಿ.

**ಪ್ರಚೀನ ಮೂಲದ ಆಶಯ**

ಮಧ್ಯಕಾಲೀನ ಯುಗದಲ್ಲಿ ರಾಜವಂಶಗಳನ್ನು ಪ್ರಸಿದ್ಧ ಋಷಿ ಮೂಲಕ್ಕೆ ಒಯ್ಯುವ ಒಂದು ಶಿಷ್ಟ ಪ್ರಕ್ರಿಯೆ ಶಾಸನಗಳಲ್ಲಿ ಕಂಡುಬರುತ್ತದೆ. ಅದೇ ರೀತಿ ಜನಸಾಮಾನ್ಯರಲ್ಲಿ ತಮ್ಮ ಊರುಗಳನ್ನು ಅತಿ ಹೆಚ್ಚು ಪ್ರಾಚೀನ ಎಂದು ಬಿಂಬಿಸುವ ಪ್ರವೃತ್ತಿ ಬೆಳೆದು ಬಂದುದನ್ನು ಗುರುತಿಸಬಹುದು. ಹಾಗೆ ಸೇರಿಕೊಳ್ಳುವಾಗ ಕೆಲವೊಮ್ಮೆ ಊರುಗಳ ಹೆಸರುಗಳನ್ನು ಅದಕ್ಕೆ ಅನುಗುಣವಾಗಿ ಪರಿವರ್ತಿಸಲು ಪ್ರಯತ್ನಿಸಲಾಗಿದೆ. ಅದಕ್ಕೆ ತಕ್ಕಂತೆ ಐತಿಹ್ಯಗಳನ್ನು ಸೃಷ್ಟಿಸಲಾಗುತ್ತದೆ. ಇದರಲ್ಲಿ ಕಲ್ಪಕತೆಯ ಅಂಶವೇ ಮುಖ್ಯವಾಗಿದ್ದರೂ ಸತ್ಯವೆಂದು ಬಿಂಬಿಸಲು ಭೌಗೋಳಿಕ ಸಾಕ್ಷಾಧಾರಗಳನ್ನು ಒದಗಿಸಲಾಗುತ್ತದೆ. ಶರಾವತಿ ನದಿ ಹುಟ್ಟುವ ಸ್ಥಳ 'ಅಂಬುತೀರ್ಥ'. ವನವಾಸ ಸಂದರ್ಭದಲ್ಲಿ ರಾಮ ನೀರಿಗಾಗಿ ನೆಲದ ಮೇಲೆ ಬಾಣವನ್ನು ಬಿಟ್ಟಾಗ, ನೀರು ಚಿಮ್ಮಿತೆಂದು ಐತಿಹ್ಯ. ಹೀಗೆ ಶರಾವತಿ ರಾಮಾವತಾರದಷ್ಟು ಪ್ರಾಚೀನವಾಗುತ್ತದೆ.

ಇಷ್ಟಲ್ಲದೆ, ಸ್ಥಳನಾಮಗಳು ಭಿನ್ನಭಾಷಿಕ ಹಾಗೂ ಭೀನ್ನಧರ್ಮೀಯರ ಆಡಳಿತ ಕಾರಣದಿಂದಲೂ ತಮ್ಮ ಸ್ವರೂಪವನ್ನು ಬದಲಾಯಿಸಿಕೊಳ್ಳುವ ಸಾಧ್ಯತೆ ಇದೆ. ವಸಾಹತುಶಾಹಿ ಆಡಳಿತ ಸಂದರ್ಭದಲ್ಲಿ ಭಾರತದ ಅನೇಕ ಪಟ್ಟಣಗಳ ಹೆಸರುಗಳು ಆಂಗ್ಲ ಉಚ್ಚಾರಣೆಯನ್ನು ಪಡೆದುಕೊಂಡವು. ಉದಾ: ಧಾರವಾಡ - ಧಾರವಾರ್, ಬೆಳಗಾಂವಿ - ಬೆಲಗಮ್, ಮುಂಬಯಿ - ಬಾಂಬೆ, ಬೆಂಗಳೂರು - ಬ್ಯಾಂಗ್ಲೂರ್ ಇತ್ಯಾದಿ.

ಅದರಂತೆ ಟಿಪ್ಪುವಿನ ಆಡಳಿತ ಕಾಲದಲ್ಲಿ ಕೆಲವು ಊರುಗಳ ಹೆಸರುಗಳು ಫಾರಸಿ ಭಾಷೆಯದಾಗಿ ಮಾರ್ಪಟ್ಟಿದ್ದವು. ಕಲ್ಲೀಕೋಟೆ - ಫರೂಕಾಬಾದ್, ದಿಂಡಿಗಲ್ - ಖಲೀಲಬಾದ್, ಗುತ್ತಿ - ಫೈಜ ಹಿಸ್ಸಾರ್, ಕೃಷ್ಣಗಿರಿ - ಫಲ್ಕ್ ಇಲ್ ಅಜಂ, ಮೈಸೂರು - ನಜರಾಬಾದ್, ಸಿರಾ - ರುಸ್ತುಮಬಾದ್, ಸಕಲೇಶಪುರ - ಮುಜಿದಾಬಾದ್, ಆದರೆ ಇವೆಲ್ಲ ಮತ್ತೆ ದೇಶೀಯತೆಯ ಪ್ರಕ್ರಿಯತೆಗೆ ಒಳಗಾಗುತ್ತವೆ. ಉದಾ: ಮದ್ರಾಸ್ - ಚೆನ್ನೈ, ಬಾಂಬೆ - ಮುಂಬಯಿ ಇತ್ಯಾದಿ.

ಪ್ರಸ್ತುತ ಹಾನಗಲ್ಲು ಸ್ಥಳನಾಮದ ವಿಷಯಕ್ಕೆ ಬಂದರೆ ಈ ಹಿಂದೆ ಪ್ರಸ್ತಾಪಿಸಿದ ಮೊದಲ ಮೂರು ಹಂತಗಳ ಪ್ರಕ್ರಿಯೆಗೂ ಹಾನಗಲ್ಲು – ಪಕ್ಕಾಗಿರುವುದು ಕಂಡುಬರುತ್ತದೆ. ಹಾನಗಲ್ಲಿಗೆ ಸಹಜಸೃಷ್ಟಿಯ ಹಂತದಲ್ಲಿ 'ಪಾನುಂಗಲ್' ರೂಪವಿದ್ದು, ಸಂಸ್ಕೃತೀಕರಣ ಪ್ರಕ್ರಿಯೆಯಲ್ಲಿ ಅದು 'ಪಂಕ್ತೀಪುರ' ಅಥವಾ 'ವಿಜಯ ಪಂಕ್ತೀಪುರ'ವಾಗಿ ಮಾರ್ಪಟ್ಟಂತೆ ಭಾವಿಸಬಹುದಾಗಿದೆ. ಕುಂಟಗಣಿ ತಾಮ್ರ ಶಾಸನದಲ್ಲಿ (ಕ್ರಿ.ಶ. ೪೯೭), 'ವಿಜಯ ಪಂಕ್ತೀಪುರ'ದ ಉಲ್ಲೇಖ ಬಂದಿದ್ದು,[1] ವಿದ್ವಾಂಸರು ಅದು ಹಾನುಗಲ್ಲಿಗಿದ್ದ ಸಂಸ್ಕೃತ ಹೆಸರು ಎಂದು ಅಭಿಪ್ರಾಯಪಟ್ಟಿರುತ್ತಾರೆ. ಪಂಕ್ತೀಪುರದಲ್ಲಿ 'ಪಂಕ್ತಿ' ಮತ್ತು 'ಪುರ' ಎಂಬ ಎರಡು ಭಾಗಗಳಿದ್ದು, ವಾರ್ಗಿಕವಾದ 'ಪುರ'ವು ನಿರ್ಮಾಣವಾಚಿಯಾಗಿದೆ. 'ಪಂಕ್ತಿ' ಎಂಬ ನಿರ್ದಿಷ್ಟಕ್ಕೆ ನಿಘಂಟುವಿನಲ್ಲಿ a row, or set of five, the number five, ten, a fame, Celebrity ಮುಂತಾದ ಅರ್ಥಗಳಿವೆ. ಈ ಹಿನ್ನೆಲೆಯಲ್ಲಿ ಪಂಕ್ತಿಪುರವು ಕೆಲವು ಸಾಲು ಹಳ್ಳಿಗಳ ಗುಂಪೆಂದು ಅರ್ಥೈಸಬಹುದು. ಅಥವಾ ಕದಂಬ ರವಿವರ್ಮನು ಗೆದ್ದು ವಿಜಯ ಆಚರಿಸಿದ ಪುರವೆಂದು ಕೂಡ ಅರ್ಥ ಮಾಡಬಹುದು. ಅಲ್ಲಿ ಬೀಡು ಬಿಟ್ಟಾಗ, ಅವನು ವರಿಯಕ ಗ್ರಾಮದಲ್ಲಿ ಕೆರೆಗೆ ಕಟ್ಟೆಯನ್ನು ನಿರ್ಮಿಸಿಕೊಟ್ಟಿರುತ್ತಾನೆ. (ತಟಾಕ ಬಂಧಮ್ ಕಾರಯಿತ್ವಾ) ಆದರೆ ಈ ಪಂಕ್ತಿಪುರವು ಒಂದು ಶತಮಾನದ ಹೊತ್ತಿಗೆ (ಕ್ರಿ.ಶ. ೬೦೦) ಪಾನ್ತೀಪುರವಾಗಿ ಮಾರ್ಪಡುತ್ತದೆ. (ಸ್ವಾಮಿ ಶರ್ಮಣೇ ಪಾನ್ತಿಪುರ ವಿಷಯೇ ಕಿರುಕುಪ್ಪಟೂರಗ್ರಾಮ(ಮ್) ಸೋದಕಂ ಸದಕ್ಷಿಣಂ ದತ್ತವಾನ್)[2] ಈ ಹೆಸರು ಮುಂದೆ ೧೧ನೆಯ ಶತಮಾನದಲ್ಲಿಯೂ ಒಂದು

ಶಾಸನದಲ್ಲಿ ಕಾಣಿಸಿಕೊಂಡಿದೆ. (ಬನವಾಸಿಪುರವರೇಸ್ವರಂ ಪಾಂತಿಪುರಾಧಿಪಂ ಶ್ರೀ ಮನ್ಮಯೂರವರ್ಮ್ಮದೇವಂ.)[3] 'ಪಾಂತ' ಎಂಬ ಶಬ್ದಕ್ಕೆ ಅಪ್ಪು, ಆಲಿಂಗನೇ, ಉದಕೇಚ (ಶಮದ) ಎಂಬ ಅರ್ಥಗಳಿರುವುದರಿಂದ ನೀರಿಗೆ ಸಂಬಂಧಿಸಿದಂತೆ ಪಾನ್ > ಪಾಂತ ಬಳಸಿಕೊಂಡಿರುವ ಸಾಧ್ಯತೆಗಳಿವೆ. ಪಾಂತೀಪುರ ಶಬ್ದ ಕಂಡುಬರುವ ಎರಡೂ ಶಾಸನಗಳು ಸಂಸ್ಕೃತ ಶಾಸನಗಳಾಗಿರುವುದು ಪಾನುಂಗಲ್ - ಸಂಸ್ಕೃತೀಕರಣ ಪ್ರಕ್ರಿಯೆಯಲ್ಲಿ ಪಂಕ್ತಿಪುರ > ಪಾಂತೀಪುರವಾಗಿರಬಹುದಾದ ಸಾಧ್ಯತೆ ಊಹಿಸಲು ಪ್ರೇರೇಪಿಸಿವೆ.

ಹುಲಗೂರು ತಾಮ್ರಶಾಸನದಲ್ಲಿ (ಕ್ರಿ.ಶ. ೧೨೪೫) ಹಾನಗಲ್ಲು ೫೦೦ರ ಬದಲು 'ವಿರಾಟನಗರಿ ಪಂಚಶತ' ಎಂದು ಉಲ್ಲೇಖಗೊಂಡಿದೆ.[4] ಹಾನಗಲ್ಲನ್ನು 'ವಿರಾಟನಗರಿ' ಎಂದು ಭಾವಿಸಬಹುದು. ಹಾನಗಲ್ಲು ಪ್ರದೇಶವನ್ನು ಮಹಾಭಾರತ ಕಾಲದಷ್ಟು ಪ್ರಾಚೀನಗೊಳಿಸುವ ಪ್ರವೃತ್ತಿಯ ನಿದರ್ಶನವಾಗಿದೆ. ಇದಕ್ಕೆ ಪುಷ್ಟಿ ನೀಡುವಂತೆ ಸ್ಥಳೀಯರು ಅಲ್ಲಿ ಕೀಚನ ಗರಡಿಮನೆ, ಕುಂತಿದಿಬ್ಬಗಳನ್ನು ತೋರಿಸುತ್ತಾರೆ.

'ಹಾನಗಲ್ಲು' ಸ್ಥಳನಾಮದ ಮೂಲ ಭಾಷಾ ಸ್ವರೂಪ 'ಪಾನುಂಗಲ್' ಇದು ಸಾಕಷ್ಟು ಪ್ರಾಚೀನವಾಗಿರುವ ಹೆಸರಾದರೂ ಶಾಸನದಲ್ಲಿ ಈ ಹೆಸರು ೮ನೆಯ ಶತಮಾನದಲ್ಲಿ ಮೊದಲು ಗೋಚರವಾಗಿದೆ. ಮಾಧವಶರ್ಮಣೇ ಪಾನುಂಗಲ್ವಿಷಯೇ,[5] ಹಾನುಂಗಲ್,[6] ಹಾನುಂಗಲು[7] ಹೀಗೆ, ಪಾನುಂಗಲ್ > ಹಾನುಂಗಲ್ > ಹಾನುಂಗಲು ಹಾನಗಲ್ಲು ಎಂದು ಬದಲಾವಣೆಯನ್ನು ಭಾಷಾವೈಜ್ಞಾನಿಕವಾಗಿ ಗುರುತಿಸಬಹುದು.

ಕನ್ನಡದಲ್ಲಿ ಪ > ಹ ಕಾರ ಬದಲಾವಣೆ ಸುಮಾರು ೮ನೆಯ ಶತಮಾನದಿಂದಲೇ ಪ್ರಾರಂಭವಾಗಿದ್ದು, ೧೧ನೆಯ ಶತಮಾನದ ಹೊತ್ತಿಗೆ ನಿಯತಗೊಂಡಂತೆ ತೋರುತ್ತದೆ. ಪಾನುಂಗಲ್ > ಹಾನುಂಗಲ್ ಆಗಿ ಗೋಚರಿಸಿದುದು ೧೧೮೦ರ ಶಾಸನದಲ್ಲಿ.

ಪಾನುಂಗಲ್ ನಲ್ಲಿ ಪಾನುಂ + ಗಲ್ ಎಂದು ಎರಡು ಭಾಗಗಳನ್ನು ಗುರುತಿಸಬಹುದು. 'ಪಾನ್' ಶಬ್ದಕ್ಕೆ ಎಲೆ, ಪತ್ರ, ಪುಸ್ತಕದ ಹಾಳೆ, ವೀಳೆದೆಲೆ, ಬೀಡ, ಇಸ್ಪೀಟು ಎಲೆ ಎಂಬ ಅರ್ಥಗಳ ಜೊತೆಗೆ ನೀರಿನ ಕಾಲುವೆ, ನಾಲೆ ಎಂಬ ಅರ್ಥವೂ ಇದೆ. ಕಿಟಲ್ ಕೂಡಾ 'ಪಾನ್' ಶಬ್ದಕ್ಕೆ a water conduit, a canal ಎಂಬ ಅರ್ಥವನ್ನು ಕೊಟ್ಟಿದ್ದಾನೆ.[8] ಆದ್ದರಿಂದ ಇಲ್ಲಿ 'ಪಾನ' ಶಬ್ದವನ್ನು ನೀರಿಗೆ ಸಂಬಂಧಿಸಿದ ಕಾಲುವೆ ಎಂಬ ಅರ್ಥದಲ್ಲಿ ಸ್ವೀಕರಿಸಬೇಕಾಗುತ್ತದೆ. 'ಗಲ್'ಗೆ ಎರಡು ರೂಪ ಸಾಧ್ಯತೆಗಳಿವೆ.

೧. ಕಲ್ > ಗಲ್ > ಗಲು > ಗಲ್ಲು ಆಗುವುದು. ಕಲ್ - ಶಬ್ದಕ್ಕೆ ಕಲ್ಲು, ಗುಡ್ಡ, ಬೆಟ್ಟಗಳೆಂಬ ಅರ್ಥಗಳಿವೆ.

೨. ಗಲ > ಗಾಲ > ಗಲ್ಲು ಇದು ನೀರು ಹರಿಯುವಿಕೆಯ ಕ್ರಿಯೆಯನ್ನು ಸೂಚಿಸುತ್ತದೆ. ಕಾಲುವೆ ನೀರಿನ ಇಳಿಮುಖ ಸಣ್ಣ ತೋಡು.[9]

ಪಾನ್ + ಗಲ್ ಎರಡೂ ಸೇರಿ ಕಲ್ಲಿನ ಕಾಲುವೆಯಲ್ಲಿ ನೀರು ಹರಿಯುವಿಕೆಯನ್ನು ಸೂಚಿಸುತ್ತದೆ. ಆದ್ದರಿಂದ ಪಾನುಂಗಲ್ ನೀರಿನ ಕಾಲುವೆಗಳಿಂದ ಕೂಡಿದ (ಸುತ್ತುವರೆದ) ಪ್ರದೇಶವೆನ್ನಬಹುದು.

ಭೌಗೋಳಿಕವಾಗಿ ನೋಡಿದರೂ ಹಾನುಗಲ್ಲು ಪ್ರದೇಶದಲ್ಲಿ ಧರ್ಮಾನದಿ ಹರಿದಿದೆ. ಆನೆಕೆರೆಯಂತಹ ದೊಡ್ಡ ಕೆರೆಗಳು ಆ ಪ್ರದೇಶದಲ್ಲಿವೆ. ಪ್ರಾಚೀನ ಕಾಲದಲ್ಲಿಯೇ ಈ ನದಿ ಹಾಗೂ ಕೆರೆಗಳಿಂದ ಕಾಲುವೆ ಹರಿಸಿ, ಸುತ್ತಮುತ್ತಲ ಪ್ರದೇಶಕ್ಕೆ ನೀರು ಉಣಿಸುತ್ತಿದ್ದಿರಬೇಕು. ಈ ಕಾರಣದಿಂದಲೇ ಅವಿಭಜಿತ ಧಾರವಾಡ ಪ್ರದೇಶದಲ್ಲಿ ಹಾನಗಲ್ಲು ತಾಲೂಕು ಹೆಚ್ಚು ಭತ್ತ ಬೆಳೆಯುವ ಪ್ರದೇಶವಾಗಿತ್ತು. ಭತ್ತದ ಬೆಳೆಗೆ ಜಲಸಮೃದ್ಧಿ ಬೇಕೆನ್ನುವುದು ವಿಧಿತವಾದದ್ದು. ಆದ್ದರಿಂದ 'ಪಾನುಂಗಲ್' ನೀರಿನ ಕಾಲುವೆಗಳ ಮೂಲಕ ಜಲಸಮೃದ್ಧಿಯನ್ನು ಹೊಂದಿರುವ ಪ್ರದೇಶವನ್ನು ಸೂಚಿಸುತ್ತದೆಂದು ಭಾವಿಸಬಹುದು. ಕಲ್/ಗಲ್ ಅಂತ್ಯವಿರುವ ಊರುಗಳು ಈ ಪ್ರದೇಶದಲ್ಲಿ ಕೆಲವು ಉದಾಹರಣೆಗೆ ನರೇಗಲ್ಲ, ಹುಲೇಕಲ್ಲು, ತೇಕಲ್ಲು ಇತ್ಯಾದಿ.

'ಹಾವೇರಿ' ಹಾಗೂ 'ಹಾನಗಲ್ಲು' ಸ್ಥಳನಾಮಗಳಲ್ಲಿ ಅರ್ಥಸಾಮ್ಯವಿರುವಂತಿದೆ. ಡಾ. ಭೋಜರಾ ಪಾಟೀಲರು ಇತಿಹಾಸದರ್ಶನ ಸಂಪುಟವೊಂದರಲ್ಲಿ ಹಾವೇರಿ ಗ್ರಾಮನಾಮವನ್ನು ವಿಶ್ಲೇಷಿಸುತ್ತ, ಪಾ + ಏರಿ > ಪಾವೇರಿ ಎಂದು ಅರ್ಥಪೂರ್ಣವಾಗಿ

ವಿಭಜಿಸಿರುತ್ತಾರೆ.[10] 'ಪಾ' ಶಬ್ದಕ್ಕೆ 'ಪಿಬ' ಅರ್ಥದಲ್ಲಿ ಕುಡಿಯುವ ಹಾಗೂ ಏರಿ ಅಂದರೆ ನೀರಿನ ಸಂಗ್ರಹ. ಹಾವೇರಿ ಎಂದರೆ ಕುಡಿಯುವ ನೀರಿನ ಜಲಾಶಯ ಎಂಬ ಅರ್ಥ ಹೊರಡಿಸಿದ್ದಾರೆ. ನಳ ಚಕ್ರವರ್ತಿ ಕಟ್ಟಿಸಿದ ನಿರ್ಭರವಾದ ಕೆರೆ - ಪಾವೇರಿ, 'ಸುರಕ್ಷಿತ ಜಲಾಶಯ' ಎಂದಿದ್ದಾರೆ. ಹಾವೇರಿಯಂತೆ ಹಾನಗಲ್ಲು ಕೂಡ ಕಾಲುವೆಗಳ ಮೂಲಕ ನೀರಿನ ಬಳಕೆ ಮಾಡಿಕೊಂಡಿರುವ ಜಲಸಮೃದ್ಧ ಪ್ರದೇಶವಾಗಿ 'ಪರಮಾರ್ಥ ನಾಮವಾಗಿದೆ' ಎಂದು ಹೇಳಬಯಸುತ್ತೇನೆ.

---

[1] ಗೋಪಾಲ ಬಾ. ರಾ., ಕದಂಬರ ಶಾಸನಗಳು.

[2] K.I., II, 1 – 10, Kirukuppatur, (600 A.D.)

[3] S.I.I., XX, 24 – 9, (1034 A.D.)

[4] K.I., IV, 104 ೧೧೨, Hulagur, (1245 A.D.)

[5] E.C., X, 62 – 66, Kolar, (868 A.D.)

[6] K.I., V, 19, Hanagal, (1121 A.D.)

[7] E.C., VII, 89 – 90, Shimoga, (1527 A.D.)

[8] ಕಿಟಲ್ ನಿಘಂಟು, ಪು. ೧೦೨೮.

[9] ವಿಶ್ವನಾಥ, ಗ್ರಾಮನಾಮಗಳ ಸಾಂಸ್ಕೃತಿಕ ಅಧ್ಯಯನ ಪರವೇಶ, ಪು. ೧೫೬ - ೧೫೭.

[10] ಇತಿಹಾಸ ದರ್ಶನ, ಸಂ. ೧೭, ೨೦೦೨.

# ೪. ಚರಿತ್ರೆ : ಪ್ರಾಚೀನ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆ ಹೊಂದಿರುವದು ಕರ್ನಾಟಕ. ಹಾನಗಲ್ಲು ಐತಿಹಾಸಿಕ ಮಹತ್ವದ ಸ್ಥಳ. ನಮ್ಮ ಪುರಾಣ ಪುರುಷರು ಹೋಗದ ಊರಿಲ್ಲ. ನಿಲ್ಲದ ನೆಲೆಯಿಲ್ಲ. ಪ್ರತಿಯೊಂದು ಊರಿನವರು ತಮಗೆ ಪ್ರಿಯರಾದ ಪೌರಾಣಿಕ ವ್ಯಕ್ತಿಗಳನ್ನು ತಮ್ಮಲ್ಲಿಗೆ ಕರೆತಂದು ನಿಲ್ಲಿಸಿಕೊಂಡಿದ್ದಾರೆ. ಭಾಷೆ, ಧರ್ಮ, ಆಚಾರ - ವಿಚಾರಗಳು ಭಿನ್ನವಾಗಿದ್ದರೂ, ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸುವಲ್ಲಿ ಯಶಸ್ಸು ಸಂಪಾದಿಸಿದ್ದಾರೆ. ಭಾವೈಕ್ಯತೆಯ ಬಂಧ ಬೆಸೆದಿದ್ದಾರೆ. ಇದರಿಂದಲೇ ನಾವೆಲ್ಲರೂ ಒಂದೆಂಬ ಭಾವ ಇಲ್ಲಿ ಮಡುಗಟ್ಟಿ ನಿಂತಿರುವುದು.

ಮಹಾಭಾರತ ಕಾಲದಲ್ಲಿ ಹಾನಗಲ್ಲು ವಿರಾಟನ ಕೋಟೆ ಎನಿಸಿದುದು. ಬಕಾಸುರನೆಂಬ ಪುರಾಣ ಪ್ರಸಿದ್ಧ ರಾಕ್ಷಸನ ಏಕಚಕ್ರ ನಗರವೇ ಬಂಕಾಪುರವೆಂದು ಪ್ರತೀತಿ. ಹೀಗೆ ಜನರ ಬಾಯಲ್ಲಿ ಮಹಾಭಾರತ ಕಾಲದ ಇತಿಹಾಸದ ತೊಡಕಿದ್ದರೂ, ಅದರ ನಿಜವಾದ ಇತಿಹಾಸ ಪ್ರಾರಂಭವಾಗುವುದು ಬನವಾಸಿ ಕದಂಬರ ಕಾಲದಿಂದ. ಸಾವಿರ ವರ್ಷಗಳ ಸುದೀರ್ಘ ಅವಧಿಯಲ್ಲಿ ಹಾನಗಲ್ಲು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಅನೇಕ ಆಯಾಮಗಳನ್ನು ಪಡೆಯುತ್ತ ಬಂದಿದೆ. ಕದಂಬರ ಕಾಲದ ಚರಿತ್ರಾತ್ಮಕ ದಾಖಲೆಗಳನ್ನು ಗಮನಿಸಿದರೆ, ಪಜ್ಚೇಪುರ, ಪಂಕ್ತಿಪುರ, ಕಾಲದಿಂದ ಕಾಲಕ್ಕೆ ಪಾಂತಿಪುರ, ಪಾನುಗಂಲ್ಲ ಇಂದಿನ ಹಾನುಂಗಲ್ಲ ಹಾನುಗಲ್ಲು ರೂಪ ಪಡೆದುದು ವಿದಿತವಾಗುತ್ತದೆ.

**ಪ್ರಾಚೀನ ಇತಿಹಾಸ**

ಬನವಾಸಿ ಕದಂಬರ ಕುಂಟಗಣಿ (ಕ್ರಿ.ಶ. ೪೯೭) ತಾಮ್ರಪಟ ಒಂದು ಪ್ರಶಸ್ತಿ ದಾಖಲೆ.[1] ಪ್ರಶಸ್ತಿ ಪಡೆದ ಬ್ರಾಹ್ಮಣ ಧೌಮ್ಯಗೋತ್ರದ ಭವಸ್ವಾಮಿ ಎಂಬ ವೇದಪಾರಗ. ಇದು 'ಅನೇಕ ವಿಜಯ ಸಂತರ್ಪಣ ದಾನವಿಧಿ' ಸೂಚಿಸುವ ಆಕರ. ಹಾನಗಲ್ಲು ಪರಿಸರದಲ್ಲಿ ಕದಂಬ ರವಿವರ್ಮ ತನ್ನ ರಾಜ್ಯಾಭಿಷೇಕದ ೧೨ನೆಯ ವರ್ಷದಲ್ಲಿ ಶ್ರಾವಣ ಮಾಸದ ಹುಣ್ಣಿಮೆಯ ದಿವಸ ಹಾನಗಲ್ಲಿನ ವರಿಯಕಾ ಗ್ರಾಮದಲ್ಲಿ ಕೆರೆಯೊಂದನ್ನು ಕಟ್ಟಿಸಿ, ಅದರ ಉಭಯಪಾರ್ಶ್ವಗಳಲ್ಲಿ ಕರ್ಪಟೇಶ್ವರವೆಂಬಲ್ಲಿಯ ಇಪ್ಪತ್ನಾಲ್ಕು ನಿವರ್ತನ ಭೂಮಿಯನ್ನು ಬ್ರಾಹ್ಮಣನಿಗೆ ದತ್ತಿ ಕೊಟ್ಟಿರುವನು.

ಕದಂಬ ಎರಡನೆಯ ಕೃಷ್ಣವರ್ಮನ ಕಾಲ (ಕ್ರಿ.ಶ. ೬೦೦)ದಲ್ಲಿ ಹಾನಗಲ್ಲು ತಾಲೂಕಿನ ಆಲೂರು ಗ್ರಾಮದಲ್ಲಿ ಸ್ವಾಮಿಶರ್ಮನೆಂಬವನಿಗೆ ಪಾಂತಿಪುರ ವಿಷಯದಲ್ಲಿ ಕಿರುಕುಪ್ಪಟೂರು ಗ್ರಾಮದಾನ ಮಾಡಿದ ಉಲ್ಲೇಖ ತಾಮ್ರಪಟದಲ್ಲಿದೆ.[2]

ಆಡೂರಿನಲ್ಲಿ ಬಾದಾಮಿ ಚಾಲುಕ್ಯ ಕೀರ್ತಿವರ್ಮನ (ಕ್ರಿ.ಶ. ೭೫೦) ಶಾಸನವಿದ್ದು, ಸಿಂದರಸನೆಂಬವ ಪಾಂಡಿಯೂರನ್ನು ಆಳುತ್ತಿದ್ದಾಗ, ಧರ್ಮಗಾವುಂಡನು ನಿರ್ಮಿಸಿದ ಬಸದಿಗೆ ಅವನ ಮೊಮ್ಮಗ ಶ್ರೀಪಾಲ ಹಾಗೂ ದೋಣಗಾವುಂಡರು ದಾನವಿತ್ತ ದಾಖಲೆ ಸಧ್ಯ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಆವರಣದಲ್ಲಿದೆ. ಇದರಂತೆ ನರೇಗಲ್ಲಿನಲ್ಲಿ ರಾಷ್ಟ್ರಕೂಟ ಧ್ರುವ (ಕ್ರಿ.ಶ. ೭೯೦), ಗೋವಿಂದವಲ್ಲಭ (ಕ್ರಿ.ಶ. ೮೦೦), ಕನ್ನರನ ಶಾಸನಗಳಿವೆ. ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ಯಾದವ, ವಿಜಯನಗರ ಮತ್ತು ಕೆಳದಿ ದೊರೆಗಳ ಆಡಳಿತಕ್ಕೆ ಒಳಪಟ್ಟು ವಿಭಿನ್ನ ಚರಿತ್ರೆ ವಿಶಿಷ್ಟ ಸಂಸ್ಕೃತಿಗಳ ಆಡುಂಬೊಲವಾಗಿದೆ.

**ಮಧ್ಯಕಾಲೀನ ಚರಿತ್ರೆ**

ಕಲ್ಯಾಣದ ಚಾಲುಕ್ಯರ ಬನವಾಸಿ ಪನ್ನಿರ್ಚ್ಛಾಸಿರ, ಹಾನುಗಲ್ಲ ಐನೂರು ಭಾಗಗಳು ಪ್ರಾಚೀನ ಕಾಲದಿಂದ ಪ್ರಸಿದ್ಧಿ ಪಡೆದಿವೆ. ಕದಂಬ ವಂಶದ ಮೂಲದವರು ಬನವಾಸಿ ಮಂಡಲದ ಅಧಿಪತಿಗಳಾಗಿ ನೇಮಕಗೊಂಡು ಚಾಲುಕ್ಯರಿಗೆ ನೆರವಾಗಿದ್ದವರು. ಹಾನುಗಲ್ಲು ಕದಂಬರು ಬನವಾಸಿ ಅರಸರ ಮೂಲದವರೇ ಎಂದು ಹೇಳಿ ಮುಂದುವರಿದಿದ್ದರಿಂದ ಎರಡನೆಯ ಬಾರಿ ಈ ಪ್ರದೇಶದಲ್ಲಿ ಕದಂಬೋದಯವಾಯಿತೆನ್ನಬೇಕು.

ಹಾನುಗಲ್ಲು ಐನೂರರ ಮೇಲೆ ಪ್ರಭುತ್ವವಿರಿಸಿದ ಕದಂಬ ಎಂಬ ಅರಸು ಮನೆತನ ಇಲ್ಲಿದ್ದು, ಉಭಯಸ್ವಾಮ್ಯದ ಆಡಳಿತ ಇವರದಾಗಿತ್ತು. ಅಂದರೆ ಇವರು ಕಲ್ಯಾಣದ ಚಾಲುಕ್ಯರಿಗೆ ಮಂಡಲೇಶ್ವರರಾಗಿದ್ದಂತೆ, ಗೋವೆಯ ಕದಂಬರಿಗೂ ಮಂಡಲೇಶ್ವರರಾಗಿದ್ದವರು. ತಮ್ಮ ಅವಿರತ ಪ್ರಯತ್ನ ಯಶಸ್ಸಿನಿಂದ ಮಂಡಲೇಶ್ವರರಾಗಿ ಕ್ರಿ.ಶ. ೧೦ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೆ ಆಳ್ವಿಕೆ ನಡೆಸಿರುವರು.[3] ಉತ್ತರ ಕನ್ನಡ ಜಿಲ್ಲೆಯ ಪೂರ್ವ, ಧಾರವಾಡ ಜಿಲ್ಲೆಯ ಪಶ್ಚಿಮ ಭಾಗಗಳ ಒಡೆತನ ಪಡೆದಿದ್ದ ಇವರಿಗೆ ಬನವಾಸಿ ಆಳ್ವಿಕೆಗೆ ಮೊದಲು ಪಾನುಂಗಲ್ಲ ದ್ವಿತೀಯ ರಾಜಧಾನಿಯಾಗಿ ಮೆರೆದಿದೆ.

ಹಾನುಗಲ್ಲು ಕದಂಬರ ವಂಶದವರು ನಾಡಿನ ಹೊರಗೂ ತಮ್ಮ ರಾಜ್ಯಭಾರ ಮಾಡಿರುವರು. ಕೊಡಗಿನ ಕ್ರಿ.ಶ. ೧೦೯೫ ಯಡೂರ ಶಾಸನ ಅಲ್ಲಿಯ ಮಹಾಮಂಡಲೇಶ್ವರ ದುದ್ದರಸನನ್ನು ಹಾನುಗಲ್ಲು ಕದಂಬರ ವಂಶಜನೆಂದು ಸಾರಿದೆ. ಹಾಗೆಯೆ ಬಯಲು ನಾಡಿನ ಕದಂಬರು ಎಂದು ಕರೆಯಿಸಿಕೊಂಡು ಹೆಗ್ಗಡದೇವನಕೋಟೆಯ ಕ್ರಿ.ಶ. ೧೦ - ೧೧ನೆಯ ಶತಮಾನದ ಚಾಗಿಯರಸ, ರವಿಯಮ್ಮರಸ, ಕಂದವರ್ಮರು ತಮ್ಮನ್ನು ಕದಂಬ ವಂಶಜರೆಂದು ಕರೆದುಕೊಂಡಿದ್ದು, ಹಾನುಗಲ್ಲು ಕದಂಬರ ಕೀರ್ತಿ ದೂರದ ಕೊಡಗು ಮತ್ತು ಹೆಗ್ಗಡದೇವನಕೋಟೆಯವರೆಗೂ ಹಬ್ಬಿನಿಂತಿದೆ.[4]

ಹಾನುಗಲ್ಲು ಕದಂಬ ಶಾಖೆಯ ಆದ್ಯಪುರುಷ ಚಟ್ಟಯ್ಯ. ಕ್ರಿ.ಶ. ೯೬೯ರಲ್ಲಿ ರಾಷ್ಟ್ರಕೂಟರ ಪೆರ್ಗಡೆಯಾಗಿ ತನ್ನ ಧೈರ್ಯ, ಸಾಹಸಗಳಿಂದ ಸಾಮಂತನಾಗಿ ಮೆರೆದ ಉಲ್ಲೇಖ ಸೋಮನಹಳ್ಳಿಯಲ್ಲಿದೆ. ಈತ ೯೭೨ ರಿಂದ ಕ್ರಿ.ಶ. ೧೦೧೫ರ ವರೆಗೆ ಬನವಾಸಿ ಪನ್ನಿರ್ಚ್ಛಾಸಿರ, ಸಾಂತಳಿಗೆ ಸಾವಿರ ಆಳುತ್ತಿದ್ದರೆ, ಚಾಲುಕ್ಯ ಸತ್ಯಾಶ್ರಯನು ತನ್ನ ಮಗಳು ಪಂಪಾದೇವಿಯ ಪತಿ ಕುಂದಮರಸನನ್ನು ಬನವಾಸಿ

ಪ್ರಾಂತದ ಮಾಂಡಲಿಕನನ್ನಾಗಿ ಅಧಿಕಾರಕ್ಕೆ ನಿಯಮಿಸಲು, ಕದಂಬ ಚಟ್ಟಯ್ಯ ಅವನ ಅಧೀನನಾಗಿ ಹಾನುಗಲ್ಲಿನ ಆಳ್ವಿಕೆಯನ್ನು ಮುಂದುವರೆಸಿದ್ದನು.[5] ಇಲ್ಲಿ ಇನ್ನು ಕೆಲವರ ಆಡಳಿತದಿಂದಾಗಿ ಬನವಾಸಿಯಲ್ಲಿ ಕದಂಬ ಚಟ್ಟಯ್ಯನ ಆಳ್ವಿಕೆ ಅವಿಚ್ಛಿನ್ನವಾಗಿರಲಾರದು.

ಚಾಲುಕ್ಯ ಎರಡನೆ ಜಯಸಿಂಹನ ಕಾಲದಲ್ಲಿ ರಾಜಧಾನಿ ಮಳಖೇಡದ ಮೇಲೆ ದಕ್ಷಿಣ ರಾಜೇಂದ್ರಚೋಳ ಮತ್ತು ಕಲಚುರಿ ಗಾಂಗೇಯನೊಂದಿಗೆ ೧೦೧೯ರಲ್ಲಿ ಜಯಸಿಂಹನ ಮೇಲೆರಗಿ, ಮಾನ್ಯಖೇಟವನ್ನು ಲೂಟಿ ಮಾಡಲು, ಆ ದಾಳಿಯನ್ನು ನಿಗ್ರಹಿಸುವಲ್ಲಿ ಹೋರಾಡಿ ಜಯ ಸಂಪಾದನೆ ಮಾಡಿದ ಚಟ್ಟಯ್ಯ ದೇವನಿಗೆ 'ಕಟಕದ ಗೋವ' ಎಂಬ ಬಿರುದಿತ್ತು ಗೌರವಿಸಿದ್ದರು.[6] ಕ್ರಿ.ಶ. ೯೬೯ರಲ್ಲಿ ಅಮೋಘವರ್ಷ ಖೊಟ್ಟಗದೇವನ ಆಳ್ವಿಕೆಯಲ್ಲಿ ಪೆರ್ಗಡೆಯಾಗಿದ್ದ ಚಟ್ಟಯ್ಯ, ಅವನ ಮಗ ಕನ್ನರನ ಕಾಲದಲ್ಲೂ ಕ್ರಿ.ಶ. ೯೭೨ರಲ್ಲಿ ರಾಷ್ಟ್ರಕೂಟರ ಸಾಮಂತನಾಗಿದ್ದನು. ಇವನ ಮಡದಿಯರು ಥಾನೆಯ ವಾಚಯ್ಯನ ಮಗಳು ಕುಂಡಲಾದೇವಿ ಮತ್ತು ಚತ್ತಬ್ಬರಸಿ ಎಂಬುವರು. ಚಟ್ಟಿಗನ ಒಟ್ಟು ಆಳ್ವಿಕೆ ೯೬೯ ರಿಂದ ೧೦೧೫ರ ವರೆಗೆ ಜರುಗಿದುದು.

ಇವನ ಮಗ ಜಯಸಿಂಹ ಬಹುಬೇಗ ಮರಣ ಹೊಂದಿದ್ದು, ಈತನಿಗೆ ಮಾವುಲಿ, ಮೊದಲನೆಯ ತೈಲ, ಎರಡನೆಯ ಶಾಂತಿವರ್ಮ, ಬೋಕಿ, ವಿಕ್ರಮರು ಎಂಬ ಐವರು ಮಕ್ಕಳು. ಮುಂದೆ ಹಾನುಗಲ್ಲು ಕದಂಬರ ಮಹಾಮಂಡಲೇಶ್ವರನಾದವ ಮೊದಲನೆಯ ಕೀರ್ತಿವರ್ಮ. ಚಾಲುಕ್ಯ ಆರನೆಯ ವಿಕ್ರಮಾದಿತ್ಯ ಮತ್ತು ಅಣ್ಣ ಸೋಮೇಶ್ವರನಿಗೂ ಪಟ್ಟದ ಬಗ್ಗೆ ಹೋರಾಟ ಜರುಗಿದಾಗ, ವಿಕ್ರಮಾದಿತ್ಯನಿಗೆ ಬನವಾಸಿಯಲ್ಲಿ ಆಶ್ರಯವಿತ್ತಿದ್ದರಿಂದ ೧೨ ಸಾಮಾಂತರ ದಂಡನ್ನು ಉದಯಾದಿತ್ಯನ ನೇತ್ರುತ್ವದಲ್ಲಿ ಮುತ್ತಲು ಕೀರ್ತಿದೇವ ವಿಕ್ರಮಾದಿತ್ಯನ ಪರ ಯದ್ಧದಲ್ಲಿ ಜಯ ಗಳಿಸಿಕೊಟ್ಟಿರುವನು. ಇಷ್ಟಾದರೂ ಕೀರ್ತಿವರ್ಮನಿಗೆ ಹಾನಗಲ್ಲ ಕದಂಬರ ಪಟ್ಟ ಲಭಿಸದೇ ಹೋಗಿದೆ. ಕೀರ್ತಿವರ್ಮನಿಗೆ ಚತ್ತಯ್ಯ ಮತ್ತು ತೈಲಪದೇವರೆಂಬ ಇಬ್ಬರು ಗಂಡುಮಕ್ಕಳು. ಕೀರ್ತಿವರ್ಮನಿಗೆ ದೊರಕದ ಪಟ್ಟ, ಜಯಸಿಂಹನ ಮಗ ಎರಡನೆಯ ಶಾಂತಿವರ್ಮನಿಗೆ ಮಹಾಮಂಡಲೇಶ್ವರತ್ವ ದೊರಕಿದೆ. ಈತ ಗೋವೆಯ ಕದಂಬ ಗೂವದೇವನಿಗೆ ಅಧೀನನಾಗಿ ಪಾನುಂಗಲ್ಲ ಐನೂರಿನೊಂದಿಗೆ ಕೊಂತಕುಳಿ ಮೂವತ್ತನ್ನು ಆಳಿರುವನು. ಈತನ ಆಳ್ವಿಕೆಯ ತರುವಾಯ 'ಬಂಕಾಪುರದ ಕದಂಬರು' ಹಾನಗಲ್ಲನ್ನು ಸುಮಾರು ೫೦ ವರ್ಷಗಳವರೆಗೆ ರಾಜ್ಯಭಾರವನ್ನು ಮಾಡಿದರು.[7]

ಇಮ್ಮಡಿ ತೈಲಪನಿಗೆ ಮಗ ಮಯೂರವರ್ಮ. ಈತ ೧೦೩೪ - ೩೫ರ ಮಾಲಿಕೆಯಲ್ಲಿ ಬನವಾಸಿ ಪನ್ನಿರ್ಚ್ಛಾಸಿರ, ಪಾನುಂಗಲ್ಲ ಐನೂರು, ಏಕಾಯತ ಪದಿನಾಲ್ಕು ಆಳಿದನು.[8] ಈತನ ಮಡದಿ ಐದನೆ ವಿಕ್ರಮಾದಿತ್ಯನ ಸೋದರಿ ಶೂರರಾಣಿ ಅಕ್ಕಾದೇವಿ. ಇವರಿಗೆ ಹರಿಕೇಸರಿ,[9] ತೋಯಿಮದೇವ,[10] ಹರಿಕಾಂತದೇವ[11]ರೆಂಬ ಮೂವರು ಮಕ್ಕಳು. ಹರಿಕೇಸರಿ ಬನವಾಸಿ, ಹಾನಗಲ್ಲ ಪ್ರಾಂತದ ಆಡಳಿತ ನೋಡಿದರೆ, ತೋಯಿಮದೇವ ೧೦೬೬ರಿಂದ ಬನವಾಸಿ ಪನ್ನಿರ್ಚ್ಛಾಸಿರ, ಪಾನುಂಗಲ್ಲ ಐನೂರರ ಆಳ್ವಿಕೆ ಕೈಗೊಂಡಿದ್ದನು. ೧೦೭೨ರ ತರುವಾಯ ಹರಿಕಾಂತದೇವ ಬನವಾಸಿ ಮತ್ತು ಪಾನುಂಗಲ್ಲ ಐನೂರರ ಆಳ್ವಿಕೆ ಮಾಡಿದನು. ಕ್ರಿ.ಶ. ೧೦೮೨ರ ಶಾಸನ ಶಾಂತಿವರ್ಮನ ಮಗ ತೈಲಪನನ್ನು ಹೆಸರಿಸಿದ್ದು, ಬನವಾಸಿ ಮತ್ತು ಪಾನುಂಗಲ್ಲ ಪ್ರಾಂತಗಳನ್ನು ಆಳುತ್ತಿದ್ದನೆಂದಿದೆ. ಕಾಲಾಂತರದಲ್ಲಿ ಕೊಂತಕುಳಿ ಮೂವತ್ತು, ಸಾಂತಳಿಗೆ ಸಾವಿರ ಈತನ ಆಳ್ವಿಕೆಗೆ ಒಳಪಟ್ಟಿದ್ದವು. ಈತನಿಗೆ ಮೂವರು ಮಕ್ಕಳು. ಮಯೂರವರ್ಮ, ಮಲ್ಲಿಕಾರ್ಜುನ ಮತ್ತು ಮೂರನೆಯ ತೈಲಪರು ಉಲ್ಲೇಖಿತರು. ಈ ವೇಳೆಯಲ್ಲಿ ಹೊಯ್ಸಳ ವಿಷ್ಣುವರ್ಧನ ಹಾನುಗಲ್ಲನ್ನು ವಶಪಡಿಸಿಕೊಂಡಿದ್ದರೂ ಚಾಲುಕ್ಯ ಜಗದೇಕಮಲ್ಲ ಮತ್ತು ಕದಂಬ ಮಲ್ಲಿಕಾರ್ಜುನ ಹಾನುಗಲ್ಲನ್ನು ಹೆಚ್ಚುಕಾಲ ವಿಷ್ಣುವರ್ಧನನ ಕೈಯಲ್ಲಿ ಬಿಟ್ಟಿಲ್ಲ. ೧೧೪೧ರಲ್ಲಿ ಪುನಃ ವಿಷ್ಣುವರ್ಧನ ಹಾನುಗಲ್ಲಿನಿಂದ ಆಳುತ್ತಿದ್ದನು.

ವಿಷ್ಣುವರ್ಧನ ೧೧೪೨ರಲ್ಲಿ ಬಂಕಾಪುರದಲ್ಲಿ ಮರಣ ಹೊಂದಿದರೆ, ಅತ್ತ ಕದಂಬರು ಎಚ್ಚತ್ತು ಹಾನಗಲ್ಲು ಪರಿಸರವನ್ನು ಕೈವಶಪಡಿಸಿಕೊಂಡರು. ೧೧೭೦ರ ವೇಳೆಗೆ ಹೊಯ್ಸಳ ವಿಷ್ಣುವರ್ಧನನ ಮಗ ನಾರಸಿಂಹ ಮತ್ತು ೧೧೭೮ರಲ್ಲಿ ಬಲ್ಲಾಳರು ಹಾನಗಲ್ಲನ್ನು ಕೈವಶಪಡಿಸಿಕೊಂಡಿದ್ದರೂ, ಕ್ರಿ.ಶ. ೧೧೭೮ರಲ್ಲಿ ಹಾನುಗಲ್ಲು ಹೊಯ್ಸಳ ಇಮ್ಮಡಿ ಬಲ್ಲಾಳನ ವಶಕ್ಕೆ ಹೋಯಿತು. ಆದರೆ ಕಳಚುರಿ ಸಂಕಮನು ಅವನನ್ನು ಹಿಮ್ಮೆಟ್ಟಿಸಿದನು.

ಕದಂಬ ಕೀರ್ತಿದೇವ ಮುಂದೆ ಕಲಚುರ್ಯರ ಅಧಿಕಾರ ಒಪ್ಪಿ ಅವರಲ್ಲಿ ಮಂಡಲೇಶ್ವರನಾಗಿ ಪಾನುಂಗಲ್ಲ ಐನೂರ, ಬನವಾಸಿ ಪನ್ನಿರ್ಚ್ಛಾಸಿರವನ್ನು ಆಳುತ್ತಿದ್ದನು. ಮಾವುಲಿತೈಲ ಕದಂಬ ಮೂರನೆಯ ತೈಲಪನ ಮೊಮ್ಮಗ. ಈತ ಹೆಚ್ಚುಕಾಲ ಅಧಿಕಾರದಲ್ಲಿ ಉಳಿಯದೆ, ಕಾಮದೇವನಿಗೆ ಅಧಿಕಾರ ಬಿಟ್ಟುಕೊಟ್ಟಿರುವನು. ಕದಂಬರ ಕೊನೆಯ ಸುತ್ತಿನಲ್ಲಿ ಬರುವ ಕಾಮದೇವ ಧೀಮಂತ ಸಾಹಸಿ, ಚತುರ ಆಡಳಿತಗಾರ, ಅಷ್ಟೇ ಮಹತ್ವಾಕಾಂಕ್ಷಿ, ನಾಲ್ವಡಿ ಸೋಮೇಶ್ವರನ ಮಹಾಮಂಡಲೇಶ್ವರನಾಗಿ ಮಲೆನಾಡು, ತುಳುವನಾಡು, ಕೊಂಕಣಪ್ರಾಂತ, ಪಶ್ಚಿಮಘಟ್ಟ, ಬನವಾಸಿ ಪನ್ನಿರ್ಚ್ಛಾಸಿರ, ಪಾನುಂಗಲ್ಲ ಐನೂರು, ಪುಲಿಗೆರೆ ಮುನ್ನೂರು ನಾಡುಗಳ ಆಳ್ವಿಕೆ ಕೈಗೊಂಡಿದ್ದನು. ಕಾಮರಸನ ಕಾಲವೂ ತುಂಬ ಹೋರಾಟವೇ. ಗೋವೆಯ ಕದಂಬ ವಂಶದ ಶಿವಚ್ಚಿತ್ತ ಪೆರ್ಮಾಡಿಗೆ ತನ್ನ ಮಗಳು ಕಮಲಾದೇವಿಯನ್ನಿತ್ತು ವಿವಾಹ ಸಂಬಂಧ ಗಟ್ಟಿಗೊಳಿಸಿಕೊಂಡಿದ್ದ. ಇತ್ತ ಕಲ್ಯಾಣ ಸೋಮೇಶ್ವರನ ಆಳ್ವಿಕೆ ಬಹುಕಾಲ ನಡೆಯಲಿಲ್ಲ. ಒಂದೆಡೆ ಹೊಯ್ಸಳರ ಉಪಟಳ, ಕಳಚುರ್ಯರ ತೀವ್ರ ದಬ್ಬಾಳಿಕೆ, ಉತ್ತರದಲ್ಲಿ ಯಾದವರು ಕಲ್ಯಾಣದ ಚಾಲುಕ್ಯರಿಗೆ ಹಾಕಿದ ದಿಗ್ಬಂಧನ ಇಂಥ ಸಂದರ್ಭದ ಲಾಭ ಪಡೆದ ಕದಂಬ ಕಾಮದೇವ 'ಕದಂಬ ಚಕ್ರವರ್ತಿ' ಎಂದು ಸಾರಿದ. ಅಲ್ಲದೇ ಹಾನುಗಲ್ಲು ಕೋಟೆಯನ್ನು ಭದ್ರಪಡಿಸಿಕೊಂಡ. ಈ ವೇಳೆಗೆ ಹೊಯ್ಸಳ ವೀರಬಲ್ಲಾಳ ಹಾನುಗಲ್ಲನ್ನು ಗೆದ್ದು, 'ಹಾನುಗಂಲ್ ಗೊಂಡ' ಬಿರುದನ್ನು ಧರಿಸಿದ. ಇದ್ದ ಸಾಮ್ರಾಜ್ಯವನ್ನು ಕಳೆದುಕೊಂಡ ಕಾಮದೇವ ಹೊಯ್ಸಳರ ಅಧಿಪತ್ಯ ಒಪ್ಪಿಕೊಂಡಿದ್ದರೂ, ಕಾಲಾಂತರದಲ್ಲಿ ದೇವಗಿರಿ ಯಾದವರ ಮಂಡಲೇಶ್ವರನೆನಿಸಿದನು. ಕ್ರಿ.ಶ. ೧೧೮೦ ರಿಂದ ೧೨೧೭ರ ವರೆಗೆ ೪೦ ವರ್ಷ ಹಾನುಗಲ್ಲಿನ ರಾಜ್ಯಭಾರವಹಿಸಿದ ಕಾಮದೇವ.

ಮಲ್ಲಿದೇವ ಕದಂಬ ಮನೆತನದ ಕೊನೆಯ ಸದಸ್ಯ. ೧೩ನೆಯ ಶತಮಾನದ ತರುವಾಯ ಹಾನುಗಲ್ಲು ಕದಂಬ ವಂಶ ಅವನತಿ ಹಿಡಿಯಲು ಮುಖ್ಯ ಕಾರಣ, ಒಂದೆಡೆ ಹೊಯ್ಸಳರ ಹೋರಾಟ, ಇನ್ನೊಂದೆಡೆ ಮುಸ್ಲಿಮರ ಅಭಿಯೋಗ.

ವಿಜಯನಗರದ ಕೃಷ್ಣದೇವರಾಯ ಹಾನುಗಲ್ಲನ್ನು ಜಯಿಸಿದ ವಿಷಯ ೧೫೨೧ರ ಶಾಸನದಲ್ಲಿದೆ. ಕೆಳದಿ ವೆಂಕಟಪ್ಪನಾಯಕನು ರಣದುಲ್ಲಾಖಾನನನ್ನು ಸೋಲಿಸಿ ಹಿಂದಕ್ಕಟ್ಟಿ, ತಾನು ಮುಂದೆ ಸಾಗಿ, ಗೆರೆಸೊಪ್ಪೆಯ ರಾಣಿ ಚೆನ್ನಭೈರಾದೇವಿಯನ್ನು ಸೋಲಿಸಿ, ವಿಜಯದ ಸ್ಮರಣಾರ್ಥವಾಗಿ ಹಾನುಗಲ್ಲಿನಲ್ಲಿ ವಿಜಯಗೋಪುರ ನಿರ್ಮಿಸಿದಂತೆ ಉಲ್ಲೇಖವಿದೆ. ಹೀಗೆ ಇತಿಹಾಸ ಪುಟದಲ್ಲಿ ಅಚ್ಚಳಿಯದೆ ಸ್ಥಾನ ಪಡೆದ ಹಾನುಗಲ್ಲು ಕದಂಬರು ಜಾಗತಿಕ ಮಟ್ಟದಲ್ಲಿ ಕೀರ್ತಿ ತಂದಿರುವರು.

---

[1] ಗೋಪಾಲ ಬಾ.ರಾ., ಕದಂಬರ ಶಾಸನಗಳು, ಮುನ್ನುಡಿ.

[2] K.I., II, 2, Kirukuppatur, (600 A.D)

[3] ಚೆನ್ನಕ್ಕ ಪಾವಟೆ, ಹಾನುಗಲ್ಲು ಕದಂಬರು, ೧೯೯೮, ಪು.೩೩.

[4] ನಾಗರಾಜ ಎಂ.ಜಿ., ಕೊಡಗಿನ ಕೊಲೆಗಲ್ಲು, ೧೯೮೭.

[5] E.C., 413, Hiremagadi, (980 A.D.) and E.C., VIII, 234, Sorab, (968 A.D.)

[6] ಚೆನ್ನಕ್ಕ ಪಾವಟೆ, ಹಾನುಗಲ್ಲು ಕದಂಬರು, ೧೯೯೮, ಪು.೩೦.

[7] Gopal B.R., Minar Dynasties of South India, P.36-37.

[8] E.I., XVI – ii, 3, Hottur (1037 A.D)

[9] A.R.I.E., 3, 1946 – 47, 210, Belavatti, (1049 A.D)

[10] S.I.I., XVIII, 66, Bankapur, (1067 A.D.)

[11] A.R.I.E., 3, 1947 – 48, Gudagudi, (1072 A.D.)

# ೫. ಆಡಳಿತ ವಿಭಾಗ

ವಿಸ್ತಾರವಾದ ರಾಜ್ಯದ ಆಡಳಿತವನ್ನು ಸುಗಮಗೊಳಿಸಿಕೊಳ್ಳಲು ಅಧಿನಾಯಕನು ತನ್ನ ಅನುಕೂಲಕ್ಕಾಗಿ ಭೂಪ್ರದೇಶಗಳನ್ನು ವಿಭಾಗಿಸಿ ನಿರ್ವಹಿಸುತ್ತಿದ್ದನು. ಬೇರೆ ಬೇರೆ ಆಡಳಿತ ವಿಭಾಗಗಳನ್ನು ಮಾಡುವುದರಿಂದ ಸುಭದ್ರ ಆಡಳಿತ ಹಾಗೂ ರಾಜ್ಯದ ರಕ್ಷಣೆಗೆ ಹೆಚ್ಚಿನ ಪ್ರಾಶಸ್ತ್ಯ ದೊರಕಿದಂತಾಗುತ್ತಿತ್ತು. ಸಾಮ್ರಾಜ್ಯದ ಚಕ್ರವರ್ತಿಯು ಅನುಕೂಲಕ್ಕೆ ತಕ್ಕಂತೆ ಆಡಳಿತ ವಿಭಾಗಗಳನ್ನು ಮಾಡಿ ಸಮರ್ಥರು ಹಾಗೂ ನಿಷ್ಠರಾಗಿದ್ದ ಅಧಿಕಾರಿವರ್ಗವನ್ನು ಜವಾಬ್ದಾರಿಯ ಕಾರ್ಯ ನಿರ್ವಹಿಸುವಂತೆ ಮಾಡಲಾಗುತ್ತಿತ್ತು. ಸಾಮಾನ್ಯವಾಗಿ ಪ್ರಾಚೀನ ಆಡಳಿತ ವ್ಯವಸ್ಥೆಯನ್ನು ಎರಡು ನಿರ್ಧಿಷ್ಟ ಭಾಗಗಳಲ್ಲಿ ಹಂಚಿಕೆ ಮಾಡಲಾಗುತ್ತಿತ್ತು ಎಂದು ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ನೇರವಾಗಿ ಚಕ್ರವರ್ತಿಯ ಅಧೀನದಲ್ಲಿ ನಡೆಯುವ ಕೇಂದ್ರಾಡಳಿತ ಹಾಗೂ ವಿಸ್ತಾರ ಪ್ರದೇಶವನ್ನು ವಿಭಾಗಿಸಿ ಪ್ರಾಂತ ರಚಿಸುವುದು ಹಾಗೂ ಅವುಗಳಿಗೆ ತನ್ನ ವಿಶ್ವಾಸಿಗರನ್ನು ಪ್ರಾಂತಾಡಳಿತಾಧಿಕಾರಿಗಳಾಗಿ ನೇಮಕ ಮಾಡಲಾಗುತ್ತಿತ್ತು. ಕೇಂದ್ರಾಡಳಿತದಲ್ಲಿ ಚಕ್ರವರ್ತಿ, ಯುವರಾಜ, ದಂಡನಾಯಕ (ಸೇನಾಪತಿ), ಸಂಧಿವಿಗ್ರಹಿ (ವಿದೇಶ ಸಚಿವ), ಸುಂಕಾಧಿಕಾರಿಗಳು ಹಾಗೂ ಬೇಹುಗಾರ ಪಡೆಯ ಮುಖಂಡರನ್ನೊಳಗೊಂಡ ವ್ಯವಸ್ಥೆ ರೂಪಿತವಾಗಿತ್ತು. ಇವರೆಲ್ಲರೂ ನೇರವಾಗಿ ಚಕ್ರವರ್ತಿಯ ಅಧೀನಕ್ಕೊಳಪಟ್ಟು ಕಾರ್ಯ ನಿರ್ವಹಿಸುತ್ತಿದ್ದರು. ಪ್ರಾಂತಾಡಳಿತ ವ್ಯವಸ್ಥೆಯಲ್ಲಿ ವಿಶಾಲವಾದ ಪ್ರಾಂತಗಳಿಗೆ ನಂಬಿಕಸ್ಥ ಅರಸರು ಅಥವಾ ಸಾಮಂತರನ್ನು ನೇಮಕ ಮಾಡಲಾಗುತ್ತಿತ್ತು. ಅವರು ತಮ್ಮ ಅನುಕೂಲಕ್ಕೆ ತಕ್ಕಂತೆ ತಮ್ಮ ಪ್ರಾಂತಗಳನ್ನು ಮಂಡಲ, ನಾಡು, ವಿಷಯ, ಭುಕ್ತಿ, ಕಂಪಣ ಹಾಗೂ ಹಳ್ಳಿಗಳನ್ನು ವಿಭಾಗಿಸಿ ತಮ್ಮ ಅಧೀನ ನಾಯಕರಿಗೆ ಹಂಚುತ್ತಿದ್ದರು. ಅವುಗಳನ್ನು ಪಾಲಿಸಲು ಮಂಡಲಾಧಿಪತಿ, ನಾಡುಪ್ರಭು, ಪ್ರಭುಗಾವುಂಡ ಹಾಗೂ ಗಾವುಂಡ ಎಂಬ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗುತ್ತಿತ್ತು. ಸ್ಥಳಿಯ ಮುಖಂಡರನ್ನು ನೇಮಿಸುವ ಹಾಗೂ ಕಿತ್ತೊಗೆಯುವ ಅಧಿಕಾರವನ್ನು ಪ್ರಾಂತಾಡಳಿತ ನಾಯಕ (ಅರಸ)ನೇ ಹೊಂದಿದ್ದ. ಪ್ರಾಂತಾಡಳಿತಾಧಿಕಾರಿಗಳಿಗೆ ಸ್ವತಂತ್ರ ಸೈನ್ಯ, ಕರ ಸಂಗ್ರಹಿಸುವ ಅಧಿಕಾರ, ದಾನ ದತ್ತಿ ನೀಡುವ, ದೇವಾಲಯಗಳನ್ನು ನಿರ್ಮಿಸುವ, ಕೆರೆ-ಕಟ್ಟೆಗಳನ್ನು ಕಟ್ಟಿಸುವ ಸಮಾಜೋ - ಧಾರ್ಮಿಕ ಕಾರ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸುತ್ತಿದ್ದರು. ಸ್ವತಂತ್ರ ಸೈನ್ಯ ಪಡೆಯನ್ನು ಹೊಂದಿದ್ದ ಪ್ರಾಂತಾಡಳಿತಾಧಿಕಾರಿಗಳು ತಮ್ಮ ಸೈನ್ಯಾಧಿಕಾರಿಗಳನ್ನು ಸ್ಥಾನಪಲ್ಲಟಗೊಳಿಸುವ ಹಕ್ಕನ್ನು ಪಡೆದಿದ್ದರು. ತಮ್ಮ ಸೀಮಿತ ಆಡಳಿತದಲ್ಲಿ ಏನೆಲ್ಲಾ ಒಡೆತನಗಳನ್ನು ಸಾಮಂತಾಧಿಕಾರಿಗಳು ಹೊಂದಿದ್ದರೂ, ಚಕ್ರವರ್ತಿಗೆ ವರ್ಷಂಪ್ರತಿ ಕಪ್ಪ ನೀಡುವ ಹಾಗೂ ಅವರಿಗೆ ಗಂಡಾಂತರ ಒದಗಿದಾಗ ತನ್ನ ಸೈನ್ಯದ ಸೇವೆಯನ್ನು ಒದಗಿಸುವುದು ಖಡ್ಡಾಯವಾಗಿತ್ತು. ಪ್ರಾಂತಾಡಳಿತಾಧಿಕಾರಿಗಳು ತಮ್ಮ ಪ್ರಾಂತದ ಗಡಿಯನ್ನು ಹಿಗ್ಗಿಸಿಕೊಳ್ಳುವ ಸ್ವಾತಂತ್ರ್ಯ ಅವರಿಗಿತ್ತು. ಆದರೆ ಅದು ಚಕ್ರವರ್ತಿಯ ಸಾರ್ವಭೌಮತೆಯನ್ನು ಪ್ರಶ್ನಿಸುವ ಹಂತ ತಲುಪಬಾರದಾಗಿತ್ತು. ನ್ಯಾಯ ತೀರ್ಮಾನಗಳನ್ನು ಸಹ ಪ್ರಾಂತಾಡಳಿತಗಳು ನಿರ್ವಹಿಸುತ್ತಿದ್ದವು. ಪ್ರಾಂತಾಡಳಿತಾಧಿಕಾರಿಗಳು ಪ್ರಜೆಗಳಿಗೆ ನೀಡುವ ನ್ಯಾಯ ತೀರ್ಮಾನಗಳ ಬಗೆಗೆ ಅಸಮಾಧಾನವಿದ್ದರೆ ಸಂಬಂಧಿಸಿದವರು ಚಕ್ರವರ್ತಿಯವರೆಗೂ ತಮ್ಮ ಸಮಸ್ಯೆಗಳನ್ನು ಒಯ್ಯಬಹುದಾಗಿತ್ತು. ಆದರೆ ಅಂತಿಮವಾಗಿ ಚಕ್ರವರ್ತಿಯು ಕೊಟ್ಟ ತೀರ್ಪನ್ನು ಎಲ್ಲರೂ ಒಪ್ಪಲೇಬೇಕಾದುದು ಖಡ್ಡಾಯವಾಗಿತ್ತು.

ಆಡಳಿತ ವ್ಯವಸ್ಥೆಗೆ ದೀರ್ಘವಾದ ಪರಂಪರೆ ಇದೆ. ಬಲಿಷ್ಠವು ಹಾಗೂ ಅತೀ ಬಾಹುಳ್ಯವನ್ನು ಪಡೆದಿದ್ದ ಮೌರ್ಯರ ಆಡಳಿತ ವ್ಯವಸ್ಥೆಯಲ್ಲಿ ಪ್ರಜಾಪಾಲನೆಯ ನಿರ್ವಹಣೆಗೋಸ್ಕರ ಆಡಳಿತವನ್ನು ಪ್ರಾಂತಗಳಲ್ಲಿ ವಿಭಾಗಿಸಿ ಪ್ರಾಂತಾಡಳಿತಾಧಿಕಾರಿಗೆ ವಹಿಸಿಕೊಡುತ್ತಿರುವ ಬಗೆಗೆ ಸಾಕ್ಷಾಧಾರಗಳಿವೆ. ಕರ್ನಾಟಕದಲ್ಲಿ ಸಿಕ್ಕಿರುವ ಅಶೋಕನ ಶಾಸನ (ಮಸ್ಕಿ, ಬ್ರಹ್ಮಗಿರಿ, ಉದಯಗೊಳಲು ಹಾಗೂ ಸನ್ನತ್ತಿ)ಗಳಲ್ಲಿ ಇದು ದಾಖಲಾಗಿದೆ. ಸ್ವರ್ಣಗಿರಿ ದಕ್ಷಿಣದಲ್ಲಿ ಮೌರ್ಯರ ಆಡಳಿತ ಪ್ರಾಂತವಾಗಿತ್ತು. ಇದಕ್ಕೆ ಇಸಿಲಾ ಪಟ್ಟಣ ರಾಜಧಾನಿ ಆಗಿತ್ತು. ಈ ಕೇಂದ್ರ ಮೂಲಕ ದಕ್ಷಿಣ ಪ್ರಾಂತದ ಆಡಳಿತವನ್ನು ಮೌರ್ಯ ಅಧಿಕಾರಿಗಳು ನಿರ್ವಹಿಸುತ್ತಿದ್ದರು. ಭಾರತದ ಆಡಳಿತ ವ್ಯವಸ್ಥೆಯ ಇತಿಹಾಸ ಸಂದರ್ಭದಲ್ಲಿ ಗುಪ್ತರ ಕಾಲದಲ್ಲಿ ಒಂದು ಸ್ಪಷ್ಟ ರೂಪವನ್ನು ಪಡೆಯಲಾರಂಭಿಸಿತು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ವಿಶಾಲವಾದ ಸಾಮ್ರಾಜ್ಯವನ್ನು ಚಕ್ರವರ್ತಿಯು ವಿಷಯ ಹಾಗೂ ಭುಕ್ತಿಗಳಲ್ಲಿ ವಿಭಾಗಿಸಿ, ಅವುಗಳಿಗೆ ಸ್ವತಂತ್ರ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಈ ಪ್ರಾಂತಾಡಳಿತಾಧಿಕಾರಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಮಂಡಲ ಹಾಗೂ ವಿಷಯಗಳನ್ನು ವಿಭಾಗಿಸಿ ಚಿಕ್ಕ

ಪುಟ್ಟ ಘಟಕಗಳನ್ನು ರಚಿಸಿದರು. ಈ ವ್ಯವಸ್ಥೆಯು ಭಾರತೀಯ ಊಳಿಗಮಾನ್ಯ ಇತಿಹಾಸಕ್ಕೆ ನಾಂದಿಯಾಗಿದೆ ಎಂದು ವಿದ್ವಾಂಸರುಗಳ ಅಭಿಮತವಾಗಿದೆ. ಕನ್ನಡ ನಾಡಿನ ಆಡಳಿತ ಇತಿಹಾಸ ಸಂದರ್ಭದಲ್ಲಿ ರಾಷ್ಟ್ರಕೂಟರ ಕಾಲದಲ್ಲಿ ವಿಸ್ತಾರವಾದ ಸಾಮ್ರಾಜ್ಯವನ್ನು ಆಡಳಿತ ವಿಭಾಗಗಳಾಗಿ ವಿಭಾಗಿಸಿ ಆಡಳಿತ ವ್ಯವಸ್ಥೆ ರೂಪಿಸುವ ಸಂಪ್ರದಾಯಗಳು ಪ್ರಾರಂಭವಾದವು. ರಾಷ್ಟ್ರಕೂಟ ಪೂರ್ವದಲ್ಲಿ ಕದಂಬರು ಹಾಗೂ ಬಾದಾಮಿ ಚಾಲುಕ್ಯರ ಕಾಲದಲ್ಲಿ ಆಡಳಿತ ವಿಭಾಗಗಳ ಉಲ್ಲೇಖಗಳಿದ್ದರೂ ಅವು ನೇರವಾಗಿ ಚಕ್ರವರ್ತಿಯಿಂದಲೇ ನಿರ್ವಹಿಸುತ್ತಿದ್ದವು ಎಂಬುದು ಮುಖ್ಯ ಸಂಗತಿ. ಆ ಕಾಲದಲ್ಲಿ ಕೇಂದ್ರಾಡಳಿತ ಅಂದರೆ ಚಕ್ರವರ್ತಿಯ ಒಪ್ಪಿಗೆಯ ಮೇರೆಗೆ ಅಧಿಕಾರಿಗಳನ್ನು ನೇಮಿಸುವ ಹಾಗೂ ಸ್ಥಾನಪಲ್ಲಟಗೊಳಿಸುವ ನಿಯಂತ್ರಣವನ್ನು ರಾಜನೇ ಹೊಂದಿದ್ದನು. ರಾಷ್ಟ್ರಕೂಟರ ಆಡಳಿತಾವಧಿಯಲ್ಲಿ ಸಾಮ್ರಾಜ್ಯವನ್ನು ರಾಷ್ಟ್ರ, ಪ್ರಾಂತ, ದೇಶ, ನಾಡು, ವಿಷಯ, ಭುಕ್ತಿ, ಠಾಣೆ ಹಾಗೂ ಹಳ್ಳಿಗಳೆಂದು ಸ್ಪಷ್ಟವಾಗಿ ವಿಭಾಗಿಸಿರುವ ಗುರುತುಗಳು ಲಭ್ಯವಾಗಿವೆ. ಇವುಗಳ ಆಡಳಿತ ನಿರ್ವಹಣೆಯ ಹೆಚ್ಚಿನ ಜವಾಬ್ದಾರಿಗಳು ಪ್ರಾಂತಾಡಳಿತಾಧಿಕಾರಿಗಳಾದ ಮಹಾಮಂಡಲೇಶ್ವರ ಕಡೆಗೆ ವಾಲಿದವು. ಪ್ರಾಂತವನ್ನು ವಿಭಾಗಿಸಿ ಅವುಗಳಿಗೆ ಅಧಿಕಾರಿಗಳನ್ನು ಗೊತ್ತುಪಡಿಸುವ, ಬಡ್ತಿ ನೀಡುವ ಹಾಗೂ ಕಿತ್ತೊಗೆಯುವ ಸಂಪೂರ್ಣ ಅಧಿಕಾರ ಪ್ರಾಂತಾಡಳಿತಾಧಿಕಾರಿಗಳು ಹೊಂದಿದ್ದರು. ಅಲ್ಲದೇ ಮುಖ್ಯವಾಗಿ ಸ್ವಂತ ಸೈನ್ಯ ವ್ಯವಸ್ಥೆಯನ್ನು ರೂಪಿಸುವ ಪಾರಮ್ಯ ಪ್ರಾಂತಾಡಳಿತಾಧಿಕಾರಿಗಳ ಪಾಲಾಯಿತು. ಇಂಥ ವ್ಯವಸ್ಥೆ ವಿಜಯನಗರ ಆಡಳಿತಾವಧಿಯವರೆಗೆ ಕರ್ನಾಟಕ ಇತಿಹಾಸದಲ್ಲಿ ಮುಂದುವರೆದಿರುವ ದಾಖಲೆಗಳಿವೆ. ಆದರೆ ಪ್ರಾಂತಾಡಳಿತಗಳು ಉಚ್ಛ್ರಾಯ ಸ್ಥಿತಿ ತಲುಪಿದ್ದು ಮಾತ್ರ ಕಲ್ಯಾಣದ ಚಾಲುಕ್ಯರ ಆಡಳಿತಾವಧಿಯಲ್ಲಿ ಎಂಬುದು ಬಹಳ ಮುಖ್ಯವಾದ ವಿಚಾರ. ಗೋದಾವರಿಯಿಂದ ಕಾವೇರಿ ತೀರ ಪ್ರದೇಶಗಳವರೆಗೆ ವಿಶಾಲವಾಗಿ ಹರಡಿದ್ದ ಕಲ್ಯಾಣದ ಚಾಲುಕ್ಯರ ಸಾಮ್ರಾಜ್ಯವು ನೂರಾರು ಪ್ರಾಂತಗಳಲ್ಲಿ ಆಡಳಿತದ ಅನುಕೂಲಕ್ಕಾಗಿ ವಿಭಾಗವಾಗಿತ್ತು. ಈ ಪ್ರಾಂತಗಳನ್ನು ದೇಶ, ಮಂಡಲ, ರಾಜ್ಯ, ವಿಷಯ, ಜನಪದ, ಕಂಪಣಗಳೆಂದು ಕರೆಯಲಾಗುತ್ತಿತ್ತು. ಗ್ರಾಮ ಅಥವಾ ಹಳ್ಳಿ ಎಂಬುದು ಆಡಳಿತದ ಕೊನೆಯ ಘಟಕವಾಗಿತ್ತು.

ಆಡಳಿತ ವಿಭಾಗಗಳ ಸಂದರ್ಭಗಳಲ್ಲಿ ಇನ್ನೊಂದು ಮುಖ್ಯವಾದ ಚರ್ಚೆಯ ಸಂಗತಿ ಎಂದರೆ ಆಡಳಿತ ವಿಭಾಗಗಳ ಹೆಸರಿನೊಂದಿಗೆ ಸಂಖ್ಯೆಯನ್ನು ಗೊತ್ತುಪಡಿಸಿರುವುದು. ಪ್ರಂತಗಳ ಹೆಸರಿನೊಂದಿಗೆ ಉಲ್ಲೇಖವಾಗಿರುವ ಈ ಸಂಖ್ಯೆಗಳು ಆ ಪ್ರಾಂತದಲ್ಲಿದ್ದ ಗ್ರಾಮ ಅಥವಾ ಹಳ್ಳಿಗಳ ಸಂಖ್ಯೆಯೆಂತಲೂ ಕಂದಾಯ ಗ್ರಾಮಗಳೆಂತಲೂ ಹಾಗೂ ೯ - ೧೨ನೇ ಶತಮಾನದವರೆಗೆ ಆಡಳಿತ ವ್ಯವಸ್ಥೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದ್ದ ಮಹಾಜನರ ಸಂಖ್ಯೆ ಗುರುತಿಸುವ ಅಂಶಗಳೆಂದು ವಿದ್ವಾಂಸರು ತಮ್ಮ ಜಿಜ್ಞಾಸೆಗಳನ್ನು ವ್ಯಕ್ತಪಡಿಸಿದ್ದಾರೆ. ನಾನಾ ದೃಷ್ಟಿಕೋನಗಳಲ್ಲಿ ಸಂಶೋಧಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಒಮ್ಮತದ ಅಭಿಪ್ರಾಯದಂತೆ ಆಡಳಿತ ವಿಭಾಗಗಳ ಹೆಸರಿನೊಂದಿಗೆ ಇರುವ ಸಂಖ್ಯೆಯು ಅಲ್ಲಿರುವ (ವಿಭಾಗದ) ಗ್ರಾಮಗಳ ಅಥವಾ ಹಳ್ಳಿಗಳ ಒಟ್ಟು ಮೊತ್ತವಾಗಿರುವ ಸಾಧ್ಯತೆಗಳು ಹೆಚ್ಚಾಗಿವೆ ಎಂಬ ವಿಚಾರ ಎಲ್ಲರಿಗೂ ಮಾನ್ಯವಾದುದು. ಕಲ್ಯಾಣದ ಚಾಲುಕ್ಯರ ಅಧಿಕಾರಾವಧಿಯಲ್ಲಿ ಇಂಥ ನೂರಾರು ಆಡಳಿತ ವಿಭಾಗಗಳು ಉಲ್ಲೇಖಗೊಂಡಿವೆ. ಉದಾಹರಣೆಗೆ ಸಹಸ್ರಮಂಡ (ಒಂದು ಸಾವಿರ ಗ್ರಾಮಗಳ ಒಂದು ಆಡಳಿತ ವಿಭಾಗ), ಸಾಯಿರ ನಾಡು, ಸಾವಿರ ಬಾಡ, ಸಾಸಿರನಾಡು, ಸಾಂತಳಿಗೆ ಸಾವಿರ, ಕೊಲ್ಲಿಪಾಕ ಸಾವಿರ, ಬೆಳ್ವೊಲ ಮುನ್ನೂರು, ಬನವಾಸಿ ಪನ್ನಿರ್ಚ್ಛಾಸಿರ, ಹಾನಗಲ್ಲು ಐನೂರು, ಬಾಸವೂರ ನೂರ ನಲವತ್ತು, ಮಾಘವಾಡಿ ನೂರ ನಲವತ್ತು ಮತ್ತು ಕಿಸುಕಾಡು ಎಪ್ಪತ್ತು ಮುಂತಾದ ಉದಾಹರಣೆಗಳನ್ನು ಶಾಸನಗಳಲ್ಲಿ ಕಾಣುತ್ತೇವೆ. ಕಲ್ಯಾಣದ ಚಾಲುಕ್ಯರ ಆಡಳಿತಾವಧಿಯಲ್ಲಿ ಉಲ್ಲೇಖಗೊಂಡ ಹಾನಗಲ್ಲು ಐನೂರು ಆಡಳಿತ ವಿಭಾಗವು ಮುಖ್ಯವಾದ ವಿಭಾಗವಾಗಿತ್ತು. ಇದು ಪ್ರತ್ಯೇಕ ಸರಿಸುಮಾರು ಮಹಾಮಂಡಲೇಶ್ವರನನ್ನು ಹಾಗೂ ರಾಜಕೀಯ ಅಧಿಕಾರವನ್ನು ಹೊಂದಿ ಸರಿಸುಮಾರು ಮೂರು ಶತಮಾನಗಳ ಕಾಲ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅಸ್ತಿತ್ವದಲ್ಲಿತ್ತು ಎಂಬುದನ್ನು ನೋಡುತ್ತೇವೆ. ಈ ವಿಭಾಗವು ೫೦೦ ಗ್ರಾಮಗಳನ್ನೊಳಗೊಂಡಿತ್ತು. ಈ ಗ್ರಾಮಗಳು ಒಂಬತ್ತು ಕಂಪಣಗಳಲ್ಲಿ ಹಂಚಿಕೆಯಾಗಿದ್ದವು.

ಹಾನಗಲ್ಲ ಇವುಗಳಿಗೆಲ್ಲ ಕೇಂದ್ರ (ರಾಜಧಾನಿ)ವಾಗಿತ್ತು. ಈ ಸ್ಥಳದಿಂದಲೇ ಕಲ್ಯಾಣದ ಚಾಲುಕ್ಯರ ಸಾಮಾಂತಾಧಿಕಾರಿಗಳಾದ (ಮಹಾಮಂಡಲೇಶ್ವರರು) ಹಾನಗಲ್ಲ ಕದಂಬರು ಸುಮಾರು ೩೦೦ ವರ್ಷಗಳ ರಾಜ್ಯಭಾರ ಮಾಡಿದರು. ಶಾಸನಾಧಾರಗಳಿಂದ ಕಂಪಣಗಳಲ್ಲಿರುವ ನಿರ್ದಿಷ್ಟ ಸಂಖ್ಯೆಯ ಹಳ್ಳಿಗಳಲ್ಲಿ ಕೆಲವನ್ನು ಗುರುತಿಸುವ ಪ್ರಯತ್ನವನ್ನು ವಿದ್ವಾಂಸರು ಮಾಡಿದ್ದಾರೆ.

**ಹಾನಗಲ್ಲ ಕದಂಬರ ಐತಿಹಾಸಿಕ ಭೂಗೋಲ**

ಹಾನಗಲ್ಲ ಕದಂಬರ ಕುರಿತಂತೆ ಸುಮಾರು ಐವತ್ತು ಶಾಸನಗಳು ಪ್ರಕಟಗೊಂಡಿವೆ. ಅಲ್ಲದೇ ಈ ಮನೆತನಕ್ಕೆ ಸಂಬಂಧಿಸಿದ ಮೌಲ್ಯಯುತ ಬಿಡಿ ಲೇಖನಗಳನ್ನು ಹಾಗೂ ಟಿಪ್ಪಣಿಗಳನ್ನು ಹಲವು ಸಂಶೋಧಕರು ಪ್ರಕಟಿಸಿದ್ದಾರೆ. ಇವೆಲ್ಲವುಗಳನ್ನಿಟ್ಟುಕೊಂಡು ಸ್ಥೂಲವಾದ ರಾಜಕೀಯ ಚರಿತ್ರೆಯನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ. ಹಾನಗಲ್ಲ ಆಡಳಿತ ವಿಭಾಗವು ರಾಷ್ಟ್ರಕೂಟರ ಕಾಲದಲ್ಲಿ ಹಾಗೂ ಕಲ್ಯಾಣದ ಚಾಲುಕ್ಯರ ಸಾಮ್ರಾಜ್ಯಗಳ ಪಶ್ಚಿಮ ಗಡಿಯಲ್ಲಿರುವ ಪ್ರಮುಖ ವಿಭಾಗವಾಗಿತ್ತು. ಅರಮಲೆ ನಾಡಿನ ಹವಾಗುಣದಿಂದ ಕೂಡಿದ ಈ ಪ್ರದೇಶವು ಅತ್ಯಂತ ಸಂಪದ್ಭರಿತವಾಗಿತ್ತು. ಸದಾಕಾಲ ಮಳೆನಿರು ಹಾಗೂ ಕೆರೆ ನೀರಾವರಿಯ ಅನುಕೂಲ ಹೊಂದಿತ್ತು. ಈ ಪ್ರದೇಶವು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಅಪಾರವಾದ ಪ್ರಾಣಿ ಹಾಗೂ ಅರಣ್ಯ ಸಂಪತ್ತು ರಾಜ್ಯದ ಬೊಕ್ಕಸಕ್ಕೆ ಸದಾ ಸಂಪತ್ತನ್ನು ಹರಿಸುವ ಬತ್ತದ ಝರಿಯಂತೆ ಕಾರ್ಯ ನಿರ್ವಹಿಸುತ್ತಿದ್ದವು. ಅಲ್ಲದೇ ವಿಸ್ತಾರವಾದ ಸಾಮ್ರಾಜ್ಯಗಳ ಗಡಿರೇಖೆಯನ್ನು ರಕ್ಷಿಸುವ ಆಯಕಟ್ಟಿನ ಪ್ರದೇಶವಾಗಿತ್ತು. ಹೀಗಾಗಿ ಇದರ ಮೇಲಿನ ಪಾರಮ್ಯಕ್ಕಾಗಿ ಎಲ್ಲ ರಾಜಮನೆತನಗಳು ಬಡಿದಾಡಿಕೊಂಡಿರುತ್ತಿದ್ದವು. ಸಾಗರೋತ್ಪನ್ನ ವ್ಯಾಪಾರಕ್ಕೆ ಪ್ರವೇಶದ ಹೆಬ್ಬಾಗಿಲಿನಂತಿದ್ದ ಹಾನಗಲ್ಲ ಪ್ರದೇಶವು ಇತಿಹಾಸಪೂರ್ವ ಕಾಲದಿಂದಲೂ ಬನವಾಸಿ ಕದಂಬರ ಆಳ್ವಿಕೆಗೆ ಒಳಪಟ್ಟಿತ್ತು. ಕರ್ನಾಟಕ ರಾಜಕೀಯ ರಂಗಪರದೆಯಿಂದ ಕದಂಬರು ಮರೆಯಾದ ನಂತರ ಬಾದಾಮಿ ಚಾಲಿಕ್ಯರು ಬಹುದೂರ ಬಾದಾಮಿಯಿಂದ ತಮ್ಮ ಆಡಳಿತಾಧಿಕಾರಿಗಳನ್ನು ನೇಮಿಸಿ ಈ ವಿಭಾಗದ ಆಡಳಿತ ನಿರ್ವಹಿಸಿದರು. ಆದರೆ ಈ ಪ್ರದೇಶದ ಮೇಲೆ ಸಂಪೂರ್ಣ ಸ್ವಾಮ್ಯವನ್ನು ಪಡೆದ ಮೊದಲಿಗರೆಂದರೆ ರಾಷ್ಟ್ರಕೂಟರು. ಚಕ್ರವರ್ತಿ ಕಕ್ಕನ ಆಡಳಿತಾಧಿಕಾರಿಯಾಗಿ ಚಟ್ಟಯ್ಯದೇವನೆಂಬವನು ಆಳ್ವಿಕೆ ಮಾಡಿರುವ ಮೂಲ ಪುರುಷ ಎಂದು ಇತಿಹಾಸಕಾರರು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಇವರು ತಮ್ಮ ಬಿರುದುಗಳ ಬಗೆಗೆ ಉಲ್ಲೇಖಗಳಿವೆ. ಈತನೇ ಹಾನಗಲ್ಲ ಕದಂಬ ಶಾಖೆಯ ಬನವಾಸಿ ಪುರುವರಾಧೀಶ್ವರರು ಎಂದು ಸಂಬೋಧಿಸಿಕೊಂಡಿರುವ ಹಿನ್ನೆಲೆಯಲ್ಲಿ ಆದಿಕದಂಬ ವಂಶಸ್ಥರ ಮುಂದುವರೆದ ಶಾಖೆಯೇ ಎಂಬ ಕುತೂಹಲಕ್ಕೆ ಕಾರಣವಾಗಿದೆ. ಕ್ರಿ.ಶ. ೯೬೯ರಲ್ಲಿ ರಾಷ್ಟ್ರಕೂಟ ಸಾಮಂತನಾಗಿ ಆಳ್ವಿಕೆ ಮಾಡಿದ ಚಟ್ಟಯ್ಯ ರಾಜಕೀಯ ಚದುರಂಗದಾಟದಲ್ಲಿ  ಸ್ಥಾನಪಲ್ಲಟಗೊಂಡು ರಾಷ್ಟ್ರಕೂಟ ನಂತರ ಅಧಿಕಾರಕ್ಕೆ ಬಂದ. ಕಲ್ಯಾಣದ ಚಾಲುಕ್ಯ ಇಮ್ಮಡಿ ತೈಲಪನ ಆಡಳಿತಾವಧಿಯಲ್ಲಿ ಇದೇ ಪ್ರದೇಶದ ಮಂಡಲಾಧಿಪತಿಯಾಗಿ ನೇಮಕಗೊಳ್ಳುತ್ತಾನೆ. ಈತನ ಸಾಮರ್ಥ್ಯವನ್ನು ಕಂಡ ಚಾಲುಕ್ಯ ಅರಸ ಸಾಂತಳಿಗೆ ಸಾವಿರ ನಾಡಿನ ಹಕ್ಕನ್ನು ಸಹ ನೀಡುತ್ತಾನೆ. ಪ್ರಾರಂಭದಲ್ಲಿ ಬನವಾಸಿಯನ್ನು ಆಡಳಿತ ಕೇಂದ್ರವನ್ನಾಗಿ (ರಾಜಧಾನಿ) ಮಾಡಿಕೊಂಡು ಅಧಿಕಾರ ನಿರ್ವಹಿಸಿದ. ಚಟ್ಟಯ್ಯನು ಚಾಲುಕ್ಯ ಅರಸರ ಆಪದ್ಬಾಂಧವನಾಗಿ ರೂಪುಗೊಳ್ಳುತ್ತಾನೆ. ಚೋಳರು ಮಾನ್ಯಖೇಟದ ಮೇಲೆ ದಾಳಿ ಮಾಡಿದಾಗ ಚಕ್ರವರ್ತಿ ಎರಡನೆ ಜಯಸಿಂಹನ ಪಕ್ಷವಹಿಸಿ ಚಾಲುಕ್ಯರ ಗೆಲುವಿಗೆ ಕಾರಣನಾಗುತ್ತಾನೆ. ಅನೇಕ ಯುದ್ಧಗಳು ಹಾಗೂ ಸಾಮಾಜಿಕ ಕಾರ್ಯಗಳನ್ನು ಮಾಡಿದ ಚಟ್ಟಯ್ಯನ ಬಗೆಗೆ ಕ್ರಿ.ಶ. ೧೦೧೫ರ ನಂತರ ಯಾವ ಉಲ್ಲೇಖಗಳೂ ಲಭ್ಯವಾಗುವುದಿಲ್ಲ.

ಚಟ್ಟಯ್ಯನ ನಂತರ ಆತನ ಮಗ ಜಯಸಿಂಹ ಆಳ್ವಿಕೆ ಮಾಡಿದ್ದಾನೆ. ಆದರೆ ಆತನ ಬಗೆಗೂ ಹೆಚ್ಚಿನ ಮಾಹಿತಿಗಳು ತಿಳಿದುಬಂದಿಲ್ಲ. ಇದೇ ವೇಳೆಗೆ ಕಲ್ಯಾಣದ ಚಾಲುಕ್ಯರ ಸಾಮ್ರಾಜ್ಯದ ಅಧಿಪತಿಯಾಗಬೇಕೆಂದು ದಾಯಾದಿ ಮತ್ಸರ ಪ್ರಾರಂಭವಾಗುತ್ತದೆ. ಇಮ್ಮಡಿ ಸೋಮೇಶ್ವರನಿಂದಾಗಿ ಆರನೆಯ ವಿಕ್ರಮಾದಿತ್ಯ ಕೆಲವು ವರ್ಷ ಅತಂತ್ರನಾಗಿ ಅಲೆದಾಡುತ್ತಿರುತ್ತಾನೆ. ಈ ಸಂದರ್ಭದಲ್ಲಿ ತನ್ನ ಮರುಸ್ಥಾಪನೆಗಾಗಿ ಸಾಮಂತಾಧಿಕಾರಿಗಳ ಬೆಂಬಲ ಪಡೆಯುವ ಪ್ರಯತ್ನದಲ್ಲಿ ಅಲೆದಾಟದಲ್ಲಿ ನಿರತನಾಗಿರುತ್ತಾನೆ. ಇಮ್ಮಡಿ ಸೋಮೇಶ್ವರನ ವಿರುದ್ಧವಾಗಿ ಹಾಗೂ ಆರನೆಯ ವಿಕ್ರಮಾದಿತ್ಯನ ಪಕ್ಷವಹಿಸಿ ಹಾನಗಲ್ಲ ಕದಂಬ ಅರಸ ಕೀರ್ತಿವರ್ಮ ಬೆಂಬಲ

ನೀಡುತ್ತಾನೆ. ಇದರಿಂದ ಕುಪಿತನಾದ ಇಮ್ಮಡಿ ಸೋಮೇಶ್ವರ ಹಾನಗಲ್ಲ ಕದಂಬರಿಗಿದ್ದ ಅಧಿಕಾರವನ್ನು ಹಿಂತಿರುಗಿ ಪಡೆದು ಅವನನ್ನು ಪದಚ್ಯುತಗೊಳಿಸುತ್ತಾನೆ. ಹೀಗಾಗಿ ಆತನ ಅಧಿಕಾರ ಈಗ ಕೇವಲ ಬನವಾಸಿ ಕೇಂದ್ರಕ್ಕೆ ಮಾತ್ರ ಸೀಮಿತವಾಗಿದೆ. ಮತ್ತೆ ಕ್ರಿ.ಶ. ೧೦೮೭ರಲ್ಲಿ ಆರನೆಯ ವಿಕ್ರಮಾದಿತ್ಯ ಹಾನಗಲ್ಲ ಕದಂಬರ ವಂಶದ ಶಾಂತಿವರ್ಮನಿಗೆ ಎಲ್ಲ ಅಧಿಕಾರವನ್ನು ಮರಳಿ ನೀಡುತ್ತಾನೆ. ಈತನ ನಂತರ ಅಧಿಕಾರಕ್ಕೆ ಬಂದ ತೈಲಪದೇವ ಹಾಗೂ ಆತನ ಮಗ ಮಯೂರವರ್ಮನು ಹೊಯ್ಸಳ ದಾಳಿಗಳನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿ ತಮ್ಮ ಗಡಿರೇಖೆಗಳನ್ನು ಉಳಿಸಿಕೊಳ್ಳುತ್ತಾರೆ. ಮಲ್ಲಿಕಾರ್ಜುನ ಕಾಲದಲ್ಲಂತೂ ಹೊಯ್ಸಳರ ರಾಜ್ಯಕ್ಕೆ ನುಗ್ಗಿ ಲಕ್ಕುಂಡಿಯವರೆಗೆ ತನ್ನ ದಂಡಯಾತ್ರೆಯನ್ನು ಮುಂದುವರೆಸಿರುವ ಉಲ್ಲೇಖಗಳಿವೆ. ಕ್ರಿ.ಶ. ೧೧೬೧ - ೭೫ರವರೆಗೆ ಆಳಿದ ಕೀರ್ತಿವರ್ಮನು ಕಲ್ಯಾಣದ ಚುಕ್ಕಾಣಿ ಹಿಡಿದ ಕಲಚೂರಿಗಳ ಪರವಹಿಸಿ ಬಿಜ್ಜಳನನ್ನು ತನ್ನ ಚಕ್ರವರ್ತಿಯಾಗಿ ಸ್ವೀಕರಿಸುತ್ತಾನೆ. ಕೆಲವೇ ವರ್ಷಗಳಲ್ಲಿ ಅಸ್ತಂಗತವಾದ ಕಲಚೂರಿಗಳ ನಂತರ ರಾಜಕೀಯ ಅಸ್ಥಿರತೆಯನ್ನು ಉಪಯೋಗಿಸಿಕೊಂಡು ಹಾನಗಲ್ಲ ಕದಂಬ ಅರಸ ಕಾಮದೇವ (೧೧೮೦ - ೧೨೧೭) ಸ್ವತಂತ್ರ ಚಕ್ರವರ್ತಿಯೆಂದು ಘೋಷಿಸಿಕೊಂಡು  ಅವರ ಬಿರುದಾವಳಿಗಳನ್ನು ಪಡೆದುಕೊಳ್ಳುತ್ತಾನೆ. ಮತ್ತೆ ರಾಜಕೀಯ ವಿಪ್ಲವಗಳಿಂದ ಆದ ಪರಿಣಾಮದಿಂದ ಸೇವುಣರ ಪಕ್ಷ ವಹಿಸಿ ಹಾನಗಲ್ಲ ಕದಂಬರು ಆಡಳಿತ ನಿರ್ವಹಿಸುತ್ತಾರೆ. ಕೊನೆಯ ಅರಸ ಮಲ್ಲಿದೇವನ ಬಗೆಗೆ ಕ್ರಿ.ಶ. ೧೨೫೨ರವರೆಗಿನ ದಾಖಲೆಗಳು ಲಭ್ಯವಾಗುತ್ತವೆ. ಇವನ ನಂತರವೂ ಹಲವರು ಈ ಆಡಳಿತ ವಿಭಾಗವನ್ನು ಆಳಿದ್ದರೂ ಅವರ ಬಗೆಗೆ ಸ್ಪಷ್ಟವಾದ ಮಾಹಿತಿಗಳ ಕೊರತೆಯಿದೆ.

**ಹಾನಗಲ್ಲ – ಐನೂರು ಆಡಳಿತ ವಿಭಾಗ**

ಪ್ರಾಚೀನ ಪಾಂಕ್ತಿಪುರ (ಹಾನಗಲ್ಲ)ವನ್ನು ಕೇಂದ್ರವನ್ನಾಗಿಟ್ಟುಕೊಂಡು ಹಾನಗಲ್ಲ ಕದಂಬರು ಸುಮಾರು ಎರಡೂವರೆ ಶತಮಾನಗಳ ಕಾಲ ಆಡಳಿತ ನಿರ್ವಹಿಸಿದರು. ಮಂಡಳೇಶ್ವರರಾಗಿ ನಂತರ ಮಹಾಮಂಡಳೇಶ್ವರ ಸ್ಥಾನಮಾನಗಳವರೆಗೂ ಎತ್ತರಕ್ಕೆ ಏರಿದರು. ಹಾನಗಲ್ಲ ಕದಂಬ ಅರಸ ತೈಲಪದೇವನ ಕಾಲದ ಒಂದು ಶಾಸನವು ತ್ರಿಭೋಗವಾಗಿ ಆಳುತ್ತಿದ್ದರೆಂದು ಉಲ್ಲೇಖಿಸುತ್ತಿದೆ. ವಿದ್ವಾಂಸರಾದ ಎಂ. ಚಿದಾನಂದಮೂರ್ತಿಯವರು ತ್ರಿಭೋಗ ಎಂಬ ಶಬ್ದವನ್ನು ಅರ್ಥೈಸುತ್ತಾ ಮೂರು ತಲೆಮಾರುಗಳಿಂದ ರಾಜ್ಯವನ್ನು ಆಳುತ್ತಿದ್ದವರು ಎಂಬ ವಿವರಣೆ ನೀಡಿದ್ದಾರೆ. ಹತ್ತಾರು ದಶಕಗಳ ಕಾಲ ಹಾನಗಲ್ಲ ಕದಂಬರು ತಮ್ಮ ಅಧಿಕಾರವನ್ನು ಅವಿಚ್ಛಿನ್ನವಾಗಿ ಮುಂದುವರೆಸಿಕೊಂಡು ಹೋಗಿದ್ದಾರೆ. ಅಲ್ಲದೇ ಬಹಳ ಮುಖ್ಯವಾದ ಇನ್ನೊಂದು ಸಂಗತಿಯೆಂದರೆ ಸಾಮಂತ ಅಧಿಕಾರಿಗಳ ಹಕ್ಕುಸ್ವಾಮ್ಯ ಯಾವಾಗಲೂ ರಾಜನ ಕಾಲಚೆಂಡಿನಂತೆ. ಅಂದರೆ ಅದು ಸದಾ ಬದಲಾಗುವ ಕ್ರಿಯೆಗೆ ಒಳಗಾಗುತ್ತಿರುವಂಥದ್ದು. ಇಂಥ ಸ್ಥಿತಿಯಲ್ಲಿ ಹಾನಗಲ್ಲ ಕದಂಬರು ತಮ್ಮ ಚಾಣಾಕ್ಷತನದಿಂದ ಹಾಗೂ ಸಾಮರ್ಥ್ಯದಿಂದ ಕಲ್ಯಾಣದ ಚಾಲುಕ್ಯರಿಗೂ ಹಾಗೂ ಗೋವೆಯ ಕದಂಬರಿಗೆ ಅಧೀನರಾಗಿ ಯಾವುದೇ ಸಮಸ್ಯೆಗಳಿಲ್ಲದೆ ರಾಜ್ಯಭಾರ ಮಾಡಿದರು. ಆದ್ದರಿಂದ ಶಾಸನಗಳಲ್ಲಿ ಅವರನ್ನು ಉಭಯ ಸ್ವಾಮ್ಯದಿಂದ ಆಳುತ್ತಿರುವವರೆಂದು ಉಲ್ಲೇಖಿಸಲಾಗಿದೆ.

ಕ್ರಿ.ಶ. ೧೧ - ೧೩ನೇ ಶತಮಾನದ ಕರ್ನಾಟಕದಲ್ಲಿದ್ದಂತಹ ಆಡಳಿತ ವ್ಯವಸ್ಥೆ ಹಾನಗಲ್ಲ ಕದಂಬರ ಪ್ರಾಂತದಲ್ಲಿತ್ತು. ಪ್ರಾಂತಾಡಳಿತವನ್ನು ಆಡಳಿತದ ಅನುಕೂಲಕ್ಕಾಗಿ ಕಂಪಣಗಳಲ್ಲಿ ವಿಭಾಗಿಸಿದ್ದರು. ಈ ಕಂಪಣಗಳು ಇಂದಿನ ಹಾನಗಲ್ಲ, ಶಿಗ್ಗಾವಿ, ಹಾವೇರಿ, ರಾಣೆಬೆನ್ನೂರು (ಹಾವೇರಿ ಜಿಲ್ಲೆ), ಮುಂಡಗೋಡ, ಸಿದ್ದಾಪುರ (ಉತ್ತರ ಕನ್ನಡ ಜಿಲ್ಲೆ), ಸೊರಬ (ಶಿವಮೊಗ್ಗ ಜಿಲ್ಲೆ) ಹಾಗೂ ಕುಂದಗೋಳ (ಧಾರವಾಡ) ತಾಲೂಕಾ ಪ್ರದೇಶಗಳಲ್ಲಿ ಹಂಚಿರುವ ಬಗೆಗೆ ಶಾಸನಾಧಾರಗಳಿಂದ ತಿಳಿಯುತ್ತೇವೆ. ಆದರೆ ಮುಖ್ಯವಾಗಿ ಅವರ ಆಡಳಿತ ವಿಭಾಗವು ಕೇಂದ್ರೀಕರಣಗೊಂಡಿರುವುದು ಹಾನಗಲ್ಲ ತಾಲೂಕಿನಲ್ಲಿ ಎಂಬುದು ಗಮನಾರ್ಹವಾದುದು. ಏಳಂಬಿ-೨೦, ಹೊಸನಾಡು-೧೨, ಕುಂದುವರ-೩೧ (ಶಿಗ್ಗಾವ ತಾಲೂಕು), ಎಡೆವೊಳಲ್-೭೦, ಏಳಂಬಿ-೭೦ (ಹಾನಗಲ್ಲ ತಾಲೂಕ), ಕೊಂಡರಟ್ಟಿ-೭೦, ಹೊಸನಾಡು-೭೦, ಬಾಗಲೆ-೭೦, ಮುಂಡಗೋಡ, ಹಂಚಿಕೆಯಾಗಿರುವ ಶಿರಸಿ ಸೀಮೆಯಲ್ಲಿಯೂ ಹಾಗೂ ಎರಡು ಜೂಹಳಿಗೆ-೭೦, ಸಿದ್ದಾಪುರ ತಾಲೂಕಿನಲ್ಲಿ ಹರಡಿ... ಕಂಪಣಗಳಾಗಿವೆ. ಇಲ್ಲಿ ಉಲ್ಲೇಖವಾಗಿರುವ ಕಂಪಣಗಳ ಹೆಸರಿನೊಂದಿಗಿರುವ ಸಂಖ್ಯೆಗಳನ್ನೆಲ್ಲ ಕೂಡಿಸಿದರೆ ಒಟ್ಟು ೪೮೨ ಗ್ರಾಮಗಳ ಸಂಖ್ಯೆ ಪಟ್ಟಿ ಸಿದ್ಧವಾಗುತ್ತದೆ ಎಂದು ವಿದ್ವಾಂಸರಾದ ಚೆನ್ನಕ್ಕ ಪಾವಟೆ ಅವರು

ಅಭಿಪ್ರಾಯಿಸುತ್ತಾರೆ. ಬಹುಶಃ ೧೨ ಹಳ್ಳಿಗಳಿರುವ ಇನ್ನೊಂದು ಕಂಪಣದ ಬಗೆಗೆ ಸಂಶೋಧನೆ ಅಗತ್ಯವಾಗಿದೆ. ಕಂಪಣಗಳ ಹೆಸರಿನೊಂದಿಗಿರುವ ಸಂಖ್ಯೆಯ ಬೆನ್ನತ್ತಿ ಗ್ರಾಮಗಳನ್ನು ಸಂಶೋಧಿಸುವ ಪ್ರಯತ್ನ ಮಾಡಿದರೆ ಅದರ ಸಂಪೂರ್ಣ ವಿವರ ಸಿಗುವುದು ಕಷ್ಟಸಾಧ್ಯವಾಗಿದೆ.

ಒಂಬತ್ತು ಕಂಪಣಗಳ ಭೌಗೋಳಿಕ ಕ್ಷೇತ್ರದಲ್ಲಿ ಸಿಕ್ಕಿರುವ ಶಾಸನಗಳಲ್ಲಿ ಅವುಗಳಲ್ಲಿರುವ ಕೆಲವು ಗ್ರಾಮಗಳ ಬಗೆಗೆ ಉಲ್ಲೇಖಗಳಿವೆ. ಆ ಗ್ರಾಮಗಳಲ್ಲಿರುವ ದೇವಾಲಯ, ಕೆರೆ-ಕಟ್ಟೆ, ಭೂಮಿದಾನ ಹಾಗೂ ಹಕ್ಕುಬಾಧ್ಯತೆಗಳನ್ನು ನೀಡಿರುವ ಉಲ್ಲೇಖಗಳಿವೆ. ಇಂಥ ದಾನ ಶಾಸನಗಳು ಹಾನಗಲ್ಲ ಕದಂಬರ ಸಮಾಜೋ-ಧಾರ್ಮಿಕ ಕಾರ್ಯಗಳನ್ನು ತಿಳಿಸುತ್ತವೆ. ಹಾನಗಲ್ಲ-೫೦೦ ಆಡಳಿತ ವಿಭಾಗದಲ್ಲಿ ಶಿಕ್ಷಣ ಕುರಿತಂತೆ ಅಗ್ರಹಾರದ ಉಲ್ಲೇಖವು ಇದೆ. ಏಳಂಬಿ-೨೦ರ ಕಂಪಣದಲ್ಲಿ ಬರುವ ನೀರಲಗಿಯಲ್ಲಿ ಅಗ್ರಹಾರ ಇತ್ತೆಂಬುದು ಗಮನಾರ್ಹವಾದುದು. ಆ ಕಾಲದ ಶಾಸನಗಳು ಶೈವಾಚಾರ್ಯರ ಬಗೆಗೆ ಉಲ್ಲೇಖಿಸಿವೆ. ಮುಖ್ಯವಾಗಿ ಈ ಆಡಳಿತ ವಿಭಾಗದಲ್ಲಿರುವ ಶಾಸನ ಮಾಹಿತಿಗಳಲ್ಲಿ ಚಿಕ್ಕಪುಟ್ಟ ಮನೆತನಗಳ ಬಗೆಗೂ ವಿವರವಿದೆ. ಉದಾಹರಣೆಗೆ ಚಲ್ಲಕೇತನ, ಸಿಂದಮನೆತನ, ಗೋದವರ ಮನೆತನಗಳ ಬಗೆಗೆ ಉಲ್ಲೇಖಿಸಲಾಗಿದೆ. ಆಡಳಿತ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪ್ರಭುಗಾವುಂಡರ, ದಂಡನಾಯಕರ, ಮಹಾಪ್ರಧಾನರ ಅನೇಕ ಹೆಸರಿನ ಉಲ್ಲೇಖಗಳು ಶಾಸನದಲ್ಲಿವೆ.

ಸುಮಾರು ೨೫೦ ವರ್ಷಗಳ ಕಾಲ ಸಾಮಂತ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ ಹಾನಗಲ್ಲ ಕದಂಬರು, ಹಾನಗಲ್ಲ ೫೦೦ರ ಆಡಳಿತ ವಿಭಾಗದ ಅರಸರಾಗಿ ಆಳಿದರು. ತಮ್ಮ ಚಕ್ರವರ್ತಿಗಳಿಗೆ ವಿಶ್ವಾಸಿಗರಾಗಿ ರಾಜ್ಯದ ಗಡಿರೇಖೆಗಳಿಗೆ ಧಕ್ಕೆ ಒದಗದಂತೆ ಕಾಪಾಡಿಕೊಂಡು ಹೋದರು. ಆಡಳಿತಾತ್ಮಕ ವಿಷಯಗಳಿಗಿಂತ ಸಾಂಸ್ಕೃತಿಕ ಕೊಡುಗೆಗಳನ್ನು ಹಾನಗಲ್ಲ ಕದಂಬರು ಈ ನಾಡಿಗೆ ಹೆಚ್ಚಾಗಿ ನೀಡಿದ್ದಾರೆ. ಕನ್ನಡ ನಾಡಿನ ಕಲಾ ಸಂಸ್ಕೃತಿಗೆ, ಹಾನಗಲ್ಲ, ಅರಳೇಶ್ವರ, ಬಾಳಂಬೀಡು, ಬೇಲೂರು ಹಾಗೂ ತಿಳುವಳ್ಳಿ ಮುಂತಾದ ಸ್ಥಾನಗಳಲ್ಲಿ ಅದ್ಭುತವಾದ ಕಲಾಪರಂಪರೆಯನ್ನು ಬೆಳೆಸಿದ್ದಾರೆ. ಆದ್ದರಿಂದ ಮಹತ್ವದ ಕೊಡುಗೆ ನೀಡಿದ ಹಾನಗಲ್ಲ ಕದಂಬರು ಕರ್ನಾಟಕ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ.

ಈ ಲೇಖನ ಸಿದ್ಧಪಡಿಸುವಲ್ಲಿ ಕೆಳಗೆ ಉಲ್ಲೇಖಿಸಿದ ಗ್ರಂಥಗಳ ಸಹಾಯ ಪಡೆದಿದ್ದೇನೆ. ಆದ್ದರಿಂದ ಇವುಗಳನ್ನು ರಚಿಸಿದ ವಿದ್ವಾಂಸರುಗಳಿಗೆ ನಾನು ಋಣಿ ಹಾಗೂ ಕೃತಜ್ಞತೆಯಿಂದ ನೆನೆಯುತ್ತೇನೆ.

**ಅಡಿಟಿಪ್ಪಣಿಗಳು**


೧. ಪ್ರಾಚೀನ ಕರ್ನಾಟಕದ ಆಡಳಿತ ಪಾರಿಭಾಷಾ ಕೋಶ, ಸಂ. ಶ್ರೀನಿವಾಸ ರಿತ್ತಿ, ಪ್ರಾಚ್ಯಶಾಸ್ತ್ರ ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೦.

೨. ಗೋದಾವರಿವರಂ ಇರ್ದ ಕನ್ನಡ ನಾಡು, ಜಿ.ಎನ್. ಉಪಾಧ್ಯ, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ, ೨೦೦೨.

೩. ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂಪುಟ ೮ ಮತ್ತು ೯, ಪ್ರ. ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.

೪. ಸಂಸ್ಕೃತಿ ಸಂಶೋಧನೆ, ಚೆನ್ನಕ್ಕ ಪಾವಟೆ, ಧಾರವಾಡ, ೧೯೯೫.

೫. ಧಾರವಾಡ ಜಿಲ್ಲೆಯ ಶಾಸನ ಸೂಚಿ, ಸಂ. ಎಂ.ಎಂ. ಕಲಬುರ್ಗಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫.

೬. ಸೌತ್ ಇಂಡಿಯನ್ ಇನ್ ಸ್ಕ್ರಿಪ್ಷನ್ಸ್, ಸಂಪುಟ ೧೮.

೭. ಹರತಿಸಿರಿ, ಸಂ. ಲಕ್ಷ್ಮಣ್ ತೆಲಗಾವಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೧೯೮೭.

೮. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಎಂ. ಚಿದಾನಂದಮೂರ್ತಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೨.

೯. ಕನ್ನಡ ವಿಷಯ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೫.

೧೦. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಸಂಪುಟ ೧, ಎಂ.ಎಂ. ಕಲಬುರ್ಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೧೧. ಮಲೆಕರ್ನಾಟಕದ ಅರಸು ಮನೆತನಗಳು, ಸಂ. ರಾಜಾರಾಮ ಹೆಗಡೆ, ಅಶೋಕ ಶೆಟ್ಟರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೧೨. The Kadamba Kula, George M. Muress, New Delhi, 1990.

೧೩. The Minor Dynasties of Karnataka, B.R. Gopal, Mysore.

೧೪. ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಜೆ.ಎಂ. ನಾಗಯ್ಯ, ಬೆಳಗಾವಿ, ೧೯೯೨.

# ೬. ಚರಿತ್ರೆ : ಆಧುನಿಕ

ಹಾನಗಲ್ಲು ಪ್ರಾಚೀನ ಕಾಲದಲ್ಲಿ ಪಾನುಂಗಲ್ ೫೦೦ ಕೇಂದ್ರಸ್ಥಾನವಾಗಿತ್ತು. ಯಾದವರು ಮತ್ತು ಹೊಯ್ಸಳರ ನಂತರ ವಿಜಯನಗರ ಸಾಮ್ರಾಜ್ಯದ ಅರಸರು ೧೩೩೬ ರಿಂದ ೧೫೬೫ರ ವರೆಗೆ ಆಡಳಿತವನ್ನ ನಡೆಸಿದರು. ಈ ಅವಧಿಯಲ್ಲಿ ಹಾನಗಲ್ಲು ಪ್ರಮುಖ ವ್ಯಾಪಾರ ಕೇಂದ್ರವಾಗಿ ಮುಂದುವರೆದಿತ್ತು. ವಿಜಯನಗರದ ಪತನಾನಂತರ ಸ್ವಲ್ಪ ಕಾಲ ಇಲ್ಲಿಯ ಆಡಳಿತ ಅಸ್ಪಷ್ಟವಾಗಿ ಕಾಣುತ್ತದೆ. ಆದರೆ ೧೮ನೆಯ ಶತಮಾನದ ಅಂತ್ಯದ ಕಾಲದಲ್ಲಿ ಪೇಶ್ವೆಗಳ ಅಧಿಕಾರಕ್ಕೆ ಒಳಪಟ್ಟಿದ್ದರಿಂದ ಆಡಳಿತ ವ್ಯವಸ್ಥೆಯಲ್ಲಿ ದೇಸಾಯಿ, ದೇಶಪಾಂಡೆಯವರ ಪ್ರಭಾವ ಹೆಚ್ಚಾಯಿತು. ಈಗಲೂ ಹಾನಗಲ್ಲಿನಲ್ಲಿ ದೇಸಾಯಿ, ದೇಶಪಾಂಡೆಯವರ ಸಂಖ್ಯೆ ಹೆಚ್ಚಾಗಿದೆ. ಸಾರ್ವಭೌಮತ್ವಕ್ಕಾಗಿ ಮೈಸೂರಿನ ಟಿಪ್ಪುಸುಲ್ತಾನ ಹಾಗೂ ಪೇಶ್ವೆಗಳ ನಡುವೆ ಕದನವು ಪ್ರಾರಂಭವಾಯಿತು. ೧೮೯೯ರಲ್ಲಿ ಇಂಗ್ಲೀಷರಿಗೂ ಟಿಪ್ಪುಸುಲ್ತಾನನಿಗೂ ನಡೆದ ಶ್ರೀರಂಗಪಟ್ಟಣದ ಯುದ್ಧದಲ್ಲಿ ಟಿಪ್ಪುಸುಲ್ತಾನ ಮರಣ ಹೊಂದಿದನು. ಇದೇ ಕಾಲಕ್ಕೆ ಪೇಶ್ವೆಗಳ ಪ್ರಭಾವ ಕಡಿಮೆಯಾಗಿತ್ತು. ಈ ಪರಿಸ್ಥಿತಿಯನ್ನು ಬಳಸಿಕೊಂಡ ಇಂಗ್ಲೀಷರು, ಮರಾಠರನ್ನು ಸದೆ ಬಡಿದು ಅವರ ರಾಜ್ಯವನ್ನು ತಮ್ಮ ಕೈವಶಪಡಿಸಿಕೊಂಡರು. ಇದರಿಂದ ಕ್ರಿ.ಶ. ೧೮೦೦ರಲ್ಲಿ ಧಾರವಾಡ ಜಿಲ್ಲೆ ಬ್ರಿಟಿಷರ ಪ್ರಭಾವಕ್ಕೆ ಒಳಗಾಯಿತು. ಹಾನಗಲ್ಲು ಧಾರವಾಡ ಜಿಲ್ಲೆಯಲ್ಲಿ ಅತ್ಯಂತ ಬಹುದೊಡ್ಡ ತಾಲೂಕಾಗಿದ್ದರಿಂದ ಬ್ರಿಟಿಷರ ಆಡಳಿತ ವ್ಯವಸ್ಥೆ ಇಲ್ಲಿಯು ಸಹ ಪ್ರಾರಂಭವಾಯಿತು. ಇಗ್ಲೀಷರ ವಿರುದ್ಧ ಅಸಹಕಾರ ಮತ್ತು ಹೋರಾಟ ಪ್ರಾರಂಭವಾಗಲು ಕ್ರಿ.ಶ. ೧೮೦೦ರಲ್ಲಿ ಜಾರಿಯಲ್ಲಿದ್ದ ಇನಾಂಕಮೀಷನ್ ಪಾತ್ರ ಬಹು ಮಹತ್ವದ್ದಾಗಿದೆ. ಉತ್ತರ ಕರ್ನಾಟಕದ ಬೆಳಗಾವಿ, ವಿಜಾಪುರ ಮತ್ತು ಧಾರವಾಡ ಜಿಲ್ಲೆಗಳು ಪೇಶ್ವೆಗಳ ಆಡಳಿತಕ್ಕೆ ಒಳಪಟ್ಟಿದ್ದ ಅವಧಿಯಲ್ಲಿ, ಆಡಳಿತದಲ್ಲಿ ನಿಷ್ಠೆಯಿಂದ ಸೇವೆಸಲ್ಲಿಸಿದವರಿಗೆ ದೇಸಾಯಿ, ದೇಶಪಾಂಡೆ, ದೇಶಮುಖ, ಪಾಟೀಲ, ಕುಲಕರ್ಣಿ ಮೊದಲಾದ ಹುದ್ದೆಗಳನ್ನು ನೀಡಿ ವೇತನಗಳನ್ನು ಹಾಕಿಕೊಟ್ಟಿದ್ದರು. ಇವರೆಲ್ಲಾ ಮುಖ್ಯವಾಗಿ ಒಂದಿಲ್ಲೊಂದು ರೀತಿಯಲ್ಲಿ ತೆರಿಗೆ ವಸೂಲಿ ಮಾಡಿ ಸರ್ಕಾರಕ್ಕೆ ಒಪ್ಪಿಸುತ್ತಿದ್ದರು. ತಮ್ಮ ಆತ್ಮರಕ್ಷಣೆಗೆಂದು ಸಣ್ಣ ಪ್ರಮಾಣದ ಸೈನ್ಯವನ್ನು ಇಟ್ಟುಕೊಳ್ಳುವ ಅಧಿಕಾರವೂ ಇತ್ತು. ಮುಖ್ಯವಾಗಿ ತಮ್ಮ ಪ್ರಭುಗಳಿಂದ ಯುದ್ಧಕ್ಕೆ ಕರೆ ಬಂದಾಗ, ಸೈನ್ಯ ಮತ್ತು ಧನಸಾಹಾಯ ಒದಗಿಸುವುದು ಇವರ ಕರ್ತವ್ಯವಾಗಿತ್ತು. ಪೇಶ್ವೆಗಳ ರಾಜ್ಯ ಇಂಗ್ಲೀಷರ ಕೈಗೆ ಬಂದೊಡನೆ ಕರ ವಸೂಲಿ ಪದ್ಧತಿಯಲ್ಲಿ ಮಹತ್ವದ ಬದಲಾವಣೆಯಾಯಿತು. ಇಂಗ್ಲೀಷರು ಕಲೆಕ್ಟರ್, ಮಾಮ್ಲೆದಾರ ಮೊದಲಾದ ಸರ್ಕಾರಿ ಅಧಿಕಾರಿಗಳನ್ನು ನೇಮಿಸಿ, ನೇರವಾಗಿ ತೆರಿಗೆ ವಸೂಲಿಯನ್ನು ಮಾಡತೊಡಗಿದರು. ಅಲ್ಲದೆ ಸೈನ್ಯವನ್ನು ಸರ್ದಾರರು, ಸುಬೇದಾರರ ಕೈಯಿಂದ ತಪ್ಪಿಸಿ ನೇರವಾಗಿ ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡರು. ಫೇಶ್ವೆಗಳ ಪತನದ ನಂತರ ಕೆಲ ಕಾಲ ಅರಾಜಕತೆಯ ಕಾಲಾವಧಿಯಲ್ಲಿ ಅನೇಕ ಜಮೀನುದಾರರು ಮತ್ತು ಇನಾಂದಾರರು ತಮ್ಮ ಅಧೀನಕ್ಕೊಳಪಟ್ಟ ಪ್ರದೇಶದಲ್ಲಿಯ

ಎಷ್ಟೋ ಜಮೀನನ್ನು ಅನಧಿಕೃತವಾಗಿ ತಮ್ಮ ಹೆಸರಿಗೆ ಬರೆದುಕೊಂಡಿರುವರೆಂಬ ಸುದ್ದಿಯು ಕಂಪನಿಯ ಅಧಿಕಾರಿಗಳ ಕಿವಿಗೆ ಬಿತ್ತು. ಆದ್ದರಿಂದ ಈ ಸಮಸ್ಯೆಯ ಪರಿಹಾರಕ್ಕಾಗಿ ಸರ್ಕಾರ ಆಯೋಗವನ್ನು ನೇಮಿಸಿತು. ಇದು 'ಇನಾಂಕಮೀಷನ್' ಎಂದೇ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಈ ಆಯೋಗವು ೧೮೪೩ರಿಂದ ೧೮೫೭ರವರೆಗೆ ವಿಚಾರಣೆಯನ್ನು ಮಾಡಿತು. ಇದರಲ್ಲಿ ಕೇವಲ ಸೈನ್ಯಾಧಿಕಾರಿಗಳೇ ಹೆಚ್ಚಾಗಿದ್ದರು. ಅವರಿಗೆ ತಮ್ಮ ಸರ್ಕಾರದ ಆದಾಯವನ್ನು ಹೇಗೆ ಹೆಚ್ಚಿಸಬೇಕೆಂಬುದೇ ಮಹತ್ವವಾಗಿತ್ತೆ ಹೊರತು, ಅದರಿಂದ ಉಂಟಾಗುವ ನ್ಯಾಯ ಅನ್ಯಾಯ ಇಲ್ಲವೆ ರಾಜಕೀಯ ಪರಿಣಾಮಗಳ ಕಡೆಗೆ ಹೆಚ್ಚು ಗಮನ ಹರಿಸಲಿಲ್ಲ.

ಈ ಆಯೋಗದ ಅಧ್ಯಕ್ಷನಾಗಿದ್ದ ಕರ್ನಲ್ ಎತ್ರಿಸ್ ಎಂಬುವವನು ೧೮೭೩ರಲ್ಲಿ ಸಲ್ಲಿಸಿದ ವರದಿಗಳಲ್ಲಿ, ಆಯೋಗವು ೮೫೫೯ ಆಸ್ತಿಗಳ ಹಕ್ಕುಪತ್ರಗಳನ್ನು ಪರಿಶೀಲಿಸಿದ್ದಾಗಿ ತಿಳಿಸಿತು. ಅವುಗಳಲ್ಲಿ ೪೦೦೦ರಷ್ಟು ಆಸ್ತಿಗಳು ಇನಾಂವಾಗಿ ಉಳಿಯಬಹುದೆಂದೂ, ೩೬೦೦ ಆಸ್ತಿಗಳ ಮೇಲೆ ಆಯಾ ಜಮೀನುದಾರರ ಮರಣದ ನಂತರ ಕರ ಹೇರಬೇಕೆಂದೂ ಮತ್ತು ೯೪೧ ಆಸ್ತಿಗಳ ಮೇಲೆ ತಕ್ಷಣವೇ ಕರ ಹೇರಬೇಕೆಂಬ ನಿರ್ಣಯದ ವರದಿಯನ್ನು ಒಪ್ಪಿಸಿದನು. ವೇತನದಾರರ ಮೇಲೆ ಕರವನ್ನು ಜಾರಿಯಲ್ಲಿ ತಂದರೆ ಗೌರವಕ್ಕೆ ಕುಂದು ಬರುವುದೆಂಬ ಭಾವನೆ ವ್ಯಾಪಕವಾಗಿ ಹರಡಿತು.

ಈ ರೀತಿಯ ವರದಿ ಸಾರ್ವಜನಿಕರ ಅಸಂತೋಷಕ್ಕೆ ಮುಖ್ಯ ಕಾರಣವಾಯಿತು. ಇದೇ ವೇಳೆಗೆ ಉತ್ತರ ಭಾರತದಲ್ಲಿ ಬಂಡಾಯ ಪ್ರಾರಂಭವಾದೊಡನೆ, ಬ್ರಿಟಿಷ್ ಸರ್ಕಾರವು ಇಡೀ ದೇಶದ ತುಂಬೆಲ್ಲಾ ಆಜ್ಞೆಯನ್ನು ಹೊರಡಿಸಿ, ಎಲ್ಲರೂ ತಮ್ಮ ತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು ಆದೇಶಿಸಿದರು. ಕರ್ನಾಟಕದಲ್ಲಿಯೂ ಕೂಡಾ ಅದಕ್ಕೆ ತೀವ್ರ ಪ್ರತಿಭಟನೆ ಕಂಡುಬಂತು. ಎಲ್ಲ ಸಂಸ್ಥಾನಿಕರು ಬ್ರಿಟಿಷರ ವಿರುದ್ಧ ಬಂಡಾಯವನ್ನು ಪ್ರಾರಂಭಿಸಿದರು. ಅವರಲ್ಲಿ ಭೀಮರಾಯ, ಸರಟೂರು ದೇಸಾಯಿ ಹಾಗೂ ಹಮ್ಮಿಗಿ ಕೆಂಚನಗೌಡ ದೇಸಾಯಿ ಮೊದಲಾದವರು ಪ್ರಮುಖರು. ೧೮೫೭ರ ಮೇ ತಿಂಗಳ ಉತ್ತರ ಭಾರತದಲ್ಲಿ ಹುಟ್ಟಿಕೊಂಡ ಕ್ರಾಂತಿಯ ಕಿಡಿ, ಆಗಸ್ಟ್ ತಿಂಗಳ ಹೊತ್ತಿಗೆ ಧಾರವಾಡಕ್ಕೆ ಬಂದು ಮುಟ್ಟಿತು. ಇದರ ಜೊತೆಗೆ ೧೯೦೫ರಲ್ಲಿ ಬೆಂಗಾಲ ವಿಭಜನೆ ಮತ್ತು ಅನೇಕ ಸಾಮಾಜಿಕ ಆಂದೋಲನಗಳು ಪ್ರಾರಂಭವಾದವು. ದಕ್ಷಿಣ ಆಫ್ರಿಕಾದಿಂದ ಮಹಾತ್ಮ ಗಾಂಧೀಜಿಯವರು ಸ್ವದೇಶಕ್ಕೆ ಹಿಂದಿರುಗಿ ಬಂದನಂತರ ಸ್ವಾತಂತ್ರ್ಯ ಆಂದೋಲನ ತೀವ್ರಗತಿಯಲ್ಲಿ ಆರಂಭವಾಯಿತು. ೧೮೮೫ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಯಾಗಿ, ಅದು ಭಾರತೀಯರಲ್ಲಿ ರಾಷ್ಟ್ರೀಯತೆ ಮತ್ತು ದೇಶಾಭಿಮಾನವನ್ನು ಹುಟ್ಟಿಸಿತು. ಇದರಿಂದಾಗಿ ಸ್ವದೇಶಿ ಕಾರ್ಖಾನೆಗಳ ಸ್ಥಾಪನೆ ಚಳುವಳಿ ಮತ್ತು ೧೯೨೦ರಲ್ಲಿ ಕಾನೂನುಭಂಗ ಚಳವಳಿಗಳು ಆರಂಭಗೊಂಡವು. ಇದರ ಹಿನ್ನೆಲೆಯಾಗಿ ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ, ಜಂಗಲ್ ಸತ್ಯಾಗ್ರಹ ಹಾಗೂ ಸ್ವದೇಶಿ ಆಂದೋಲನಗಳು ಪ್ರಾರಂಭವಾದವು. ೧೯೪೨ರಲ್ಲಿ ಗಾಂಧೀಜಿಯವರು ಕ್ವಿಟ್ ಇಂಡಿಯಾ ಚಳುವಳಿಯನ್ನು ಆರಂಭಿಸುವ ಮೂಲಕ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂಬ ಕೂಗು ದೇಶಾದ್ಯಂತ ಮೊಳಗಿತು. ಈ ಎಲ್ಲಾ ಚಳುವಳಿಗಳಿಗೆ ಹಾನಗಲ್ಲು ಪರಿಸರವೂ ಕೂಡಾ ಸ್ಪಂದಿಸಿತು. ಈ ಚಳುವಳಿಗಳು ಹಾನಗಲ್ಲು ತಲುಪಿದ ಕೆಲವೇ ದಿನಗಳಲ್ಲಿ ಸುತ್ತಮುತ್ತಲಿನ ನರೇಗಲ್, ತಿಳವಳ್ಳಿ, ಅಕ್ಕಿಆಲೂರು, ಬೊಮ್ಮನಹಳ್ಳಿ, ಬೆಳಗಾಲಪೇಟ ಮೊದಲಾದ ಗ್ರಾಮಗಳಿಗೆ ಪಸರಿಸಿತು. ಹಾನಗಲ್ಲು ತಾಲೂಕಿನಲ್ಲಿ ೧೯೩೦ರಲ್ಲಿ ಕಾಂಗ್ರೆಸ್ ಸಂಸ್ಥೆ ಭದ್ರವಾಗಿ ನಿಲ್ಲಲು ಶ್ರೀಮಂತ ನರಸಿಂಗರಾವ್ ದೇಸಾಯಿ ಕಲ್ಲಾಪೂರ, ಮೋತಿರಾವ್ ಕುಲಕರ್ಣಿ ಹಾನಗಲ್ಲು, ಮಲ್ಲಪ್ಪ ನಾಯಕ ತಟ್ಟಿ, ರಂಗಾಚಾರ್ಯ ಗದಗಕರ್, ಶಾಮಾಚಾರ್ಯ ಹಾನಗಲ್ಲು ಮೊದಲಾದವರ ನಿರಂತರ ಶ್ರಮವೇ ಕಾರಣ. ಶಾಮಚಾರ್ಯ ಶೇಷಾಚಾರ್ಯರು ನಾಗಾಪುರ ಕಾಲೇಜಿನಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದರು. ಗಾಂಧೀಜಿಯವರ ಸ್ವತಂತ್ರ ಸಂಗ್ರಾಮದ ಕರೆಗೆ ಓಗೊಟ್ಟು ಉನ್ನತ ವ್ಯಾಸಂಗವನ್ನು ಕೈಬಿಟ್ಟು ನಾಗಾಪುರದಿಂದ ಹಾನಗಲ್ಲಿಗೆ ಬಂದರು. ಜನತೆಯಲ್ಲಿ ರಾಷ್ಟ್ರಪ್ರೇಮ, ರಾಷ್ಟ್ರೀಯ ಚಳುವಳಿಗಳನ್ನು ಬಿಂಬಿಸಲು ಹಾನಗಲ್ಲು ನಗರದ ಮಾರುಕಟ್ಟೆಯಲ್ಲಿರುವ ವಿಶಾಲವಾದ ಮತ್ತು ಬಹುದೊಡ್ಡದಾದ ಪಾಂಡುರಂಗ ದೇವಾಲಯದಲ್ಲಿ ರಾಷ್ಟ್ರೀಯ ಶಾಲೆಯನ್ನು ಪ್ರಾರಂಭಿಸಿದರು. ಇವರೂ ಸೇರಿದಂತೆ ರಾ.ವೇ. ಕರಗುದರಿ, ವಾಮನ್ ರಾವ್ ದೇಸಾಯಿ, ದತ್ತಾತ್ರೇಯ ಅಣ್ಣಾಜಿ ಜೋಶಿ ಮೊದಲಾದವರು ಶಿಕ್ಷಕರಾಗಿದ್ದರು. ಈ

ಪ್ರೇರಣೆಯಿಂದ ಮಲ್ಲಾರಭಟ್ಟ ಕಾಗಿನೆಲ್ಲಿಯವರು ದತ್ತಾತ್ರೇಯ ಗುಡಿಯಲ್ಲಿ ಯುವತಿಯರಿಗಾಗಿ ರಾಷ್ಟ್ರೀಯ ಶಾಲೆಯನ್ನು ಆರಂಭಿಸಿದರು. ಇವು ಪಾಷ್ಟ್ರಪ್ರೇಮ, ರಾಷ್ಟ್ರೀಯ ಭಾವೈಕ್ಯತೆ, ರಾಷ್ಟ್ರೀಯ ಚಟುವಟಿಕೆಗಳ ಪ್ರಮುಖ ಕೇಂದ್ರಗಳಾಗಿದ್ದವು.

ರಾಷ್ಟ್ರೀಯ ಶಾಲೆಯೊಂದಿಗೆ ಗಜಾನನೋತ್ಸವ, ನಾಡಹಬ್ಬ, ಹೋಳಿ ಹುಣ್ಣಿಮೆ ಅತ್ಯಂತ ಉತ್ಸಾಹದಿಂದ ನಡೆಯುತ್ತಿದ್ದವು. ಈ ಸಂದರ್ಭಗಳಲ್ಲಿ ಭಾಷಣ, ಕೀರ್ತನ, ಪುರಾಣ, ಕೋಲಾಟದ ಹಾಡುಗಳು ವ್ಯಾಪಕವಾಗಿ ನಡೆದು, ಜನರಲ್ಲಿ ರಾಷ್ಟ್ರಕ್ಕಾಗಿ ಹೋರಾಡುವ ಸ್ಫೂರ್ತಿಯನ್ನು ತುಂಬುತ್ತಿದ್ದವು. ಅಲ್ಲದೆ ಕಾಂಗ್ರೆಸ್ ಸಂಸ್ಥೆಯ ಮುಖಂಡರಾದ ರಾ.ವೇ. ಕರಗುದರಿ, ದತ್ತಾತ್ರೇಯ ಜೋಶಿ ಇವರೆಲ್ಲರೂ ಮನೆ ಮನೆಗೆ ತೆರಳಿ ಖಾದಿ ಬಟ್ಟೆಗಳನ್ನು ಮಾರುತ್ತಿದ್ದರೆ, ಡಾ. ರಂಗಾಚಾರ್ಯ ಗದಗಕರ್ ಅವರು ಉಚಿತವಾದ ಔಷಧಿಯನ್ನು ಕೊಡುವ ಮೂಲಕ ಎಲ್ಲರ ಸಹಾನುಭೂತಿಗೆ ಒಳಗಾಗಿದ್ದರು. ಮಲ್ಲಪ್ಪನವರ ಅಕ್ಕಿ ಮತ್ತು ಸಿದ್ಧಪ್ಪ ಸಿಂಧೂರರು ಕಾಂಗ್ರೆಸ್ಸಿಗೆ ಸೇರಿದೊಡನೆ ಕಾಂಗ್ರೆಸ್ಸಿನ ಚಟುವಟಿಕೆಗಳಿಗೆ ಹೊಸ ರೆಕ್ಕೆಗಳು ಬಂದು ಉಗ್ರ ಹೋರಾಟ ಪ್ರಾರಂಭವಾಯಿತು. ಈ ಹೋರಾಟಗಳಿಗೆ ಬೇಕಾಗುವ ಖರ್ಚು ವೆಚ್ಚಗಳಿಗೆ ಹಾನಗಲ್ಲು ಪರಿಸರದ ಜನತೆ ಮನಃಪೂರ್ವಕವಾಗಿ ಸ್ಪಂದಿಸುತ್ತಿದ್ದರು. ಇವರೆಲ್ಲರ ನೇತೃತ್ವದಲ್ಲಿ ಹಾನಗಲ್ಲು ನಗರದಲ್ಲಿ ಉಪ್ಪಿನ ಸತ್ಯಾಗ್ರಹ, ಇಚಲಗಿಡ ಕಡಿಯುವುದು, ಜಂಗಲ್ ಸತ್ಯಾಗ್ರಹ ನಡೆದವು. ಹಾನಗಲ್ಲಿನಲ್ಲಿ ಗ್ರಾಮದೇವಿ ಜಾತ್ರೆ ಹಾಗೂ ಇತರ ಸಣ್ಣಪುಟ್ಟ ಕಾರ್ಯಕ್ರಮಗಳು ನಡೆದರೂ ಅವುಗಳಲ್ಲಿ ಕಾಂಗ್ರೆಸ್ ಚಟುವಟಿಕೆಗಳು ಕಂಡುಬರುತ್ತಿದ್ದವು. ಹಾನಗಲ್ಲಿನಲ್ಲಿ ಕಾನೂನುಭಂಗ ಚಳುವಳಿ ನಡೆದಾಗ, ಮಲ್ಲಪ್ಪ ಅಕ್ಕಿವಳ್ಳಿ, ಸಿದ್ದಪ್ಪ ಸಿಂಧೂರ, ನಾಗೇಶರಾವ್ ದೇಸಾಯಿ, ಹನುಮಂತರಾವ್ ದೇಶಪಾಂಡೆ, ಸುಬ್ಬಣ್ಣ ದೀಕ್ಷಿತ, ಭಿಷ್ಮಪ್ಪ ದೇಶಪಾಂಡೆ, ಶಿವಾನಂದ ದೀಕ್ಷಿತ, ಕೃಷ್ಣಮೂರ್ತಿ ಕಾಗಿನೆಲ್ಲಿ ಮೊದಲಾದವರು ಕಾರಾಗೃಹಕ್ಕೆ ಹೋದರು. ಈ ಚಟುವಟಿಕೆಗಳೊಂದಿಗೆ ೧೯೩೦ರಲ್ಲಿ ಅನಂತ ಕುಂದಾಪುರರವರು ಹಾನಗಲ್ಲು ಜನರ ಸಹಕಾರದಿಂದ ಬಲಭೀಮ ವ್ಯಾಯಾಮ ಶಾಲೆಯನ್ನು ಸ್ಥಾಪಿಸಿದರು. ಈ ವ್ಯಾಯಾಮ ಶಾಲೆಯಲ್ಲಿ ನಾ.ಸು. ಹರಡಿಕರವರು ಸ್ಥಾಪಿಸಿದ ಸೇವಾದಳವು ಕಾಂಗ್ರೆಸ್ ಚಟುವಟಿಕೆಗೆ ಬೆನ್ನೆಲುಬಾಗಿ ನಿಂತಿತು. ಈ ರೀತಿಯಾಗಿ ಹಾನಗಲ್ಲು ಪರಿಸರದ ಜನತೆ ಗಾಂಧೀಜಿಯವರ ಆದೇಶದಂತೆ ಉಗ್ರ ಹೋರಾಟ ಚಳುವಳಿಗಳನ್ನು ಅವಿರತವಾಗಿ ಹಮ್ಮಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಿದರು. ಆಗಸ್ಟ್ ೧೫, ೧೯೪೭ರಲ್ಲಿ ಭಾರತವು ಸ್ವತಂತ್ರವಾಯಿತು. ೧೯೫೦ ಜನವರಿ ೨೬ರಂದು ಪ್ರಜಾಸತ್ತಾತ್ಮಕ ಗಣರಾಜ್ಯಗಳು ಪ್ರಾರಂಭವಾಗಿ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಜನಪ್ರತಿನಿಧಿಗಳು ಆಡಳಿತವನ್ನು ಹಿಡಿದರು. ೧೯೫೩ ರಂದ ೫೬ ನವೆಂಬರ್ ೧ರ ವರೆಗೆ ಹಾನಗಲ್ಲು ಬಾಂಬೆ ಪ್ರಾಂತಕ್ಕೆ ಸೇರಿತ್ತು.

ಕರ್ನಾಟಕ ಏಕೀಕರಣ ಚಳುವಳಿಯ ಪರಿಣಾಮದಿಂದ ೧೯೫೬ ನವ್ಹೆಂಬರ್ ೧ರಂದು ನವ ಮೈಸೂರು ರಾಜ್ಯದ ಉದಯವಾಯಿತು. ನವ ಮೈಸೂರು ರಾಜ್ಯದಲ್ಲಿ ಸೇರಿದ ಭಾಗಗಳು,

೧. ರಾಜರ ಆಳ್ವಿಕೆಯಲ್ಲಿದ್ದ ಸೂರು ರಾಜ್ಯ ಪ್ರದೇಶಗಳು.

೨. ಬಳ್ಳಾರಿ.

೩. ಮುಂಬೈ ಪ್ರಾಂತದ ಪ್ರದೇಶಗಳು : ಅ. ಧಾರವಾಡ, ಬ. ವಿಜಾಪುರ, ಕ. ಉತ್ತರ ಕನ್ನಡ, ಡ. ಚಾಂದಗಡದ ಹೊರತಾದ ಬೆಳಗಾವಿ ಜಿಲ್ಲೆ.

೪. ಮದ್ರಾಸ್ ಪ್ರಾಂತದ ಪ್ರದೇಶಗಳು : ಅ. ದಕ್ಷಿಣ ಕನ್ನಡ, ಬ. ಕೊಳ್ಳೇಗಾಲ, ಕ. ಅಮಂದೀವ್ ನಡುಗಡ್ಡೆ.

೫. ಕುರ್ಗ ಜಿಲ್ಲೆ.

೬. ಹೈದರಾಬಾದ್ ಪ್ರಾಂತದ ಪ್ರದೇಶಗಳು : ಅ. ಗುಲ್ಬರ್ಗಾ/ಕೊಡಂಗಲ್ ಮತ್ತು ತಂದೂರು ತಾಲೂಕುಗಳ ಹೊರತಾಗಿ, ಬ. ರಾಯಚೂರು/ಅಲಂಪೂರ ಮತ್ತು ಗಡ್ವಾಲ್ ಗಳ ಹೊರತಾಗಿ, ಕ. ಬೀದರ್ ಜಿಲ್ಲೆ.

ಇವುಗಳನ್ನೆಲ್ಲಾ ಒಳಗೊಂಡು ನವ ಮೈಸೂರು ರಾಜ್ಯವು ೧೭ ವರ್ಷಗಳವರೆಗೆ ಅಸ್ತಿತ್ವದಲ್ಲಿತ್ತು. ಬೆಂಗಳೂರು ಅದರ ರಾಜಧಾನಿಯಾಗಿತ್ತು. ಕನ್ನಡ ಮಾತನಾಡುವವರಿಗೆ ಕರ್ನಾಟಕ ರಾಜ್ಯವಾಗಬೇಕೆಂಬ ಬೇಡಿಕೆಯಿಂದಾಗಿ ೧೯೭೩ ನವ್ಹೆಂಬರ್ ೧ರಂದು ಮೈಸೂರು ರಾಜ್ಯದ ಬದಲಾಗಿ ಕರ್ನಾಟಕ ರಾಜ್ಯವೆಂದು ಘೋಷಿಸಲಾಯಿತು. ದೇವರಾಜ ಅರಸು ಹೊಸ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದರು. ಕರ್ನಾಟಕ ರಾಜ್ಯದ ಬಾಂಬೆ ಪ್ರಾಂತದಲ್ಲಿನ ಜನಪ್ರತಿನಿಧಿಗಳಾಗಿ ಹಾನಗಲ್ಲು ಆಡಳಿತ ಕೇಂದ್ರಸ್ಥಾನದಲ್ಲಿ ಅಧಿಕಾರ ಮಾಡಿದವರು ಸಿದ್ಧಪ್ಪ ಚನ್ನಬಸಪ್ಪ ಸಿಂಧೂರ, ಬಿ.ಆರ್. ಪಾಟೀಲ, ಜಿ.ಎನ್. ದೇಸಾಯಿ, ಪ್ರಭುದೇವ ಚಂದ್ರಶೇಖರ ಶೆಟ್ಟರ, ಮನೋಹರ ಹನುಮಂತಪ್ಪ ತಹಶಿಲ್ದಾರ, ಚನ್ನಬಸಪ್ಪ ಮಹಲಿಂಗಪ್ಪ ಉದಾಸಿ ಮೊದಲಾದವರು ಪ್ರಮುಖರು.

### ಸ್ವಾತಂತ್ರ್ಯ ಹೋರಾಟಗಾರರು

ಪ್ರಾಚೀನ ಕಾಲದಲ್ಲಿ ರಾಜಕೀಯ ಆಡಳಿತ ಕೇಂದ್ರವಾಗಿದ್ದ ಹಾನಗಲ್ಲು ರಾಜಮನೆತನಗಳ ಅವನತಿಯ ನಂತರ ಹಿಂದುಳಿದ ಪ್ರದೇಶವಾಗಿ, ಅನೇಕ ಸಮಸ್ಯೆಗಳಿಂದ ನರಳುತ್ತಿತ್ತು. ಆದರೂ ಇಲ್ಲಿಯ ಜನರು ಪೂರ್ವಿಕರ ಸ್ವಾತಂತ್ರ್ಯ, ಸ್ವಾಭಿಮಾನದ ಬದುಕನ್ನು ಮುಂದುವರೆಸಿಕೊಂಡು ಬಂದರು. ಈ ಹಿನ್ನೆಲೆಯಿಂದ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಜನರು ಪಾಲ್ಗೊಂಡು ದುಡಿದಿದ್ದಾರೆ. ಅವರ ಸೇವೆ ಮಹಾತ್ಮ ಗಾಂಧೀಜಿಯವರನ್ನು ಈ ಪರಿಸರಕ್ಕೆ ಬರುವಂತೆ ಮಾಡಿತು. ಸ್ವಾತಂತ್ರ್ಯದ ನಂತರವೂ ಈ ತಾಲೂಕಿನ ಗತಿಯನ್ನು ಬದಲಾಯಿಸಿದವರಲ್ಲಿ ಭೀಷ್ಮ ಸಿದ್ಧಪ್ಪ ಚನ್ನಬಸಪ್ಪ ಸಿಂಧೂರ ಮತ್ತು ಜಿ.ಎನ್. ದೇಸಾಯಿ ಪ್ರಮುಖರು.

### ಸಿದ್ಧಪ್ಪ ಚನ್ನಬಸಪ್ಪ ಸಿಂಧೂರ

ಸಾಹುಕಾರರೆಂದೇ ಪ್ರಸಿದ್ಧರಾದ ಸುರಳೇಶ್ವರ ಗ್ರಾಮದ ಚನ್ನಬಸಪ್ಪ ಸಿಂಧೂರರು ಆಗರ್ಭ ಶ್ರೀಮಂತರು. ಕೃಷಿಯೋಗಿಯಾಗಿದ್ದ ಅವರಿಗೆ ಸಂಗಮ್ಮ ಧರ್ಮಪತ್ನಿ, ಇವರಿಗೆ ಜನಿಸಿದ ಪುತ್ರನೇ ಮುಂದೆ ಸಿಂಧೂರ ಸಿದ್ಧಪ್ಪ ಎಂದು ಪ್ರಸಿದ್ಧರಾಗಿ ಸಾರ್ವಜನಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರು, ಅಜ್ಜ (ಅಮ್ಮನ ಊರು) ಶೇಷಗಿರಿಯ ದೊಡ್ಡಮಲ್ಲಪ್ಪ ಅಪ್ಪಾಜಿಯವರ ಮನೆಯಲ್ಲಿ ಫೆಬ್ರವರಿ ೨೮, ೧೯೦೦ರಂದು ಜನಿಸಿದರು.

ಸಿದ್ಧಪ್ಪನವರು ಬಾಲ್ಯದಲ್ಲಿ ತಮ್ಮ ತಂದೆ - ತಾಯಿಗಳನ್ನು ಕಳೆದುಕೊಂಡರು. ಪ್ರಾಥಮಿಕ ಶಿಕ್ಷಣವನ್ನು ಶೇಷಗಿರಿ ಮತ್ತು ಅಕ್ಕಿಆಲೂರಿನಲ್ಲಿ ಪಡೆದು, ಬೆಳಗಾವಿಯ ಗಿಲಗಂಚಿ ಅರಟಾಳ ಹೈಸ್ಕೂಲಿನಲ್ಲಿ ತಮ್ಮ ಪ್ರೌಢಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿದರು. ಸ್ವಾತಂತ್ರ್ಯ ಹೋರಾಟದ ವಾತಾವರಣವು ಅವರನ್ನು ಶಾಲಾ ದಿನಗಳಲ್ಲಿಯೇ ಆವರಿಸಿಕೊಳ್ಳಲಾರಂಭಿಸಿತು. ಅಂದಿನ ದಿನ ಮೆಟ್ರಿಕ್ ಪರೀಕ್ಷೆಯ ನಂತರ ಸುರಳೇಶ್ವರಕ್ಕೆ ಮರಳಿ ಬಂದು ಸಾರ್ವಜನಿಕ ಜೀವನಕ್ಕೆ ಧುಮುಕಿದರು. ಗುತ್ತಲದ ಗಂಗಮ್ಮನೊಂದಿಗೆ ಇವರ ವಿವಾಹವಾಯಿತು. ಅಂದಿನ ದಿನಗಳಲ್ಲಿಯೇ ಚಿಕ್ಕ ಕುಟುಂಬದ ನೀತಿಯನ್ನು ಅನುಸರಿಸಿ ಇತರರಿಗೆ ಮಾರ್ಗದರ್ಶಿಯಾದರು. ಇಂಧುಮತಿ ಮತ್ತು ಚನ್ನಬಸಪ್ಪ ಇವರ ಇಬ್ಬರು ಮಕ್ಕಳು. ಕೃಷಿ ಕುಟುಂಬದ ಹಿನ್ನೆಲೆ ಹೊಂದಿದ್ದ ಇವರು ಆಗಲೇ ಅನೇಕ ಆಧುನಿಕ ಕೃಷಿ ವಿಧಾನಗಳನ್ನು ಬಳಸಿ ಇತರರಿಗೆ ಮಾದರಿಯಾಗಿದ್ದಾರೆ.

ತಮ್ಮ ವ್ಯಕ್ತಿತ್ವದಲ್ಲಿ ಶಿಸ್ತು ಮತ್ತು ಸಂಯಮವನ್ನು ರೂಢಿಸಿಕೊಂಡು ಕೊನೆಯ ಉಸಿರಿರುವವರೆಗೂ ವೈಯಕ್ತಿಕ ಚಿಂತನೆಗಳಿಗಿಂತಲೂ ಸಮಾಜದ ಸೇವೆಯೇ ಪ್ರಥಮ ಗುರಿಯಾಗಿಟ್ಟುಕೊಂಡಿದ್ದರು. ರಾಷ್ಟ್ರೀಯ ಹೋರಾಟಗಳಿಗೆ ಓಗೊಟ್ಟು ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಉದಾರ ಜೀವನ ನಡೆಸಿ ಸಿದ್ಧಹಸ್ತರಾದರು.

### ರಾಜಕೀಯ ಹೋರಾಟಗಳು

ಅಂದಿನ ರಾಜಕೀಯ ಧುರೀಣ ಅಕ್ಕಿ ಮಲ್ಲಪ್ಪನವರ ಮಾರ್ಗದರ್ಶನದಲ್ಲಿ ೧೯೨೪ರಲ್ಲಿ ಕಾಂಗ್ರೆಸ್ ಪಕ್ಷ ಸೇರಿದರು. ಏಳು ದಶಕದವರೆಗೂ ಆ ಪಕ್ಷದ ಮತ್ತು ಕರ್ನಾಟಕದ ರಾಜಕೀಯ ಚಟುವಟಿಕೆಗಳಲ್ಲಿ ತಮ್ಮ ವೈಶಿಷ್ಟ್ಯಮಯ ಛಾಪು ಮೂಡಿಸಿದರು. ೧೯೨೭ - ೩೫ರ

ಅವಧಿಯಲ್ಲಿ ಅಂದಿನ ತಾಲೂಕ ಲೋಕಲ್ ಬೋರ್ಡ್ ಮತ್ತು ಜಿಲ್ಲಾ ಲೋಕಲ್ ಬೋರ್ಡ್ ಸದಸ್ಯರಾಗಿ ಗ್ರಾಮೀಣ ಪರ ಕಾರ್ಯಗಳನ್ನು ಮಾಡಿದರು.

೧೯೩೪ರಲ್ಲಿ ಮಹಾತ್ಮ ಗಾಂದಿಯವರನ್ನು ಅಕ್ಕಿಆಲೂರಿಗೆ ಬರಮಾಡಿಕೊಂಡು ಅವರಿಗೆ ಸಾರ್ವಜನಿಕರ ಪರವಾಗಿ ಬಿನ್ನವತ್ತಳೆ ಅರ್ಪಿಸಿದರು. ಹರಿಜನರ ಉದ್ಧಾರಕ್ಕಾಗಿ ಶ್ರಮಿಸಿದ್ದಲ್ಲದೇ ಇತರ ಮುಂದುವರಿದ ಜನಾಂಗದವರನ್ನು ಅದರಲ್ಲಿ ತೊಡಗಿಸಿದರು. ಹರಿಜನರ ವಿವಾಹ ಸಮಾರಂಭಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವಂತೆ ಇತರರನ್ನು ಪ್ರರೇಪಿಸಿದರು.

ಗುದ್ಲೆಪ್ಪ ಹಳ್ಳಿಕೇರಿ, ಸರದಾರ ವೀರನಗೌಡ ಪಾಟೀಲ, ಹೊಸಮನಿ ಸಿದ್ದಪ್ಪ, ಟಿ.ಆರ್. ನೇಸ್ವಿ, ಮೈಲಾರ ಮಹಾದೇವಪ್ಪ, ಸಂಗೂರ ಕರಿಯಪ್ಪ, ಆರ್.ಆರ್. ದಿವಾಕರ ಮುಂತಾದ ದಿಗ್ಗಜರ ಪ್ರಭಾವ ಸಿದ್ಧಪ್ಪನವರನ್ನು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣ ಮುಳುಗಿಸಿತು.

ಮಹಾತ್ಮಾ ಗಾಂಧೀಜಿಯವರ ಅನನ್ಯ ಅನುಯಾಯಿಗಳಾಗಿದ್ದ ಸಿದ್ಧಪ್ಪನವರು, ಅವರ ತತ್ವಗಳನ್ನು ಬೋಧಿಸುತ್ತಿದ್ದುದಲ್ಲದೇ ಅದರಂತೆ ನಡೆದುಕೊಳ್ಳುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ ದವಸ, ಧಾನ್ಯ, ಹಣ, ಆಶ್ರಯ ಧಾರಾಳವಾಗಿ ನೀಡಿ ಹೋರಾಟಕ್ಕೆ ಎಲ್ಲಿಲ್ಲದ ಪುಷ್ಟಿ ಕೊಟ್ಟರು. ವಿದೇಶಿ ವಸ್ತುಗಳ ಬಹಿಷ್ಕಾರ, ಉಪ್ಪಿನ ಸತ್ಯಾಗ್ರಹ, ಪಾನ ನಿರೋಧ, ಕರನಿರಾಕರಣೆ, ಅಸ್ಪೃಶ್ಯತಾ ನಿವಾರಣೆ ಮುಂತಾದ ಹತ್ತು ಹಲವು ಸಾಮಾಜಿಕ ರಾಜಕೀಯ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು ೧೯೪೧ರಲ್ಲಿ ಬಂಧಿಸಲ್ಪಟ್ಟು, ಆರು ತಿಂಗಳ ಕಾಲ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಶಿಕ್ಷೆ ಅನುಭವಿಸಬೇಕಾಯಿತು. ೧೯೪೨ರ ಚಲೇಜಾವ್ ಚಳುವಳಿಯಲ್ಲಿ ಪುನಃ ಬಂಧಿಸಲ್ಪಟ್ಟರು. ಹೋರಾಟದ ಅವಧಿಯಲ್ಲಿ ಅನೇಕ ಮಿತ್ರರು ಬಂಧನಕ್ಕೆ ಒಳಗಾದಾಗ, ಅವರ ಮನೆತನದ ಕಾಳಜಿವಹಿಸಿ ಅಪರೂಪದ ವ್ಯಕ್ತಿತ್ವವನ್ನು ಮೆರೆದಿದ್ದಾರೆ.

ಮಲೆನಾಡಿನ ಹೋರಾಟಗಾರರಾದ ಎಂ.ಪಿ. ಪಾಟೀಲ, ರಾಮರಾವ್ ಹುಕ್ಕೇರಿಕರ, ಮಹಾದೇವಪ್ಪ ಮೈಲಾರ ಮುಂತಾದವರೊಂದಿಗೆ ಜೈಲು ದಿನಗಳನ್ನು ಕಳೆದರು. ಇವರ ಗರಡಿಯಲ್ಲಿ ಪಳಗಿ ಸ್ವಾತಂತ್ರ್ಯ ಹೋರಾಟ ಮಾಡಿದ ಅನೇಕ ದಿಗ್ಗಜರನ್ನು ಈಗಲೂ ಕಾಣಬಹುದು.

**ಸ್ವಾತಂತ್ರ್ಯಾನಂತರದ ದಿಟ್ಟ ಹೆಜ್ಜೆಗಳು**

ಸ್ವತಂತ್ರ ಭಾರತದ ಹೊಸ ಗಾಳಿಯ ರುಚಿ ಆಸ್ವಾದಿಸುತ್ತಾ ಮುಂದಿನ ದಿನಗಳನ್ನು ಗ್ರಾಮೀಣರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸುಧಾರಣೇಗಳಿಗಾಗಿ ತಮ್ಮ ಹೋರಾಟವನ್ನು ಮುಂದುವರೆಸಿದರು. ರಾಜಕೀಯ ಅಧಿಕಾರವು ಮುತ್ಸದ್ಧಿಯ ಕೈಯಲ್ಲಿ ಸಾರ್ವಜನಿಕರ ಉದ್ಧಾರಕ್ಕಾಗಿ ಸದ್ಬಳಕೆಯಾಗುತ್ತದೆ ಎಂಬುದಕ್ಕೆ ಸಿದ್ಧಪ್ಪನವರು ಉದಾಹರಣೆಯಾಗಿದ್ದಾರೆ.

೧೯೪೯ - ೫೯ ಅವಧಿಯಲ್ಲಿ ಧಾರವಾಡ ಜಿಲ್ಲಾ ರೂರಲ್ ಡೆವಲಪ್ ಮೆಂಟ್ ಬೋರ್ಡ್ ಸದಸ್ಯರಾಗಿ ಗ್ರಾಮಗಳ ಸುಧಾರಣೆ ಮಾಡಿದರು.

೧೯೫೨ರ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಜಯಗಳಿಸಿ ಹಾನಗಲ್ಲು ತಾಲೂಕಿನ ಪ್ರಥಮ ಶಾಸಕರಾಗಿ ಮುಂಬೈ ವಿಧಾನ ಸಭೆಯನ್ನು ಪ್ರವೇಶಿಸಿದರು.

೧೯೩೫ - ೬೦ರ ಅವಧಿಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಸದಸ್ಯರಾಗಿ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷರಾಗಿ ಕೆ.ಪಿ.ಸಿ.ಸಿ. ಸದಸ್ಯರಾಗಿ ಕಾಂಗ್ರೆಸ್ ಪಕ್ಷದ ಬಲಸಂವರ್ಧನೆಗೆ ಶ್ರಮಿಸಿದರು. ಅಲ್ಲದೆ ಮಲೆನಾಡು ಪ್ರಗತಿ ಕಮಿಟಿ ಸದಸ್ಯರಾಗಿ ಸೇವೆ ಸಲ್ಲಿಸಿದರು. ಅದರ ಮೂಲಕ ಅನೇಕ ಅಭಿವೃದ್ಧಿ ಪರ ಯೋಜನೆಗಳು ಜಾರಿಗೆ ಬಂದವು.

ಕಲ್ಲಾಪೂರದ ನರಸಿಂಗರಾವ್ ದೇಸಾಯಿಯವರು ಹಾನಗಲ್ಲು ತಾಲೂಕಿನ ಸಾಮಾಜಿಕ ಕಳಕಳಿಯುಳ್ಳ ಧುರೀಣರಾಗಿದ್ದರು. ಇವರು ೧೯೧೩ರಿಂದಲೇ ಯಮಗಳ್ಳಿ ನೀರಾವರಿ ಯೋಜನೆಯ ಕನಸನ್ನು ಕಂಡು, ಅದಕ್ಕಾಗಿ ಅವಿರತ ಹೋರಾಡಿದರು. ಅವರನ್ನು ತಮ್ಮ

ರಾಜಕೀಯ ಗುರು ಎಂದೇ ಗೌರವಿಸುತ್ತಿದ್ದ ಸಿದ್ಧಪ್ಪನವರು, ಆ ಯೋಜನೆಯನ್ನು ಸಾಕಾರಗೊಳಿಸಲು ೫೦ರ ದಶಕದಲ್ಲಿ ಹೋರಾಡಿ ಯಶಸ್ವಿಯಾದರು. ಈ ದಿಶೆಯಲ್ಲಿ ಇವರಿಗೆ ಗುರುರಾವ್ ದೇಸಾಯಿಯವರು ಸಂಪೂರ್ಣ ಬೆಂಬಲಕ್ಕಿದ್ದರು. ಇಂದು ಈ ಯೋಜನೆಯಿಂದಾಗಿ ಸುಮಾರು ೩೦ ಸಾವಿರ ಎಕರೆ ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಧರ್ಮಾಕಾಲುವೆ ಇಂದು ಹಾನಗಲ್ಲು ತಾಲೂಕಿನ ಜೀವನಾಡಿಯಾಗಿದೆ. ಅನೇಕ ಹಳ್ಳಿಗಳಿಗೆ ರಸ್ತೆಗಳ ನಿರ್ಮಾಣವನ್ನು ಸಾರ್ವಜನಿಕ ಶ್ರಮದಾನದಿಂದ ನಿರ್ಮಿಸಿ, ಸಂಪರ್ಕ ಕಲ್ಪಿಸಿದರು. ಕೂಬಿಹಾಳ ಲಿಂಗಪ್ಪನವರು, ಸಿದ್ಧಪ್ಪನವರಿಗೆ ಸಹಕಾರ ರಂಗದ ಸೇವೆಗೆ ಪ್ರೇರಕ ಶಕ್ತಿಯಾಗಿದ್ದರು. ಸಿದ್ಧಪ್ಪನವರು ಕೆ.ಸಿ.ಸಿ. ಬ್ಯಾಂಕ್ ಡೈರೆಕ್ಟರ್ ರಾಗಿ ಅದರ ಶಾಖೆ ಅಕ್ಕಿಆಲೂರಿನಲ್ಲಿ ಪ್ರಾರಂಭವಾಗುವಂತೆ ಶ್ರಮಿಸಿದರು.

ತಮ್ಮ ಸತತ ಹೋರಾಟದ ಫಲವಾಗಿ ೧೯೫೦ರಲ್ಲಿ ಹಾನಗಲ್ಲು ತಾಲೂಕಿಗೆ ವಿದ್ಯುಚ್ಛಕ್ತಿ ಸೌಲಭ್ಯ ದೊರಕಿತು. ಈ ಭಾಗದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ಶ್ರಮವಹಿಸಿ ದುಡಿದರು. ನೇರವಾಗಿ ಜನರ ದೈನಂದಿನ ಜೀವನದಲ್ಲಿ ಅನುಕೂಲವಾಗುವ ಅನೇಕ ವ್ಯವಸ್ಥೆಗಳನ್ನು ಹಾನಗಲ್ಲು ತಾಲೂಕಿಗೆ ತರಲು ಪ್ರಯತ್ನಿಸಿದರು.

**ವಿದ್ಯಾದಾನ**

ಗುರುರಾವ್ ದೇಸಾಯಿ ಕಲ್ಲಾಪುರ ಮತ್ತು ಸಿಂಧೂರ ಸಿದ್ಧಪ್ಪನವರ ಅಭಿವೃದ್ಧಿಯಿಂದ ಹಾನಗಲ್ಲು ತಾಲೂಕಿನಲ್ಲಿ ಅನೇಕ ಬೆಳವಣಿಗೆಗಳುಂಟಾದವು. ೧೯೫೦ರಲ್ಲಿ ಹಾನಗಲ್ಲು ತಾಲೂಕು ಶಿಕ್ಷಣ ಸಂಘವು ಅಕ್ಕಿಆಲೂರಿನಲ್ಲಿ ಪ್ರಾರಂಭಗೊಂಡಿತು. ದೇಸಾಯಿಯವರು ಸಂಸ್ಥಾಪಕ ಅಧ್ಯಕ್ಷರಾಗಿ, ಸಿದ್ಧಪ್ಪನವರು ಪ್ರಧಾನ ಕಾರ್ಯದರ್ಶಿಗಳಾಗಿ ಶೈಕ್ಷಣಿಕವಾಗಿ ಆ ಸಂಸ್ಥೆ ಬೆಳೆಯಲು ಶ್ರಮಿಸಿದರು. ನರಸಿಂಗರಾವ್ ದೇಸಾಯಿ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯವು ಇವರ ಸಾಧನೆಗೆ ಒಂದು ನಿದರ್ಶನ. ದೇಸಾಯಿಯವರು ಅಪಾರ ಜಮೀನನ್ನು ಈ ಸಂಘಕ್ಕೆ ದೇಣಿಗೆಯಾಗಿ ನೀಡಿದರು.

ಮಹಿಳಾ ಶಿಕ್ಷಣಕ್ಕೆ ಮಹತ್ವ ನೀಡುವ ಉದ್ದೇಶದಿಂದ ೧೯೬೭ರಲ್ಲಿ ಪ್ರತ್ಯೇಕ ಹೆಣ್ಣುಮಕ್ಕಳ ಪ್ರೌಢ ಶಾಲೆಯನ್ನು ಅಕ್ಕಿಆಲೂರಿನಲ್ಲಿ ಪ್ರಾರಂಭಿಸಿದರು. ಅದು ೧೯೮೩ರಲ್ಲಿ ಪದವಿಪೂರ್ವ ಮಹಾವಿದ್ಯಾಲಯವಾಗಿ ಮೇಲ್ದರ್ಜೆಗೇರಿತು. ಇಂದು ಸಿಂಧೂರ ಸಿದ್ಧಪ್ಪ ಹೆಣ್ಣು ಮಕ್ಕಳ ಪದವಿಪೂರ್ವ ಮಹಾವಿದ್ಯಾಲಯವೆಂದು ನಾಮಕರಣಗೊಂಡಿದೆ.

ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ಅನ್ನ, ಆಶ್ರಯ ನೀಡುವ ಉದ್ದೇಶದಿಂದ ಇತರರ ಸಹಕಾರದೊಂದಿಗೆ ೧೯೫೦ರಲ್ಲಿ ಶ್ರೀ ಚೆನ್ನವೀರೇಶ್ವರ ಪ್ರಸಾದ ನಿಲಯ ಎಂಬ ಪಬ್ಲಿಕ್ ಟ್ರಸ್ಟನ್ನು ಪ್ರಾರಂಭಿಸಲು ಸ್ಫೂರ್ತಿಯಾದರು. ಇಂದು ಈ ನಿಲಯವು ೧೦೦ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದೆ. ಇವರು ಕೈಗೊಂಡ ಶೈಕ್ಷಣಿಕ ಸುಧಾರಣೆಗಳು ಇತರ ಜಿಲ್ಲೆಗಳಿಗೆ ಮಾದರಿಯಾಗಿವೆ.

**ದೂರದರ್ಶಿತ್ವ**

ಸಿದ್ಧಪ್ಪನವರು ಸಿದ್ಧಾಂತ ಮತ್ತು ದೂರದರ್ಶಿಯಾಗಿದ್ದರು. ಈ ತಾಲೂಕಿನ ಸರ್ವಾಂಗೀಣ ಪ್ರಗತಿಗಾಗಿ ಅನೇಕ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ಯಮಗಳ್ಳಿ ಜಲಾಶಯವನ್ನು ವಿಸ್ತರಿಸಬೇಕೆಂಬ ಮತ್ತು ಬನವಾಸಿ ಹತ್ತಿರ ನದಿಗೆ ಬ್ಯಾರೇಜ್ ನಿರ್ಮಿಸಿ ಹೆಚ್ಚಿನ ನೀರನ್ನು ಯಮಗಳ್ಳಿ ಜಲಾಶಯಕ್ಕೆ ತಂದು ವರ್ಷದುದ್ದಕ್ಕೂ ನೀರಾವರಿ ಸೌಲಭ್ಯ ಕಲ್ಪಿಸುವ ಮಹತ್ವಾಕಾಂಕ್ಷೆ ಅವರದಾಗಿತ್ತು.

ಹಾನಗಲ್ಲು ತಾಲೂಕಿನ ಗುಡ್ಡದ ಹಳ್ಳಿಗಳು ನೀರಾವರಿಯಿಂದ ವಂಚಿತವಾಗಿದ್ದರಿಂದ ಈ ಪ್ರದೇಶಕ್ಕೆ ಮಾಸೂರು ಕೆರೆಯ ನೀರಿನ ಸೌಲಭ್ಯವನ್ನು ಒದಗಿಸಬೇಕು ಹಾಗೂ ಕೃಷಿ ಪ್ರಧಾನವಾದ ಈ ಭಾಗದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪನೆಯಾಗಬೇಕೆಂಬ ಬಯಕೆಯನ್ನು ಹೊಂದಿದ್ದರು. ಹಳ್ಳಿಗಳು ಮತ್ತು ಗ್ರಾಮೀಣ ಉದ್ಯೋಗಗಳು ಪುನಶ್ಚೇತನಗೊಳ್ಳಬೇಕೆಂಬ ಉದ್ದೇಶದಿಂದ ಸರಕಾರದೊಂದಿಗೆ ಸಾಕಷ್ಟು ಸಂಪರ್ಕವನ್ನು ಇಟ್ಟುಕೊಂಡಿದ್ದರು.

೮೨ ವರ್ಷಗಳ ಸಾರ್ಥಕ ಜೀವನವನ್ನು ಸಿದ್ಧಪ್ಪನವರು ನಡೆಸಿದರು. ಗ್ರಾಮೀಣ ಪ್ರದೇಶದಲ್ಲಿ ಜನಿಸಿ, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ, ಪ್ರಥಮ ದರ್ಜೆಯ ಮುತ್ಸದ್ಧಿಯಾಗಿ ಹೊರಹೊಮ್ಮಿದರು. ಇವರ ಮತ್ತೊಂದು ಹೆಸರೇ ನಿಷ್ಠುರತೆ. ಸಾರ್ವಜನಿಕ ಹಿತದ ಮುಂದೆ ಖಾಸಗಿ ಆಶೆ ಆಕಾಂಕ್ಷೆಗಳನ್ನು ಗೌಣವಾಗಿ ಕಂಡರು. ದೇಶಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿ ಬಾಳಿದರು. ತಮ್ಮ ಜೀವಿತಾವಧಿಯಲ್ಲಿ ಅನೇಕ ಮಾನ ಸಮ್ಮಾನಗಳನ್ನು ಕಂಡು ಹಿಗ್ಗದೆ ಇನ್ನೂ ಸಾಧಿಸಬೇಕಾದುದು ಸಾಕಷ್ಟಿದೆ ಎಂದು ಚಿಂತಿಸುತ್ತಿದ್ದರು. ಬಹುಮುಖ ವ್ಯಕ್ತಿತ್ವದಿಂದಾಗಿ ಆಕಾಶದೆತ್ತರಕ್ಕೆ ಬೆಳೆದುದು ಒಂದು ರೋಚಕ ಇತಿಹಾಸವಾಗಿದೆ.

**ಜಿ.ಎನ್. ದೇಸಾಯಿ**

ಹಾನಗಲ್ಲು ತಾಲೂಕಿನ ಪಿತಾಮಹನೆಂದು ಹೆಸರುವಾಸಿಯಾದ ದಿವಂಗತ ಜಿ.ಎನ್. ದೇಸಾಯಿಯವರು ಶ್ರೀಮಂತ ಮನೆತನದಲ್ಲಿ ಜನಿಸಿದರು. ತಂದೆ ನರಸಿಂಗರಾವ್, ತಾಯಿ ತುಂಗಾಬಾಯಿ. ಇವರು ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಹೋರಾಟವನ್ನು ಮಾಡಿದರು. ಸಿಂಧೂರ ಸಿದ್ಧಪ್ಪನವರೊಂದಿಗೆ ರಾಷ್ಟ್ರಕ್ಕಾಗಿ ಚಳುವಳಿಯನ್ನು ಮಾಡಿ ೧೯೬೨ರಲ್ಲಿ ಶಾಸಕರಾದರು. ಎರಡು ಬಾರಿ ಶಾಸಕರಾಗಿ ಹಾನಗಲ್ಲು ತಾಲೂಕಿನ ಸರ್ವಾಂಗೀಣ ಬೆಳವಣಿಗೆಗೆ ಹೋರಾಡಿದರು. ಹಳ್ಳಿಗಳಿಗೆ ಭೇಟಿಯನ್ನಿಟ್ಟು ಗ್ರಾಮೀಣ ಜನತೆಯ ಕುಂದು ಕೊರತೆಗಳನ್ನು ನಿವಾರಿಸುತ್ತಿದ್ದರು. ಧಾರ್ಮಿಕ ಕ್ಷೇತ್ರಕ್ಕೆ ಹಾಗೂ ದೇವಾಲಯಗಳಿಗೆ ಅನೇಕ ದಾನ - ದತ್ತಿಗಳನ್ನು ನೀಡಿದ್ದಾರೆ. ತಮ್ಮ ೧೦ ಎಕರೆ ಜಮೀನು ಮಾರಿ ಅಕ್ಕಿಆಲೂರಿನ ವಿದ್ಯಾಸಂಸ್ಥೆಯ ಕಾಲೇಜು ಕಟ್ಟಡಕ್ಕೆ ಸಹಾಯ ಮಾಡಿದರು. ಧರ್ಮಾ ಜಲಾಶಯದ ನಿರ್ಮಾಣ ಇವರ ಮಹತ್ವದ ಕಾರ್ಯಗಳಲ್ಲೊಂದಾಗಿದೆ.

ಹೀಗೆ ಹಾನಗಲ್ಲು ಪರಿಸರ ಆಧುನಿಕ ಕಾಲದಲ್ಲೂ ಪ್ರಮುಖ ಚಾರಿತ್ರಿಕ ಘಟನಾವಳಿಯನ್ನು ಹೊಂದಿದೆ. ಈ ಎಲ್ಲ ಅಂಶಗಳು ಇನ್ನೂ ಹೆಚ್ಚಿನ ಅಧ್ಯಯನದ ಅವಶ್ಯಕತೆಯನ್ನು ಸೂಚಿಸುತ್ತವೆ.

# ೭. ಸಮಾಜ

ಪರಸ್ಪರ ಸಂಬಂಧವುಳ್ಳ ಜನತೆಯ ವ್ಯವಸ್ಥಿತ ಸಮೂಹವನ್ನು ಸಮಾಜವೆಂದು ಕರೆಯಬಹುದು. ಅವರಲ್ಲಿ ವರ್ಣ - ವರ್ಗ, ಕುಟುಂಬ, ಸಂಘ - ಸಂಸ್ಥೆ ಮತ್ತು ಅವುಗಳ ಆಲೋಚನಾ ಕ್ರಮ ಇತ್ಯಾದಿ ಅಂಶಗಳಿದ್ದು, ಅವು ಆಯಾ ಸಾಮಾಜಿಕ ಒಪ್ಪಿತ ಮೌಲ್ಯಕ್ಕೆ ಬದ್ಧವಾಗಿರುತ್ತವೆ. ಅಂದರೆ ಅನುಕೂಲ ಮತ್ತು ಭದ್ರತೆಗೆ ಒಂದು ಬಗೆಯ ಒಪ್ಪಂದವೇರ್ಪಟ್ಟಿರುತ್ತದೆ. ಈ ವ್ಯವಸ್ಥೆಯು ವೇದಪೂರ್ವ, ವೇದ ಮತ್ತು ವೇದೋತ್ತರ ಕಾಲದಿಂದ ಮುನ್ನಡೆದುಕೊಂಡು ಬಂದಿದ್ದು, ಅದರಲ್ಲಿ ಮಹತ್ತರವಾದ ಬದಲಾವಣೆಗಳೇನೂ ಕಾಣುವುದಿಲ್ಲವಾದರೂ, ಸಂದರ್ಭಕ್ಕೆ ತಕ್ಕಂತೆ ಕೆಲವು ಬದಲಾವಣೆಗಳು ಕಾಲಕಾಲದಲ್ಲಿ ಕಾಣಬಹುದಾಗಿದೆ. ಈ ಬದಲಾವಣೆಗಳನ್ನು ಗುರುತಿಸುವಲ್ಲಿ ಆಯಾ ಕಾಲದ ಶಾಸನ, ಸಾಹಿತ್ಯ, ಪ್ರಚ್ಯಾವಷೇಶ ಮುಂತಾದ ಆಕರಗಳು ಉಪಯುಕ್ತವಾದ ಮಾಹಿತಿಯನ್ನು ಒದಗಿಸುತ್ತವೆ.

**ವರ್ಗ – ವರ್ಣ – ಜಾತಿ**

ಪ್ರಾಚೀನ ವರ್ಣಪದ್ಧತಿ ರೂಪಗೊಳ್ಳುವುದಕ್ಕಿಂತ ಮೊದಲು ಸಮಾಜವನ್ನು ವೃತ್ತಿಗನುಗುಣವಾದ ವರ್ಗೀಕರಣ ಮಾಡಲಾಗಿತ್ತು. ಈ ವೃತ್ತಿಗಳು ತೀರ ಪ್ರಾಚೀನ ಕಾಲದಲ್ಲಿಯೇ ಜಾತಿಗಳಾಗಿ ರೂಪುಗೊಂಡಿದ್ದವೇ ಎಂಬುದರ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯವಿದೆ. ಅಲ್ಲದೆ ಈ ವೃತ್ತಿಗಳು ವಂಶಾನುಗತಗಳಾಗಿದ್ದವೆಂದು ತೋರಿಸಲು ಯಾವ ಆಧಾರಗಳೂ ಇಲ್ಲ. ಹಾಗೆ ನೋಡಿದರೆ ವರ್ಣ ಎಂಬ ಶಬ್ದ ಜಾತಿಸೂಚಕವಾಗಿರದೆ, ಅದು ಹೊರಗಿನಿಂದ ಬಂದ ಆರ್ಯರು ಮತ್ತು ಇಲ್ಲಿನ ಮೂಲನಿವಾಸಿಗಳ ನಡುವಣ ವ್ಯತ್ಯಾಸವನ್ನು (ಭಾಷೆ, ಮತ,ಧರ್ಮ,ಬಣ್ಣ,ಆಕಾರಗಳಲ್ಲಿ) ಸೂಚಿಸುವ ಪದವಾಗಿತ್ತೆಂದು ತಿಳಿಯಲಾಗಿದೆ. ನಂತರದಲ್ಲಿ ವಿವಿಧ ವೃತ್ತಿಗಳಲ್ಲಿನ ಭೇದವು

ಸಾಮಾಜಿಕವಾಗಿ ಮೇಲು-ಕೀಳು ಭಾವನೆಗೆ ಎಡೆಮಾಡಿ, ಚಾತುರ್ವರ್ಣಗಳಿಗೆ ಹಾದಿ ಮಾಡಿಕೊಟ್ಟಿರುವಂತಿದೆ. ಈ ವ್ಯವಸ್ಥೆ ಬ್ರಾಹ್ಮಣಗಳ ಕಾಲಕ್ಕೆ ಇನ್ನಷ್ಟು ಬಿಗಿಗೊಳಿಸಲ್ಪಟ್ಟು ವೃತ್ತಿ ವ್ಯತ್ಯಾಸ ಹಿಮ್ಮೆಟ್ಟಿ ವ್ಯಕ್ತಿಯ ಹುಟ್ಟು, ವರ್ಣವನ್ನು ನಿರ್ಣಯಿಸುವಂತಾಯಿತು.

[1]

ಪ್ರಾಚೀನ ಕರ್ನಾಟಕದಲ್ಲಿ ವರ್ಣಪದ್ಧತಿಯ ಪರಿಪಾಲನೆಯು ಬಹುಮಟ್ಟಿಗೆ ಕಡಿಮೆಯಾಗಿದ್ದು ತಿಳಿದುಬರುತ್ತದೆ. ಹಾನಗಲ್ಲು ಶಾಸನಗಳಲ್ಲಿ ಅದು ಸಾಂಪ್ರದಾಯಿಕವಾಗಿ ಉಲ್ಲೇಖಗೊಂಡಿದ್ದರೂ, (ಕ್ರಿ.ಶ. ೧೧೧೯ರ ಶಾಸನದಲ್ಲಿ ಬ್ರಾಹ್ಮಣರಿಗೆ ಕೊಟ್ಟ ಫ, ಕ್ರಿ.ಶ. ೧೧೧೯ರ ಇನ್ನೊಂದು ಶಾಸನದಲ್ಲಿ "ವೇದಪಾರಗರಪ್ಪ ಬ್ರಾಹ್ಮಣರಿಗೆ ಉಭಯಮುಖಿ ಕೊಟ್ಟ ಫಲಮಕ್ಕು.... ದೊಳು ಕವಿತಿಯ ಬ್ರಾಹ್ಮಣರುವಕೊಂದು ಪಂಚಮಹಾ ಪಾ....)[2] ಆಚರಣೆಯಲ್ಲಿರಲಿಲ್ಲ. ಬೇರೆ ಬೇರೆ ವೃತ್ತಿ - ಜಾತಿಗಳ ಜನರು ಊರಿನ ಬೇರೆ ಬೇರೆ ಕೇರಿ, ಬೀದಿಗಳಲ್ಲಿ ವಾಸಿಸುತ್ತಿದ್ದ ಪ್ರಸ್ತಾಪ ಹಾನಗಲ್ಲು ಶಾಸನಗಳಿಂದ ವ್ಯಕ್ತವಾಗುತ್ತದೆ. ಕ್ರಿ.ಶ. ೧೨ನೆಯ ಶತಮಾನದ ಶಾಸನವೊಂದರಲ್ಲಿ "ಶ್ರೀ ನನ್ದನ ಪಿಳ್ಳೆಯ ರಾಮೇಸ್ವರ ದೇವರ ತಿಗುಳಬೆವಹಾರಿಗಳ ಕೇರಿಯ ಸೀಮೆ"[3] (ತಮಿಳು ವರ್ತಕರ ಓಣಿಯ ಸೀಮೆ) ಎಂದು ಉಲ್ಲೇಖಿಸಿರುವುದರನ್ನು ಗಮನಿಸಿದರೆ, ಎಲ್ಲ ಕಾಲದಲ್ಲಿಯೂ ಕುಲ ಮತ್ತು ವೃತ್ತಿ, ಸಮಾಜದಲ್ಲಿ ಮೇಲು - ಕೀಳುಗಳೆಂಬ ವರ್ಗಬೇಧವನ್ನುಂಟುಮಾಡಿದ್ದನ್ನು ಕಾಣಬಹುದು.

**ಪ್ರಭುವರ್ಗ**

ಹಾನಗಲ್ಲಿನ ಶಾಸನಗಳ ಹಿನ್ನೆಲೆಯಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಪ್ರಭುವರ್ಗ ಹಾಗೂ ಶ್ರಮಿಕವರ್ಗವೆಂದು ಸ್ಥೂಲವಾಗಿ ಎರಡು ವಿಭಾಗಗಳಲ್ಲಿ ವಿಂಗಡಿಸಬಹುದು. ಪ್ರಭುವರ್ಗದಲ್ಲಿ ರಾಜ, ಪುರೋಹಿತ, ಸಾಮಂತ, ಮಹಾಮಂಡಳೇಶ್ವರ ಹಾಗೂ ಅವರ ವಿವಿಧ ಅಧಿಕಾರಿಗಳನ್ನೊಳಗೊಂಡು, ಇವೆರಡೂ ವರ್ಗಗಳ ಮಧ್ಯದ ವ್ಯಾಪಾರಿಗಳು ತಮ್ಮ ಆರ್ಥಿಕ ಸುಸ್ಥಿತಿಯಿಂದ ಪ್ರಭುವರ್ಗವನ್ನೇ ಪ್ರತಿನಿಧಿಸುತ್ತಾರೆ. ಅಲ್ಲದೇ ಸಮಾಜ ವ್ಯವಸ್ಥೆಯಲ್ಲಿ ಉನ್ನತ ಸ್ತರದಲ್ಲಿರುವ ವಿವಿಧ ಮತಗಳ ಪುರೋಹಿತರು, ಧರ್ಮ ಮತ್ತು ರಾಜಧರ್ಮವನ್ನು ನಿಯಂತ್ರಿಸುತ್ತಿದ್ದರು. ಅವರಲ್ಲಿ ಮಹಾಜನರು, ಸ್ಥಾನಾಚಾರ್ಯರು ಪ್ರಮುಖರಾಗಿದ್ದಾರೆ. ಶ್ರಮಿಕವರ್ಗದಲ್ಲಿ ಸಮಾಜದ ವಿವಿಧ ವೃತ್ತಿಗಳನ್ನು ಕೈಕೊಂಡ ಜನಸಾಮಾನ್ಯರಿದ್ದರು.

ಹಾನಗಲ್ಲಿನ ಶಾಸನಗಳಲ್ಲಿ 'ಕಾದಂಬ ಚಕ್ರವರ್ತಿ ಕಾಮದೇವರಸ[4] ಶ್ರೀಮನ್ಮಹಾಮಣ್ಡಳೇಶ್ವರಂ ತೈಲಪದೇವರಸರು ಬನವಾಸಿ ಪನ್ನಿರ್ಚ್ಛಾಸಿರಮುಮಂ ಪಾನುಂಗಲ್ಲಯ್ನೂಱುಮಂ ಸರ್ಬಾಭ್ಯನ್ತರ ಸಿದ್ಧಿಯಿಂ (ಉ) ಭಯಸಾಮ್ಯವನಾಳುತ್ತವಿರೆ[5] ಇತಹ ಹಲವಾರು ಪ್ರಭುವರ್ಗದವರನ್ನು ಶಾಸನಗಳು ಉಲ್ಲೇಖಿಸುತ್ತವೆ.

**ಮಹಾಜನರು**

ಅಂದಿನ ಸಮಾಜದಲ್ಲಿ ಅಗ್ರಸ್ಥಾನದಲ್ಲಿದ್ದು, ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಣಗಳೆಂಬ ಷಟ್ಕರ್ಮಗಳು ಅವರ ಬಹುಮುಖ್ಯ ಕರ್ತವ್ಯಗಳಾಗಿದ್ದವು. ಅವುಗಳ ಪ್ರಸ್ತಾಪ ಹಾನಗಲ್ಲು ಪರಿಸರದ ಶಾಸನಗಳಲ್ಲಿ ಬಂದಿದೆ.[6] ಬ್ರಾಹ್ಮಣ ವರ್ಗದವರು ಶ್ರೇಷ್ಠರೆಂದು ತೋರಿಸಲು ಶಾಸನಗಳು "ಇನ್ತೀಧರ್ಮ್ಮ ಮನಾರೊರ್ಬ್ಬರು ತಪ್ಪದೆ ಪ್ರತಿಪಾಳಿಸಿದರು ಕುರುಕ್ಷೇತ್ರದೊಳಂ ವಾರಾಣಾಸಿಯಲುಂ ಪ್ರಯಾಗದಲುಂ ಅರ್ಗ್ಘ್ಯ ತೀರ್ಥದಲುಂ ಗಂಗೆಯ ತಡಿಯಲ್ವೇದಪಾರಗಬ್ರಾಹ್ಮರ್ಗ್ಗೆ ತಪೋಧನರಾಸಾಸಿರ ಕವಿಲೆಯಕೊಂದಂ ಕೊಳಗುವಂ ಪೊನ್ನಲುಂ ಬೆಳ್ಳಿಯಲುಂ ಕಟ್ಟಿಸಿಕೊಟ್ಟ ಫಳವಕು ಧರ್ಮ್ಮಮ (ನಾ)ರೊರ್ಬ್ಬರಳಿದವರು ಕುರುಕ್ಷೇತ್ರದೊಳಂ ವಾರಾಣಾಸಿಯಲುಂ ಅರ್ಗ್ಘ್ಯ ತೀರ್ಥ್ಧದಲುಂ ಪ್ರಯಾಗೆಯಲುಂ ಗ(ಂ)ಗೆಯ ತಡಿಯಲುಂ ಬ್ರಾಹ್ಮಣರಂ ತಪೋಧನರಂ ಕವಿಲೆಯಮಂನಳಿದ ದೋಷಾಸಾರ್ಗ್ಗು[7] ಎಂದು ವರ್ಣಿಸಲಾಗಿದೆ.

ಸಮಾಜದಲ್ಲಿ ಉನ್ನತಸ್ಥಾನ ಹೊಂದಿದ ಮಹಾಜನರು ಕೇವಲ ಧಾರ್ಮಿಕ ಕಾರ್ಯಗಳಲ್ಲಿ ಮಾತ್ರವಲ್ಲದೇ ಸಾಮಾಜಿಕ ಮತ್ತು ಆಡಳಿತ ಕಾರ್ಯಗಳಲ್ಲೂ ಸಹ ಭಾಗವಹಿಸಿ ಪ್ರಮುಖ ಸ್ಥಾನವನ್ನು ಹೊಂದಿದ್ದರು. ಇದನ್ನು ಸಮರ್ಥಿಸುವಂತೆ ಹಾನಗಲ್ಲಿನ ಶಾಸನವೊಂದು

ಬೊಮ್ಮಗೌಡನು ಶ್ರೀ ಅಮರೇಶ್ವರ ದೇವರ ಕೃಪೆಯಿಂದ ಸೆಂಬೊಳದ ಗೌಡಿಕೆಯನ್ನು ಪಡೆಯುವಾಗ ನರೆಯಂಗಲ್ಲ ಮಹಾಜನರು ಆಲೂರ ಮಾಹಾಜನರು ಹೀಗೆ ಹಲವಾರು ಸ್ಥಳಗಳ ಮಹಾಜನರ ಸಮ್ಮುಖದಲ್ಲಿ ಅಧಿಕಾರ ಪಡೆದನೆಂದು ವಿವರಿಸಿದೆ.[8] ಇದರಿಂದ ಸಮಾಜದಲ್ಲಿ ಮಹಾಜನರಿಗೂ ಗೌರವದ ಸ್ಥಾನವಿರುವುದು ವಿಧಿತವಾಗುತ್ತದೆ.

**ಸ್ಥಾನಾಚಾರ್ಯರು**

ಶೈವ ಸಂಪ್ರದಾಯದ ಪಾಶುಪತ, ಕಾಳಮುಖ ಪಂಗಡಕ್ಕೆ ಸೇರಿದ ದೇವಸ್ಥಾನ ಹಾಗೂ ಮಠಗಳ ಆಚಾರ್ಯರೇ ಸ್ಥಾನಾಚಾರ್ಯರು. ಇವರು ಸ್ಥಾನಪತಿಗಳೆಂದು ಕರೆಯಿಸಿಕೊಂಡಿದ್ದಾರೆ. ಇವರು ರಾಜಪ್ರಭುತ್ವ ಮತ್ತು ಸಮಾಜ ಗೌರವದಿಂದ ತಮ್ಮ ಪ್ರಾಬಲ್ಯವನ್ನು ಸಾಧಿಸಿದರು. ಸ್ಥಾನಾಚಾರ್ಯರಲ್ಲಿ ಕೆಲವರು ಬ್ರಹ್ಮಚಾರಿಗಳಾಗಿ ತಪಸ್ಸಾಧಕರಾಗಿದ್ದು, ದೇವಾಲಯ ಹಾಗೂ ಮಠಗಳ ಆಡಳಿತ ನೋಡಿಕೊಳ್ಳುತ್ತಿದ್ದರು. ಇವರನ್ನು ಶಾಸನಗಳು "ಸ್ವಸ್ತಿಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ ಮೋನಾನುಷ್ಠಾನ ಸಮಾಧಿಶೀಳಗುಣಸಂಪಂನ"ರೆಂದು ಕರೆದಿವೆ.[9] ಹಾನುಗಲ್ಲಿನ ಬಿಲ್ಲೇಶ್ವರ ದೇವಾಲಯದ ಸ್ಥಾನಪತಿಗಳಾಗಿದ್ದ ಚಂದ್ರಭೂಷಣದೇವರನ್ನು ಧ್ಯಾನಧಾರಣ ಮೋನಾನುಷ್ಠಾನ ಜಪಸಮಾಧಿಶೀಲ ಗುಣಸಂಪನ್ನರು ಸಕಳಬುಧಜನ ಪ್ರಸನ್ನರು ಧರ್ಮಲತಾಧಾರ ದಂಡರುಮಪ್ಪ ಚಂದ್ರಬೂಷಣಂ" ಎಂದು ಹೇಳಿದೆ.[10]

ದೇವಾಲಯಗಳ ಪೂಜೆಗಳ ಜೊತೆಯಲ್ಲಿ, ಅಲ್ಲಿ ಓದುತ್ತಿದ್ದ ತಪೋಧನರ ಊಟೋಪಚಾರಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು. ಇವರಿಗೆ ಹೇರಳವಾಗಿ ದಾನ ಬಿಟ್ಟಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಮಹಾಮಂಡಳೇಶ್ವರ ತೈಲಪದೇವನ ಆಳ್ವಿಕೆಯಲ್ಲಿ ಹಾನುಗಲ್ಲಿನ ಪರಿಸರದ ಎಡೆವೊಳಲು ಎಪ್ಪತ್ತರ ಭಾಗ ಪಿರಿಯೂರ ನಾಲ್ವರು ಗಾವುಂಡರು ಗಡಿಯಂಕಮಲ್ಲನ ಬೀಡಿನಲ್ಲಿ ಸೋಮೇಶ್ವರ ದೇವಸ್ಥಾನ ನಿರ್ಮಾಣ ಮಾಡಿಸಿ, ಅದನ್ನು ಚಂದ್ರಭೂಷಣ ಪಂಡಿತರ ಪಾದತೊಳೆದು ಅರ್ಪಿಸಿರುವರು.[11] ಮಹಾಮಂಡಳೇಶ್ವರ ತೈಲಪದೇವನು ಬನವಾಸಿ-೧೨೦೦೦ ಹಾನುಂಗಲ್-೫೦೦ ಆಳುತ್ತಿದ್ದಾಗ, ಬಿಲ್ಲೇಶ್ವರ ದೇವರಿಗಾಗಿ ದೇವರಾಶಿ ಪಂಡಿತರಿಗೆ ದಾನ ನೀಡಿರುವುದನ್ನು ಕ್ರಿ.ಶ. ೧೧೧೯ರ ಶಾಸನದಲ್ಲಿದೆ.[12]

**ಶ್ರಮಿಕವರ್ಗ**

ವಿವಿಧ ವೃತ್ತಿಗಳನ್ನು ಆಶ್ರಯಿಸಿದ ಕುಶಲಕರ್ಮಿಗಳ ವರ್ಗವೇ ಶ್ರಮಿಕವರ್ಗ. ಇವರು ಸಮಾಜದ ಅನಿವಾರ್ಯ ಮತ್ತು ಅವಿಭಾಜ್ಯ ಅಂಗವಾಗಿದ್ದರು. ಸಮಾಜದ ಅವಶ್ಯಕತೆಗಳನ್ನು ಪೂರೈಸುವಲ್ಲಿ ಈ ವರ್ಗದವರು ಮಹತ್ವದ ಪಾತ್ರವನ್ನು ವಹಿಸಿದ್ದರು. ಕುಶಲಕರ್ಮಿಗಳಲ್ಲಿ ಶಿಲ್ಪಿ, ಬಡಿಗ, ಕಮ್ಮಾರ, ಅಕ್ಕಸಾಲಿಗ, ನಾಪಿತ, ಅಗಸ, ಕುಂಬಾರ, ಚಮ್ಮಾರ ಮುಂತಾದವರಿದ್ದರು. ಅವರು ತಮ್ಮದೇ ಆದ ಸಂಘಗಳನ್ನು ಕಟ್ಟಿಕೊಂಡಿದ್ದರು. ಶಿಲ್ಪಿಗಳು ದೇವಾಲಯ ಹಾಗೂ ಶಿಲ್ಪಗಳನ್ನು ನಿರ್ಮಾಣ ಮಾಡಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಹಾನಗಲ್ಲಿನ ಈಶ್ವರ ದೇವಾಲಯದ ಹತ್ತಿರವಿರುವ ಶಾಸನದಲ್ಲಿ "ಶ್ರೀಮತು ಕವ ೧೫೧೦ನೆಯ ವಿಭವ ಸಂವಛರದ ವಯಿಸಾಖ ಬ ೧೦ ವ ಮಾಧವದೇವರ ಶ್ರೀಮೂರ್ತಿಯ ಹಾವಣಿಗೆಯ ಚಂದೋಜ" ಎಂದಿದೆ.[13] ಅಲ್ಲದೇ ಈ ಪರಿಸರದ ಕಲಕೇರಿಯ ಶಾಸನವು ಶಿಲ್ಪಿಗಳ ವಂಶಾವಳಿಯನ್ನು ಮಾದೋಜ ಅವನ ಮಗ ಚವದೋಜ ಅವನ ಮಗ ನೆದೋಜ ಅವನ ಮಗ ಸೋಮೋಜನ ಮಗ ಕಲ್ಲಪ್ಪ ಬರೆದ ಶಾಸನ ಎಂದು ಉಲ್ಲೇಖಿಸುತ್ತದೆ.[14]

ಬಿಲ್ಲು ವಿದ್ಯೆಯಲ್ಲಿ ನೈಪುಣ್ಯತೆ ಹೊಂದಿ ಬಿಲ್ಲು ಬಾಣಗಳಿಂದ ಯುದ್ಧ ಪ್ರಕ್ರಿಯೆಯಲ್ಲಿ ಪ್ರಭಾವ ಬೀರಿದ್ದ ಬಿಲ್ಲವರು, ಬಿಲ್ಲ ಮೂನ್ನೂರ್ವರೆಂಬ ಸಂಘ ಕಟ್ಟಿಕೊಂಡಿದ್ದರು. ಬಿಲ್ಲೇಶ್ವರದೇವ ಪಾದಾರಾಧಕರಾಗಿದ್ದ ಇವರು ತಮ್ಮ ಸಮಾಜದ ವತಿಯಿಂದ ಕಟ್ಟಿಸಿದ ದೇವಾಲಯಕ್ಕೆ ಬಿಲ್ಲೇಶ್ವರವೆಂದು ಕರೆಯಲಾಗಿದೆ. ಹಾನಗಲ್ಲಿನ ಆನೆಕೆರೆದಂಡೆಯ ಮೇಲಿರುವ ಇದು ತುಂಬ ಕಲಾವೈಭವಪೂರ್ಣವಾದ ದೇವಸ್ಥಾನ. ಇಂದು ಗರ್ಭಗುಡಿ ಮಾತ್ರ ಉಳಿದಿದ್ದು, ಇನ್ನುಳಿದ ಭಾಗ ಹಾಳಾಗಿದೆ. ಪಾನುಂಗಲ್ಲ ನಾಡನ್ನಾಳುತ್ತಿದ್ದ ಮಹಾಮಂಡಳೇಶ್ವರ

ತೈಲಪದೇವರಸ ಬಿಲ್ಲೇಶ್ವರ ಪೂಜಾವಿಧಿ, ಧಾರ್ಮಿಕ ಕಾರ್ಯಗಳಿಗೆ ಹೂವಿನ ತೋಟ, ಗದ್ದೆ ಮುಂತಾದವುಗಳನ್ನು ದೇವರಾಸಿ ಪಂಡಿತರಿಗೆ ದಾನ ಮಾಡಿದ ದಾಖಲೆ ಅಲ್ಲಿಯೇ ಸಮೀಪದ ಶಾಸನದಲ್ಲಿದೆ.[15]

ಈ ಮೇಲಿನ ಉಲ್ಲೇಖಗಳಲ್ಲದೇ ಹಲವಾರು ವೃತ್ತಿಸಂಘಗಳಾದ ಅರವತ್ತೊಕ್ಕಲು[16], ತಂಬುಲಿಗ ಸಾಸಿರ್ವರು[17] ಮತ್ತು ತೆಲ್ಲಿಗಸೆಟ್ಟಿ ಐವತ್ತೊಕ್ಕಲು[18] ಮುಂತಾದ ವೃತ್ತಿ ಸಂಘಗಳನ್ನು ನೋಡಿದಾಗ, ಇವುಗಳು ವೃತ್ತಿ ಆಧಾರದ ಮೇಲೆ ನಿರೂಪಿತವಾಗಿದ್ದವೇ ವಿನಃ ಜಾತೀಯ ಆಧಾರದ ಮೇಲಲ್ಲ ಎಂಬುದು ಸುಸ್ಪಷ್ಟವಾಗುತ್ತದೆ.

**ಕುಟುಂಬ**

ಸಮಾಜದಲ್ಲಿ ಕುಟುಂಬವು ಒಂದು ಅವಿಭಾಜ್ಯ ಅಂಗವಾಗಿತ್ತು. ಅದನ್ನು ಪ್ರಥಮ ಸಮಾಜವೆಂದು ಕರೆಯಬಹುದು. ಇದರ ಮೂಲಕವೇ ಗಂಡು-ಹೆಣ್ಣುಗಳ ಸಂಬಂಧವಾಗಿದೆ. ಇದನ್ನೇ ಹಿಂದೂ ಸಂಸ್ಕಾರದಲ್ಲಿ ವಿವಾಹವೆಂದು ಕರೆದಿದೆ. ಅಲ್ಲದೇ ಆಗ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಜಾರಿಯಲ್ಲಿದ್ದು, ತಂದೆಯ ನಂತರ ಹಿರಿಯ ಮಗ ಮುಖ್ಯಸ್ಥನಾಗುತ್ತಿದ್ದನು.

**ವಿವಾಹ**

ಸಂಸ್ಕಾರಗಳ ಕುರಿತು ಹೇಳುವಾಗ, ವಿವಾಹವು ಎಲ್ಲ ಸಂಸ್ಕಾರಗಳಿಗೂ ಮೂಲ ಎಂದು ಗೃಹ್ಯಸೂತ್ರ ಹೇಳಿದೆ. ಕಾರಣ ಎಲ್ಲ ಬಗೆಯ ಆಚಾರ-ನಿಯಮಗಳು, ಯಜ್ಞ-ಯಾಗಗಳು ಗೃಹಸ್ಥನ ಸುತ್ತ ಹರಡಿಕೊಂಡಿರುವುದಾಗಿದೆ.[19] ಪ್ರಾಚೀನ ಕಾಲದಲ್ಲಿ ಬ್ರಹ್ಮ, ದೈವ, ಅರ್ಷಾ, ಪ್ರಜಾಪತ್ಯ, ಅಸುರ, ಗಂಧರ್ವ, ರಾಕ್ಷಸ ಮತ್ತು ಪೈಶಾಚ ಎಂಬ ಎಂಟು ಪದ್ಧತಿಯ ವಿವಾಹಗಳಿದ್ದವು. ಅವುಗಳಲ್ಲಿ ಕೆಲವು ಪದ್ಧತಿಗಳು ಕರ್ನಾಟಕದಲ್ಲೂ ಬಳಕೆಯಲ್ಲಿದ್ದವು. ಹಾನಗಲ್ಲಿನ ಶಾಸನಗಳಲ್ಲಿ ಅವುಗಳ ಉಲ್ಲೇಖವಿಲ್ಲದಿದ್ದರೂ, ಕ್ರಿ.ಶ. ೧೧೨೧ರ ಶಾಸನವೊಂದು "ಕೊಟ್ಟಲ್ಲಿ ಕಾಣಿ ಕೂಡ್ಡಲ್ಲಿ ಕಾಣಿ" ಎಂಬ ಮಾತನ್ನು ಉಲ್ಲೇಖಿಸಿರುವುದರಿಂದ[20] ಬಹುಷ ಹೆಣ್ಣು ಕೊಟ್ಟಲ್ಲಿ ಒಂದು ಕಾಣಿ, ಹೆಣ್ಣನ್ನು ತೆಗೆದುಕೊಂಡಲ್ಲಿ ಒಂದು ಕಾಣಿ ತೆರಿಗೆಗಳನ್ನು ನೀಡಿರುವಂತೆ ಕಾಣುತ್ತದೆ.

**ಬಹುಪತ್ನಿತ್ವ**

ಪ್ರಾಚೀನ ಕಾಲದಲ್ಲಿ ಬಹುಪತ್ನಿತ್ವಕ್ಕೆ ಸಾಮಾಜಿಕ ಮನ್ನಣೆಯಿತ್ತು. ಬ್ರಾಹ್ಮಣರು ನಾಲ್ಕು ಜನರನ್ನೂ, ಕ್ಷತ್ರಿಯರು ಮೂರು ಜನರನ್ನೂ, ವೈಶ್ಯರು ಇಬ್ಬರನ್ನೂ ಮತ್ತು ಶೂದ್ರರು ಒಬ್ಬಳನ್ನು ಮದುವೆಯಾಗುತ್ತಿದ್ದರೆಂದು ಅಲ್ಬೆರೂನಿ ಹೇಳಿದ್ದಾನೆ.[21] ಹಾನಗಲ್ಲ ಕದಂಬ ವಂಶದ ಮಹಾಮಂಡಳೇಶ್ವರ ಚಿತಯ್ಯದೇವನಿಗೆ ಉತ್ತರ ಕೊಂಕಣ ಶೀಲಹಾರ ಇಮ್ಮಡಿ ವಜ್ಜಡನ ಮಗಳಾದ ಕುಂಡಳಾದೇವಿ ಹಾಗೂ ಚಿತ್ತಬ್ಬರಸಿ ಎಂಬ ಇಬ್ಬರು ರಾಣಿಯರಿದ್ದರು.[22] ಹಾನಗಲ್ಲಿನ ಮೈಲಾರದೇವ ದೇವಾಲಯದಲ್ಲಿರುವ ತೃಟಿತ ಶಾಸನದಲ್ಲಿ ಕದಂಬ ಮಲ್ಲಿದೇವನ ರಾಣಿ ಪದ್ಮಲ ಮಹಾದೇಯನ್ನು "ಪಿರಿಯದರಸಿ ಪಟ್ಟಮಹಾದೇವಿ"[23] ಎಂದು ಕರೆದಿರುವುದರಿಂದ ಇವನಿಗೆ ಮತ್ತೊಬ್ಬ ರಾಣಿಯು ಇದ್ದಿರಬಹುದು.

**ಸತಿಪದ್ಧತಿ**

ಪ್ರಾಚೀನ ಕರ್ನಾಟಕದಲ್ಲಿ ಪತಿಯ ಮರಣದ ನಂತರ ಸತಿಯಾದವಳು ಅಗ್ನಿಪ್ರವೇಶ ಮಾಡುತ್ತಿದ್ದಳು. ಆದರೆ ಕೆಲವರು ಧರ್ಮಾಸಕ್ತರಾಗಿ ಜೀವನವನ್ನು ಕಳೆಯುತ್ತಿದ್ದಂತೆ ತಿಳಿದುಬರುತ್ತದೆ. ಗಂಡನ ಮರಣದ ನಂತರ ಮಹಿಳೆ ವಿಧವೆಯಾದರೆ, ಅವಳು ಪುನಃ ವಿವಾಹವಾಗುವಂತಿರಲಿಲ್ಲ. ಹಾನುಗಲ್ಲು ಪರಿಸರದ ಕೆಳವರ ಕೊಪ್ಪದಲ್ಲಿರುವ ೧೩ನೆಯ ಶತಮಾನದ ಶಾಸನವೊಂದು ಕೆಳವೂರಿನ ಬೊಮ್ಮದೇವನ ಹೆಂಡತಿ ಬೊಮ್ಮಕ್ಕನ ಸಹಗಮನ[24] ಹಾಗೂ ಇನ್ನೊಂದು ಶಾಸನದಲ್ಲಿ ಬಾಳೂರು ಮುದ್ದಗೌಡನ ಹೆಂಡತಿಯ ಸಹಗಮನವನ್ನು ಹೇಳಿದೆ.[25]

**ಮಹಿಳೆಯರ ಸ್ಥಾನಮಾನ**

ವೇದಗಳ ಕಾಲದಿಂದಲೂ ಮಹಿಳೆ, ತನಗೆ ಒದಗಿಬಂದ ಅವಕಾಶಗಳನ್ನು ಉಪಯೋಗಿಸಿಕೊಂಡು ಸಾಮಾಜಿಕ ಜೀವನದಲ್ಲಿ ತನ್ನದೇ ಆದ ಸ್ಥಾನಮಾನವನ್ನು ಗಳಿಸಿಕೊಂಡಿರುವುದನ್ನು ಕಾಣುತ್ತೇವೆ. ಹಾನಗಲ್ಲು ಪರಿಸರದ ಶಾಸನಗಳು ಇದಕ್ಕೆ ಹೊರತಾಗಿಲ್ಲ. ಕದಂಬ ಅರಿಕೇಸರಿಯು ಬನವಾಸಿ-೧೨೦೦೦ ಮತ್ತು ಹಾನಗಲ್-೫೦೦ಗಳನ್ನು ಆಳುತ್ತಿದ್ದಾಗ, ಅವನ ರಾಣಿ ಅಚಲದೇವಿ ಬೆಳವತ್ತಿಯನ್ನಾಳುತ್ತಿದ್ದಳೆಂಬ ಉಲ್ಲೇಖವು ಕ್ರಿ.ಶ. ೧೧೦೦ರ ಶಾಸನದಲ್ಲಿದೆ.[26]

ಮಹಿಳೆಯರು ಹಲವಾರು ದೇವಾಲಯಗಳನ್ನು ನಿರ್ಮಿಸಿರುವುದಲ್ಲದೇ, ಅವುಗಳಿಗೆ ದಾನ ದತ್ತಿಗಳನ್ನು ಬಿಟ್ಟಿದ್ದಾರೆ. ಈ ಪರಿಸರದ ಯಳವತ್ತಿ ಗ್ರಾಮದಲ್ಲಿ  ಮಾಳಲದೇವಿ ತನ್ನ ಹೆಸರಿನ ಮಾಳಲೇಶ್ವರ ದೇವಾಲಯವನ್ನು[27] ಮತ್ತು ಕಲಕೇರಿಯಲ್ಲಿ ಬೌದ್ಧ ವಿಹಾರ, ಶಿವಾಲಯ ಮತ್ತು ಮಹಾಭವನಗಳನ್ನು ನಿರ್ಮಿಸಿದ್ದಾಳೆ.[28] ಕರಿಗುದರಿ ಗ್ರಾಮದ ಶಾಸನ, ಮಾದಿರಾಜದಂಡನಾಯಕನ ಮಡದಿ ಮಲ್ಲಿಯಕ್ಕ ಎಂಬುವಳು ಭಾಸ್ಕದೇವರ ಭಕ್ತೆಯಾಗಿದ್ದು, ಕರಿಗುದರೆಯ ಉತ್ತರ ಭಾಗದಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದನ್ನು ಉಲ್ಲೇಖಿಸುತ್ತದೆ.[29]

ಉಪ್ಪಹುಣಸಿ ಗ್ರಾಮದ ಶಾಸನವು ಕುಂದರಾಜನ ಮಡದಿ ಕುಂಬರಸಿ ಎಂಬುವಳು ಕಲ್ಮೇಶ್ವರ ದೇವಾಲಯಕ್ಕೆ ದಾನ ನೀಡಿದ್ದನ್ನು ತಿಳಿಸಿದರೆ,[30] ತಿಳ್ಳುವಳ್ಳಿಯ ಶಾಸನವು (ಕ್ರಿ.ಶ. ೧೧೧೮) ರುದ್ರಭಟ್ಟೋಪಾದ್ಯಾಯ ಮತ್ತು ಮಾಚಿಯಬ್ಬೆ ದಂಪತಿಗಳು ಸೋಮಯಾಜಿಗಳ ದೇವಾಲಯಕ್ಕೆ ೨೫೦ ಗದ್ಯಾಣಗಳನ್ನು ದಾನ ನೀಡಿದರೆಂದು ಹೇಳಿದೆ.[31] ವೀರನೊಳಂಬ ಮತ್ತು ಆತನ ಮಡದಿ ಮಾಳಲ ದೇವಿಯರು ತಪೋನಿಧಿ ದೇವಸಿಂಗಜೀಯರ ಕಾಲು ತೊಳೆದು ಕಲಕೇರಿಯ ಸೋಮೇಶ್ವರ ದೇವರ ಧೂಪ, ದೀಪ ಮೊದಲಾದ ಕಾರ್ಯಗಳಿಗೆ ಪುಲ್ಲವಳ ಎಂಬ ಗ್ರಾಮವನ್ನು ದಾನ ಬಿಟ್ಟಿದ್ದಾರೆ.[32]

ಮಹಿಳೆಯರು ಯುದ್ಧಗಳಲ್ಲಿ ಭಾಗವಹಿಸಿರುವುದನ್ನು ಉಲ್ಲೇಖಿಸುವ ಶಾಸನವೊಂದು ಹಾನಗಲ್ಲು ಗ್ರಾಮದಲ್ಲಿದ್ದು, ಅದು ಬಹಳ ತೃಟಿತವಾಗಿರುವುದರಿಂದ ವಿಷಯ ಸ್ಪಷ್ಟವಾಗುವುದಿಲ್ಲ. "ವೀರಮಲ್ಲಿದೇವರಸನ ಪಿರಿಯರಸಿ ಪಟ್ಟಮಹಾದೇವಿ ಪದ್ಮಲದೇವಿ ಕೈಕೊಂಡ ಹೋರಾಟ ಪ್ರಸಂಗ ತೃಟಿತವಾಗಿದ್ದು, ಶಾಸನದ ಮೂರನೆಯ ಭಾಗದಲ್ಲಿ ಮಿಯೊಳು ಖಣಖ್ಖಣಲೆನೆ ಬಂದು ತಾಗಿ..... ಗೆತಳುತಿಹುದು ರಣದೊಳು ವೀರ..... ಭೂಮಿಯೊಳು..... ಸಿರ.... ನವರವನಿತೆಯರೆಯ್ದು..... ಎಂಬ ವಿಷಯ ಮಾತ್ರ ಉಳಿದಿದೆ.[33] ಇವಳು ಪ್ರತ್ಯಕ್ಷ ರಣಾಂಗಣ ದರ್ಶನ ಮಾಡಿದ ದಾಖಲೆ ಹಿರೇಮಾಗಡಿಯಲ್ಲಿದೆ. "ಮಲ್ಲಿದೇವರಸಿ ಪದುಮಲದೇವಿ ಸೋಯಿದೇವನ ಕೂಡೆ ವಿರೋಧಿಸಿ ಕುಪ್ಪಟೂರ ತೆಸಲಗೆ ಧಾಳಿಯನಿಕ್ಕಿ ಗೂಡೆಯ ಹಾಯ್ದು ತುರವಂಕೊಂಡು ಹೋಗುವಲ್ಲಿ ಹಿರೇ ಮಾಗಡಿಯ ಹೆಗ್ಗಡೆ ಕುಪ್ಪಯ್ಯನ ಸೋದರ ಸಂಕಯ್ಯ ಈ ಗೋಗ್ರಹಣ ಸಂದರ್ಭದಲ್ಲಿ ಎದುರು ನಿಂತು ಬಂದೆಚ್ಚು ಹಲಬರಂ ಕೊಂದು ತುಹುವಂಮಗುಳ್ಚಿ ಸುರಲೋಕ ಪ್ರಾಪ್ತನಾಗಿರುವನು.[34] ಇಲ್ಲಿ ಕದಂಬ ಅಕ್ಕಾದೇವಿಯನ್ನೂ ಸ್ಮರಿಸಿಕೊಳ್ಳಬಹುದು.

**ಸಂಪ್ರದಾಯ, ನಂಬಿಕೆ ಮತ್ತು ಆಚರಣೆ**

ನಿತ್ಯ ವ್ಯವಹಾರ ಪದ್ಧತಿಗಳೂ, ಅವುಗಳ ಹಿನ್ನೆಲೆಯಲ್ಲಿರುವ ಕಲ್ಪನೆ, ಉದ್ದೇಶಗಳೂ ಸೇರಿ ಸಂಪ್ರದಾಯವಾಗಿ ರೂಪತಳೆಯುತ್ತದೆ. ನಂಬಿಕೆಗಳು ಮಾನವನ ಮನಸ್ಸಿನ ಪ್ರಕ್ರಿಯೆಗಳಾಗಿವೆ. ಹೀಗಾಗಿ ಮಾನವ ಜೀವನವು ಬಹುತೇಕ ಸಂಪ್ರದಾಯ ಮತ್ತು ನಂಬಿಕೆಗಳ ಮೇಲೆಯೇ ನಿಂತಿದೆ ಎನ್ನಬಹುದು. ಇವುಗಳ ಹುಟ್ಟು ಬೆಳವಣಿಗೆಗೆ ಧಾರ್ಮಿಕ ಪದ್ಧತಿಯೇ ಬಹುಮಟ್ಟಿಗೆ ಕಾರಣವೆಂದು ತಿಳಿಯಲಾಗಿದೆ. ಈ ಹಿನ್ನೆಲೆಯಲ್ಲಿ ದಾನ-ದತ್ತಿ, ಪಾಪ-ಪುಣ್ಯ, ಹಬ್ಬ, ಶಕುನ, ನದಿಸ್ನಾನ, ಶ್ರಾದ್ಧ ಮುಂತಾದ ಕಲ್ಪನೆಗಳು ಬೆಳೆದುಬಂದವು. ಹಾನಗಲ್ಲಿನ ಪರಿಸರದ ಶಾಸನಗಳಲ್ಲಿ ಇವು ಅಷ್ಟಾಗಿ ಕಂಡುಬರದಿದ್ದರೂ, ಕೆಲವು ಉಲ್ಲೇಖಗಳನ್ನು ಕಾಣಬಹುದು.

**ದಾನ**

ಹಾನಗಲ್ಲು ಪರಿಸರದಲ್ಲಿ ದಾನ ಶಾಸನಗಳೇ ಹೆಚ್ಚಾಗಿವೆ. ಅವುಗಳಲ್ಲಿ ಬ್ರಾಹ್ಮಣರಿಗೆ ನೀಡಿರುವ ದಾನ "ಉಭಯಮುಖಿ ಕೊಟ್ಟ ಫಲಮಕ್ಕು" ಎಂದು ಹೇಳಿದೆ.[35] ಉಭಯಮುಖಿ ಎಂದರೆ ಎರಡು ಮುಖಗಳುಳ್ಳದ್ದು, ಗರ್ಭಿಣಿ ಎಂದರ್ಥ. ಇಕ್ಕತ್ತಿಗೆಯ ಕವಿಲೆ ಎಂಬುದು

ಅದರ ಕನ್ನಡಾನುವಾದ. ತಾಯಿಯ ಗರ್ಭದಿಂದ ಕರುವಿನ ಮುಖ ಹೊರಟಿರಬೇಕು. ಆ ಸಮಯದಲ್ಲಿ ಪೂಜಾವಿಧಿಗಳ ನಂತರ ಚಿನ್ನ, ಬೆಳ್ಳಿ, ಭೂಮಿ ಇತ್ಯಾದಿಗಳೊಡನೆ ಅಂತಹ ಹಸುವನ್ನು ದಾನ ಮಾಡಿದರೆ, ಹಸು ಮತ್ತು ಕರುಗಳ ಮೈಮೇಲಿನ ಕೂದಲುಗಳ ಸಂಖ್ಯೆಯಷ್ಟು ವರ್ಷಗಳ ಕಾಲ ಸ್ವರ್ಗದಲ್ಲಿರುತ್ತಾರೆಂದು ಧರ್ಮಗ್ರಂಥಗಳು ಹೇಳುತ್ತವೆ.[36] ದಾನಗಳನ್ನು ಸಾಮಾನ್ಯವಾಗಿ ಹಬ್ಬ, ಸಂಕ್ರಮಣ, ಸೂರ್ಯ ಅಥವಾ ಚಂದ್ರಗ್ರಹಣಗಳಂದು ಬಿಡುವದು ಹೆಚ್ಚು ಪ್ರಶಸ್ತವೆನ್ನುವ ನಂಬಿಕೆಯಿತ್ತು. ಅನೇಕ ದಾನಗಳನ್ನು ಇಂತಹ ಪ್ರಮುಖ ದಿನಗಳಲ್ಲಿಯೇ ಬಿಟ್ಟಿರುವುದನ್ನು ಈ ಪರಿಸರದ ಶಾಸನಗಳು ಸಮರ್ಥಿಸುತ್ತವೆ. ಕ್ರಿ.ಶ. ೧೧೧೯ರ ಶಾಸನವೊಂದು "ಶ್ರೀ ಮಚ್ಚಾಳುಕ್ಯವಿಕ್ರಮ ಕಾಲದ ೪೩ನೆಯ ವಿಕಾರಿ ಸಂವತ್ಸರದುತು(ರಾ)ಯಣ ಸಂಕ್ರಾನ್ತಿ"ಯ ದಿನ ಬರೆಯಿಸಿಕೊಟ್ಟಿರುವುದನ್ನು ಉಲ್ಲೇಖಿಸಿದರೆ,[37] ಕ್ರಿ.ಶ. ೧೧೨೧ರ ಶಾಸನವು "ಸ್ವಸ್ತಿ ಶ್ರೀ ಮಚ್ಚಾಳುಕ್ಯ ವಿಕ್ರಮವರಿಷದ ೪೫ನೆಯ ಫಲವ ಸಂವತ್ಸರದ ಚೈತ್ರಶುದ್ಧ ಪಾಡಿವ ಮಹಾ ಯತಿಪಾತದನ್ದು" ದಾನ ಮಾಡಿರುವುದನ್ನು ತಿಳಿಸುತ್ತದೆ.[38]

**ಪಾಪ – ಪುಣ್ಯ**

ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ಪಾಪ-ಪುಣ್ಯ ಸ್ವರ್ಗ-ನರಕಗಳ ಕಲ್ಪನೆ ಹುಟ್ಟಿಕೊಂಡು ಮುಂದೆ ಅದು ನಂಬಿಕೆಯಾಗಿ ಬೆಳೆಯಿತು. ಶಾಸನಗಳು ಫಲ ಶ್ರುತಿ ಪದ್ಯಗಳಲ್ಲಿ ಸಾಮಾನ್ಯವಾಗಿ ಪಂಚಮಹಾಪಾತಕದ ಹೆಸರನ್ನು ಉಲ್ಲೇಖಿಸುತ್ತವೆ. ಈ ಪರಿಸರದ ಕ್ರಿ.ಶ. ೧೧೧೯ರ ಶಾಸನವೊಂದರಲ್ಲಿ "ಕವಿಲೆಯಂ ಬ್ರಾಹ್ಮಣರುವಂ ಕೊಂದ ಪಂಚಮಹಾಪಾತಕ"ದ ಉಲ್ಲೇಖವಿದೆ.[39] ಇನ್ನೊಂದು ಶಾಸನದಲ್ಲಿ "ಇನ್ತೀ ಧರ್ಮ್ಮವನಾರೊರ್ಬ್ಬರು ತಪ್ಪದೆ ಪ್ರತಿಪಾಳಿಸಿದರು ಕುರುಕ್ಷೇತ್ರದೊಳಂ ವಾರಾಣಾಸಿಯಲುಂ ಪ್ರಯಾಗ(ಲಾ)ಲುಂ ಅರ್ಗ್ಘ್ಯ(ತೀ)ರ್ಥದಲುಂ ಗಂಗೆಯ ತಡಿಯಲ್ವೇದ ಪಾರಗಬ್ರಾಹ್ಮರ್ಗ್ಗೆ ತಪೋಧನರಾ ನಾಸಿರ ಕವಿಲೆಯ ಕೋಡುಂ ಕೊಳಗುಮಂ ಪೊನ್ನಲುಂ ಬೆಳ್ಳಿಯಲುಂ ಕಟ್ಟಿಸಿಕೊಟ್ಟ ಫಳವಕು ಧರ್ಮ್ಮಮ (ನಾ)ರೊರ್ಬ್ಬರಳಿದವರು ಕುರುಕ್ಷೇತ್ರದೊಳಂ ವಾರಾಣಾಸಿಯಲುಂ ಅರ್ಗ್ಘ್ಯ ತೀರ್ತ್ಥದಲುಂ ಪ್ರಯಾಗೆಯಲುಂ ಗ(ಂ)ಗೆಯ ತಡಿಯಲುಂ ಬ್ರಾಹ್ಮಣರಂ ತಪೋಧನರಂ ಕವಿಲೆಯಮಂನಳಿದ ದೋಷ ಸಾರ್ಗ್ಗು" ಎಂದಿದೆ.[40] ಬಿಟ್ಟಿರುವ ದಾನಗಳನ್ನು ಕಾಪಾಡುವವರಿಗೆ ಶ್ರೇಯಸ್ಸು ಹಾಗೂ ಅವುಗಳನ್ನು ಅಪಹರಿಸಿದವರಿಗೆ ಪಾಪಗಳು ಅಂಟುತ್ತವೆಂದು ಶಾಸನಗಳ ಫಲಶೃತಿಗಳಿಂದ ತಿಳಿಯುತ್ತದೆ. ಇವುಗಳ ಉದ್ದೇಶ ಮುಖ್ಯವಾಗಿ ಕೊಟ್ಟ ದಾನ ದುರುಪಯೋಗವಾಗದಂತೆ ನೋಡಿಕೊಳ್ಳುವುದಾಗಿತ್ತು. ಪಾಪಗಳಿಂದುಂಟಾದ ದೋಷ ನಿವಾರಣೆಗಾಗಿಯೇ ದಾನ, ಧರ್ಮ, ವ್ರತ ಮುಂತಾದ ಆಚರಣೆಗಳು ಹುಟ್ಟಿಕೊಂಡಿರಬೇಕು.

**ಹಬ್ಬ**

ಸಂಸ್ಕೃತ ಪದವು ಕನ್ನಡದಲ್ಲಿ ಅಪಭ್ರಂಶವಾಗಿ ಪಬ್ಬ, ಹಬ್ಬ ಎಂದಾಗಿದೆ.[41] ಹಾನಗಲ್ಲಿನ ಶಾಸನಗಳಲ್ಲಿ ಸಂಕ್ರಾನ್ತಿ, ಚೈತ್ರಶುದ್ಧ ಪಾಡಿವ, ಮಹಾಯತೀಪಾತ ಎಂಬ ಹಬ್ಬಗಳ ಉಲ್ಲೇಖಗಳಿವೆ.[42]

**ವೀರಗಲ್ಲು**

ಈ ಪರಿಸರದಲ್ಲಿ ವೀರಗಲ್ಲುಗಳ ಸಂಖ್ಯೆ (ಸುಮಾರು ೧೧) ಹೆಚ್ಚಿನ ಪ್ರಮಾಣದಲ್ಲಿದೆ. ಕ್ರಿ.ಶ. ೧೧೯೬ರ ವೀರಗಲ್ಲು, ಹಾನಗಲ್ಲು ಕದಂಬ ಕಾಮದೇವನಿಗಾಗಿ ಒಬ್ಬ ವೀರಮರಣ ಹೊಂದಿರುವುದನ್ನು ಹೇಳಿದೆ.[43] ಕಮತರ ತಿಪ್ಪಣ್ಣನ ಹೊಲದಲ್ಲಿರುವ ವೀರಗಲ್ಲು ಸಾಂತಯ್ಯದೇವನ ಮರಣವನ್ನು,[44] ಆನೆಕೆರೆಯ ದಂಡೆಯ ಮೇಲಿರುವ ವೀರಗಲ್ಲು ಹೊಯ್ಸಳ ಬಲ್ಲಾಳದೇವನು ಹಾನಗಲ್ಲನ್ನು ಮುತ್ತಿದಾಗ, ಸಾಹಣಿಯೊಬ್ಬನ ವೀರಮರಣವನ್ನು[45] ಹಾಗೂ ತಾರಕೇಶ್ವರ ದೇವರ ಗುಡಿಯ ಹೊರಮಗ್ಗುಲಲ್ಲಿರುವ ವೀರಗಲ್ಲು, ಬಸವ ನಾಯಕನ ವೀರಮರಣವನ್ನು ಉಲ್ಲೇಖಿಸುತ್ತವೆ. ಇನ್ನೊಂದು ತೃಟಿತವಾಗಿದ್ದು, ಅಸ್ಪಷ್ಟವಾಗಿದೆ.[46] ತುರುಗಾಳಗಕ್ಕೆ ಸಂಬಂಧಿಸಿದ ವೀರಗಲ್ಲೊಂದು, ತುರುಗಳನ್ನು (ಆಕಳು) ಕದ್ದು ತೆಗೆದುಕೊಂಡು ಹೋಗುವಾಗ, ಹೋರಾಡಿ ವೀರಮರಣ ಹೊಂದಿದ ವಿಷಯವನ್ನು ಹೇಳುತ್ತದೆ. ಅದರಲ್ಲಿ "ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಮಂಡಳೇಶ್ವರ ತೈಲಪದೇವರ ಪಾ[ಹಾ]ಡವಳ ತೈಲಣಾಗ

ಮೈದುನಂ ಬೆಟ್ಟತೆಪ್ಪದನಿರಿದುರಳ್ವ ಸೇಳ್ಗೆಯುಮಂ ಕೊಂಡೊಯ್ವರ ತುರುಮಮಂ ಸೇಳ್ಗೆಯುಮಂ ಮುಗುಳ್ದು ಸ್ವರ್ಗಸ್ಥನಾದನು".[47] ಎಂದಿದೆ.

**ವೇಷ ಭೂಷಣ**

ಯೋಗ್ಯತೆ ಮತ್ತು ಸ್ಥಿತಿಗನುಗುಣವಾಗಿ ಜನರು ವೇಷ ಭೂಷಣಗಳನ್ನು ಧರಿಸುತ್ತಿದ್ದರು. ಈ ಗ್ರಾಮದಲ್ಲಿರುವ ವೀರಗಲ್ಲುಗಳನ್ನು ಅವಲೋಕಿಸಿದರೆ, ಆ ಕಾಲದ ಪುರುಷರು ಧೋತಿ ಉಟ್ಟುಕೊಂಡು, ಮೈ ಮೇಲಿನ ಭಾಗಕ್ಕೆ ಅಂಗಿಯನ್ನು ಹಾಕುತ್ತಿರಲಿಲ್ಲ. ತಲೆಯ ಸುತ್ತಲೂ ರುಮಾಲಿನ ಆಕಾರದ ಬಟ್ಟೆಯನ್ನು ಸುತ್ತಿಕೊಳ್ಳುತ್ತಿದ್ದುದು ಕಂಡುಬರುತ್ತದೆ. ಅದು ಇಂದಿನ ಪಗಡಿಯಂತೆ ಇರುತ್ತಿತ್ತು.

ವೀರಗಲ್ಲುಗಳಿಂದ ಪುರುಷರು ತಮ್ಮ ತಲೆಯ ಕೂದಲನ್ನು ಗಂಟುಹಾಕಿ ಕಟ್ಟುತ್ತಿದ್ದರು. ಕಪ್ಪಲಿಭಾವಿ ಮತ್ತು ಹಾನಗಲ್ಲು ಗ್ರಾಮಗಳ ವೀರಗಲ್ಲುಗಳಲ್ಲಿ, ಯೋಧರು ಕಿವಿಯೋಲೆ (ಮರುವು) ಧರಿಸಿದ್ದಾರೆ.[48] ಮಾಸ್ತಿಕಲ್ಲುಗಳಿಂದ ಮಹಿಳೆಯರು ಸೀರೆ ಮತ್ತು ಕುಪ್ಪಸ ಉಪಯೋಗಿಸುತ್ತಿದ್ದರೆಂದು ಹೇಳಬಹುದು. ದೇವಾಲಯಗಳ ಅಲಂಕಾರ ಶಿಲ್ಪಗಳನ್ನು ಅವಲೋಕಿಸಿದರೆ, ಮಹಿಳೆಯರು ನಡಪಟ್ಟಿ, ಕರ್ಣಾಭರಣ, ಕಂಠಾಭರಣ ಹಾಗೂ ತೋಳಾಭರಣಗಳನ್ನು ಉಪಯೋಗಿಸುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ತಾರಕೇಶ್ವರ ದೇವಾಲಯದ ಹೊರಾವರಣ ಮತ್ತು ಗ್ರಾಮದ ಅಲಲ್ಲಿ ಹರಡಿರುವ ಶಿಲ್ಪಗಳನ್ನು ಇಲ್ಲಿ ಉದಾಹರಿಸಬಹುದು. ದಿಗಾಂಬೆಯ ಮಂದಿರದ ಮುಂದೆ ಇರುವ ನೃತ್ಯ ಬಾಲಕೆಯರ ಕೈಗಳಲ್ಲಿರುವ ಕನ್ನಡಿಯಿಂದ, ಆ ಕಾಲದ ಸ್ತ್ರೀಯರು ಕೈಗನ್ನಡಿಗಳನ್ನು ಉಪಯೋಗಿಸುತ್ತಿದ್ದರೆಂದು ತಿಳಿಯುತ್ತದೆ.

**ಆಹಾರ ಪಾನೀಯಗಳು**

ಕಲ್ಯಾಣದ ಚಾಲುಕ್ಯ ಮೂರನೆಯ ಸೋಮೇಶ್ವರನಿಂದ ರಚಿತವಾದ ಮಾನಸೋಲ್ಲಾಸವು, ಅಂದು ಪ್ರಚಲಿತವಿದ್ದ ಮಂಡಕ (ಮಂಡಿಗೆ), ದೋಸಕ (ದೋಸೆ), ಇಡ್ಡಲಕ (ಇಡ್ಡಲಿಗೆ), ಸೇವಿಕಾ (ಸೇವಿಗೆ), ಮಜ್ಜಿಕಾ (ಮಜ್ಜಿಗೆ)ಗಳನ್ನೂ, ಹುಳಿಗಾಗಿ ಬಳಸುವ ಹುಣಸೆ, ಕವಳಿ, ಅಂಬಟೆಕಾಯಿ, ಲಿಂಬೆ, ಮಂಗರವಳ್ಳಿಗಳನ್ನೂ, ಖಾರಕ್ಕಾಗಿ ಬಳಸುವ ಶುಂಠಿ, ಮೆಣಸು, ಕಾರಗೆಣಸುಗಳನ್ನು ಉಲ್ಲೇಖಿಸಿದೆ.[49] ಆದರೆ ಈ ಪರಿಸರದ ಶಾಸನಗಳಲ್ಲಿ ಎಲ್ಲಿಯೂ ನೇರವಾಗಿ ಆಹಾರಾದಿ ವಿಷಯಗಳನ್ನು ಹೇಳಿಲ್ಲ. ದಾನಬಿಡುವ ಸಂದರ್ಭದಲ್ಲಿ ದವಸ-ಧಾನ್ಯಗಳ ಮೇಲಿಂದ, ಅಂದು ಉಪಯೋಗಿಸುತ್ತಿದ್ದ ಆಹಾರ ಧಾನ್ಯಗಳನ್ನು ತಿಳಿಯಬಹುದು.

**ವಿದ್ಯಾಭ್ಯಾಸ**

ಸರ್ವದ್ರವ್ಯೆಷು ವಿದ್ಯೆವ ಧನಮಾಹುರನುತ್ತಮಂ

ಆಹಾರ್ಯ ದೇನರ್ಘ್ಯರ್ಯತ್ವಾದಕ್ಷಯತ್ವಾಚ್ಚ ಸರ್ವದಾ

ವಿದ್ಯಾದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ

ಪಾತ್ರತ್ವಾದ್ಧನ ಮಾಪ್ನೋತಿ ಧನಾದ್ಧರ್ಮ ತತಃ ಸುಖಃ

ಅಂದರೆ ವಿದ್ಯೆಗಿಂತ ಶ್ರೇಷ್ಠವಾದದ್ದು ಇನ್ನೊಂದಿಲ್ಲ. ಸರ್ವದ್ರವ್ಯಗಳಲ್ಲಿ ವಿದ್ಯೆಯೇ ನಿಜವಾದ ಧನ, ಏಕೆಂದರೆ ಅದನ್ನು ಯಾರೂ ಅಪಹರಿಸಲಾರರು ಅದು ಅನರ್ಘ್ಯ ಮತ್ತು ಅಕ್ಷಯವಾದದು. ಅಲ್ಲದೆ ಶಿಕ್ಷಣದ ಪರಮ ಪ್ರಯೋಜನ ಆತ್ಮಸಿದ್ಧಿ ಎನ್ನುವಲ್ಲಿ ಸಾಕಾರಗೊಂಡಿದೆ.[50] ಇಂತಹ ವಿದ್ಯೆಯು ವ್ಯಕ್ತಿಕೇಂದ್ರವಾಗಿ ರೂಪಿತಗೊಂಡಿರುವದಾಗಿತ್ತು. ಪ್ರಾರಂಭದಲ್ಲಿ ಗುರುವಿನ ಮನೆಯೇ ಪಾಠಶಾಲೆಯಾಗಿತ್ತು. ಹಾನಗಲ್ಲು ಪರಿಸರದಲ್ಲಿ ಮಠ, ದೇವಾಲಯ ಮತ್ತು ಅವುಗಳಿಗೆ ಸೇರಿದ ಕಾಳಾಮುಖ ಗುರುಪರಂಪರೆ ಅಧಿಕವಾಗಿದ್ದುದರಿಂದ ಅಧ್ಯಯನ ಅಧ್ಯಾಪನಕ್ಕೆ ಹೆಚ್ಚಿನ ಮಹತ್ವಕೊಟ್ಟಿರುವುದು ತಿಳಿದುಬರುತ್ತದೆ. ಶಾಸನವೊಂದರಲ್ಲಿ "ತಪೋಧನರಾಹಾರದಾನಕ್ಕಂ ದೇವರ ನೈವೇದ್ಯಕ್ಕಂ.....ತಪೋಧನರ್ಗ್ಗೆ ವಸ್ತ್ರಕ್ಕಂ ಕೌಪೀನಕ್ಕಂ ಬಿಟ್ಟ ಧರ್ಮ" ಎಂಬ

ಉಲ್ಲೇಖಗಳು[51] ದೇವಾಲಯಗಳಲ್ಲಿ ವಿದ್ಯಾಭ್ಯಾಸವು ಜರುಗುತ್ತಿರುವುದು ಸ್ಪಷ್ಟವಾಗುತ್ತದೆ. ಈ ಗ್ರಾಮದ ಶಾಸನಗಳಲ್ಲಿ ಅಗ್ರಹಾರದ ಪ್ರಸ್ತಾಪವಿಲ್ಲ. ಆದರೆ ಈ ಪರಿಸರದ ನೀರಲಿ, ತಿಳಿವಳ್ಳಿಗಳು ಅಗ್ರಹಾರಗಳಾಗಿದ್ದವು. ಈ ಗ್ರಾಮದ ಶಾಸನದಲ್ಲಿ ಉಲ್ಲೇಖವಾಗಿರುವ ಕದಂಬ ಮಲ್ಲಿದೇವನ ಮಡದಿ ಪದ್ಮಲದೇವಿ ಹುಲುಗೂರನ್ನು ಬ್ರಹ್ಮಪುರಿಯಾಗಿ ಮಾರ್ಪಡಿಸಿ, ೬೪ ಜನ ವೇದೋಪನಿಷತ್ತು ಬಲ್ಲ ಮಹಾಜನರ ಪಾದತೊಳೆದು ಎಲ್ಲ ತೆರಿಗೆಯನ್ನು ಮುಕ್ತಗೊಳಿಸಿ, ಬ್ರಾಹ್ಮಣರಿಗೆ ಕೊಂಡರಟಿ-೭೦ರ ಬಿಚನೂರು ಗ್ರಾಮವನ್ನು ದತ್ತಿ ಕೊಡುವಲ್ಲಿ ಅದರ ಪುಣ್ಯ ತನ್ನ ಹಿರಿಯರಿಗೆ ತಲುಪಲಿ ಎಂದು ಆಶಿಸಿರುವಳು.[52] ಶಾಸನವು ಈ ೬೪ ಜನ ಬ್ರಾಹ್ಮಣರ ಗೋತ್ರ ಮತ್ತು ಅವರಿಗೆ ನೀಡಿದ ವಿಶಿಷ್ಟ ದತ್ತಿಗಳನ್ನು ಉಲ್ಲೇಖಿಸುತ್ತದೆ.

ಹಾನಗಲ್ಲು ಪರಿಸರದ ಹೊಟ್ಟೂರ ಒಂದು ಮಹಾಘಟಿಕಾಸ್ಥಾನವಾಗಿತ್ತು. ಕದಂಬ ತೋಯಿಮದೇವನ ಅಧಿಕಾರದ ಅವಧಿಯಲ್ಲಿ "ಆ ನಾಡೊಳ್ ಅಖಿಲ ಘಟಿಕಾಸ್ಥಾನವಿದೆನಿಸಿ ಮೆರೆದುದು. ಅಲ್ಲಿಯ ಗಾವುಂಡ ಗೋದುವರ ಮಾರನಾಗಿದ್ದಂತೆ" ಉಲ್ಲೇಖವಿದೆ.[53] ಅಂದು ಅಧ್ಯಯನ ಅಧ್ಯಾಪನದಲ್ಲಿ ತೊಡಗಿದ್ದ ತಾರಕೇಶ್ವರ ಮತ್ತು ಬಿಲ್ಲೇಶ್ವರ ದೇವಾಲಯಗಳ ತಪೋದನರ ಆಹಾರ ಮತ್ತು ಬಟ್ಟೆಗೆ ದಾನ ಬಿಟ್ಟಿರುವ ವಿಷಯ ಹಾನಗಲ್ಲು ಶಾಸನದಲ್ಲಿದೆ. ಈ ಉಲ್ಲೇಖಗಳು ಹಾನಗಲ್ಲು ಪರಿಸರದಲ್ಲಿ ನಡೆಯುತ್ತಿದ್ದ ವಿದ್ಯಾಭ್ಯಾಸವನ್ನು ಸ್ಪಷ್ಟವಾಗುತ್ತದೆ.

ಸಂಪ್ರದಾಯಬದ್ಧ ವ್ಯವಸ್ಥೆಯಲ್ಲಿ ರಚನೆಗೊಂಡ ಪ್ರಾಚೀನ ಸಮಾಜ, ನಂಬಿಕೆ ಸಂಪ್ರದಾಯಗಳೊಂದಿಗೆ ಸಾಂಸ್ಕೃತಿಕ ಅಭಿವೃದ್ಧಿಯತ್ತ ಮುಂದುವರೆಯಿತು.

---

[1] ಕೊಪ್ಪ ಎಸ್.ಕೆ., ತರ್ದವಾಡಿ ನಾಡು : ಒಂದು ಅಧ್ಯಯನ, ಪು.೧೫೧-೫೨.

[2] K.I., V, 18, (1119 A.D.) ಮತ್ತು ಅದೆ, 95, (1119 A.D.)

[3] K.I., V, 105, (12th C.)

[4] ಅದೆ, 95, (12th C.)

[5] ಅದೆ, 19, (1121 A.D.)

[6] ಅದೆ, 17, (1118 A.D.)

[7] ಅದೆ, 19, (1121 A.D.)

[8] Moraes, The Kadamba Kula, P.454-5

[9] K.I., V, 18, (1119 A.D.)

[10] S.I.I., XVIII, 135, (1137 A.D.)

[11] K.I., V, 19, (1119)

[12] ಅದೆ, 18, (1119 A.D.)

[13] ಅದೆ, 112, (1338 A.D.)

[14] S.I.I., XX, 365, (13-14th C.)

[15] K.I., I, 18, (1119 A.D.)

[16] ಅದೆ, 142, (1165 A.D.)

[17] ಅದೆ, 76, (1118 A.D.)

[18] K.I., V, 18, (1117 A.D.)

[19] ಪಾಂಡೆ ಬಿ.ಆರ್., ಹಿಂದೂ ಸಂಸ್ಕಾರಗಳು, ಯುಗಯಾತ್ರಿ ಭಾರತೀಯ ಸಂಸ್ಕೃತಿ ಸಂ-೨ ಪು.೩೦೧

[20] K.I., V, (1121 A.D.)

[21] Sachu E.C., Alberuni's India, Vol-II, P.155

[22] A.R.I.E., 1947-48, 304

[23] K.I., V, 60, (1131 A.D.)

[24] ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲೆಯ ಶಾಸನಸೂಚಿ, ಪು.೬೦

[25] ಅದೆ, ಪು.೬೪

[26] ಅದೆ, 203, (1000 A.D.)

[27] ಅದೆ, 225 (1114 A.D.)

[28] S.I.I., XX, 49, (1076 A.D.)

[29] ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲೆಯ ಶಾಸನಸೂಚಿ, ಪು.೫೯

[30] I.A., X, P.249, ( 1109 A.D.)

[31] K.I., V, 17, (1118 A.D.)

[32] S.I.I., XX, 49, (1076 A.D.)

[33] K.I., V, 60, (1131 A.D.)

[34] ಪಾವಟೆ ಚೆನ್ನಕ್ಕ, ಹಾನಗಲ್ಲ ಕದಂಬರು, ಪುಟ-೯೨

[35] K.I., V, 18. (1119 A.D.)

[36] Kane P.V., History of Dharmasashtra, Vol-II P-871-2

[37] K.I., V, 18. (1119 A.D.)

[38] ಅದೆ, 19, (1121 A.D.)

[39] K.I., V, 18. (1119 A.D.)

[40] ಅದೆ, 19, (1119 A.D.)

[41] ಕೊಪ್ಪ ಎಸ್.ಕೆ., ತರ್ದವಾಡಿ ನಾಡು : ಒಂದು ಅಧ್ಯಯನ, ಪು.೧೭೦

[42] ಉಲ್ಲೇಖ ೩೬ ಮತ್ತು ೩೭ರಲ್ಲಿ ಇವೆ

[43] K.I., V, 59. (1196 A.D.)

[44] ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲೆಯ ಶಾಸನಸೂಚಿ, ಪು-೩೮

[45] Moraes, The Kadamba Kula, P.452-554

[46] ಅದೆ, P.445-6

[47] ಅದೆ

[48] ಅದೆ

[49] ಕಲಬುರ್ಗಿ ಎಂ.ಎಂ., ಮಾನಸೋಲ್ಲಾಸ

[50] ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.

[51] K.I., V, 18. (1119 A.D.)

[52] ಪಾವಟೆ ಚೆನ್ನಕ್ಕ, ಹಾನಗಲ್ಲ ಕದಂಬರು, ಪುಟ-೧೧೫

[53] ಅದೆ

# ೮. ಧರ್ಮ

ಪ್ರಾಚೀನ ಕಾಲದಿಂದಲೇ ಚತುಸ್ಸಮಯಗಳಾದ ಬೌದ್ಧ, ಜೈನ, ವೈಷ್ಣವ ಹಾಗೂ ಶೈವ ಧರ್ಮಗಳು ಕರ್ನಾಟಕದಲ್ಲಿ ಕಾಣಿಸಿಕೊಂಡಿದ್ದು, ಇವುಗಳಲ್ಲಿ ಯಾವುದು ಮೊದಲು ಯಾವುದು ಅನಂತರದ್ದೆಂದು ಖಚಿತವಾಗಿ ಹೇಳುವುದು ಕಷ್ಟವಾದರೂ, ತೀರ ಪ್ರಾಚೀನ ಕಾಲದಲ್ಲಿಯೇ ಕರ್ನಾಟಕವು ವೈದಿಕ ಸಂಸ್ಕೃತಿಯ ಗಾಢ ಪ್ರಭಾವಕ್ಕೆ ಒಳಗಾಗಿತ್ತೆನ್ನಬಹುದು. ಕರ್ನಾಟಕವನ್ನು ಆಳಿದ ಅರಸರು ಸಾಮಾನ್ಯವಾಗಿ ಬೌದ್ಧ, ಜೈನ, ವೈಷ್ಣವ ಹಾಗೂ ಶೈವ ಧರ್ಮಗಳ ಪೋಷಕರಾಗಿ, ಚತುಸ್ಸಮಯ ಸಮುದ್ಧರಣರೆಂದು ಕರೆಯಿಸಿಕೊಂಡಿದ್ದಾರೆ.

ಮಹಾಮಂಡಳೇಶ್ವರ ಎರಡನೆಯ ತೈಲಪದೇವ ಹಾಗೂ ಆತನ ರಾಣಿ ಬಾಚಲದೇವಿಯರಿಂದ ಕರೆಗುದರಿಯಲ್ಲಿ ದಂಡನಾಯಕತಿ ಮಲ್ಲಿಯಕ್ಕ ಪ್ರತಿಷ್ಠೆ ಮಾಡಿಸಿದ ಶಂಕರದೇವ, ಕೇಶವದೇವ ಮತ್ತು ಭಾಸ್ಕರದೇವರ ದೇವಾಲಯಗಳಿಗೆ ಭೂದಾನ ಮಾಡಿರುವುದನ್ನು ಕ್ರಿ.ಶ. ೧೧೧೮ರ ಶಾಸನವೊಂದು ಉಲ್ಲೇಖಿಸಿದೆ.[1]

ಈ ಪರಿಸರದ ಶಾಸನಗಳಲ್ಲಿ ಬೌದ್ಧ ಧರ್ಮದ ಉಲ್ಲೇಖಗಳು ಇಲ್ಲವೆಂದರೂ, ಕಲಕೇರಿ ಶಾಸನವು ಕೀರ್ತಿದೇವನ ಮಡದಿ ಮಾಳಲದೇವಿ ಬೌದ್ಧವಿಹಾರ, ಶಿವಾಲಯ ಮತ್ತು ಮಹಾಭವನಗಳ ನಿರ್ಮಾಣ ಮಾಡಿದಳೆಂದು ತಿಳಿಸುತ್ತದೆ.[2] ಹೀಗಾಗಿ ಈ ಪರಿಸರದಲ್ಲಿ ಬೌದ್ಧ ಧರ್ಮದ ಕುರುಹುಗಳನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲು ಸಾಧ್ಯವಿದೆ.

ಜೈನ ಧರ್ಮಕ್ಕೆ ಸಂಬಂಧಿಸಿದ ಬಸದಿಯೊಂದು ಈ ಗ್ರಾಮದಲ್ಲಿದ್ದು, ಅದು ಕಲ್ಯಾಣ ಚಾಳಿಕ್ಯರ ಕಾಲದ ನಿರ್ಮಿತಿಯಾಗಿದೆ. ಬಾದಾಮಿ ಚಾಲುಕ್ಯ ದೊರೆ ಎರಡನೆಯ ಕೀರ್ತಿವರ್ಮನ ಕಾಲಕ್ಕೆ ಸೇರಿದ ಆಡೂರು ಶಾಸನದಲ್ಲಿ, ಸಿಂದರಸನು ಪಾಂಡಿವೂರ ಆಳುತ್ತಿದ್ದಾಗ, ದೋಣಗವುಂಡನಿಂದ ಜಿನಾಲಾಯಕ್ಕೆ ಭೂದಾನ ಮಾಡಿರುವುದನ್ನು ಹೇಳಿದೆ. ಕಲ್ಲಿಸೆಟ್ಟಿಯೆಂಬ ವಡ್ಡವ್ಯವಹಾರಿ ಕರಿಗುದರಿಯಲ್ಲಿ ವಿಜಯ ಪಾರ್ಶ್ವಜಿನೇಂದ್ರ,[3] ಬಮ್ಮಿಶೆಟ್ಟಿ ಬಾಳೇಹಳ್ಳಿಯಲ್ಲಿ ಪಾರ್ಶ್ವನಾಥ[4] ಹಾಗೂ ಸವಣೂರು ಬಮಿಸೆಟ್ಟಿಯಿಂದ ಬೆಳವತ್ತಿಯಲ್ಲಿ ಬ್ರಹ್ಮಜಿನಾಲಯ ಹೀಗೆ ಅನೇಕ ಜೈನಬಸದಿಗಳು ನಿರ್ಮಾಣಗೊಂಡಿದ್ದಲ್ಲದೇ, ಅವುಗಳಿಗೆ ನಿರಂತರ ದಾನ ದತ್ತಿಗಳನ್ನು ಬಿಡಲಾಗಿದೆ. ನಾಗಿಸೆಟ್ಟಿ ಎಂಬುವನ ನೇತೃತ್ವದಲ್ಲಿ ಕುಂಟನಹೊಸಳ್ಳಿ ಊರ ಜನರು ಬಸದಿಯೊಂದಕ್ಕೆ ಭೂದಾನವನ್ನು ನೀಡಿದ್ದಾರೆ.[5]

**ಶೈವ ಧರ್ಮ**

ಕರ್ನಾಟಕದಲ್ಲಿ ಪ್ರಾಚೀನವೂ ಪ್ರಸಿದ್ಧವೂ ಆದ ಧರ್ಮಗಳಲ್ಲಿ ಶೈವಧರ್ಮವೂ ಒಂದು. ಈ ಶೈವಪರಂಪರೆಯ ಅನೇಕ ಪಂಗಡಗಳನ್ನು ಹೀಗೆ ಹೇಳಲಾಗಿದೆ.

"ಕಾಪಾಲಂ ಲಾಕುಲಂ ವಾಮಂ ಭೈರವಂ ಪೂರ್ವಪಶ್ಚಿಮಂ

ಪಂಚರಾತ್ರಂ ಪಾಶುಪತಂ ತಥಾನ್ಯಾನಿಶ್ರೀಹಸ್ರಶಃ"[6]

ಈ ಎಲ್ಲ ಮಾರ್ಗದವರೂ ಕರ್ನಾಟಕದಲ್ಲಿ ಇದ್ದರು. ಹಾನಗಲ್ಲು ಪ್ರದೇಶದಲ್ಲಿ ದೊರೆತಿರುವ ಬಹಳಷ್ಟು ಶಾಸನಗಳು ಶೈವಪರವಾಗಿರುವುದನ್ನೇ ಕಾಣುತ್ತೇವೆ. ಈ ಗ್ರಾಮದ ಶಾಸನಗಳಲ್ಲಿ "ಸ್ವಸ್ತಿ ಸಮಧಿಗತ ಪಂಚಮಹಾಮಂಡಳೇಶ್ವರ ಬನವಾಸಿ ಪುರವರಾಧೀಶ್ವರ ಜಯನ್ತಿಮಧುಕೇಶ್ವರ ದೇವಲಬ್ದ ವರಪ್ರಸಾದವುಂಗನಂ ಮೃಗವುದಾಮೊದನುಂ….."[7] ಎಂದು ಮುಂತಾಗಿ ಸ್ತುಸಿರುವುದರಿಂದ ಕದಂಬ ಅರಸರು ಶೈವಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರೆಂದು ಹೇಳಬೇಕಾಗುತ್ತದೆ. ಅದರಲ್ಲೂ ೧೧ನೆಯ ಶತಮಾನದ ಮಧ್ಯದವರೆಗೂ ಈ ಪರಿಸರದಲ್ಲಿ ಶೈವಧರ್ಮದ ಶಾಖೆಯಾದ ಕಾಳಾಮುಖವು ಪ್ರಬಲವಾಗಿತ್ತು. ಇಲ್ಲಿಯ ಅನೇಕ ಗ್ರಾಮಗಳಲ್ಲಿಯ ಶೈವದೇವಾಲಯಗಳಿಗೆ ಸ್ಥಾನಪತಿಗಳು ಕಾಳಾಮುಖರಾಗಿದ್ದರು.

ಕಾಳಾಮುಖ ಗುರುಗಳನ್ನು ಸಾಮಾನ್ಯವಾಗಿ ಸ್ವಸ್ತಿಯಮನಿಯಮ ಸ್ವಾಧ್ಯಾಯಧ್ಯಾನ ಧಾರಣಮೋನಾನುಷ್ಠಾನ ಸಮಾಧಿಶೀಳ ಗುಣಸಂಪನರಪ್ಪ[8] ಎಂದು ಹೇಳಿದೆ. ಶ್ರೀಮದನಾದಿ ಪಟ್ಟಣ ಹಾನುಂಗಲ್ ಚಿಕ್ಕೇಶ್ವರ ದೇವರಾಚಾರ್ಯ ವಾಗೀಶ್ವರದೇವರಂ, ಬಿಲ್ಲೇಶ್ವರ ದೇವರಾಚಾರ್ಯ ಚಂದ್ರಭೂಷಣ ದೇವರಂ…ಶ್ರೀಮದನಾದಿಪಟ್ಟ ಬಂಕಾಪುರದ ಶ್ರೀಮನ್ನಗರೇಶ್ವರ ದೇವರ ಆಚಾರ್ಯ ರಾಜಗುರು ವಿಮಳಶಕ್ತಿ ದೇವರು, ಶ್ರೀಮತ್ತಂಬುಲಿಗೇಶ್ವರ ದೇವರ ಸ್ಥಾನದಾಚಾರ್ಯ ವಾಮಶಕ್ತಿ ಪಂಡಿತದೇವರು[9] ಎಂದು ಶಾಸನಗಳಲ್ಲಿ ವರ್ಣಿತರಾಗಿದ್ದಾರೆ. ಹಾನಗಲ್ಲಿನ ಶಾಸನಗಳಲ್ಲಿ ಉಲ್ಲೇಖವಾದ ಕಾಳಮುಖ ಗುರುಗಳೆಂದರೆ,

೧. ಶ್ರೀಮತು ಸಕಳೇಶ್ವರದ ಪಂಡಿತ ದೇವರು[10]

೨. ತ್ರಿಭುವನಸಕ್ತಿ ಪಂಡಿತರು[11]

೩. ದೇವರಾಸಿ ಪಂಡಿತರು[12]

೪. ಬಿಲ್ಲೇಶ್ವರ ದೇವರಾಚಾರ್ಯ ಚಂದ್ರಭೂಷಣ ದೇವರು[13]

೫. ಭೂಮೀಶ್ವರ ದೇವರ ಸ್ಥಾನದಾಚಾರ್ಯರಪ್ಪ ವಾಮೇಶ್ವರ ದೇವರು[14]

೬. ತಂಬುಲಿಗೇಶ್ವರದ ಸ್ಥಾನಾಚಾರ್ಯ ವಾಮಶಕ್ತಿ ಪಂಡಿತದೇವರು[15]

೭. ಶ್ರೀಮನ್ನೆಲೇಶ್ವರ ದೇವರಾಚಾರ್ಯ ರಾಜಗುರು ಅಮರೇಶ್ವರ ದೇವರು[16]

೮. ಶ್ರೀಮದನಾದಿ ಪಟ್ಟಣ ಹಾನುಂಗಲ್ ಚಿಕ್ಕೇಶ್ವರ ದೇವರಾಚಾರ್ಯ ವಾಗೀಶ್ವರ ದೇವರು[17]

೯. ಶ್ರೀಮದನಾದಿಪಟ್ಟಣಂ ಬಂಕಾಪುರದ ಶ್ರೀಮನ್ನಗರೇಶ್ವರ ದೇವರ ಆಚಾರ್ಯ ರಾಜಗುರು ವಿಮಳಶಕ್ತಿ ದೇವರು[18]

ಈ ಪರಿಸರದಲ್ಲಿ ಕಾಳಾಮುಖ ಪಂಥವು ಪ್ರಭುವರ್ಗ ಮತ್ತು ಅಧಿಕಾರಿಗಳನ್ನು ಆಶ್ರಯಿಸಿ ಬೆಳೆಯದೇ ದೇವಾಲಯಗಳನ್ನು ಆಶ್ರಯಿಸಿ ಬೆಳೆಯಿತು. ಮೇಲಿನ ಉಲ್ಲೇಖಗಳಲ್ಲಿ ಕೆಲವು ಕಾಳಾಮುಖ ಪಂಡಿತರನ್ನು ರಾಜಗುರುಗಳು ಎಂದು ಕರೆದಿರುವುದು ಕಂಡುಬಂದರು ಅವರು ಯಾರಿಗೆ ರಾಜಗುರುಗಳಾಗಿದ್ದರೆಂಬುವುದು ಸ್ಪಷ್ಟವಾಗುವುದಿಲ್ಲ.

**ಸಕಳೇಶ್ವರದ ಪಂಡಿತ ದೇವರು**

ಕ್ರಿ.ಶ. ೧೧೧೯ರ ಹಳೆಕೋಟೆಯ ಅಡ್ಡೆರ ಹಿತ್ತಲದಲ್ಲಿರುವ ಶಾಸನದಲ್ಲಿ[19] "ಶ್ರೀಮತು ಸಕಳೇಶ್ವರದ ಪಂಡಿತ ದೇವರ ತಂಮದಿರಪ್ಪ ತ್ರಿಭುವನಸಕ್ತಿ ಪಂಡಿತರ ಕಾಲಂ ಕರ್ಚ್ಚಿ ಧಾರಾಪೂರ್ವಕಂ ಮಾಡಿ ಸ್ರುಮ…ಲಿ ದೇವರ್ಗ್ಗೆ ಬಿಟ್ಟ ಧರ್ಮಮೆನ್ತೆಂದಡೆ…" ಎಂದು ಸಕಳೇಶ್ವರನ ಉಲ್ಲೇಖ ಬರುತ್ತದೆ. ಬಹುಷಃ ಇವನು ಅಲ್ಲಿರುವ ತೆಲ್ಲಿಗೇಶ್ವರ ದೇವರ ಸ್ಥಾನಾಚಾರ್ಯನಾಗಿರಬೇಕು. ಶಾಸನವು ತೃಟಿತವಾಗಿರುವುದರಿಂದ ಸ್ಪಷ್ಟವಾಗುವುದಿಲ್ಲ.

**ತ್ರಿಭುವನಸಕ್ತಿ ಪಂಡಿತರು**

ಸಕಳೇಶ್ವರ ಪಂಡಿತನ ಸಹೋದರನಾದ ತ್ರಿಭುವನಸಕ್ತಿ ಪಂಡಿತನ ಉಲ್ಲೇಖ ಅದೇ ಶಾಸನದಲ್ಲಿದೆ.[20]

**ಬಿಲ್ಲೇಶ್ವರಾಚಾರ್ಯ ದೇವರಾಸಿಪಂಡಿತರು**

ಕ್ರಿ.ಶ. ೧೧೧೯ರ ಹಾನಗಲ್ಲಿನ ಶಾಸನದಲ್ಲಿ ಉಕ್ತವಾಗಿರುವ ಬಿಲ್ಲೇಶ್ವರ ದೇವರ ಆಚಾರ್ಯರಾಗಿದ್ದ ದೇವರಾಸಿ ಪಂಡಿತರನ್ನು[21] "ಸ್ವಸ್ತಿಯಮನಿಯಮ ಸ್ವಾಧ್ಯಾಯಧ್ಯಾನ ಧಾರಣಮೋನಾನುಷ್ಠಾನ ಸಮಾಧಿಶೀಳ ಗುಣಸಂಪನರಪ್ಪ ಶ್ರೀ ದೇವರಾಸಿ ಪಂಡಿತರ ಕಾಲಂ ಕರ್ಚ್ಚಿ ಧಾರಾಪೂರ್ವಕಂ ಮಾ….೨೧ ಎಂದು ಮಹಾಮಂಡಳೇಶ್ವರ ತೈಲಪದೇವನು ದಾನ ಕೊಟ್ಟಿರುವುದನ್ನು ಹೇಳಿದೆ. ಇವನು ಹಾನಗಲ್ಲಿನ ಬಿಲ್ಲೇಶ್ವರ ದೇವಾಲಯದ ಸ್ಥಾನಚಾರ್ಯನಲ್ಲದೆ, ಬೆಳವತ್ತಿಯ ಕೋಗಲೇಶ್ವರ, ಪುಲಿಗೆರೆಯ ರಾಮೇಶ್ವರ, ಹೊಟ್ಟೂರಿನ ಕೇಸವೇಶ್ವರ, ಆಡೂರಿನ ಸ್ವಯಂಭೂದೇವ ಮತ್ತು ತಿಳಿವಳ್ಳಿಯ ಮೂಲಸ್ಥಾನ ದೇವರ ಆಚಾರ್ಯವಂತಿಯನ್ನು ಕೈಗೊಂಡಿರುವುದು ಆ ಪರಿಸರದ ಶಾಸನಗಳು ಉಲ್ಲೇಖಿಸಿವೆ.[22] ಇವನು ಸುಪ್ರಸಿದ್ಧ ಆಚಾರ್ಯ ಅಮೃತರಾಸಿಪಂಡಿತರ ಶಿಷ್ಯನಾಗಿದ್ದನು.

**ಬಿಲ್ಲೇಶ್ವರ ದೇವರಾಚಾರ್ಯ ಚಂದ್ರಭೂಷಣ ದೇವರು**

ಕ್ರಿ.ಶ. ೧೧೧೭ರ ತೋಯಿಮದೇವ (ತೈಲಪದೇವ)ನ ಶಾಸನವೊಂದರಲ್ಲಿ "ಬಿಲ್ಲೇಶ್ವರ ದೇವರಾಚಾರ್ಯ ಚಂದ್ರಭೂಷಣ ದೇವರಂ" ಎಂಬ ಉಲ್ಲೇಖ ಬರುತ್ತದೆ.[23] ಅಲ್ಲದೆ ಈ ಪರಿಸರದ ಹಲವಾರು ದೇವಾಲಯಗಳ ಅಧಿಕಾರವನ್ನು ವಹಿಸಿಕೊಂಡಿದ್ದನು. ಬಂಕಾಪುರ ಶಾಸನವೊಂದು ಅವನ ವ್ಯಕ್ತಿತ್ವವನ್ನು ಹೀಗೆ ಪರಿಚಯಿಸಿದೆ,

"ಒದವಿದ ಮೋಹಪಾಶಮನದಂ ಪಳಿದಿಕ್ಕಿ ಕಳತ್ರಮೆಂಬ ಕಂ

ಬದ ತೊಡರಂ ಬಿಡಿರ್ಚಿ ವಿಶಯಂಗಳನೆಯ್ದಿಂ ಕಿವಿರ್ಚ್ಚಿರಾಗಮೆಂ

ಬುದಧಿಯನಿಂಟ ಬನ್ದು ಶಿವಯೋಗಸುಧಾಂಬುನದೀ ಪ್ರವಾಹದೊಳು

ಮುದದವಗಾಂಹಮಿರ್ದುದಹ ಚಂದ್ರಭೂಷಣ ಗನ್ದಸಿಂಧುರ "[24]

ಮಹಾಮಂಡಳೇಶ್ವರ ತೈಲಪದೇವನ ಆಳ್ವಿಕೆಯಲ್ಲಿ ಹಾನಗಲ್ಲು ಪರಿಸರದ ಎಡೆವೊಳಲು ಎಪ್ಪತ್ತರ ಭಾಗ ಪಿರಿಯೂರ ನಾಲ್ವರು ಗಾವುಂಡರು ಗಡಿಯಂಕಮಲ್ಲನ ಬೀಡಿನಲ್ಲಿ ಸೋಮೇಶ್ವರದೇವಸ್ಥಾನ ನಿರ್ಮಾಣ ಮಾಡಿಸಿ, ಅದನ್ನು ಚಂದ್ರಭೂಷಣ ಪಂಡಿತರ ಪಾದತೊಳೆದು ಅರ್ಪಿಸಿರುವರು. ಈ ದೇವಾಲಯದಲ್ಲಿ ತಪಸ್ಸು ಕೈಕೊಳ್ಳುವ ತಪೋಧನರಿಗೆ ಊಟ ವಸತಿಯ ಅವಕಾಶ ಕಲ್ಪಿಸಿ ಕೊಡಲಾಗಿದ್ದು, ಅವರ ಆಹಾರ ಮತ್ತು ದೇವರ ನೈವೇದ್ಯಕ್ಕೆ ೨೫ ಕಮ್ಮ, ಬೀಡಿನ ದಕ್ಷಿಣ ಕೊಳದೊಳಗೆ ಬೆದ್ದಲು ೫೦ ಕಮ್ಮ, ಬಮ್ಮಸೆಟ್ಟಿಯ ಕೆರೆಯ ಕೆಳಗೆ ೧೫ ಕಮ್ಮ ಹೂದೋಟ ಬಿಟ್ಟಿರುವರು.[25]

ಚಂದ್ರಭೂಷಣ ಪಂಡಿತ ಬಂಕಾಪುರ ನಗರೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿಯೂ ಕಾರ್ಯನಿರ್ವಹಿಸುತ್ತಿದ್ದನು. ಅವನ ಕಾಲದಲ್ಲಿ ಈ ದೇವಾಲಯವು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯಿತು.[26]

**ತಂಬುಲಿಗೇಶ್ವರದ ಸ್ಥಾನಾಚಾರ್ಯ ವಾಮಶಕ್ತಿ ಪಂಡಿತದೇವರು**

ಹಾನಗಲ್ಲು ಪರಿಸರದ ಹತ್ತಾರು ಶಸನಗಳಲ್ಲಿ ಕಾಣಿಸಿಕೊಂಡಿರುವ ವಾಮಶಕ್ತಿ ಪಂಡಿತರು "ಬೆಳ್ಳಿಟ್ಟಿಗೆಯಪುರದ ಸೋಮೇಶ್ವರದೇವರ ಸ್ಥಾನಾಚಾರ್ಯ ದೇವರಾಸಿ ಪಂಡಿತರ ಶಿಷ್ಯರಪ್ಪ ಶ್ರೀಮತ್ತಂಬುಲಿಂಗೇಶ್ವರ ದೇವರ ಸ್ಥಾನಾಚಾರ್ಯ ವಾಮಶಕ್ತಿ ಪಂಡಿತ ದೇವರು" ಎಂಬ ಉಲ್ಲೇಖದಿಂದ, ಇವನು ದೇವರಾಸಿ ಪಂಡಿತನ ಶಿಷ್ಯನಾಗಿದ್ದನೆಂದು ವ್ಯಕ್ತವಾಗುತ್ತದೆ.

ಕದಂಬ ಮಯೂರವರ್ಮನ ಕಾಲದಲ್ಲಿ ವಾಮಶಕ್ತಿ ಪಂಡಿತ ಕಾಳಾಮುಖ ಪರಂಪರೆಯಲ್ಲಿ ಅಗ್ರಗಣ್ಯನಾಗಿದ್ದ. ಕ್ರಿ.ಶ. ೧೦೩೫ರ ಆಡೂರಿನ ಶಾಸನದಲ್ಲಿ ಅವನ ಜೀವನದಲ್ಲಿ ನಡೆದ ಘಟನೆಯೊಂದನ್ನು ಇಂತು ಹೇಳಿದೆ, ಭಂಗಿಯಿನ್ದೊಳಗುಳ್ಳರ(ಂಗೆ) ನೆಯರ ಪುತ್ರಂ ಗಂಗೆಯೆಂಗೆರಡಲ್ತಾಳ್ದಿರ ಜಿನದಾಸಿ ತುಂಗಪರಾಕ್ರಮಂ ಪಿಂಗದು ಮನದಿಂ ತ್ರಿಪುರಂಗಳ ನಿಚ್ಚಾತನ ಭಯವಕ್ಕೆ ಪಾಂಗಿ ಮಾರ್ಮಲೆವರ್ಗ್ಗೆಯಂಗಜವೈರಿ ತಾಂ ಭಂಗಿಯ(ಲ್ತ) ಪದಂಕಕಾಥ ವಾಮದೇವ ಎಂದು ವಿವರಿಸಿದೆ.[27] ಬಾಗೀಶ್ವರದೇವರ ತದಪೋಧನರ ಅಗ್ರಾಸನಕ್ಕೆ ತಂಬುಲಿಗೇಶ್ವರ ದೇವರ ಸ್ಥಾನಾಚಾರ್ಯ ವಾಮಶಕ್ತಿಗಳ ಪಾದತೊಳೆದು ಒಂದು ಮತ್ತರು ಗದ್ದೆ, ಮಾದೇವಸಿದ್ದೇಶ್ವರ ನೈವೇದ್ಯಕ್ಕೆ, ತಪೋಧನರ ಊಟಕ್ಕೆ ನಾಲ್ವತ್ತು ಕಮ್ಮ ಗದ್ದೆ, ತಂಬಿಗೇಶ್ವರಕ್ಕೆ ಕಮ್ಮ ೨೦, ಪುನ್ನೇಶ್ವರದೇವರಿಗೆ ಕಮ್ಮ ೧೨ನ್ನು ದತ್ತಿ ಕೊಟ್ಟಿರುವರು.[28] ಕೊಂಡರಟ್ಟೆ ಎಪ್ಪತ್ತಾರರೊಳಗನ ಕಲಿದೇವೇಶ್ವರ ನೈವೇದ್ಯ ತಪೋಧನರ ಅಗ್ರಸ್ಥಾನಕ್ಕೆ ಕೊಳಗಾವುಂಡನೆಂಬುವನು ತಂಬುಲಿಂಗೇಶ್ವವರ ಸ್ಥಾನಾಚಾರ್ಯ ವಾಮಶಕ್ತಿಗಳ ಪಾದ ತೊಳೆದು ಐವತ್ತು ಕಮ್ಮ ಗದ್ದೆ ದತ್ತಿ ಬಿಟ್ಟಿರುವನು.[29]

ವಾಮಶಕ್ತಿಗಳ ಬಹುಮುಖ ಪಾಂಡಿತ್ಯವನ್ನು ಹೇಳುವ ಪದ್ಯ ಒಂದು ಇಂತಿದೆ,

"ವ್ರತದೀಕ್ಷಾವಿಧಿ ಕುಂಡಮಂಡಳವಿಧಾನಂ ಲಿಂಗಪೀಠಕ್ರಮಂ

ಪ್ರತಿಮಾದೂಷಣ ಶೋಷಣ ಭುವನಕೋಶಂ ವಾಸ್ತುಭೂದೇವಸಂ

ಸ್ಮೃತಿ ಭೋಭೇದ ಪರೀಕ್ಷೆ ದೇವನಿವಹ ಪ್ರಾಸಾದ ಮೆಂಬಾಗಮ

ಸ್ಥಿತಿ ವಿದ್ಯಾವಳಿ ವಾಮಶಕ್ತಿಮುನಿಯಿಂ ವಿಖ್ಯಾತಮಾಯ್ತುರ್ವಿಯೋಳ್ "[30]

**ವಿಮಳಶಕ್ತಿ ದೇವರು**

ಹಾನಗಲ್ಲಿನ ಕ್ರಿ.ಶ. ೧೧೭೯ರ ಶಾಸನವೊಂದರಲ್ಲಿ "ಶ್ರೀಮದನಾದಿಪಟ್ಟಣಂ ಬಂಕಾಪುರದ ಶ್ರೀಮನ್ನಗರೇಶ್ವರ ದೇವರ ಆಚಾರ್ಯ ರಾಜಗುರು ವಿಮಳಶಕ್ತಿ ದೇವರು"[31] ಎಂದು ಉಲ್ಲೇಖಿಸಿದೆ. ಬೊಮ್ಮನಗೌಡನು ಸೆಂಬೊಳದ ಗೌಡಕಿಯನ್ನು ಪಡೆಯುವ ಸಂದರ್ಭದಲ್ಲಿ ಹಲವಾರು ಗಣ್ಯರು, ಸ್ಥಾನಾಚಾರ್ಯರು ಮತ್ತು ಮಹಾಜನರ ಉಪಸ್ಥಿತಿಯನ್ನು ಉಲ್ಲೇಖಿಸುತ್ತದೆ. ಇವನು ಬಂಕಾಪುರದ ನಗರೇಶ್ವರ ದೇವಾಲಯದ ಸ್ಥಾನಾಚಾರ್ಯರಲ್ಲಿ ಪ್ರಮುಖನಾಗಿ ಕಂಡುಬರುತ್ತಾನೆ.

ಇವನ ವ್ಯಕ್ತಿತ್ವವನ್ನು ಶಾಸನವೊಂದು ಹೀಗೆ ವರ್ಣಿಸಿದೆ,

'ಪರಹಿತಚಿತ್ತ' 'ಷಡಕ್ಷರ ಮಂತ್ರಸಿದ್ಧ' 'ಜಂಗಮ ಪಾರಿಜಾತ' ಬಿರುದುಗಳೊಂದಿಗೆ ಗೌರವಿಸಿದೆ. ಕದಂಬ ಎರಡನೆಯ ಕೀರ್ತಿದೇವರಸನ ಕಾಲದಲ್ಲಿ ಈ ವಿಮಳಶಕ್ತಿಯ ಮಹಿಮೋನ್ನತ ತಪಪ್ರಭಾವವನ್ನು ಬಂಕಾಪುರ ಶಾಸನವು ಇಂತು ವರ್ಣಿಸಿದೆ,

'ಆತತಕೀರ್ತಿಯಂ ವಿಮಳಶಕ್ತಿಯನಿ…….ಕ್ರಿಯಂ

ಸಾಸ್ವಿಕದಾನವಂ ಮನುಚರಿತ್ರನನಿಜಿನತ ಪುಟ್ಬಿಚಾಪನಂ

ನೀತಿವಿಚಾರನಂ ಮುನಿಕಳಾಪನ ನಿರ್ಮಿತಿ ದೇವರ್ಗ್ಗೆ….

ತಳವಂದ್ಯನಂ ಮರುಳೆ ಬೇಡವೊ ಜಂಗಮ ಪಾರಿಜಾತನಂ’[32]

ಇವನು ತನ್ನ ಬದುಕಿನಲ್ಲಿ ಕೈಕೊಂಡ ಜನಪ್ರಿಯ ಕಾರ್ಯಗಳು ಹೀಗಿವೆ,

ವಿರಚಿಪನರ್ತ್ಥಿಯಿಂ ಸುರಗ್ರಿಹಾವಳಿಯಂ ವಿವಿಧ ಪ್ರಕಾರದಿಂ

…….ಪತ್ರಕ ವಿರಾಜಿತಮಾಗಿರಲೆಂತು ನೋರ್ಪಡಂ

ಪರಹಿತಚಿತ್ತಂ ವಿಮಳಶಕ್ತಿಯಲೇಶ್ವರನೆಂದು ಲೀಲೆಯಿಂ

ಪರಸು ಮನೋರಥಸಿದ್ಧಿಯನಾವ ಕಾಲ ಮುಂ||[33]

**ವೈಷ್ಣವ ಧರ್ಮ**

ಶೈವ ಧರ್ಮದಂತೆ ಹಿಂದೂ ಧರ್ಮದ ಇನ್ನೊಂದು ಶಾಖೆಯಾದ ವೈಷ್ಣವ ಧರ್ಮವು ಹಾನಗಲ್ಲು ಪರಿಸರದಲ್ಲಿ ಪ್ರಚಲಿತವಿತ್ತು. ವಿಷ್ಣುವಿನಲ್ಲಿರಿಸಿದ ಅಚಲವಾದ ಭಕ್ತಿಯೆ ಭವಸಾಗರದಿಂದ, ಸಾಧಕರನ್ನು ಮುಕ್ತಮಾಡುತ್ತದೆಯೆಂದು ವೈಷ್ಣವ ಧರ್ಮ ಹೇಳುತ್ತದೆ. ಈ ಧರ್ಮವು ಅಭಿವೃದ್ಧಿ ಹೊಂದುತ್ತ ಹೋದಂತೆ ನಾರಾಯಣ ಕಲ್ಪನೆಯನ್ನು ಮೈಗೂಡಿಸಿಕೊಂಡಿತು. ಈ ಧರ್ಮದವರಿಗೆ ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ, ಭಾಗವತ ಇವು ಪ್ರಮಾಣ ಗ್ರಂಥಗಳು.[34] ಈ ಪರಿಸರದಲ್ಲಿ ಶೈವ ಧರ್ಮದಷ್ಟು ಇದು ಪ್ರಭಲವಾಗಿರಲಿಲ್ಲವಾದರೂ ಅಲ್ಲಿರುವ ಶಾಸನವೊಂದರಲ್ಲಿ

“ಶ್ರೀಜಯತುಷಕ……..ಪ್ಪತ್ತೊಂದನೆಯ

ವಿಭವ ಸಂವಛರದ ವಯಿಶಾಕ

ಶು ೧೦ ವ ಮಾದವ ದೇವರ ಶ್ರೀಮೂ

ರ್ತಿಯಂ ಹಾವಣಿಗೆಯ ಚಂದಾಜ

(ಮಾಡಿ)ದ ಮಂಗಳ ಮಾಹಾ ಶ್ರೀ ಶ್ರೀ“

ಅಲ್ಲಿರುವ ಮಾಧವ ದೇವಾಲಯದಲ್ಲಿರುವ ಮಾದವ ಮೂರ್ತಿಯ ಪಾದಪೀಠದ ಮೇಲಿರುವ ಈ ಶಾಸನವು ಈ ಗ್ರಾಮದಲ್ಲಿಯ ವೈಷ್ಣವ ಧರ್ಮದ ಉಲ್ಲೇಖವನ್ನು ತಿಳಿಸುತ್ತದೆ.[35]

ಹೀಗೆ ಹಾನಗಲ್ಲು ಪರಿಸರದ ಪುರಾತತ್ವ ಮತ್ತು ಸಾಹಿತ್ಯದ ಆಧಾರಗಳು ಪ್ರಾಚೀನ ಕಾಲದಲ್ಲಿ ಪ್ರಚಲಿತವಿದ್ದ ಧರ್ಮಗಳು, ಅವುಗಳ ಆಚಾರ - ಸಂಪ್ರದಾಯಗಳನ್ನು ತಕ್ಕಮಟ್ಟಿಗೆ ಒದಗಿಸುತ್ತವೆ.

---

[1] ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲೆಯ ಶಾಸನಸೂಚಿ, ಪು.೫೯

[2] ಅಡಿಟಿಪ್ಪಣಿ ೨೭ರಲ್ಲಿ ಇದ್ದಂತೆ

[3] ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲೆಯ ಶಾಸನಸೂಚಿ, ಪು-೫೯

[4] ಅದೆ

[5] ಅದೆ

[6] ಪಾಟೀಲ ಭೋಜರಾಜ, ನಾಗರಖಂಡ-೭೦ : ಒಂದು ಅಧ್ಯಯನ, ಪು.೪೭೧

[7] Moraes, The Kadamba Kula, P.45೦

[8] K.I., V, 18, (1119 A.D.)

[9] K.K., P.454, (1179 A.D.)

[10] K.I., V, 95, (1119 A.D.)

[11] ಅದೆ

[12] ಅದೆ, 19, (1119 A.D.)

[13] ಅದೆ

[14] ಅಡಿಟಿಪ್ಪಣಿ ೭ರಲ್ಲಿ ಪು.೪೪೧

[15] ಅದೆ

[16] Moraes, The Kadamba Kula, P.454

[17] ಅದೆ

[18] ಅದೆ

[19] K.I., V, 95, (1119 A.D.)

[20] ಅದೆ

[21] ಅದೆ

[22] ವಿವರಗಳಿಗಾಗಿ ನೋಡಿ ಪಾವಟೆ ಚೆನ್ನಕ್ಕ, ಹಾನಗಲ್ಲ ಕದಂಬರು, ಪುಟ.೧೪೬

[23] Moraes, The Kadamba Kula, P.454

[24] S.I.I., XVIII, 139, (1137 A.D.)

[25] ಪಾವಟೆ ಚೆನ್ನಕ್ಕ, ಹಾನಗಲ್ಲ ಕದಂಬರು, ಪುಟ.೧೪೮

[26] ಅದೆ, ಪು.೧೪೯

[27] S.I.I., XX, 34, (1034-35 A.D.)

[28] ಪಾವಟೆ ಚೆನ್ನಕ್ಕ, ಹಾನಗಲ್ಲ ಕದಂಬರು, ಪುಟ.೧೫೪

[29] ಅದೆ

[30] ಅದೆ

[31] Moraes, The Kadamba Kula, P.454

[32] ಪಾವಟೆ ಚೆನ್ನಕ್ಕ, ಹಾನಗಲ್ಲ ಕದಂಬರು, ಪುಟ.೧೫೧

[33] ಅದೆ

[34] ಪಾಟೀಲ ಭೋಜರಾಜ, ನಾಗರಖಂಡ-೭೦ : ಒಂದು ಅಧ್ಯಯನ, ಪು.೪೮೮

[35] K.I., V, 112, (1338 A.D.)

# ೬. ವ್ಯಾಪಾರ - ವಾಣಿಜ್ಯ

ಹಾನಗಲ್ಲು ಚಾರಿತ್ರಿಕವಾಗಿ ಪ್ರಸಿದ್ಧಿ ಹೊಂದಿರುವುದು ಕದಂಬ ಶಾಖೆಯ ಆಳ್ವಿಕೆಯಿಂದ ಎಂಬುದು ತಿಳಿದ ಸಂಗತಿ. ಕ್ರಿ.ಶ. ೧೧ನೆಯ ಶತಮಾನದ ಕೊನೆಯ ಭಾಗದಿಂದ ಕ್ರಿ.ಶ. ೧೩ನೆಯ ಶತಮಾನದ ಆದಿ ಭಾಗದವರೆಗೆ ಈ ಪ್ರದೇಶದಲ್ಲಿ ಕದಂಬರು ಆಳ್ವಿಕೆ ನಡೆಸಿದ್ದರು. ಆರಂಭದಲ್ಲಿ ಬನವಾಸಿಯನ್ನು, ಬಳಿಕ ಹಾನಗಲ್ಲನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದುದು ಗಮನೀಯ.

ಹಾನಗಲ್ಲು ಪರಿಸರ ಮಲೆನಾಡ ಪರಿಸರವೇ ಆಗಿದೆ. ಇದು ಭೌಗೋಳಿಕವಾಗಿ ಬೆಟ್ಟ ಗುಡ್ಡ, ನದಿ ಕೊಳ್ಳಗಳಿಂದ ಕೂಡಿದೆ. ಇಲ್ಲಿ ಬೆಳೆಯುವ ಶ್ರೀಗಂಧ ಮೊದಲಾದ ಬೆಲೆಬಾಳುವ ಮರಗಿಡಗಳು, ತೋಟಗಾರಿಕೆ ಬೆಳೆಗಳು ಹಾಗೂ ಭತ್ತ ಮೊದಲಾದ ಕೃಷಿ ಬೆಳೆಗಳು ಪ್ರಾಚೀನ ಕಾಲದಿಂದ ಪ್ರಸಿದ್ಧಿ ಪಡೆದವು. ಈ ಪ್ರದೇಶದಲ್ಲಿ ಕರ್ನಾಟಕವನ್ನು ಆಳಿದ ವಿವಿಧ ಅರಸು ಮನೆತನಗಳಾದ ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ ಹಾಗೂ ನಂತರ ಬಂದ ಅರಸು ಮನೆತನಗಳ ಆಳ್ವಿಕೆಯನ್ನು ಹಾಸನ ಸಾಹಿತ್ಯಗಳಿಂದ ತಿಳಿದುಬರುತ್ತದೆ.

ಹಾನಗಲ್ಲು ಪ್ರದೇಶದ ವ್ಯಾಪಾರ - ವಾಣಿಜ್ಯಗಳನ್ನು ಅರಿಯಬೇಕಾದರೆ ಕರ್ನಾಟಕದ ಪ್ರಾಚೀನ ವ್ಯಾಪಾರ - ವಾಣಿಜ್ಯದ ಹಿನ್ನೆಲೆ ಅತ್ಯಗತ್ಯವಾಗಿದೆ. ಕಾರಣವೆಂದರೆ ಒಂದೇ ಪ್ರದೇಶದ ಆರ್ಥಿಕ ಸಂಗತಿಗಳನ್ನು ತಿಳಿಯಲು ವಿಫುಲವಾದ ಆಕರಗಳಿರುವುದಿಲ್ಲ. ವಿವಿಧ ಭಾಗಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಆಧರಿಸಿ ವ್ಯಾಪಾರ - ವಾಣಿಜ್ಯದ ಸಮಗ್ರ ಚಿತ್ರಣವನ್ನು ನೀಡಲು ಸಾಧ್ಯವಾಗುತ್ತದೆ.

ಕರ್ನಾಟಕದಲ್ಲಿ ವ್ಯಾಪಾರವು ಕ್ರಿ.ಪೂ. ೪-೩ ಶತಮಾನಗಳಷ್ಟು ಹಿಂದೆ ಹೋಗುತ್ತದೆ. ಪ್ರಾಚೀನ ಭಾರತದ ಅರಸು ಮನೆತನವಾದ ಮೌರ್ಯ ಸಾಮ್ರಾಜ್ಯ ಕಾಲದ ಹೊತ್ತಿಗೆ ಉತ್ತರ ಭಾರತವು ದಕ್ಷಿಣದ ರಾಜ್ಯಗಳೊಂದಿಗೆ ಧಾರ್ಮಿಕ ಹಾಗೂ ಆರ್ಥಿಕ ಸಂಪರ್ಕವನ್ನು ಸಾಧಿಸಿದ್ದಿತು.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಕೃಷಿಯು ಜನರ ಮೂಲ ಕಸುಬಾಗಿದ್ದಿತು. ಆದುದರಿಂದ ಕೃಷಿಯಲ್ಲಾದ ಅಧಿಕ ಉತ್ಪಾದನೆ, ಅವುಗಳ ಮಾರಾಟ, ಮಾರಾಟಕ್ಕಾಗಿ ಬೇಕಾದ ಮಾರಾಟ ಕೇಂದ್ರಗಳು, ವ್ಯಾಪಾರಗಳು, ವ್ಯಾಪಾರ ಸಂಘಗಳು ಹಾಗೂ ವ್ಯಾಪಾರ ಮಾರ್ಗಗಳು ಒಂದೊಂದಾಗಿ ಕಾಣಿಸಿಕೊಂಡವು. ಈ ಬಗೆಯ ಪ್ರಕ್ರಿಯೆ ನಗರೀಕರಣಕ್ಕೂ ಎಡೆಮಾಡಿಕೊಟ್ಟಿತೆನ್ನಬಹುದು.

ವ್ಯಾಪಾರದ ಬೆಳವಣಿಗೆಯೊಂದಿಗೆ ಮುಂದೆ ಮಹಾನಗರ, ನಗರ, ಪಟ್ಟಣ, ನಿಗಮ ಮುಂತಾದ ಕೇಂದ್ರಗಳು ನಿರ್ಮಾಣಗೊಂಡವು. ಅಂತೆಯೇ ನಾಣ್ಯಗಳ ಬಳಕೆ, ಕೃಷಿಯೇತರ ಕಸುಬುಗಳು ಜನರು ಒಂದು ಕಡೆಯಿಂದ ಮತ್ತೊಂದೆಡೆಗೆ ವೃತ್ತಿ ಹಾಗೂ ವ್ಯಾಪಾರಗಳನ್ನು ಆಶ್ರಯಿಸಿ ಹೋಗಲು ಆರಂಭಿಸಿದರು. ಇದು ಕೂಡ ವ್ಯಾಪಾರ ಮಾರ್ಗಗಳ ನಿರ್ಮಾಣಕ್ಕೆ ಮೂಲ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿಯೇ ಮೌರ್ಯರ ಕಾಲದ ಹೊತ್ತಿಗೆ ಉತ್ತರಾಪಥ ಮತ್ತು ದಕ್ಷಿಣಾಪಥಗಳೆಂಬ ವ್ಯಾಪಾರ ಮಾರ್ಗಗಳು ಅಸ್ತಿತ್ವದಲ್ಲಿದ್ದುದನ್ನು ಬೌದ್ಧ ಸಾಹಿತ್ಯದಲ್ಲಿ ಕಾಣಬಹುದು. ಈ ಮಾರ್ಗಗಳು ವ್ಯಾಪಾರದ ಜೊತೆಗೆ ಮೌರ್ಯ ಕಾಲದ ರಾಜ ಧರ್ಮವಾಗಿದ್ದ ಬೌದ್ಧ ಧರ್ಮದ

ಪ್ರಚಾರಕ್ಕೂ ಬಳಕೆಗೊಂಡವೆಂಬುದು ಗಮನಾರ್ಹ. ಇದರಿಂದ ಉತ್ತರ ಭಾರತ ಮತ್ತು ದಕ್ಷಿಣ ಭಾರತಗಳು ಪ್ರಾಚೀನ ಕಾಲದಲ್ಲಿ ಧಾರ್ಮಿಕ, ಆರ್ಥಿಕ ಹಾಗೂ ಆಡಳಿತಾತ್ಮಕವಾಗಿ ಸಂಪರ್ಕ ಸಾಧಿಸಿದ್ದುದು ದೃಢವಾಗುತ್ತದೆ.

ಕರ್ನಾಟಕದಲ್ಲಿ ಮೌರ್ಯ - ಶಾತವಾಹನ ಕಾಲದ ಹೊತ್ತಿಗೆ ಅನೇಕ ಪೇಟೆ-ಪಟ್ಟಣಗಳು ಅಸ್ತಿತ್ವದಲ್ಲಿದ್ದವು. ಅಶೋಕನ ಶಾಸನಗಳಿರುವ ಬ್ರಹ್ಮಗಿರಿ, ಮಸ್ಕಿ, ಕೊಪ್ಪಳ ಮತ್ತು ಸನ್ನತಿಗಳಲ್ಲದೆ ಬನವಾಸಿ, ಚಂದ್ರವಳ್ಳಿ, ವಡಗಾಂವ್ - ಮಾಧವಪುರ ಮೊದಲಾದವು ಪ್ರಾಚೀನ ಕರ್ನಾಟಕದ ವಾಣಿಜ್ಯ ಕೇಂದ್ರಗಳಾಗಿದ್ದವು. ಅಶೋಕನ ಆಳ್ವಿಕೆಯು ಅಂದಿನ ಮಹಾಮಾತ್ರ ಮೂಲಕ ವ್ಯಾಪಾರಿಗಳಿಗೆ ರಾಜಕೀಯ ಶಕ್ತಿಯನ್ನು ತಂದುಕೊಟ್ಟಿತ್ತು. ಅಂದಿನ ರಾಜಧರ್ಮ ಬೌದ್ಧಧರ್ಮದ ಸಂದೇಶಗಳನ್ನು ಹೊಸ ಭೂಭಾಗ ಹಾಗೂ ಹೊರನಾಡುಗಳಿಗೆ ಸಾರುವ ಅವಕಾಶವನ್ನು ಒದಗಿಸಿದ್ದಿತು. ಇದೇ ಮುಂದೆ ವ್ಯಾಪಾರಿ ಸಂಘಗಳ ಹುಟ್ಟಿಗೂ ಕಾರಣವಾಯಿತು. ಈ ಹಿನ್ನೆಲೆಯಲ್ಲಿ ಮೆಗಾಸ್ತನೀಸನು ತನ್ನ ಬರವಣಿಗೆಯಲ್ಲಿ 'ಮೌರ್ಯ ಸಾಮ್ರಾಜ್ಯದ ವ್ಯಾಪಾರಿಗಳ ಅದರಲ್ಲೂ ವಿದೇಶಿ ವ್ಯಾಪಾರಿಗಳ ಯೋಗಕ್ಷೇಮವನ್ನು ನೋಡಿಕೊಳ್ಳಲೆಂದು ಒಂದು ಪ್ರತ್ಯೇಕ ಇಲಾಖೆ' ಇತ್ತೆಂದು ಹೇಳಿದ್ದಾನೆ.

ಮೌರ್ಯ ಆಳ್ವಿಕೆಯ ಸಂದರ್ಭದಲ್ಲಿ ದಕ್ಷಿಣ ಪಥದ ವಾಣಿಜ್ಯ ಮಾರ್ಗದಲ್ಲಿ ಮುತ್ತು ರತ್ನಗಳು, ಸಮುದ್ರದ ಚಿಪ್ಪಿನಿಂದ ತಯಾರಿಸಿದ ವಸ್ತುಗಳು, ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ ಮೊದಲಾದ ಲೋಹಗಳು, ಸಾಂಬಾರು ಪದಾರ್ಥಗಳನ್ನು ಸಾಗಿಸುತ್ತಿದ್ದರು. ಮೌರ್ಯರ ಕಾಲದಲ್ಲಿ ಕರ್ನಾಟಕದ ಕೋಲಾರ ಮತ್ತು ಹಟ್ಟಿ ಚಿನ್ನದ ಗಣಿಗಳಲ್ಲಿ ಗಣಿಗಾರಿಕೆ ನಡೆಯುತ್ತಿದ್ದು, ಇದು ಪಾಟಲೀಪುತ್ರಕ್ಕೂ ರವಾನೆಯಾಗುತ್ತಿತ್ತೆಂದು ತಿಳಿದುಬರುತ್ತದೆ. ಅಂದಿನ ವ್ಯಾಪಾರ ವ್ಯವಹಾರಗಳನ್ನು ಮುದ್ರಾಂಕಿತ ನಾಣ್ಯಗಳಿಂದಲೂ ತಿಳಿಯಬಹುದಾಗಿದೆ. ಧಾರವಾಡದಲ್ಲಿ ದೊರೆತಿರುವ ೧೧ ಬೆಳ್ಳಿಯ ಮುದ್ರಾಂಕಿತ ನಾಣ್ಯಗಳನ್ನು ಕಾರ್ಷಾಪಣಗಳೆಂದು ಗುರುತಿಸಿದ್ದು, ಇವು ಮೌರ್ಯ ಮತ್ತು ಅನಂತರ ಕಾಲದ ನಾಣ್ಯಗಳೆಂದು ಹೇಳಲಾಗಿದೆ.

ಮೌರ್ಯರ ನಂತರ ಬಂದ ಶಾತವಾಹನ ಹಾಗೂ ಮಹಾರಥಿಗಳ ಕಾಲದಲ್ಲಿ ವ್ಯಾಪಾರ ಅತ್ಯಂತ ಬಿರುಸಿನಿಂದ ನಡೆಯುತ್ತಿದ್ದಿತು. ಇದಕ್ಕೆ ಕರ್ನಾಟಕದಾದ್ಯಂತ ದೊರೆಯುವ ಶಾತವಾಹನ ಹಾಗೂ ಮಹಾರಥಿಗಳ ನಾಣ್ಯಗಳು ಮುಖ್ಯ ಆಕರಗಳಾಗಿವೆ. ಹಾನಗಲ್ಲು ಪರಿಸರದಲ್ಲಿ ಆನಂತರ ಚುಟುಗಳ ಆಳ್ವಿಕೆಯಿದ್ದು (ಬನವಾಸಿಯಲ್ಲಿ), ಈ ಕಾಲದ ಅನೇಕ ನಾಣ್ಯಗಳು, ಶಾಸನ ಮತ್ತಿತರ ಕುರುಹುಗಳು ಕಂಡುಬಂದಿವೆ. ಈ ಅವಧಿಯಲ್ಲಿ ದೇಶೀಯ ವ್ಯಾಪಾರದ ಜೊತೆಗೆ ವಿದೇಶಿ ವ್ಯಾಪಾರವೂ ಕೂಡ ಪ್ರಚಲಿತದಲ್ಲಿತ್ತು. ಕ್ರಿ.ಶ. ೧ನೆಯ ಶತಮಾನದ ಹೊತ್ತಿಗೆ ಹಿಪ್ಪಲಸ್ ಎಂಬುವನು ಮುಂಗಾರು ಮಾರುತಗಳ ಉಪಯುಕ್ತತೆಯನ್ನು ಪತ್ತೆಹಚ್ಚಿದ್ದನು. ಇದರಿಂದ ಹಡಗುಗಳಲ್ಲಿ ಯಾನ ಕೈಗೊಳ್ಳುವುದು ಸುಲಭವಾಯಿತು. ಅಲ್ಲದೆ ಸಮುದ್ರಯಾನದಿಂದ ಇದುವರೆಗೆ ಭೂಮಾರ್ಗದಲ್ಲಿದ್ದ ಕಳ್ಳಕಾಕರ ಭಯ ತಪ್ಪಿತು. ವಿದೇಶಿ ವ್ಯಾಪಾರಕ್ಕೆ ಜಲಮಾರ್ಗವು ವರದಾನವಾಗಿ ಗ್ರೀಸ್ ಅಥವಾ ರೋಮ್ ನಿಂದ ಹೊರಟ ಹಡಗುಗಳು ಕೇವಲ ಆರು ವಾರಗಳಲ್ಲೆ ದಕ್ಷಿಣ ಭಾರತದ ತೀರಪ್ರದೇಶಗಳನ್ನು ತಲುಪುತ್ತಿದ್ದವು. ಆ ಮೂಲಕ ವಿದೇಶಿ ವ್ಯಾಪಾರಿಗಳು ಕರ್ನಾಟಕಕ್ಕೆ ವ್ಯಾಪಾರ ಸಲುವಾಗಿ ಹೆಚ್ಚು ಹಚ್ಚಾಗಿ ಬರಲು ಸಾಧ್ಯವಾಯಿತು. ಅಲ್ಲದೆ ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಶಾತವಾಹನರು, ಚೋಳರು, ಚೇರ ಮೊದಲಾದವರು ವ್ಯಾಪಾರ ವಿಶೇಷ ಪ್ರೋತ್ಸಾಹ ನೀಡಿದ್ದುದೂ ವಿದೇಶಿ ವ್ಯಾಪಾರ ವೃದ್ಧಿಗೊಳ್ಳಲು ಕಾರಣವಾಗಿದೆ.

ಪ್ರಾಚೀನ ಕರ್ನಾಟಕ (ಹಾನಗಲ್ಲು ಸೇರಿದಂತೆ)ವು ರೋಮ್ ದೇಶದೊಂದಿಗೆ ಉತ್ತಮ ವ್ಯಾಪಾರ ಸಂಬಂಧವನ್ನು ಹೊಂದಿದ್ದಿತು. ಇದಕ್ಕೆ ಇಲ್ಲಿ ದೊರೆತ ರೋಮನ್ ನಾಣ್ಯಗಳು ಮುಖ್ಯವಾಗಿವೆ. ಹಾಗೆಯೆ ಇಲ್ಲಿ ಬೆಳೆಯುತ್ತಿದ್ದ ಮೆಣಸು, ಏಲಕ್ಕಿ ಮೊದಲಾದ ಸಾಂಬಾರ ಪದಾರ್ಥಗಳು, ತೋಟಗಾರಿಕಾ ಬೆಳೆ ಮೊದಲಾದವುಗಳನ್ನು ರೋಮನ್ ವ್ಯಾಪಾರಿಗಳು ಕೊಂಡು ಯುರೋಪ್ ದೇಶಗಳಲ್ಲಿ ಹೆಚ್ಚಿನ ಬೆಲೆಗೆ ಮಾರಿ ಲಾಭವನ್ನು ಗಳಿಸುತ್ತಿದ್ದರು. ಇಲ್ಲಿನ ಸಮುದ್ರದ ಚಿಪ್ಪಿನ ವಸ್ತುಗಳು, ಬೆಲೆಬಾಳುವ ಹರಳುಗಳು, ತಿಳಿಹಸಿರು ಬಣ್ಣದ ಪಾರದರ್ಶಕ ಪಚ್ಚೆ, ಹತ್ತಿ, ರೇಷ್ಮೆಯ ಬಟ್ಟೆಗಳು ರೋಮನ್ನರಿಗೆ ತುಂಬಾ ಪ್ರಿಯವಾದ ವಸ್ತಗಳಾಗಿದ್ದವು. ಪ್ಲೀನಿನ ಪ್ರಕಾರ ರೋಮ್ ದೇಶದ ವ್ಯಾಪಾರ ಅಗಾಧತೆ ಎಷ್ಟಿತ್ತೆಂದರೆ, 'ಒಂದು ವರ್ಷದಲ್ಲಿ ಅರ್ಧ ಮಿಲಿಯನ್ ಸ್ಟರ್ಲಿಂಗ್ ನಷ್ಟ.' ರೋಮನ್ ರಂತೆ ಭಾರತೀಯರಿಗೆ ರೋಮನ್ ರ ಚಿನ್ನದ ನಾಣ್ಯಗಳು ಬಹಳ ಪ್ರಿಯವಾಗಿದ್ದು, ಅವುಗಲನ್ನು ಆಭರಣಗಳನ್ನಾಗಿ ಧರಿಸುತ್ತಿದ್ದರೆಂಬುದು ತಿಳಿದುಬರುತ್ತದೆ.

ಕರ್ನಾಟಕದಲ್ಲಿ ಯಥೇಚ್ಛವಾಗಿ ರೋಮನ್ನರ ಚಿನ್ನ ಹಾಗೂ ಬೆಳ್ಳಿಯ ನಾಣ್ಯಗಳು ಕಂಡುಬಂದಿವೆ. ಬೆಂಗಳೂರಿನ ಯಶವಂತಪುರದಲ್ಲಿ ನೂರು ವರ್ಷಗಳ ಹಿಂದೆ ೧೬೩ ಬೆಳ್ಳಿಯ ನಾಣ್ಯಗಳು ದೊರೆತಿವೆ. ಇವು ರೋಮನ್ ಅಗಸ್ಟಸ್, ಟಿಬೇರಿಯಸ್, ಆಂಟೋನಿಯ, ಕ್ಲಾಡಿಯೆಸ್ ಮತ್ತು ಕ್ಯಾಲಿಗುಲ ದೊರೆಗಳಿಗೆ ಸೇರಿದ ನಾಣ್ಯಗಳಾಗಿವೆ. ಚಂದ್ರವಳ್ಳಿಯ ಉತ್ಖನನದಲ್ಲಿ ಟೈಬೀರಿಯಸ್ ನಾಣ್ಯವು ಪತ್ತೆಯಾಗಿದೆ. ೧೯೬೫ರಲ್ಲಿ ಬೆಂಗಳೂರಿನ ಜಾಲಹಳ್ಳಿಯಲ್ಲಿ ೨೫೬ ಬೆಳ್ಳಿಯ ನಾಣ್ಯಗಳು ಕಂಡುಬಂದಿವೆ. ಇವುಗಳಲ್ಲಿ ೨೯ ನಾಣ್ಯಗಳು ಅಗಸ್ಟಸ್ ದೊರೆಗೆ ಸೇರಿದ್ದು, ಉಳಿದ ೨೨೭ ನಾಣ್ಯಗಳು ಟೈಬೀರಿಯಸ್ ಚಕ್ರವರ್ತಿಗೆ ಸೇರಿದವುಗಳಾಗಿವೆ. ಈ ಮೇಲಿನ ಸ್ಥಳಗಳಲ್ಲದೆ ಬಿಜಾಪುರದ ಕಟ್ರಾಲ್ ಎಂಬಲ್ಲಿ ೨೨, ಬೆಳಗಾಂನಲ್ಲಿ ೩೦, ವಡಗಾಂವ್-ಮಾಧವಪುರದಲ್ಲಿ ೧, ಮಾಲೂರು ತಾಲೂಕಿನ ಸೊಸೆಗೆರೆ ಎಂಬಲ್ಲಿ ೩, ಲಿಂಗಸಗೂರಿನಲ್ಲಿ ಒಂದು ರೋಮನ್ ನಾಣ್ಯ ದೊರೆತಿರುವುದು ಗಮನಾರ್ಹ. ಅಲ್ಲದೆ ತಲಕಾಡು ಮತ್ತು ಬನವಾಸಿಗಳಲ್ಲಿ ದೊರೆತ ನಾಣ್ಯಗಳ ಅಚ್ಚುಗಳು ವಿದ್ವಾಂಸರ ಚಿಂತನೆಗೆ ಹೊಸ ಆಯಾಮವನ್ನು ನೀಡಿದ್ದು, ಒರೆಹಚ್ಚಬೇಕಾದ ಅಗತ್ಯವಿದೆ. ಆದರೆ ಹಾನಗಲ್ಲು ತಾಲೂಕಿನ ಅಕ್ಕಿಆಲೂರಿನಲ್ಲಿ ದೊರೆತ ४೬ ರೋಮನ್ನರ ಬೆಳ್ಳಿ ನಾಣ್ಯಗಳಲ್ಲಿ, ಕೆಲವು ನಾಣ್ಯಗಳು ಕರ್ನಾಟಕದ ಬೇರಾವ ಸ್ಥಳದಲ್ಲೂ ದೊರೆತಿರುವುದಿಲ್ಲ. ಅವುಗಳೆಂದರೆ ರೋಮನ್ ಚಕ್ರವರ್ತಿಗಳಾದ ಸೆಪ್ಟಿಯಸ್ ಸೆವೆರಸ್ (ಕ್ರಿ.ಶ. ೧೯೩ - ೨೧೧) ಮತ್ತು ಕ್ಯಾರಕಲ್ಲ (ಕ್ರಿ.ಶ. ೨೧೧ - ೨೧೭) ಅರಸರ ನಾಣ್ಯಗಳು. ಇವುಗಳಲ್ಲದೆ ಅಕ್ಕಿಆಲೂರಿನ ನಾಣ್ಯರಾಶಿಯಲ್ಲಿ ಬೆಜಾಂಟಿಯನ್ ಚಕ್ರವರ್ತಿಗಳಾದ ಥಿಯೋಡೋಸಿಯಸ್ (ಕ್ರಿ.ಶ. ४೦೨ - ४೫೦), ಮರ್ಸಿಯನ್ (ಕ್ರಿ.ಶ. ४೫೦ - ४೫೭), ಒಂದನೆಯ ಲಿಯೊ (ಕ್ರಿ.ಶ. ४೫೭ - ४೭४), ಜೆನೊ (ಕ್ರಿ.ಶ. ४೭४ - ४೯೧), ಅನಸ್ತಸಿಯಸ್ (ಕ್ರಿ.ಶ. ४೯೧ - ೫೧೮) ಮತ್ತು ಒಂದನೆಯ ಜಿಸ್ಟಿನಸ್ (ಕ್ರಿ.ಶ. ೫೧೮ - ೫೨೭)ರಿಗೆ ಸೇರಿದ ನಾಣ್ಯಗಳು ಪ್ರಮುಖವಾದವು. ಈ ಮೇಲಿನ ನಾಣ್ಯಗಳ ಮುಮ್ಮುಖದಲ್ಲಿ ಆಯಾ ಚಕ್ರವರ್ತಿಯ ಚಿತ್ರ ಹಾಗೂ ಅರಸನ ಹೆಸರಿದ್ದರೆ, ಹಿಮ್ಮುಖದಲ್ಲಿ ಶಿಲುಬೆ, ರಾಜದಂಡಗಳನ್ನು ಹಿಡಿದ ದೇವತೆ (ಕಾನ್ ಸ್ಟಾಂಟಿನೊಪಲ್ ದೇವತೆ, ವಿಕ್ಟೋರಿಯಾ ದೇವತೆ)ಗಳ ಚಿತ್ರ ಹಾಗೂ ಬರಹಗಳನ್ನು ಕಾಣಬಹುದು.

ಅಕ್ಕಿಆಲೂರಿನ ಈ ನಾಣ್ಯ ವಿವರಗಳಿಂದ ಕರ್ನಾಟಕದೊಂದಿಗೆ ರೋಮನ್ ಚಕ್ರವರ್ತಿಗಳು ಮತ್ತು ಆನಂತರ ಬಂದ ಬೈಜಾಂಟಿಯನ್ ಚಕ್ರವರ್ತಿಗಳ ಕಾಲದಲ್ಲಿ ಉತ್ತಮ ವ್ಯಾಪಾರ ಸಂಬಂಧವಿದ್ದುದು ದೃಢವಾಗುತ್ತದೆ. ಅಕ್ಕಿಆಲೂರಿನ ಈ ನಾಣ್ಯಗಳ ಕಾಲಮಾನವನ್ನು ಕ್ರಿ.ಶ. ೧೯೩ ರಂದ ಕ್ರಿ.ಶ. ೫೨೭ರ ವರೆಗೆ ಗುರುತಿಸಬಹುದಾಗಿದ್ದು, ಕರ್ನಾಟಕದಲ್ಲಿ ಶಾತವಾಹನ ಕಾಲದಿಂದ ಕದಂಬರ ಕಾಲದವರೆಗೆ ವಿದೇಶಿ ವ್ಯಾಪಾರ ಅದರಲ್ಲೂ ರೋಮನ್ ದೇಶದೊಂದಿಗೆ ಇದ್ದ ವ್ಯಾಪಾರ ಸಂಬಂಧವನ್ನು ತಿಳಿದುಕೊಳ್ಳಬಹುದಾಗಿದೆ. ಕರ್ನಾಟಕದಲ್ಲಿ ದೊರೆತ ಈ ಮೇಲಿನ ನಾಣ್ಯಗಳಿಗೆ ಪುಷ್ಟಿಯಾಗಿ ಚಂದ್ರವಳ್ಳಿ, ಬನವಾಸಿ, ಸನ್ನತಿಗಳಲ್ಲಿ ರೋಮನ್ ರು ಬಳಸುತ್ತಿದ್ದ ರೌಲೆಟೆಡ್ ಮಡಿಕೆಗಳು ಕಂಡುಬಂದಿರುವುದು ಗಮನಾರ್ಹ. ಅಂತೆಯೆ ಕ್ರಿ.ಶ. ೧ನೆಯ ಶತಮಾನದ ಕೃತಿ 'ಪೆರಿಪ್ಲಸ್ ಆಫ್ ಎರಿತ್ರಿಯನ್ ಸಿ'ನಲ್ಲಿ, ದಕ್ಷಿಣ ಭಾರತದ ಬಂದರು ಮತ್ತು ಪಟ್ಟಣಗಳಾದ ಪಗರ, ಕಲ್ಯಾಣ (ಕಲ್ಲೀಣ), ವೈಜಯಂತಿ (ಬೈಜಾಂಟಿಯ), ಸೋಪಾರ (ಸುಪ್ಪಾರ), ಮುಂಡಗೋದ (ಮಂಗಳೂರು)ಗಳು ಅಂದಿನ ಪ್ರಮುಖ ವಾಣಿಜ್ಯ ಕೇಂದ್ರಗಳಾಗಿದ್ದುದನ್ನು ತಿಳಿಸುತ್ತದೆ. ಟಾಲಮಿಯು ಕೂಡ ಕರ್ನಾಟಕದ ಹಲವು ಸ್ಥಳಗಳನ್ನು ತನ್ನ ವರದಿಯಲ್ಲಿ ದಾಕಲಿಸಿದ್ದಾನೆ. ಅಂತಹ ನಗರಗಳೆಂದರೆ ನಗರೂರು (ನಾಗೂರು), ತಾವಸಿ (ತಬಸೊ), ಇಂಡಿ (ಇಂಡೆ), ಗಡಹಿಂಗ್ಲಜ (ತಿರಿಪಂಗಲಿದ), ಹೂವಿನ ಹಿಪ್ಪರಗಿ (ಹಿಪ್ಪೊಕರ), ಸವಡಿ (ಸಬಡೆ), ಚಿಮ್ಮಲಗಿ (ಸಿರಿಮಲಿಗಿ), ಮುದಗಲ್ಲು (ಮುದೊಗಲ್ಲು)ಗಳಾಗಿವೆ.

ಒಟ್ಟಿನಲ್ಲಿ ಈ ಮೇಲಿನ ನಾಣ್ಯ, ಸಾಹಿತ್ಯ, ಪಾತ್ರಾವಶೇಷ ಮೊದಲಾದ ಪುರಾತತ್ವ ಆಕರಗಳಿಂದ ರೋಮ್ ನೊಂದಿಗೆ ಭಾರತ ಅಥವಾ ಕರ್ನಾಟಕವು ಹೊಂದಿದ್ದ ವ್ಯಾಪಾರ ಸಂಬಂಧ, ಅದರ ಗಾಢತೆ, ಅಂದಿನ ಸಮುದ್ರ ವ್ಯಾಪಾರ, ವ್ಯಾಪಾರ ಮಾರ್ಗ, ವ್ಯಾಪಾರ ವಸ್ತು ಮೊದಲಾದವುಗಳನ್ನು ತಿಳಿಯಲು ಸಾಧ್ಯತೆಗಳನ್ನು ಒದಗಿಸಿದಂತಾಗಿದೆ. ಅಂತೆಯೇ ಉತ್ತರ ಭಾರತದ ಮೌರ್ಯ ಮೊದಲಾದವರ ಸಂಪರ್ಕ ಹಾಗೂ ಕಡಲಾಚೆಯ ರೋಮನ್, ಗ್ರೀಕ್, ಚೀನ ಮೊದಲಾದ ಬಾಹ್ಯ ವ್ಯಾಪಾರ ಚಟುವಟಿಕೆಗಳು ಕರ್ನಾಟಕದ ವ್ಯಾಪಾರ ಚಟುವಟಿಕೆಯು ಚುರುಕುಗೊಳ್ಳಲು ಕಾರಣವಾಯಿತೆನ್ನಬಹುದು. ಹಾನಗಲ್ಲ ಕದಂಬರ ನಾಣ್ಯಗಳು ಮಧ್ಯಯುಗದ ಹಾಗೂ ಈ ಭಾಗದ

ವ್ಯಾಪಾರ ಚಟುವಟಿಕೆಗಳನ್ನು ಅರಿಯಲು ಸಹಾಯಕವಾಗಿವೆ. ಇಲ್ಲಿ ದೊರೆತಿರುವ ಗದ್ಯಾಣಗಳಲ್ಲಿ ಹನುಮ ಲಾಂಛನ ಸಾಮಾನ್ಯವಾಗಿದೆ. ಇದಲ್ಲದೆ ಗರುಡಲಾಂಛನ ನಾಣ್ಯವೂ ಕೂಡ ದೊರೆತಿರುವುದು ಗಮನಾರ್ಹ.

**ಹಾನಗಲ್ಲ ಪರಿಸರದ ವ್ಯಾಪಾರ ಮತ್ತು ವ್ಯಾಪಾರಿ ಸಂಘಗಳು**

ಹಾನಗಲ್ಲ ಪರಿಸರದ ವ್ಯಾಪಾರವು ಕದಂಬರ ಕಾಲದಲ್ಲಿ ವ್ಯಾಪಾರಿ ಸಂಘಗಳ ನಿಯಂತ್ರಣದಲ್ಲಿ ಇತ್ತೆಂದು ಹೇಳಬೇಕಾಗುತ್ತದೆ. ಇದನ್ನು ಮಧ್ಯಯುಗೀನ ಕರ್ನಾಟಕಕ್ಕೂ ಅನ್ವಯಿಸಿ ಹೇಳಬಹುದು. ಅಂದಿನ ವ್ಯಾಪಾರ - ವಾಣಿಜ್ಯಗಳನ್ನು ನಿಯಂತ್ರಿಸುತ್ತಿದ್ದ ಅನೇಕ ಸಂಘ ಸಂಸ್ಥೆಗಳು ಕರ್ನಾಟಕದಲ್ಲಿದ್ದವು. ಅವುಗಳಲ್ಲಿ ಅಯ್ಯಾವೊಳೆ ಐನೂರ್ವರ ಸಂಘ ಪ್ರಸಿದ್ಧವಾಗಿದ್ದು, ಇದರ ಕೇಂದ್ರವು ಬಾಗಲಕೋಟೆ ಜಿಲ್ಲೆಯ ಐಹೊಳೆಯಾಗಿದ್ದಿತು. ಶಾಸನ ಸಾಹಿತ್ಯಗಳಲ್ಲಿ ಕಂಡುಬರುವಂತೆ ಪ್ರಾಚೀನ ಕರ್ನಾಟಕದಲ್ಲಿ ಅನೇಕ ವರ್ತಕ ಸಮುದಾಯಗಳು ಇದ್ದವು. ಅವುಗಳೆಂದರೆ ಸೆಟ್ಟಿ, ಬಣಂಜಿಗ, ಸೆಟ್ಟಿಗುತ್ತ, ನಕರ, ಮುಮ್ಮುರಿದಂಡ, ವಡ್ಡವ್ಯವಹಾರಿ, ಗವರಿಗ, ಗಾತ್ರಿಗ, ಸೆಟ್ಟಿಕಾರ, ಹಲರು, ಎಳಮೆ, ಸಾಲಿಕೆ, ಬಲ್ಲಾಳು, ಕೊಟಿಗ ಇನ್ನು ಮುಂತಾದ ಪ್ರಕಾರಗಳಿವೆ. ಈ ಸಮುದಾಯಗಳು ವಿವಿಧ ಸಂಘಟನೆಗಳನ್ನು ಸ್ಥಾಪಿಸುವ ಮೂಲಕ ವ್ಯಾಪಾರ-ವಾಣಿಜ್ಯಗಳಲ್ಲಿ ನಿಯಂತ್ರಣ ಸಾಧಿಸಿದರು. ಶಾಸನಗಳಲ್ಲಿ ಕಂಡುಬರುವ ವ್ಯಾಪಾರ ಸಂಘಟನೆಗಳೆಂದರೆ ಅಯ್ಯಾವೊಳೆ ಐನೂರ್ವರು, ವೀರಬಣಂಜು, ಮುಮ್ಮುರಿದಂಡ, ಬಂಟಸಾಸೀರ್ವರು, ಬಣಜಿಗರಯ್ನೂರ್ವರು, ಉಗುರ ಮುನ್ನೂರ್ವರು, ಎಲೆಯ ಬೋಜಂಗರು ಮೊದಲಾದವು ಪ್ರಮುಖವಾಗಿವೆ. ಈ ಸಂಘಗಳಲ್ಲಿ ಹಲವು ಅಯ್ಯಾವೊಳೆ ಐನೂರ್ವರ ಸಂಘದ ಉಪಶಾಖೆಗಳೇ ಆಗಿದ್ದವು.

ಈ ಸಂಘಗಳು ಕೃಷಿಯಾಧಾರಿತ ಹಾಗೂ ಕೃಷಿಯೇತರ ವಸ್ತುಗಳನ್ನು ಆಂತರಿಕ ವ್ಯಾಪಾರದ ಮೂಲಕ ವಿವಿಧ ನಗರಗಳಲ್ಲಿ ಹಾಗೂ ವಿದೇಶಗಳ ವ್ಯಾಪಾರ ಮಾಡುತ್ತಿದ್ದರು. ವಿದೇಶಿ ವ್ಯಾಪಾರಕ್ಕಾಗಿಯೇ ನಾನಾದೇಶಿ ಹಾಗೂ ಉಭಯ ನಾನಾದೇಶಿ ಸಂಘಗಳಿದ್ದು, ಇವು ಅಂದಿನ ಜಾಗತಿಕ (ಮಟ್ಟದ) ವ್ಯಾಪಾರಿ ಸಂಘಗಳೆನ್ನಬಹುದು.

ಈ ವ್ಯಾಪಾರಿ ಸಂಘಗಳು ತಮ್ಮ ವ್ಯಾಪಾರದಿಂದ ಬಂದ ಆದಾಯದ ಭಾಗವನ್ನು ದಾನ-ಧರ್ಮ ನೀಡುವ ಮೂಲಕ ಸಮಾಜ ಸೇವಾ ಕಾರ್ಯಗಳಲ್ಲೂ ಪಾಲ್ಗೊಂಡಿದ್ದವು. ದೇವಾಲಯಗಳನ್ನು ಕಟ್ಟಿಸುವ ಹಾಗೂ ಜೀರ್ಣೋದ್ಧಾರಗೊಳಿಸುವ, ಕೆರೆ - ಕಟ್ಟೆ ನಿರ್ಮಾಣ ಮೊದಲಾದ ಕಾರ್ಯಗಳಿಗೆ ಆದಾಯದ ಪಾಲನ್ನು ವಿನಿಯೋಗಿಸುತ್ತಿದ್ದುದು ಅನೇಕ ಶಾಸನಗಳು ವ್ಯಕ್ತಪಡಿಸುತ್ತವೆ.

ಹಾನಗಲ್ಲು ತಾಲೂಕಿನ ಬಾಳಂಬೀಡಿನ ಶಾಸನದಲ್ಲಿ ಅಲ್ಲಿನ ಬ್ರಹ್ಮೇಶ್ವರ, ಗ್ರಾಮೇಶ್ವರ ದೇವರ ನಂದಾದೀವಿಗೆಗೆ ತಂಬುಲಿಗ ಸಾಸಿರ್ವರು ಹೀರೆತ್ತಿನ ಗಾಡಿಗೆ ಒಂದು ವೀಸದಂತೆ ಬಿಟ್ಟುಕೊಟ್ಟ ವಿವರವಿದೆ. ಶಿಗ್ಗಾಂವಿಯ ಶಾಸನದಲ್ಲಿ ಹೇಳುವಂತೆ, ಉಗುರ ಮುನ್ನೂರ್ವರು ಮೂಲಸ್ಥಾನ ದೇವರಿಗೆ ಒಂದು ಪಣವನ್ನು ದಾನ ನೀಡಿದ್ದರು. ಬಿಲ್ಲ ಮುನ್ನೂರ್ವರು ತಮ್ಮ ವರ್ಗದ ವತಿಯಿಂದ ಹಾನಗಲ್ಲಿನಲ್ಲಿ ಬಿಲ್ಲೇಶ್ವರ ದೇವಾಲಯವನ್ನು ಕಟ್ಟಿಸಿದ್ದರು (ಕ್ರಿ.ಶ. ೧೧೧೯). ಅದು ಇಂದು ಭಗ್ನಗೊಂಡಿರುವುದನ್ನು ಕಾಣಬಹುದು. ಹೀಗೆ ತಮ್ಮ ಆದಾಯದ ಪಾಲೊಂದನ್ನು ಸಮಾಜ ಸೇವಾ ಕಾರ್ಯಗಳಿಗೆ ವಿನಿಯೋಗಿಸುವ ಪದ್ಧತಿ ಹಿಂದಿನಿಂದಲೂ ಮುಂದುವರಿದುಕೊಂಡು ಬಂದಿದೆ.

**ತೆರಿಗೆ**

ವ್ಯಾಪಾರಿಗಳು ತಾವು ಕೈಗೊಂಡ ವೃತ್ತಿಯಲ್ಲಿ ತೆರಿಗೆಗಳನ್ನು ರಾಜ್ಯದ ಬೊಕ್ಕಸಕ್ಕೆ ನೀಡಬೇಕಾಗಿದ್ದಿತು. ಅಂತಹ ತೆರಿಗೆಗಳಲ್ಲಿ ಮುಖ್ಯವಾದವುಗಳು ಹೆಜ್ಜುಂಕ (ಹೇರಿನ ಮೇಲೆ ವಿಧಿಸುವ ಸುಂಕ), ವಡ್ಡರಾವುಳ, ಮೂಲೆವೀಸ, ಬೊಲ್ಕೊಡೆ (ಕೊಳ್ಳುವಲ್ಲಿ, ಮಾರುವಲ್ಲಿ ಕೊಡುವ ಸುಂಕ)ಗಳಾಗಿವೆ. ಇವು ಅಂದಿನ ರಾಜ್ಯಾದಾಯಗಳಾಗಿದ್ದವು.

**ವ್ಯಾಪಾರ ಮಾರ್ಗ**

ಭಟ್ಕಳ-ಹೊನ್ನಾವರ-ಕುಮಟಾ-ಗೋವಾ ಬಂದರುಗಳು ಅಂದಿನ ಜಲಮಾರ್ಗದ ಹೆದ್ದಾರಿಗಳಾಗಿದ್ದವು. ಈ ಬಂದರುಗಳಿಂದ ಬನವಾಸಿ - ಹಾನಗಲ್ಲು - ಸೋಮಲಾಪುರ ಕಡೆಗೆ ವ್ಯಾಪಾರ ಮಾರ್ಗವಿದ್ದಿತು. ಹಾನಗಲ್ಲು ಪರಿಸರದ ಅಧ್ಯಯನವು ಕರ್ನಾಟಕದ ನಗರೀಕರಣ ಪ್ರಕ್ರಿಯೆಯನ್ನು ವ್ಯಾಪಾರ - ವಾಣಿಜ್ಯದ ಪಾತ್ರ, ದೇಶೀಯ ಮತ್ತು ವಿದೇಶಿ ವ್ಯಾಪಾರ, ಸಮುದ್ರ ವ್ಯಾಪಾರ, ವ್ಯಾಪಾರ ಮಾರ್ಗ ಹಾಗೂ ವ್ಯಾಪಾರ ವಸ್ತುಗಳ ಸೂಕ್ಷ್ಮ ಅಧ್ಯಯನಕ್ಕೆ ಅನೇಕ ಸಾಧ್ಯತೆಗಳನ್ನು ಒದಗಿಸುವುದರಲ್ಲಿ ಸಂಶಯವಿಲ್ಲ.

**ಗ್ರಂಥಋಣ**


೦೧. ಚೆನ್ನಕ್ಕ ಪಾವಟೆ, ಹಾನಗಲ್ಲ ಕದಂಬರು, ಚೆನ್ನಗಂಗ ಪ್ರಕಾಶನ, ಧಾರವಾಡ - ೧೯೯೮

೦೨. ಮೋಹನಕೃಷ್ಣ ರೈ ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಕ.ವಿ.ವಿ.ಹಂಪಿ - ೨೦೦೪

೦೩. ಮೋತಿಚಂದ್ರ, ಸಾರ್ಥವಾಹ, ಸಾಹಿತ್ಯ ಅಕಾಡೆಮಿ, ನವದೆಹಲಿ

೦೪. ಕರ್ನಾಟಕ ವಿಷಯ ವಿಶ್ವಕೋಶ, ೧೯೭೯, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ೧೯೭೯

೦೫. ನರಸಿಂಹಮೂರ್ತಿ, ಎ.ಎ., ಕರ್ನಾಟಕ ನಾಣ್ಯ ಪರಂಪರೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೨೦೦೩

೦೬. Some aspects of economic and Social life in Karnataka, Mysore University, Mysore – 1974

೦೭. ಕಲಬುರ್ಗಿ, ಎಂ.ಎಂ.(ಸಂ), ಧಾರವಾಡ ಜಿಲ್ಲಾ ಶಾಸನಸೂಚಿ

೦೮. Karnataka Inscriptions volumes Dharwar

೦೯. South India inscriptions volumes


# ೧೦. ಕೆರೆ - ಕಟ್ಟೆ

ನಾಡಿನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೆರೆ - ಕಟ್ಟೆಗಳ ಪಾತ್ರ ತುಂಬಾ ಪ್ರಮುಖವಾದುದು. ಕೃಷಿ ಪ್ರಧಾನವಾದ ಭಾರತೀಯ ಸಂಸ್ಕೃತಿಯ ಉಗಮ ಮತ್ತು ವಿಕಾಸಕ್ಕೆ ಕೃಷಿ ತಳಹದಿಯಾಯಿತಲ್ಲದೇ ಮಾನವನ ಜೀವನ ಕ್ರಮವನ್ನೇ ಬದಲಾಯಿಸಿತು. ಕೃಷಿ ಉತ್ಪಾದನೆಗೆ ನೀರಾವರಿಯು ಅನಿವಾರ್ಯ. ಮಳೆಯನ್ನು ಅವಲಂಬಿಸದೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ನೀರಾವರಿ ಸಂಪನ್ಮೂಲಗಳು ಅತ್ಯವಶ್ಯಕ. ಕೃಷಿಗೆ ನೀರನ್ನು ಒದಗಿಸಲು ಮಾನವನು ಅನುಸರಿಸಿದ್ದು ಕೃತಕ ಜಲ ಸಂಗ್ರಾಹಕಗಳಾದ ಕೆರೆ - ಕಟ್ಟೆಗಳನ್ನು. ಪ್ರಾಗಿತಿಹಾಸ ಕಾಲದಿಂದಲೂ ಮಾನವನ ಚಟುವಟಿಕೆಗಳ ಕಾರ್ಯಕ್ಷೇತ್ರವು ನದಿ - ಸರೋವರಗಳ ಸಮೀಪದಲ್ಲಿಯೇ ಕೇಂದ್ರೀಕೃತವಾಗಿತ್ತು. ಕಾಲಕ್ರಮೇಣ ಕೆರೆ - ಕಟ್ಟೆ ಮುಂತಾದ ಜಲಸಂಚಯನವಿದ್ದ ಸ್ಥಳದ ಸುತ್ತಮುತ್ತಲೂ ಕುಟುಂಬಗಳು ತಳವೂರಿ ಗ್ರಾಮಗಳು ರೂಪುಗೊಂಡವು.

ಕೆರೆಗಳಿಂದ ನೀರಾವರಿ ಮಾಡಿಕೊಳ್ಳುವುದು ದ್ರಾವಿಡ ಪದ್ಧತಿ.[1]ಈ ಪದ್ಧತಿ ಹಲವಾರು ದೃಷ್ಟಿಯಿಂದ ಶ್ರೇಷ್ಠವಾದದ್ದೆಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ.[2] ಕನ್ನಡ ನಾಡಿನಲ್ಲಿ ಕೆರೆ ಕಟ್ಟಿಸುವ ಇತಿಹಾಸ ಕದಂಬರ ಪೂರ್ವದಲ್ಲಿ ನಾಗರಿಂದ ಮೊದಲಾದರೂ,[3] ಕದಂಬ ದೊರೆ ಮಯೂರವರ್ಮನು ನಿರ್ಮಿಸಿದ ಚಂದ್ರವಳ್ಳಿ ಕೆರೆಯು ಕರ್ನಾಟಕದ ಅತ್ಯಂತ ಪ್ರಾಚೀನ ಕೆರೆ ಎನ್ನಲಾಗಿದೆ. ನಂತರ ಗಂಗರು, ಬಾದಾಮಿ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರದ ಮನೆತನಗಳು ವಿಪುಲ ಪ್ರಮಾಣದಲ್ಲಿ ಕೆರೆ - ಕಟ್ಟೆಗಳನ್ನು ಕಟ್ಟಿಸಿದ್ದಾರೆ. ಬಾದಾಮಿ ಚಾಲುಕ್ಯರು ಸಾಮ್ರಾಜ್ಯದ ಎಲ್ಲೆಡೆಗಳಲ್ಲಿಯೂ ಕೆರೆಗಳನ್ನು ನಿರ್ಮಿಸಿದರೆಂದು ಶಾಸನ ಉಲ್ಲೇಖಿಸುತ್ತದೆ.[4] ಕಲ್ಯಾಣದ ಚಾಲುಕ್ಯರ ಕಾಲ (೯೭೩ - ೧೩೩೬)ದಲ್ಲಿ ಮೊದಲಿನಕ್ಕಿಂತಲೂ ಅಧಿಕ ಕೆರೆಗಳು ನಿರ್ಮಾಣಗೊಂಡವು.

“ಅವುಗಳ ಪ್ರಮಾಣದಲ್ಲಿ, ಎಲ್ಲೆಲ್ಲಿ ಕೆರೆಗಳನ್ನು ಕಟ್ಟಲು ಸಾಧ್ಯವೋ ಅಲ್ಲೆಲ್ಲಾ ಕೆರೆಗಳನ್ನು ಕಟ್ಟಿ ಬಿಟ್ಟಿದ್ದಾರೆ. ಹೊಸ ಕೆರೆಗಳಿಗೆ ಸ್ಥಳ ಹುಡುಕುವುದು ದುಸ್ತರ[5] ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಆ ಕಾರಣವಾಗಿ ಅವರ ಕಾಲವನ್ನು ‘ಕೆರೆಗಳ ಸುವರ್ಣಯುಗ’[6]ವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಚಾಲುಕ್ಯರ ಮಂಡಲಾಧಿಪತಿಗಳಾಗಿ ಹಾನಗಲ್ಲು ಕದಂಬರು ಆಳ್ವಿಕೆ ಮಾಡುತ್ತಿದ್ದರು. ಈ ಪರಿಸರದ ಪ್ರತಿ ಗ್ರಾಮಗಳಲ್ಲಿ ಕೆರೆಗಳಿದ್ದವು. ಕೆಲವು ವೇಳೆ ಹೊಸ ಕೆರೆಗಳನ್ನು ಬೇಸಾಯಕ್ಕೆ ಸಿದ್ಧಗೊಳಿಸುವುದು ಸಾಮಾನ್ಯವಾಗಿತ್ತು. ಪಾನುಂಗಲ್ಲ ಐನೂರು ವಿಭಾಗದಲ್ಲಿನ ಶಾಸನಗಳು ಜಲ ಸಂಗ್ರಹಗಳನ್ನು ನದಿ, ತೊರೆ, ಕೆರೆ - ಕಟ್ಟೆ, ಹಳ್ಳ - ಕೊಳ್ಳ, ಮಡವು, ಡೋಣಿ, ಗುಂಡ, ತಟಾಕ, ತೀರ್ಥ, ಹೊಂಡ, ಕಾಲುವೆ, ಕುಂಟೆ, ಕುಳಿಗಳೆಂದು ಉಲ್ಲೇಖಿಸುತ್ತವೆ.

ಹಾನಗಲ್ಲು ಪರಿಪೂರ್ಣ ಮಲೆನಾಡು ಭಾಗವಾಗಿರದೆ, ಅರೆ ಮಲೆನಾಡು ಪ್ರದೇಶ. ಇಲ್ಲಿ ಸುಮಾರು ೮೦೦ ಮಿ.ಮೀ.ನಿಂದ ೧೬೦೦ ಮಿ.ಮೀ.ನಷ್ಟು ಮಳೆ ಬೀಳುತ್ತದೆ. ಭೌಗೋಳಿಕವಾಗಿ ಗುಡ್ಡ - ಕಾಡುಗಳಿಂದ ಕೂಡಿದ ಸಮತಟ್ಟಲ್ಲದ ಇಳಿಜಾರು ಪ್ರದೇಶವಾಗಿದ್ದರಿಂದ ಮಳೆಯ ನೀರಿನ ಪರ್ಯಾಯ ವ್ಯವಸ್ಥೆಯಾಗಿ ಕೆರೆ - ಕಟ್ಟೆಗಳ ನಿರ್ಮಾಣಕಾರ್ಯ ಅವಶ್ಯವಾಗಿತ್ತು. “ಮಳೆಯನ್ನೇ ನೆಚ್ಚಿಕೊಂಡು ಬೇಸಾಯಕ್ಕೆ ತೊಡಗುವುದಕ್ಕಿಂತ ಕೆರೆ - ಕಟ್ಟೆಗಳನ್ನು ನಿರ್ಮಿಸಿಕೊಂಡು ಬೇಸಾಯಕ್ಕೆ ತೊಡಗುವುದು ಉತ್ತಮ.”[7] ಹಾನಗಲ್ಲು ಪರಿಸರವು ಕೆರೆ - ಕಟ್ಟೆ ನಿರ್ಮಾಣಕ್ಕೆ ಯೋಗ್ಯವಾದ ಭೌಗೋಳಿಕ ಲಕ್ಷಣಗಳನ್ನು ಒದಗಿಸಿದೆ. ಸುಮಾರು ದೂರದ ಗುಡ್ಡ - ಕಾಡುಗಳ ಸಾಲಿನಿಂದ ಹರಿದು ಬರುವ ನೀರಿನ ಕಣಿವೆಗಳಿಗೆ ಅಡ್ಡಲಾಗಿ ಜಲ ಸಂಗ್ರಹಣಾ ಕೆರೆ - ಕಟ್ಟೆಗಳನ್ನು ನಿರ್ಮಿಸಲು ಯೋಗ್ಯವಾಗಿದೆ. ಈ ಪ್ರದೇಶದ ಕೆರೆ - ಕಟ್ಟೆಗಳು ಮಳೆ ಆಶ್ರಿತವಾಗಿದ್ದರಿಂದ ನದಿಯ ನೀರಿನ ಆಶ್ರಯ ಪಡೆಯಲು ಮೂರು ಯೋಜನಗಳಷ್ಟು ದೂರದಲ್ಲಿ ‘ಧರ್ಮಾನದಿ’ ಹರಿದಿದೆ. ಕೆರೆ - ಕಟ್ಟೆ ಏರಿಯ ನಿರ್ಮಾಣಕ್ಕೆ ಯೋಗ್ಯವಾದ ಮಣ್ಣು, ಒರಟಾದ ಗುಂಡು ಶಿಲೆ, ಕೆರೆಯ ಮುಂಭಾಗದಲ್ಲಿ ಫಲವತ್ತಾದ ಆಯಕಟ್ಟಿನ ಭೂಮಿ, ಆಳವಾದ ಮತ್ತು ವಿಶಾಲವಾದ ನೀರಿನ ಹರಿವು ಈ ಎಲ್ಲ ಅನುಕೂಲತೆಗಳಿಂದಾಗಿ ಬಹುಸಂಖ್ಯೆಯಲ್ಲಿ ಕೆರೆ - ಕಟ್ಟೆಗಳು ನಿರ್ಮಾಣಗೊಳ್ಳಲು ಸಾಧ್ಯವಾಯಿತು. ಈ ಕಾರಣವಾಗಿ ‘ಕೆರೆಯ ಜಿಲ್ಲೆ’ ಎಂಬ ಖ್ಯಾತಿಯು ಹಾವೇರಿ ಜಿಲ್ಲೆಗೆ ದೊರೆತರೆ, ‘ಕೆರೆಯ ತಾಲೂಕು’ ಎಂಬ ಸ್ಥಾನ ಹಾನಗಲ್ಲಿಗೆ ದೊರೆಯುತ್ತದೆ. ಇಲ್ಲಿ ೪೪೫ ಸಣ್ಣ ಕೆರೆಗಳು, ೧೧೨ ದೊಡ್ಡ ಕೆರೆಗಳು, ಒಟ್ಟು ೫೫೭ ಕೆರೆಗಳು ಮತ್ತು ೫೨೦ಕ್ಕೂ ಹೆಚ್ಚು ನೀರಾವರಿ ಬಾವಿಗಳಿವೆ. ಅವುಗಳಲ್ಲಿ ಬಹುಪಾಲು ಕೆರೆ - ಕಟ್ಟೆಗಳು ವಿಜಯನಗರ ಕಾಲದಲ್ಲಿ (೧೩೩೬ - ೧೫೬೫) ನಿರ್ಮಾಣಗೊಂಡಿವೆ.

ತಾಲೂಕಿನ ೧೧೨ ದೊಡ್ಡ ಕೆರೆಗಳಲ್ಲಿ ತಿಳವಳ್ಳಿಯ ಹಿರೇಕೆರೆ, ನರೇಗಲ್ಲಿನ ಹಿರೇಕೆರೆ ಮತ್ತು ಹಾನಗಲ್ಲಿನ ಆನೆಕೆರೆಗಳು ಕ್ರಮವಾಗಿ ೮೬೨, ೬೦೨ ಮತ್ತು ೫೩೭ ಎಕರೆಗಳಿಗೆ ನೀರು ಒದಗಿಸುತ್ತಿರುವ ಬೃಹತ್ ಪ್ರಮಾಣದ ಕೆರೆಗಳಾಗಿವೆ.

ಹಾನಗಲ್ಲು ನಗರಕ್ಕೆ ಸೇರಿದ ೪ ದೊಡ್ಡ ಕೆರೆಗಳು, ೬ ಚಿಕ್ಕ ಕೆರೆಗಳು, ೬ ಅತಿ ಚಿಕ್ಕ ಕೆರೆಗಳು ಮತ್ತು ಕುರುಬರ ಬಾವಿ, ಕಲ್ಲಬಾವಿ, ಕಂಚಗಾರ ಬಾವಿ ಮುಂತಾದ ೧೨ ನೀರಾವರಿ ಬಾವಿಗಳಿವೆ. ಕುರುಬರ ಬಾವಿ ದೊಡ್ಡ ಪ್ರಮಾಣದ ಬಾವಿಯಾಗಿದ್ದು, ೧೬ ಎಕರೆ ಭೂಮಿಗೆ ನೀರು ಒದಗಿಸುತ್ತದೆ. ಈ ಎಲ್ಲ ಜಲ ಮೂಲಗಳಿಂದಾಗಿ ಹಾನಗಲ್ಲು ವಿಪುಲ ಜಲ ಸಮೃದ್ಧಿಯನ್ನು ಹೊಂದಲು ಸಾಧ್ಯವಾಗಿದೆ. ಕೆರೆ - ಕಟ್ಟೆಗಳಿಂದ ೪೦೩ ಹೆಕ್ಟೇರ್, ನಾಲೆಗಳಿಂದ ೧೭೨ ಹೆಕ್ಟೇರ್ ಮತ್ತು ಬಾವಿಗಳಿಂದ ೧೫೦ ಹೆಕ್ಟೇರ್, ಒಟ್ಟು ೭೨೫ ಹೆಕ್ಟೇರ್ ಆಯಕಟ್ಟು ಪ್ರದೇಶ ನೀರಾವರಿಗೊಳಪಟ್ಟಿದೆ. ಹಾನಗಲ್ಲಿನ ಜನ ಸಂಚಯನಗಳಲ್ಲಿ ಪ್ರಮುಖ ಪಾತ್ರ ವಹಿಸಿದ ಕೆರೆಗಳ ವಿವರ ಈ ರೀತಿ ಇದೆ.

| ಕ್ರ. ಸಂ. | ಕೆರೆ ಹೆಸರು | ರಚನಾ ವಿಧಾನ | ತೂಬುಗಳ ಸಂಖ್ಯೆ | ನೀರು ನಿಲ್ಲುವ ಕ್ಷೇತ್ರ (ಹೆಕ್ಟೇರ್) | ನೀರು ನಿಲ್ಲುವ ಪ್ರಮಾಣ (MCFTಗಳಲ್ಲಿ) | ನೀರಾವರಿ ಕ್ಷೇತ್ರ (ಹೆಕ್ಟೇರ್ ಗಳಲ್ಲಿ) | ವಿವರಣೆ |
|---|---|---|---|---|---|---|---|
| | | | | | | | |

| | | | | | | |
|---|---|---|---|---|---|---|
| ೧೧. | ಆನೆಕೆರೆ | ಒರಟು ಕಲ್ಲು ಗೋಡೆ | ೩ | ೪೮,೨೮ | ೪೩.೨೨ | ೭೦.೫೩ | ಗ್ರಾಮದ ದಕ್ಷಿಣಕ್ಕೆ |
| ೨. | ನಾಗಹೊಳ್ಳಿ ಕೆರೆ | ಒರಟು ಕಲ್ಲು ಗೋಡೆ | ೨ | ೧೦.೭೧ | ೨೯.೪೦ | ೧೦೯.೯೩ | ಉತ್ತರಕ್ಕೆ |
| ೩. | ಅಚ್ಚ ಕೆರೆ | ಒರಟು ಕಲ್ಲು ಗೋಡೆ | ೨ | ೧೨.೯೪ | ೧೨೭.೦೦ | ೯೯.೩೯ | ಪೂರ್ವಕ್ಕೆ |
| ೪. | ಕಂಬಳಕ ಕೆರೆ | ಒರಟು ಕಲ್ಲು ಗೋಡೆ | ೧ | ೪.೧೮ | ೧೦.೧೦ | ೫೩.೪೯ | ಪಶ್ಚಿಮಕ್ಕೆ |

**ಧರ್ಮಾನದಿ**

ಹಾನಗಲ್ಲು ಪ್ರದೇಶದಲ್ಲಿ ಕೆರೆ ನೀರಾವರಿಯಿಂದ ಕೃಷಿ ನಿರಂತರವಾಗಿ ಸಾಗಿಬರಲು ಕಾರಣ ಧರ್ಮಾನದಿಯ ಕಾಲುವೆ ವ್ಯೂಹ. ವರದಾನದಿಯ ಉಪ ನದಿಯಾದ ಧರ್ಮಾನದಿ ಉತ್ತರ ಕನ್ನಡ ಜಿಲ್ಲೆಯಿಂದ ಪಶ್ಚಿಮಾಭಿಮುಖವಾಗಿ ಹರಿದು 'ಕೊಲ್ಲರಡ್ಡಿ' ಎಂಬಲ್ಲಿ ಹಾನಗಲ್ಲು ತಾಲೂಕನ್ನು ಪ್ರವೇಶಿಸುತ್ತದೆ. ಮುಂದುವರೆದು 'ಕೂಡಲ' ಎಂಬ ಗ್ರಾಮದ ಬಳಿ ವರದಾನದಿಯನ್ನು ಸೇರುತ್ತದೆ. ಈ ನದಿಗೆ ಹಾನಗಲ್ಲು ತಾಲೂಕಿನ 'ಶೃಂಗೇರಿ' ಎಂಬಲ್ಲಿ ಕಲ್ಲುಟ್ಟಡದ ಆಣೆಕಟ್ಟನ್ನು ಕಟ್ಟಲಾಗಿದೆ. ಪ್ರಾಯಶ ಇದನ್ನು ವಿಜಯನಗರ ಕಾಲದಲ್ಲಿ ನಿರ್ಮಿಸಲಾಗಿದೆ.[8] ಮುಂದೆ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ 'ಯಮಗಳ್ಳಿ' ಗ್ರಾಮದ ಬಳಿ ಮಣ್ಣಿನ ಆಣೆಕಟ್ಟನ್ನು ೧೯೫೭ರಲ್ಲಿ ಕಟ್ಟಿ, ಇನ್ನೊಂದು ಜಲಾಶಯ ನಿರ್ಮಿಸಲಾಗಿದೆ.[9]

ಧರ್ಮಾನದಿಯ ಜಲಾನಯನ ಪ್ರದೇಶ ೯೮ ಚ.ಕಿ.ಮೀ. ಆಗಿದ್ದು, ಇದರಿಂದ ವಾರ್ಷಿಕ ೯೪.೨೦ ದಶಲಕ್ಷ ಘನಮೀಟರ್ ನೀರಿನ ಇಳುವರಿ ಇದೆ. ಮನ್ನಿನ ಆಣೆಕಟ್ಟೆಯ ಒಟ್ಟು ಎತ್ತರ ೨೪.೧೨ ಮೀಟರ್, ಉದ್ದ ೧.೪೪೮ ಮೀಟರ್ ಹಾಗೂ ಜಲಾಶಯದ ಒಟ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ ೨೩ ದಶಲಕ್ಷ ಘನ ಮೀಟರ್ ಆಗಿದೆ.[10] ಈ ಜಲಾಶಯದಿಂದ ಹಾನಗಲ್ಲು ತಾಲ್ಲೂಕಿನಲ್ಲಿ ೭.೩೪೨ ಹೆಕ್ಟೇರ್ (೧೮೩೮೨ ಎಕರೆ) ಅಚ್ಚುಕಟ್ಟು ಪ್ರದೇಶ ನೀರಾವರಿಗೊಳಪಟ್ಟಿದೆ. ಇದರ ಎಡದಂಡೆ ಕಾಲುವೆ ೯.ಕಿ.ಮೀ. ಉದ್ದವಾಗಿದೆ. ಸುಮಾರು ೧೮ನೆಯ ಶತಮಾನದಲ್ಲಿ ಧರ್ಮಾನದಿಯ ಕಾಲುವೆಯು ಶಿತಿಲಗೊಂಡಾಗ, ಹಜರತ್ ಮಹಮ್ಮದ್ ಹಬೀಬ್ ಶ್ರೀ ಹರೀಬ ಸಾಹೇಬರು ಕಾಲುವೆಯ ಜೀರ್ಣೋದ್ಧಾರಕ್ಕಾಗಿ ಗಿರಿಯಪ್ಪ ನಾಯಕರಿಗೆ ಭೂದಾನ ಮಾಡಿ ತಮ್ಮ ಸಾಮಾಜಿಕ ಕಳಕಳಿ ತೋರಿಸಿದ್ದನ್ನು ಶಾಸನ ಉಲ್ಲೇಖಿಸುತ್ತದೆ.[11]

**ಜಡ್ಡಿ ಕಾಲುವೆ**

ಉತ್ತರ ಕನ್ನಡ ಜಿಲ್ಲೆಯ ಗುಡ್ಡ ಸಾಲುಗಳ 'ಪಾಳ' ಎಂಬಲ್ಲಿ ಹುಟ್ಟಿ ನಿಸರ್ಗದತ್ತವಾಗಿ ಹರಿದು ಬರುವ ಈ ಕಾಲುವೆ ಹಾನಗಲ್ಲ ಕೆರೆಗಳ ಮೂಲ ಜೀವ ಜಲವಾಗಿದೆ. ಈ ಕಾಲುವೆಯನ್ನು ಕೆರೆಗಳತ್ತ ತಿರುಗಿಸಲಾಗಿದೆ. ಇದು ತನ್ನ ಪ್ರವಾಹ ಪಥದಲ್ಲಿ ಯಾದಗಿರಿ ಕೊಪ್ಪದ ಕೆರೆ, ಹಿರೇಕರಣಗಿ ಕೆರೆ, ಹುಣಸೆಟ್ಟಿ ಕೊಪ್ಪದ ಕೆರೆ, ಅರೆಗೊಪ್ಪ ಕೆರೆ, ಚಿಕ್ಕೇರಿಹೊಸಳ್ಳಿ ಕೆರೆ, ಆನೆಕೆರೆ, ಶಾಸ್ತ್ರಿಹೊಂಡ, ಅಚ್ಚಗೆರೆ, ಕೋಟೆಕೊಳ್ಳ ಹೀಗೆ ಈ ತಾಲ್ಲೂಕಿನ ೯೭ ಕೆರೆ - ಕಟ್ಟೆಗಳಿಗೆ ನೀರು ಸರಬರಾಜು ಮಾಡುತ್ತ ಸಾಗಿ 'ಅರಳೇಶ್ವರ' ಎಂಬಲ್ಲಿ ಧರ್ಮಾನದಿಯನ್ನು ಸೇರುತ್ತದೆ. ಈ ರೀತಿಯ ಕೆರೆ - ಕಟ್ಟೆಗಳ ಜೋಡಣೆಯು ಮಹತ್ವದ ತಾಂತ್ರಿಕತೆಯಾಗಿದ್ದು ಕೆರೆ ಮತ್ತು ಕೋಟೆಕೊಳ್ಳ ಒಣಗದ ಹಾಗೆ ನಿರಂತರ ಜಲ ಸಂಗ್ರಹವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿತ್ತು.

**ಆನೆಕೆರೆ**

ಹಾನಗಲ್ಲಿನ ದಕ್ಷಿಣ ದಿಕ್ಕಿಗಿರುವ ಮಳೆಯಾಶ್ರಿತವಾದ ದೊಡ್ಡಕೆರೆ, ಜಡ್ಡಿ ಕಾಲುವೆಯ ಮೂಲಕ ಹರಿದು ಬರುವ ನೀರನ್ನು ಕೆರೆಗೆ ತಿರುಗಿಸಲಾಗಿದೆ. ಹೆಚ್ಚುವರಿ ನೀರು ಕೋಡಿಯ ಮೂಲಕ ಕೋಟೆಯ ಸುತ್ತಲಿನ ಕಂದಕಕ್ಕೆ ಹರಿದು ಶಾಸ್ತ್ರಿ ಹೊಂಡ ತಲುಪುತ್ತದೆ. ಕೆರೆಯ ಏರಿಯನ್ನು ವರಟಾದ ದುಂಡು ಕಲ್ಲು ಮತ್ತು ದೇವಾಲಯಕ್ಕೆ ಬಳಸಲಾದ ಶಿಲೆಗಳಿಂದ ನಿರ್ಮಿಸಲಾಗಿದೆ. ಕೆರೆಯ ರಕ್ಷಣೆ ಮತ್ತು ದೀರ್ಘಕಾಲ ಬಾಳಿಕೆಯ ದೃಷ್ಟಿಯಿಂದ ಈ ಏರಿಯನ್ನು ಅಂಕು ಡೊಂಕಾಗಿ ರಚಿಸಲಾಗಿದೆ. ಇದರಿಂದಾಗಿ ನೀರಿನ ಒತ್ತಡ ಕೆರೆಯ ಏರಿಯಲ್ಲಿ ಹಂಚಿಹೋಗಿ ಏರಿಯು ಸುರಕ್ಷಿತವಾಗಿರುತ್ತದೆ. ಆಕಸ್ಮಿಕವಾಗಿ ಕೆರೆ - ಕಟ್ಟೆ ಒಡೆದರೂ ಏರಿಯ ಸಣ್ಣ ಭಾಗ ಮಾತ್ರವೇ ಒಡೆದು ದುರಸ್ತಿ ಕಾರ್ಯ ಸುಲಭವಾಗುತ್ತಿತ್ತು. ಈ ರೀತಿಯ ತಂತ್ರಜ್ಞಾನವನ್ನು ಕೆರೆ ನಿರ್ಮಾಣದಲ್ಲಿ ಬಳಸಲಾಗಿದೆ. ಈ ಕೆರೆಯು ೪೮.೨೮ ಹೆಕ್ಟೇರ್ ಗಳಷ್ಟು 'ಆನೆಕೆರೆ' ಎಂಬ ಹೆಸರು ಬಂದಿರಬಹುದಾಗಿದೆ. ಹೊಯ್ಸಳ ದೊರೆ ವಿಷ್ಣುವರ್ಧನ ತನ್ನ ಗಜಪಡೆಯೊಂದಿಗೆ ಕ್ರಿ.ಶ. ೧೧೧೮, ೧೧೨೨, ೧೧೩೫, ೧೧೩೫ ಹೀಗೆ ನಾಲ್ಕು ಬಾರಿ ಕೋಟೆಯ ಮೇಲೆ ದಾಳಿ ಮಾಡಿದನು. ನಂತರ ಇಮ್ಮಡಿ ವೀರ ಬಲ್ಲಾಳನು ಪಾನುಂಗಲ್ಲಿನ ದಕ್ಷಿಣ ಭಾಗದಲ್ಲಿರುವ 'ಆನೆ ತಟಾಕ'ದ ಬಳಿಯಲ್ಲಿ ತನ್ನ ಗಜಪಡೆಯೊಂದಿಗೆ ಬೀಡು ಬಿಟ್ಟು, ಹಾನಗಲ್ಲು ಕೋಟೆಗೆ ಕ್ರಿ.ಶ. ೧೧೯೬ರಲ್ಲಿ ಮುತ್ತಿಗೆ ಹಾಕಿದನು.[12] ಈ ಕೋಟೆ ಕಾಳಗದಲ್ಲಿ ಸಾಹಣಿಯೊಬ್ಬನು ವೀರ ಮರಣ ಹೊಂದಿದ್ದನ್ನು ಶಾಸನ ತಿಳಿಸುತ್ತದೆ.[13] ಗಜದಳದ ದೃಶ್ಯವಿರುವ ೧೨ನೆಯ ಶತಮಾನದ ವೀರಗಲ್ಲೊಂದು ಕೋಟೆಭಾಗದಲ್ಲಿ ಕಂಡುಬರುತ್ತದೆ. ಇದು ನಾಲ್ಕು ಸುತ್ತಿನ ಅಭೇದ್ಯ ಕೋಟೆಯಾಗಿತ್ತು. ಅದನ್ನು ಭೇದಿಸುವುದು ತುಂಬಾ ವಿಳಂಬವಾದಾಗ, ಕೆರೆಯ ಆಶ್ರಯದಲ್ಲಿ ಬೀಡು ಬಿಡುವುದು ಅನಿವಾರ್ಯವಾಗುತ್ತಿತ್ತು. ಆನೆಕೆರೆಯ ದಂಡೆಯ ಮೇಲೆ ವೈಭವಪೂರ್ಣವಾದ 'ಬಿಲ್ಲೇಶ್ವರ' ದೇವಸ್ಥಾನ ಇದ್ದು, ಈಗ ಗರ್ಭಗೃಹವನ್ನು ಹೊರತುಪಡಿಸಿ ಉಳಿದ ಭಾಗ ನಾಶವಾಗಿದೆ. ಈ ದೇವಾಲಯವನ್ನು 'ಬಿಲ್ಲಮುನ್ನೂರ್ವರು' ಎಂಬ ಸಂಘ ಕ್ರಿ.ಶ. ೧೧೧೯ರಲ್ಲಿ ನಿರ್ಮಿಸಿದ್ದರಿಂದ 'ಬಿಲ್ಲಾಳೇಶ್ವರ ದೇವಸ್ಥಾನ' ಎಂಬ ಹೆಸರು ಬರಲು ಕಾರಣವಾಗಿದೆ.[14] ದೇವಸ್ಥಾನ ನಿರ್ಮಾಣದೊಂದಿಗೆ ತಲೆಯೆತ್ತುತ್ತಲಿದ್ದ ತಟಾಕ ನಿರ್ಮಾಣ ಒಂದು ದೃಷ್ಟಿಯಿಂದ ಧರ್ಮ ಕಾರ್ಯವೆನಿಸಿದರೂ, ಇನ್ನೊಂದು ದೃಷ್ಟಿಯಿಂದ ಸಾರ್ವಜನಿಕ ಕಾರ್ಯವೆನಿಸಿದ್ದವು. ಶಿವನೊಡನೆ ಗಂಗೆಯೆಂಬಂತೆ ದೇವ ಪ್ರತಿಷ್ಠೆಯೊಂದಿಗೆ ತಟಾಕಗಳ ನಿರ್ಮಾಣ ಮಾಡುವುದು ಪ್ರಾಚೀನ ಕರ್ನಾಟಕದ ವಿಶಿಷ್ಟ ಪದ್ಧತಿ ಎನಿಸಿತ್ತು.[15] ಈ ಬಿಲ್ಲಾಳೇಶ್ವರ ದೇವಾಲಯ ನಿರ್ಮಾಣದ ಅವಧಿಯಲ್ಲಿಯೇ ಆನೆಕೆರೆ ನಿರ್ಮಾಣವಾಗಿರಬಹುದು.

ಹಾನಗಲ್ಲು ಆನೆಕೆರೆ ಹತ್ತಿರ ನಡೆದ ಕೋಟೆ ಕಾಳಗದಲ್ಲಿ ಬಿಲ್ಲ ಮುನ್ನೂರ್ವರು ಕೋಟೆ ರಕ್ಷಣೆಗಾಗಿ ಹೋರಾಡಿರಬಹುದು. ಅವರು ಬಿಲ್ಲು ವಿದ್ಯೆಯಲ್ಲಿ ಪ್ರವೀಣರಾದ ಮಹಾನ್ ವೀರರಾಗಿದ್ದರು. ಶಾಸನವು ಅವರನ್ನು "ಜಗತೀತಳ ವಿಖ್ಯಾತ ಭುವನ ಪರಾಕ್ರಮೋನ್ನತರು, ಕಾಡಾನೆ ಮಲ್ಲರು, ಅಡವಿ ಕಂದಪರು, ದೋಟವಿಳಾಸರು, ಮರೆವುಗೆ ಕಾವರು, ಚಲದಂಕರಾಮರು, ಸಾಹಸಶೌರ್ಯರು, ರಣರಂಗಭೀಮರು, ನಡಿದಂತೆ ಗಂಡರು, ಕದನ ಪ್ರಚಂಡರು, ಏಕಾಂಗ ವೀರರು, ಶರಣಾಗತ ವಜ್ರಪಂಜರು, ಬಿಲ್ಲೇಶ್ವರ ದೇವರ ಪಾದಾರಾದಕರಪ್ಪ ಬಿಲ್ಲಮುನ್ನೂರ್ವರು" ಎಂದು ವರ್ಣಿಸಿದೆ.[16]

ಹಾನಗಲ್ಲಿನ ಮತ್ತೊಂದು ಪ್ರಮುಖ ಕೆರೆ 'ಕುದುರೆಕೆರೆ'. ಅಶ್ವಪಡೆ ಬೀಡುಬಿಡುತ್ತಿದ್ದ ಮತ್ತು ಅಶ್ವಗಳನ್ನು ಮೈ ತೊಳೆಯುತ್ತಿದ್ದರೆನ್ನಲಾದ ಈ ಕೆರೆ ಊರ ಎಡಗಡೆ ಪಕ್ಕದಲ್ಲಿದೆ. ಇಲ್ಲಿ ಕ್ರಿ.ಶ. ೧೧೧೯ರಲ್ಲಿ ನಡೆದ ತುರು ಕಾಳಗದಲ್ಲಿ ಮೊಸಳೆಯ ಬಮ್ಮನೆಂಬ ಬಂಟನೋರ್ವನು ಮರಣ ಹೊಂದಿದ್ದನ್ನು ಶಾಸನ ಉಲ್ಲೇಖಿಸುತ್ತದೆ.[17] ಈ ಕೆರೆಯ ಹತ್ತಿರದಲ್ಲಿ ಯುದ್ಧಭೂಮಿ ಇಲ್ಲವೆ ವೈಹಾಳಿಯ ಬಯಲು (ಆನೆ-ಕುದುರೆಗಳಿಗೆ ತರಬೇತು ಕೊಡುತ್ತಿದ್ದ ಸ್ಥಳ)[18] ಇದ್ದಿರಬಹುದು.

ಹಾನಗಲ್ಲಿನ ಮತ್ತೊಂದು ದೊಡ್ಡಕೆರೆ ಅಚ್ಚಕೆರೆ. ಇದರ ಏರಿಯನ್ನು ಅಂಕುಡೊಂಕಾಗಿ ಮಣ್ಣು ಮತ್ತು ವರಟು ದುಂಡು ಶಿಲೆಗಳಿಂದ ನಿರ್ಮಿಸಲಾಗಿದೆ. ಕೆರೆಯು ೧೨.೬೪ ಹೆಕ್ಟೇರ್ ಗಳಷ್ಟು ನೀರು ನಿಲ್ಲುವ ಒಳಹರವನ್ನು ಹೊಂದಿದ್ದು, ೧೨೭.೦೦ ಎಂ.ಸಿ.ಎಫ್.ಟಿ. ನೀರು ಸಂಗ್ರಹವಾಗುತ್ತದೆ. ಇದರ ಎರಡು ತೂಬುಗಳು ೬೯.೩೫ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರು ಒದಗಿಸುತ್ತವೆ. 'ನಾಗಹೊಳ್ಳಿ ಕೆರೆ'ಯು ನೋಡಲು ನಾಗರ ಹಾವಿನ ಹಾಗೆ ಹೊರಳಿದ್ದರಿಂದ 'ನಾಗಹೊಳ್ಳಿ ಕೆರೆ' ಎಂದು ಕರೆದಿರಬಹುದು. ಈ ಭಾಗದಲ್ಲಿ ನಾಗಾರಾಧನೆ ಪ್ರಭಾವ

ಹೆಚ್ಚಾಗಿರುವುದರಿಂದ 'ನಾಗರ' ಎಂಬ ಆದಿ ಪದಗಳನ್ನೊಳಗೊಂಡ ಹೆಸರುಗಳು ಹೆಚ್ಚಾಗಿ (ಉದಾ: ನಾಗರಖಂಡ, ನಾಗರ ವಿಳ್ಯೆ, ನಾಗರ ಹಳ್ಳ, ನಾಗರ ಕೆರೆ) ಕಂಡುಬರುತ್ತವೆ. ಇದು ೧೦.೭೧ ಹೆಕ್ಟೇರ್ ಗಳಷ್ಟು ನೀರು ನಿಲ್ಲುವ ಒಳಹರವನ್ನು ಹೊಂದಿದ್ದು, ೨೬.೪೦ ಎಂ.ಸಿ.ಎಫ್.ಟಿ. ನೀರು ಸಂಗ್ರಹಣ ಸಾಮರ್ಥ್ಯ ಹೊಂದಿದೆ. ಸುಮಾರು ೧೦೬.೯೩ ಹೆಕ್ಟೇರ್ ಆಯಕಟ್ಟು ಪ್ರದೇಶ ಹೊಂದಿದೆ. ಕಂಬಳ ಕೆರೆಯು ದೊಡ್ಡದಾದರೂ ಮೇಲಿನ ಮೂರು ಕೆರೆಗಳಿಗಿಂತ ಚಿಕ್ಕದಾಗಿದ್ದು, ೪.೧೮ ಹೆಕ್ಟೇರ್ ನೀರು ನಿಲ್ಲುವ ಒಳಹರವನ್ನು ಹೊಂದಿದೆ. ಇದು ೧೦.೧೦ ಎಂ.ಸಿ.ಎಫ್.ಟಿ. ನೀರು ಸಂಗ್ರಹಣ ಸಾಮರ್ಥ್ಯ ಹೊಂದಿದ್ದು ೫೩.೪೬ ಹೆಕ್ಟೇರ್ ಆಯಕಟ್ಟು ಪ್ರದೇಶಕ್ಕೆ ನೀರು ಸರಬರಾಜು ಮಾಡುತ್ತದೆ.

ಪ್ರಾಚೀನ ಕಾಲದಲ್ಲಿ ಗ್ರಾಮದ ಸೀಮೆಯನ್ನು ಕೆರೆ - ಕಟ್ಟೆಗಳಿಂದ ನಿರ್ಧರಿಸಲಾಗುತ್ತಿತ್ತು.[19] ಹಾನಗಲ್ಲು ಗ್ರಾಮದ ಅಷ್ಟದಿಕ್ಕಿಗೆ 'ಅಷ್ಟ ತಟಾಕ'ಗಳಿದ್ದವೆನ್ನಲಾಗಿದೆ.[20] ಹಾನಗಲ್ಲು ದಕ್ಷಿಣಕ್ಕೆ ಆನೆಕೆರೆ, ಪಶ್ಚಿಮಕ್ಕೆ ಕಂಬಳ ಕೆರೆ, ಉತ್ತರಕ್ಕೆ ನಾಗಹೊಳ್ಳಿ ಕೆರೆ ಮತ್ತು ಪೂರ್ವಕ್ಕೆ ಅಚ್ಚಕೆರೆಗಳು, ಉಪದಿಕ್ಕುಗಳಲ್ಲಿ ಕುದುರೆಕೆರೆ, ಅಕ್ಕ - ತಂಗಿಯರ ಕೆರೆ, ರಾಮನಕಟ್ಟಿ, ಕಳ್ಳಿಕಟ್ಟೆ, ಕೆಂಪುಕಟ್ಟೆ, ತೋಪಿನಕಟ್ಟೆ ಎಂಬ ಚಿಕ್ಕ ಕೆರೆಗಳು, ಮೂರ್ತಿಹೊಂಡ, ಕಂಚಿಗೇರಿ ಹೊಂಡ, ಅಂಬಿಗರ ಹೊಂಡ, ಕುಂಬಾರಗುಂಡಿ, ಮುಲ್ಲಾನಗುಂಡಿ ಎಂಬ ಅತಿ ಚಿಕ್ಕ ಕೆರೆಗಳನ್ನು ಹೊಂದಿದ ಹಾನಗಲ್ಲು 'ಕೆರೆ ಗ್ರಾಮ'[21]ವೇ ಆಗಿದೆ. ಇಲ್ಲಿಯವರೆಗೆ ಈ ನಾಡಿನ ಗುಡಗೇರಿ ಪರಿಸರದಲ್ಲಿ ೧೪ ಕೆರೆಗಳಿರುವ ವಿಚಾರ ಶಿಗ್ಗಾಂವ ಶಾಸನದಲ್ಲಿ ಉಲ್ಲೇಖಿತವಾದರೆ, ಅದಕ್ಕಿಂತಲೂ ಅಧಿಕ ಅಂದರೆ ೧೬ ಕೆರೆಗಳನ್ನು ಹೊಂದಿರುವ ಈ ಪ್ರದೇಶದ ಜಲಸಮೃದ್ಧಿಯನ್ನು ಕಲ್ಪಿಸಬಹುದು.

**ಹಾನಗಲ್ಲು ತಾಲೂಕಿನ ಕೆರೆ - ಕಟ್ಟೆ - ಬಾವಿ ನೀತಾವರಿ ಪ್ರದೇಶ ಹೆಕ್ಟೇರ್ ಗಳಲ್ಲಿ** [22]

| ಕಾಲುವೆ (ನದಿ) | ಕೆರೆ | ಬಾವಿ | ಕೊಳವೆ ಬಾವಿ | ಇತರೇ | ಒಟ್ಟು ನೀರಾವರಿ ಪ್ರದೇಶ | ಸಾಗುವಳಿ ಯೋಗ್ಯ ಪ್ರದೇಶ | ಪ್ರದೇಶ ಅರಣ್ಯ |
|---|---|---|---|---|---|---|---|
| ೫,೦೭೦ | ೯,೬೭೬ | ೬೮ | ೨೭೧೦ | ೧,೪೮೯ | ೧೯,೦೧೩ | ೭೭,೫೨೫ | ೮,೪೭೪ |

**ಹಾನಗಲ್ಲು ತಾಲೂಕಿನ ಪ್ರಮುಖ ನೀರಾವರಿ ಬೆಳೆಗಳು ಹೆಕ್ಟೇರ್ ಗಳಲ್ಲಿ[23]**

| ತೆಂಗು | ಮೆಣಸಿನ ಕಾಯಿ | ಅಡಿಕೆ | ಎಲೆ ಬಳ್ಳಿ | ತರಕಾರಿ | ಮಾವು | ಬಾಳೆ | ಇತರೆ ಹಣ್ಣು | ಭತ್ತ | ರಾಗಿ | ಕಬ್ಬು | ಹತ್ತಿ |
|---|---|---|---|---|---|---|---|---|---|---|---|
| ೫೮೩ | ೪೩೩೬ | ೧೪೮ | ೮೭ | ೨೦೯ | ೨೭೬ | ೭೫ | ೨೦೯ | ೨೬,೫೨೦ | ೯೮೫ | ೨೧೨೯ | ೬೭೨೨ |

-

(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)

---

[1] ಭೋಜರಾಜ ಪಾಟೀಲ, ನಾಗರಖಂಡ-೭೦ : ಒಂದು ಅಧ್ಯಯನ, ಆನಂದಪುರ - ೧೯೯೫

[2] ಅದೆ

[3] ಅದೆ

[4] ಶೀಲಾಕಾಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಕ.ವಿ.ವಿ. ಹಂಪಿ - ೨೦೦೦

[5] ಇತಿಹಾಸ ದರ್ಶನ, ಸಂ-೭, ಬೆಂಗಳೂರು - ೧೯೯೨, ಪು-೯೦

[6] ವಾಸುದೇವನ್ ಸಿ.ಎಸ್. ಹಂಪಿ ಪರಿಸರದ ಕೆರೆಗಳು, ಕ.ವಿ.ವಿ. ಹಂಪಿ - ೨೦೦೧

[7] ವಾಸುದೇವನ್ ಸಿ.ಎಸ್. ಹಂಪಿ ಪರಿಸರದ ಕೆರೆಗಳು, ಕ.ವಿ.ವಿ. ಹಂಪಿ - ೨೦೦೧

[8] ದೀಕ್ಷಿತ್ ಜಿ.ಎಸ್., ಜಿ.ಆರ್.ಕುಪ್ಪಸ್ವಾಮಿ, ಎಸ್.ಕೆ.ಮೋಹನ್, (ಕ.ಅ) ನೀಲತ್ತಹಳ್ಳಿ ಕಸ್ತೂರಿ, ಕರ್ನಾಟಕದಲ್ಲಿ ಕೆರೆ ನೀರಾವರಿ, ಕ.ವಿ.ವಿ. ಹಂಪಿ - ೨೦೦೦

[9] ಸೂರ್ಯನಾಥ ಕಾಮತ್, (ಮು.ಸಂ), ಭಾರತದ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ, ಬೆಂಗಳೂರು - ೧೯೯೫

[10] ಅದೆ

[11] ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲೆಯ ಶಾಸನಸೂಚಿ, ಧಾರವಾಡ - ೧೯೭೫

[12] ಅದೆ

[13] K.I., V, 59, Hanagal, (1196 A.D.)

[14] K.I., V, ೮೦, Hanagal, (1119 A.D.)

[15] ಚನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಧಾರವಾಡ - ೧೯೯೦

[16] ಅದೆ

[17] K.I., V, ೮೦, Hanagal, (1119 A.D.)

[18] ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈ.ವಿ.ವಿ., ಮೈಸೂರು - ೧೯೩೧

[19] ದ್ಯಾಮನಗೌಡ್ರು ವ್ಹಿ.ಕೆ., ಡಂಬಳ ಮತ್ತು ಅದರ ಪರಿಸರ (ಮಾಸವಾಡಿ ೧೪೦ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಪ್ರಬಂಧ) ಕ.ವಿ.ವಿ., ಧಾರವಾಡ - ೨೦೦೦

[20] ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗ್ರಾಮಸ್ಥರಿಂದ ಮಾಹಿತಿ

[21] ಕೊಟ್ರಯ್ಯ ಸಿ.ಟಿ.ಎಂ., ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಕ.ವಿ.ವಿ. ಹಂಪಿ - ೨೦೦೧

[22] ಸೂರ್ಯನಾಥ ಕಾಮತ್, (ಮು.ಸಂ), ಭಾರತದ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ, ಬೆಂಗಳೂರು - ೧೯೯೫

[23] ಅದೆ

# ೧೧. ದೇವಾಲಯ ವಾಸ್ತುಶಿಲ್ಪ

ಹಾನಗಲ್ಲಿನ ಪ್ರಾಚೀನ ದೇವಾಲಯಗಳ ಬೆಳವಣಿಗೆಯ ಹಿನ್ನೆಲೆಯಾಗಿ ಕಲ್ಯಾಣದ ಚಾಲುಕ್ಯರ ಆಗಮನಕ್ಕಿಂತ ಮುಂಚಿನ ದೇವಾಲಯ ವಾಸ್ತುವಿನ ಕುರಿತು ಒಂದೆರಡು ಮಾತುಗಳು ಪ್ರಸ್ತುತವಾಗುತ್ತವೆ. ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಬಾದಾಮಿ, ಮಹಾಕೂಟ, ಐಹೊಳೆ, ಆಲಂಪುರ, ಪಟ್ಟದಕಲ್ಲು, ಮುಂತಾದೆಡೆ ಔತ್ತರೇಯ ಮತ್ತು ದಕ್ಷಿಣಾತ್ಯ ದೇಗುಲ ವಾಸ್ತು ರಚನೆಯಲ್ಲಿ ಹಲವಾರು ಪ್ರಯೋಗಗಳಾದವು. 'ನಾಗರ' (ರೇಖಾನಾಗರ), 'ಪಾಂಸನಾ' ಮತ್ತು 'ದ್ರಾವಿಡ' ಪ್ರಭೇದಗಳು ಸ್ವತಂತ್ರ ಮತ್ತು ಮಿಶ್ರ ರೀತಿಯಲ್ಲಿ

ಅಭಿವ್ಯಕ್ತಿ ಕಂಡವು. ಕೂಲಂಕುಷವಾಗಿ ಪರಿಶೀಲಿಸಿದಾಗ, ಕರ್ನಾಟಕದ ವಾಸ್ತುಶಿಲ್ಪಿಗಳು ೭ – ೮ನೆಯ ಶತಮಾನಗಳಲ್ಲಿ ರಚಿಸಿದ ಕೆಲವು 'ನಾಗರ' ಮತ್ತು 'ದ್ರಾವಿಡ' ದೇಗುಲಗಳಲ್ಲಿ ಒಂದರ ಲಕ್ಷಣಗಳು ಇನ್ನೊಂದರಲ್ಲಿ ಅರಿತೋ ಅರಿಯದೆಯೋ ನುಸುಳಿರುವುದು ಕಾಣುತ್ತದೆ. ನರಸೊಬ್ಬನು ಐಹೊಳೆಯಲ್ಲಿ ನಿರ್ಮಿಸಿದ ಹುಚ್ಚಪ್ಪಯ್ಯಗುಡಿ ಮೂಲಭೂತವಾಗಿ ರೇಖಾನಗರ ಪ್ರಾಸಾದವಾಗಿದ್ದರೂ, ಅದರ ಗೂಢಮಂಟಪದ ದ್ವಾರಬಂಧದ ಉತ್ತರಾಂಗದಲ್ಲಿ ದ್ರಾವಿಡ ಶಾಲಾ ವಿನ್ಯಾಸ ಒಡೆದು ಕಾಣುತ್ತಿದೆ! ಅದರಂತೆ ಪಟ್ಟದಕಲ್ಲಿನ ಪಾಪನಾಥ ಗುಡಿಯು ಶಿಖರವನ್ನೂ ಒಳಗೊಂಡಂತೆ ರೇಖಾನಾಗರ ಪ್ರಾಸಾದದ ಹಲವು ಲಕ್ಷಣಗಳಿಂದ ಕೂಡಿದ್ದರೂ, ಅದರ ಆದಿಭೂಮಿಯು ಅಂತ್ಯವು ಕೂಟ-ಶಾಲಾಗಳನ್ನೊಳಗೊಂಡ ದಾಕ್ಷಿಣಾತ್ಯ ಮುಚತುಷ್ಕಿಯ ಮೇಲೆ 'ನಾಗರ' ಸಂಪ್ರದಾಯದ 'ಶುಕನಾಸ' ಚಾಚಿಕೊಂಡಿದೆ. ಪಟ್ಟದಕಲ್ಲಿನ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ಗುಡಿಗಳಲ್ಲಿ 'ಶುಕನಾಸ', 'ಕಕ್ಷಾಸನ'ದಂತಹ 'ನಾಗರ' ಲಕ್ಷಣಗಳು ದ್ರಾವಿಡ ವಾಸ್ತು ರೂಪದೊಂದಿಗೆ ಮನಮೋಹಕವಾಗಿ ಬೆಸೆದುಕೊಂಡಿರುವುದು ಕಾಣುತ್ತದೆ. ಧರ್ಮಗಳ ಸ್ವರೂಪದಲ್ಲಿ ಉಂಟಾದ ಪರಿವರ್ತನೆಗಳಿಂದ ದೇಗುಲಗಳ ತಲವಿನ್ಯಾಸ ಕೂಡ ಅವಶ್ಯಕತೆಗಳಿಗೆ ತಕ್ಕಂತೆ ಹೊಸ ಹೊಸ ರೂಪಗಳನ್ನು ಕಂಡಿತು. ಉದಾಹರಣೆಗೆ, ಪಾಶುಪತ ಶೈವ ದೇಗುಲಗಳಲ್ಲಿ ಗೂಢಮಂಟಪಕ್ಕೆ ಮೂರು ದಿಕ್ಕುಗಳಲ್ಲಿ ಮೂರು ದ್ವಾರಗಳನ್ನಳವಡಿಸುವ ಕ್ರಮಕ್ಕೆ ಶಿವನ ತತ್ಪುರುಷ, ವಾಮದೇವ, ಅಘೋರ, ಸದ್ಯೋಜಾತ ಎಂಬ ಕಲ್ಪನೆಯಾಗಲಿ, ತ್ರೈಪುರುಷ ಕಲ್ಪನೆಯಾಗಲಿ ಹಾದಿಮಾಡಿದಂತೆ ತೋರುತ್ತದೆ. ಚಲುಕ್ಯೋತ್ತರ ಕಾಲದಲ್ಲಿ ನಾಗರ, ಪಾಂಸನಾ ಮತ್ತು ದ್ರಾವಿಡ ಪ್ರಬೇಧಗಳು ಕರ್ನಾಟಕದಲ್ಲಿ ಮುಂದುವರಿದವಾದರೂ, ಕರ್ನಾಟಕ ವಾಸ್ತುಶಿಲ್ಪಿಗಳ ಛಾಪು ಅವುಗಳ ರೂಪದಲ್ಲಿ ಒಡೆದು ಕಾಣುತ್ತದೆ. ಹಾಗೆಯೇ ಧಾರ್ಮಿಕ ಅವಶ್ಯಕತೆಗಳಿಂದ ರೂಪುಗೊಂಡ ತಲವಿನ್ಯಾಸಗಳು ಚಲುಕ್ಯೋತ್ತರ ಕಾಲದಲ್ಲಿ ಮತ್ತೂ ವಿಕಾಸ ಹೊಂದಿವೆ.

ಕದಂಬರ ರಾಜಧಾನಿಯಾಗಿ ಹಾನಗಲ್ಲು ಸಹಜವಾಗಿಯೇ ಅಂದಿನ 'ಮೆಟ್ರೊಪಾಲಿಟನ್' ವಾಸ್ತು ಸಂಪ್ರದಾಯಗಳ ಆಗರವಾಯಿತು. ಅಲ್ಲಿ ಉಳಿದುಬಂದಿರುವ ಕದಂಬರ ಕಾಲದ ಕೆಲವೆ ದೇಗುಲಗಳು ಮತ್ತು ಅವುಗಳ ವಿವರಗಳು ಈ ಹೇಳಿಕೆಗೆ ಜೀವಂತ ನಿದರ್ಶನವೊದಗಿಸುತ್ತಿವೆ. ಕಲ್ಯಾಣದ ಚಾಲುಕ್ಯ ಮತ್ತು ಹಾನುಗಲ್ಲಿನ ಕದಂಬರ ಕಾಲದ ಹಾನಗಲ್ಲಿನ ಗುಡಿಗಳ ವಾಸ್ತು ವಿವರ ಮತ್ತು ಶಿಲ್ಪಗಳ ವೈಶಿಷ್ಟ್ಯಗಳನ್ನು ಸಂಕ್ಷಿಪ್ತವಾಗಿ ತಿಳಿಸುವುದು ಈ ಪ್ರಬಂಧದ ಉದ್ದೇಶ. ಸ್ವತಃ ನೋಡಿ ಅವುಗಳ ಸೌಂದರ್ಯವನ್ನು ಸವಿಯುವುದು ಬಹು ಯೋಗ್ಯವಾದುದು.

**ಬಿಲ್ಲೇಶ್ವರ ಗುಡಿ**

ಹಾನಗಲ್ಲಿನ ಜೀರ್ಣಗೊಂಡಿರುವ ಕೋಟೆಯಲ್ಲಿ ಭಾಗಶಃ ಹಾಳಾಗಿರುವ ಆದರೆ ಆಕರ್ಶಕವಾಗಿರುವ ಬಿಲ್ಲೇಶ್ವರ ಗುಡಿಯ (ಛಾಯಾಚಿತ್ರ ೩) ವಿಮಾನ ಮಾತ್ರ ಉಳಿದಿದೆ. ವಿಮಾನದ ಕರ್ಣ ಮತ್ತು ಭದ್ರಗಳಲ್ಲಿ ಹೆಚ್ಚು ಆಳವಿಲ್ಲದ ಕೋಷ್ಠಗಳಿದ್ದು, ಅವುಗಳಿಗೆ ಮೇಲೆ ವೇಸರಕೂಟಗಳಿವೆ. ಸಲಿಲಾಂತರಗಳಲ್ಲಿ ತೋರಣಾನ್ವಿತ ಕೂಟಸ್ತಂಭಗಳಿವೆ. ಗರ್ಭಗೃಹದ ದ್ವಾರಬಂಧವು ಪಂಚಶಾಖಾ ರೀತಿಯದು (ಛಾಯಾಚಿತ್ರ ೪). ಇದು ಕಲ್ಪದ್ರುಮದಿಂದಾದ ಬಾಹ್ಯಶಾಖೆ, ಬಳ್ಳಿಯ ಸುರುಳಿಗಳೊಳಗೆ ಚಿತ್ರಿಸಿರುವ ವ್ಯಾಳಗಳಿಂದೊಡಗೂಡಿದ ವ್ಯಾಳಶಾಖೆ, ದೇವದಂಪತಿಗಳಿಂದ ಕೂಡಿದ ಮಿಥುನ ಶಾಖೆ, ನಾಗ-ನಾಗಿಣಿಯರಿಂದಾದ ನಾಗಶಾಖೆ ಮತ್ತು ಅಲಂಕಾರಯುತ ರತ್ನಗಳ ಸಾಲು ಇರುವ ರತ್ನಶಾಖೆಗಳನ್ನೊಳಗೊಂಡಿದೆ. ದ್ವಾರಬಂಧದ ಶಾಖೆಗಳಲ್ಲಿ ಸ್ತಂಭಶಾಖೆ ಇರುವುದು ಸಾಮಾನ್ಯ. ಆದರೆ ಇಲ್ಲಿ ಅದು ಇರದಿರುವುದು ವಿಶೇಷವೆನಿಸಿದೆ. ದ್ವಾರಬಂಧದ ಅಡ್ಡತೊಲೆ ಶಿಥಿಲವಾಗಿದ್ದು, ಅದರ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಈ ಅಡ್ಡತೊಲೆಯ ಉತ್ತರ ಅಥವಾ ತಂತ್ರಕ ಭಾಗದಲ್ಲಿ ಮುತ್ತುಗಳ ಹಾರವಿರುವ ಮಾಲೆಯಿದೆ. ಪೇದ್ಯಾಗಳು ಕಾಮ, ರತಿ, ವಸಂತ ಮುಂತಾದ ದೇವತೆಗಳ ಶಿಲ್ಪಗಳನ್ನೊಳಗೊಂಡಿವೆ (ಛಾಯಾಚಿತ್ರ ೫). ವಿಮಾನ ಮತ್ತು ದ್ವಾರಬಂಧಗಳೆರಡೂ ೧೧ನೆಯ ಶತಮಾನದ ಉತ್ತರಾರ್ಧದ ಲಕ್ಷಣಗಳನ್ನು ತೋರ್ಪಡಿಸುತ್ತವೆ.

೧೧೯೯ರ ಕದಂಬ ತೈಲಪದೇವನ ಶಾಸನದಲ್ಲಿ ಬಿಲ್ಲೇಶ್ವರ ದೇವರ ಉಲ್ಲೇಖವಿದೆ.[1]ಆಗ ಈ ದೇವಾಲಯ ಆಗಲೇ ಅಸ್ತಿತ್ವದಲ್ಲಿತ್ತೆಂಬುದು ಸ್ಪಷ್ಟ. ಇದು ಕಾಳಾಮುಖರ ಪ್ರಮುಖ ದೇಗುಲವಾಗಿತ್ತೆಂದೂ ಇದಕ್ಕೆ ಪ್ರತಿಬದ್ಧವಾಗಿ ಮೂಲಸ್ಥಾನ ದೇವರ

ಹಾಗೂ ಇನ್ನಿತರ ಶೈವ ದೇಗುಲಗಳು ಹಾನಗಲ್ಲಿನಲ್ಲಿ ಇದ್ದವೆಂದೂ ಈ ಶಾಸನದಿಂದ ವ್ಯಕ್ತವಾಗುತ್ತದೆ. ದೇವರಾಸಿಪಂಡಿತನ ಉಲ್ಲೇಖವಿರುವುದರಿಂದ ಬಿಲ್ಲೇಶ್ವರವು ಕಾಳಾಮುಖ ಶೈವ ಸಂಪ್ರದಾಯದ ದೇಗುಲವಾಗಿತ್ತೆಂದೂ ಸ್ಪಷ್ಟವಿದೆ.

**ಶಾಸ್ತ್ರೀಕುಂಡದ ಸಮೀಪದ ಗುಡಿಯ ದ್ವಾರಬಂಧ**

ಹಾನಗಲ್ಲಿನ ಶಾಸ್ತ್ರೀಕುಂಡದ ಸಮೀಪದಲ್ಲಿರುವ ದೇಗುಲದ ದ್ವಾರಬಂಧವು ಗಮನಾರ್ಹವಾದುದು. ಈಗಿರುವ ಗುಡಿ ವಿಜಯನಗರೋತ್ತರ ಕಾಲದ್ದಾಗಿದ್ದರೂ, ಕಲ್ಯಾಣದ ಚಾಲುಕ್ಯರ ಕಾಲದ ಯಾವುದೋ ದೊಡ್ಡ ದೇಗುಲದ ಗದ್ವಾರಬಂಧವು ಇಲ್ಲಿ ಬಳಕೆಯಾಗಿದೆ. ದ್ವಾರಬಂಧದ ಮೂಲ ಅಡ್ಡತೊಲೆ ಈಗ ಇಲ್ಲ. ಷಟ್ಶಾಖಾ ಪ್ರಕಾರದ ಈ ದ್ವಾರಬಂಧದಲ್ಲಿ ಕಲ್ಪದ್ರುಮವನ್ನೊಳಗೊಂಡ ಬಾಹ್ಯಶಾಖೆ, ಪದ್ಮರೂಪದ ಖಲ್ವ, ವ್ಯಾಳಶಾಖೆ (ಬಲಭಾಗದಲ್ಲಿ ಈ ಶಾಖೆಯ ಪ್ರಾರಂಭದಲ್ಲಿ ನಾಗಿಣಿಯರಿದ್ದಾರೆ), ಸ್ತಂಭಶಾಖೆ (ಇದು ಮೂರು ಹಂತಗಳಲ್ಲಿ ಲಂಬಪಟ್ಟಿಕೆಗಳನ್ನೊಳಗೊಂಡಿದ್ದು, ಮೇಲ್ಭಾಗದಲ್ಲಿ ಘಟಪಲ್ಲವವಿದೆ), ಬಳ್ಳಿಯ ಸುರುಳಿಗಳಲ್ಲಿರುವ ಮನುಷ್ಯರನ್ನೊಳಗೊಂಡ ಮಾನುಷಶಾಖೆ ಮತ್ತು ರತ್ನಶಾಖೆಗಳಿಂದೊಡಗೂಡಿದೆ. ಬಿಲ್ಲೇಶ್ವರದ ಗುಡಿಯ ದ್ವಾರಬಂಧವನ್ನು ಸಾಕಷ್ಟು ಹೋಲುವುದರಿಂದ ಇದರ ಕಾಲವೂ ೧೧ನೆಯ ಶತಮಾನವಿರಬಹುದು.

**ತಾರಕೇಶ್ವರ ದೇವಾಲಯ**

ಹಾನಗಲ್ಲಿನಲ್ಲಿರುವ ದೇವಾಲಯಗಳಲ್ಲಿ ತಾರಕೇಶ್ವರ ದೇಗುಲ ಅತಿ ದೊಡ್ಡದು (ಛಾಯಾಚಿತ್ರ ೬). ಅಷ್ಟೆ ಅಲ್ಲ ಇಡೀ ಚಾಲುಕ್ಯ ಪ್ರದೇಶದಲ್ಲಿ ಉಳಿದುಬಂದಿರುವ ಅತಿ ಉದ್ದದ (೫೦ ಮೀಟರ್) ದೇಗುಲವಾಗಿದೆ. ಕೆಲವು ದೃಷ್ಟಿಕೋನಗಳಿಂದ ಹಾನಗಲ್ಲು ಕದಂಬರಾಳಿದ ಪ್ರದೇಶದಲ್ಲಿಯೇ ಇದು ವೈಶಿಷ್ಟ್ಯಪೂರ್ಣವಾದುದು. ಈ ಬೃಹತ್ ದೇವಾಲಯಕ್ಕೆ ಗರ್ಭಗೃಹ, ಅಂತರಾಳ, ಮೂರು ದಿಕ್ಕುಗಳಿಂದ ಪ್ರವೇಶವಿರುವ ಗೂಢಮಂಟಪ, ಅದರ ಮೂರೂ ಪ್ರವೇಶಗಳಿಗೆ ವಿಶಾಲ ಮುಖಮಂಟಪಗಳು, ಪೂರ್ವ ಮುಖಮಂಟಪಕ್ಕೆ ಹೊಂದಿಕೊಂಡು ಇಬ್ಬದಿಗಳಿಂದ ಪ್ರವೇಶವಿರುವ ಬಹು ವಿಶಾಲವಾದ ತೆರೆದ ರಂಗಮಂಟಪ ಮತ್ತು ರಂಗಮಂಟಪಕ್ಕೆ ಮುಂದುಗಡೆ (ಪೂರ್ವದಿಕ್ಕಿನಲ್ಲಿ) ಹೊಂದಿಕೊಂಡಿರುವ ಅರ್ಧ ತೆರೆದಿರುವ ನಂದಿಮಂಟಪ ಇವೆ. ಬೃಹತ್ ಮೂಲ ಪ್ರಾಸಾದಕ್ಕೆ (ವಿಮಾನಕ್ಕೆ) ನಾಲ್ಕು ಭೂಮಿಗಳಿವೆ. ಆದುದರಿಂದ ಇದು ಕರ್ನಾಟಕದಲ್ಲಿ ಚಾಲುಕ್ಯ ಶೈಲಿಯ ಚುತುರ್ಭೂಮಿ ದ್ರಾವಿಡ ಪ್ರಾಸಾದ (ಛಾಯಾಚಿತ್ರ ೭).

ಮೂಲ ಪ್ರಾಸಾದದ ಅಧಿಷ್ಠಾನವು ಖುರಕ, ಪದ್ಮ, ಕುಮುದು, ಕಪೋತ, ಮಕರಪಟ್ಟಿಕೆ ಮತ್ತು ವೇದಿಯಿಂದಾಗಿದೆ. ಗೋಡೆಯ ಭದ್ರಗಳು ಎತ್ತರವಾದ ಖಟ್ಟಕಗಳಿಂದಾಗಿದ್ದು, ವೇಸರ ಮಾದರಿಯ ವಿಮಾನಗಳನ್ನು ಹೊತ್ತಿವೆ. ಕರ್ಣಗಳಲ್ಲಿ ವಿಮಾನಗಳಿರುವ ಕೋಷ್ಠಪಂಜರಗಳಿವೆ. ಪ್ರತಿರಥಗಳಲ್ಲಿ ಭದ್ರಕ ಪ್ರಕಾರದ ಸ್ತಂಭಗಳಿವೆ. ಸಲಿಲಾಂತರಗಳಲ್ಲಿ ಕೂಟಸ್ತಂಭಗಳು ದ್ರಾವಿಡ, ನಾಗರ (ಛಾಯಾಚಿತ್ರ ೮) ಮತ್ತು ಭೂಮಿಜ ಶಿಖರಗಳ ವಿವಿಧ ಮಾದರಿಗಳನ್ನು ಹೊತ್ತಿವೆ. ಈ ಕೂಟಸ್ತಂಭಗಳಿಗೆ ಮೇಲ್ಗಡೆ ಅಲಂಕಾರಯುತ ತೋರಣಗಳಿವೆ. ಕಪಿಲಿಯ ಗೋಡೆಯಲ್ಲಿ ಪ್ರಧಾನ ಅರೆಗಂಬವಿದ್ದು, ಅದರ ಪಾರ್ಶ್ವಗಳಲ್ಲಿ ತೋರಣಗಳಡಿಯಲ್ಲಿ ಕೂಟಸ್ತಂಭಗಳಿವೆ. ಹಾರದ ವಿವರಗಳು ಗೋಡೆಯ ಮುಂಚಾಚು ಹಿಂಚಾಚುಗಳನ್ನು ಅನುಸರಿಸಿವೆ. ಇದೆ ವಿನ್ಯಾಸದ ಮುಂದುವರಿಕೆಯನ್ನು ಉಳಿದ ಮೂರೂ ಭೂಮಿಗಳಲ್ಲೂ ಕಾಣಬಹುದು. ನಾಲ್ಕನೆಯ ಭೂಮಿಯ ತರುವಾಯ ವೇದಿಕಾ ರಚನೆಯಿದ್ದು, ಗ್ರೀವದ ಮೇಲ್ಗಡೆ ಘಂಟಾ ಭಾಗವಿದೆ. ಇದರ ಮೇಲ್ಗಡೆ ಮೂಲತಃ ಕಲಶವಿದ್ದಿರಬೇಕು. ಈಗ ಗಾರೆಯಿಂದ ರಚಿಸಿದ ಗುಮ್ಮಟದ ಮೇಲೆ ಕಳಶ ಗೋಚರಿಸುತ್ತಿದೆ. ಶಿಖರದ ಪೂರ್ವ ಮುಖದಿಂದ ಮೂರನೆಯ ಭೂಮಿಯಷ್ಟು ಎತ್ತರವಿರುವ ಶುಕನಾಸ ಮುಂಚಾಚಿದೆ. ಇದರ ಮೇಲ್ಗಡೆ (ಕೆಲವು ಹೊಯ್ಸಳ ದೇವಾಲಯಗಳಲ್ಲಿರುವಂತೆ) ಸಿಂಹದೊಂದಿಗೆ ಸೆಣಸುವ ಯೋಧನ ದುಂಡುಶಿಲ್ಪವಿದೆ (ಛಾಯಾಚಿತ್ರ ೭).

ಮೂಲಪ್ರಾಸಾದಕ್ಕಿರುವಂತೆ ಗೂಢಮಂಟಪದ ಗೋಡೆಗೂ ಕೋಷ್ಠಪಂಜರಗಳಿರುವ ಕರ್ಣಗಳಿವೆ. ಪ್ರತಿರಥ ಮತ್ತು ಪ್ರತಿ ಕರ್ಣಗಳನ್ನು ಭದ್ರಕ ಪ್ರಕಾರದ ಕುಡ್ಯಸ್ತಂಭಗಳಿಂದ ಸೂಚಿಸಿದೆ. ಪಾರ್ಶ್ವಚತುಷ್ಕಿ ಮಂಟಪಗಳಿಗೆ ವೇದಿಕಾ ಆಸನಪಟ್ಟ - ಕಕ್ಷಾಸನ ಪ್ರಕಾರದ ಗೋಡೆಯನ್ನು ರೂಪಿಸಿದೆ. ರಂಗಮಂಟಪದ ಮುಖಮಂಟಪಗಳಿಗೂ ಇದೆ ವ್ಯವಸ್ಥೆ ಮಾಡಿದೆ. ಕುಳ್ಳಗಾಗಿರುವ ಚಿತ್ರಖಂಡ ಕಂಬಗಳು


ವೃತ್ತಾಕಾರದ ಲಶುನಭಾಗವನ್ನು, ಚೌಕದ ಕೆಳಗೆ ಅಲಂಕೃತ ಪಟ್ಟಿಯನ್ನು ಒಳಗೊಂಡಿದೆ. ಇವು ಬಂಕಾಪುರದ ಗೂಢಮಂಟಪದ ಕಂಬಗಳನ್ನು ಹೋಲುತ್ತವೆ. ಗೂಢಮಂಟಪದ ಪೂರ್ವ ಗೋಡೆಯಲ್ಲಿ ಅತ್ಯುತ್ತಮ ರೀತಿಯ ದೇಗುಲ ಮಾದರಿಗಳನ್ನು ಪ್ರದರ್ಶಿಸುತ್ತವೆ. ಇವುಗಳಲ್ಲಿ ಅನೇಕಾಂಡ (ಶೇಖರೀ) ಮಾದರಿಯ ಶಿಖರಗಳಿರುವ ದೇಗುಲ ಮಾದರಿಗಳು ಗಮನಾರ್ಹವಾಗಿವೆ (ಛಾಯಾಚಿತ್ರ ೯). ಗೂಢಮಂಟಪದ ಮೂರೂ ಪ್ರವೇಶಗಳಿಗಿರುವ ದ್ವಾರಬಂಧಗಳು ಬಹಳ ಅಲಂಕಾರಪೂರಿತವಾಗಿವೆ. ಅವುಗಳ ಲಲಾಟಬಿಂಬಗಳು ಬೇರೆ ಬೇರೆ ದೇವತೆಗಳನ್ನೊಳಗೊಂಡಿವೆ. ಪೂರ್ವದ ದ್ವಾರಬಂಧದ ಲಲಾಟದಲ್ಲಿ ಗಜಲಕ್ಷ್ಮಿ, ದಕ್ಷಿಣದ ದ್ವಾರಬಂಧದ ಲಲಾಟದಲ್ಲಿ ನೃತ್ಯ ಗಣೇಶ ಮತ್ತು ಉತ್ತರದ ದ್ವಾರಬಂಧದ ಲಲಾಟದಲ್ಲಿ ಸರಸ್ವತಿ ಚಿತ್ರಗಳಿವೆ. ಗೂಢಮಂಟಪದೊಳಗೆ ಸಾಮಾನ್ಯವಾಗಿ ಇರುವಂತೆ ನಾಲ್ಕು ಕಂಬಗಳಿವೆ. ಇವುಗಳ ಚೌಕ ಪೀಠದ ಮೂಲೆಗಳಲ್ಲಿ ನಾಗರ ಶಿಖರಗಳನ್ನು ಹೊತ್ತಿರುವ ಕಂಬಗಳು ಮತ್ತು ಮುಖಗಳಲ್ಲಿ ಚಾಮುಂಡಿ, ಗಣೇಶ, ಸರಸ್ವತಿ, ವೀರಭದ್ರ, ಭೈರವ, ಭೈರವಿ, ಸ್ಥಾನಕ ವಿಷ್ಣು, ಸೂರ್ಯ, ಪಾರ್ವತಿ, ಉಗ್ರನರಸಿಂಹ ಮುಂತಾದ ದೇವತೆಗಳ ಉಬ್ಬು ಶಿಲ್ಪಗಳನ್ನು ಮಕರತೋರಣದ ಕೆಳಗೆ ರೂಪಿಸಿದ್ದಾರೆ. ಗೂಢಮಂಟಪದ ಒಳಗಡೆ ಗೋಡೆಗಳಲ್ಲಿ ಎಂಟು ದೇವಕೋಷ್ಠಗಳಿದ್ದು, ಅವುಗಳ ಲಲಾಟಬಿಂಬಗಳಲ್ಲಿ ನಾಲ್ಕು ಗಣೇಶ, ಎರಡು ಸರಸ್ವತಿ ಮತ್ತು ಒಂದು ಲಕ್ಷ್ಮಿಯ ಕೆತ್ತನೆಗಳಿವೆ. ಈ ದೇವಕೋಷ್ಠಕಗಳಲ್ಲಿ ಈಗ ಎರಡು ವಿಷ್ಣು ವಿಗ್ರಹಗಳು, ಎರಡು ಕುಮಾರ ವಿಗ್ರಹಗಳು, ಒಂದು ಬ್ರಹ್ಮನ ವಿಗ್ರಹ, ಒಂದು ಸೂರ್ಯ ವಿಗ್ರಹ ಇವೆ. ಉಳಿದೆರಡರಲ್ಲಿ ವಿಗ್ರಹಗಳಿಲ್ಲ. ಅಂತರಾಳವನ್ನು ಗೂಢಮಂಟಪದಿಂದ ಬೇರ್ಪಡಿಸಲು ಇಕ್ಕೆಲಗಳಲ್ಲಿ ಶಿಲಾಪರದೆಗಳಿದ್ದು, ಮೇಲ್ಗಡೆ ತ್ರಿಮೂರ್ತಿ ತೋರಣವಿದೆ. ದೊಡ್ಡಪ್ರಮಾಣದಲ್ಲಿರುವ ಗರ್ಭಗೃಹ ದ್ವಾರಬಂಧದ ಲಲಾಟಬಿಂಬದಲ್ಲಿ ಗಣೇಶನ ಶಿಲ್ಪ ಹಾಗೂ ಗರ್ಭಗೃಹದಲ್ಲಿ ಲಿಂಗವಿದೆ.

ತಾರಕೇಶ್ವರ ದೇಗುಲದ ಮುಖ್ಯ ಗಮನೀಯ ಭಾಗವೆಂದರೆ, ವಿಶಾಲ ರಂಗಮಂಟಪದ ಒಳಭಾಗ. ಇದರಲ್ಲಿರುವ ಸುಮಾರು ೧೦ ಅಡಿ ಸಾಗಿರುವ ಬೃಹತ್ ಕರೋಟಕ ವಿತಾನವು ಅತ್ಯಾಕರ್ಷಕವಾದುದು. ಶಾಲಾದಲ್ಲಿರುವ ಹೆಚ್ಚು ಅಂತರದಲ್ಲಿರುವ ನಾಲ್ಕು ಕಂಬಗಳು, "ಶ್ರೀಕಾರ" ಪ್ರಕಾರವಾಗಿದ್ದು, ಅಲಂಕಾರಯುತವೂ ಹೊಳಪುಳ್ಳವೂ ಆಗಿವೆ. ಇವು ಮೇಲಿರುವ ಕ್ಷಿಪ್ತೋತ್ಕ್ಷಿಪ್ತ ಅಲಂಕಾರಪೂರಿತ ವಿತಾನವಾಗಿದ್ದು, ಕರ್ನಾಟಕದಲ್ಲಿಯೇ ಅತಿ ದೊಡ್ಡದೆನಿಸುವ "ಸಭಾಪದ್ಮ ಮಂದಾರಕ" ರೀತಿಯ ವಿತಾನವೆನಿಸಿದೆ. ಈ ವಿಶಾಲ ವಿತಾನದ ಭಾರವನ್ನು ತಡೆಯಲು ಮುಖ್ಯ ಕಂಬಗಳ ಜೋಡಿಗಳ ನಡುವಣ ಅವಕಾಶದಲ್ಲಿ ತೊಲೆಗಳಿಗೆ ಆಧಾರವೊದಗಿಸುವ ತೆಳುವಾದ ಜೋಡುಗಂಬಗಳನ್ನು ನಿಲ್ಲಿಸಲಾಗಿದೆ. ತೊಲೆಗಳ ಮುಖಗಳಲ್ಲಿ ಅಷ್ಟದಿಕ್ಪಾಲಕರ ಶಿಲ್ಪಗಳಿವೆ. ಗುಮ್ಮಟಾಕಾರದ ವಿತಾನವು ತಳಭಾಗದಲ್ಲಿ ಗಜತಾಲು ಸಾಲಿನೊಂದಿಗೆ ಆರಂಭವಾಗಿದ್ದು, ಅದರ ಮೇಲ್ಗಡೆ ಕಿರಿದಾಗುತ್ತ ಸಾಗುವ ಐದು ಕೋಲಗಳ ಸಾಲುಗಳಿವೆ. ವಿತಾನದ ಮಧ್ಯದಿಂದ ದೊಡ್ಡ ಐದು ಅಡಿಯಷ್ಟು ವಿಶಾಲ ಲಂಬನಪದಕವಿದೆ. ಇದರ ಮೊದಲೆರಡು ಸಾಲುಗಳು ಉತ್ಕ್ಷಿಪ್ತಲೂಮಾಗಳಿಂದಾಗಿವೆ. ಇದಾದ ಮೇಲೆ ಕಿರು ಕೋಲಾಗಳಿಂದೊಡಗೂಡಿದ ದೊಡ್ಡ ಗಾತ್ರದ ಪದ್ಮಕೇಶರವು ಕೆಳಗಿಳಿದಿದೆ. ಆಸನಪಟ್ಟದ ಮೇಲಿರುವ ಕುಳ್ಳ ಕಂಬಗಳು ಗೂಢಮಂಟಪದ ಕಂಬಗಳಂತಿದ್ದರೂ, ಅಲಂಕಾರ ಕಡಿಮೆ. ರಂಗಮಂಟಪದಲ್ಲಿರುವ ೧೮ ಸ್ವತಂತ್ರ ಕಂಬಗಳು ಹಾಗೂ ಅಂಚಿನ ವೇದಿ ಆಸನದ ಮೇಲಿರುವ ೧೮ ಕಿರುಗಂಬಗಳು ಸೇರಿ ಒಟ್ಟು ೫೬ ಕಂಬಗಳಿವೆ. ರಂಗಮಂಟಪವು ದಕ್ಷಿಣೋತ್ತರವಾಗಿ ಸುಮಾರು ೯೪ ಅಡಿ ಉದ್ದವಿದೆ. ಪೂರ್ವ ಮುಖಮಂಟಪದಲ್ಲಿ ಪದ್ಮನಾಭ ಪ್ರಕಾರದ ಮಧ್ಯ ವಿತಾನವಿದೆ. ರಂಗಮಂಟಪದ ಹೊರಭಾಗವು ಬಂಕಾಪುರ, ಕುಂದಗೋಳ ಮುಂತಾದೆಡೆ ಇರುವ ದೇಗುಲಗಳ ರಂಗಮಂಟಪದ ಸ್ವರೂಪವನ್ನು ನೆನಪಿಸುತ್ತದೆ. ರಂಗಮಂಟಪದ ಚಾವಣಿಯ ಹೊರನೋಟವೂ ಉಲ್ಲೇಖನೀಯ. ಇದು ಫಾಂಸಾಕಾರವನ್ನು ಹೋಲುವ ಸಂವರಣ ಪ್ರಕಾರದ ಶಿಖರವನ್ನು ಹೊತ್ತಿದೆ. ವಿಶಾಲ ರಂಗಮಂಟಪಗಳಿದ್ದಾಗ ಈ ರೀತಿಯ ಶಿಖರಗಳನ್ನು ರಚಿಸಲಾಗಿರುತ್ತದೆ. ಕರ್ನಾಟಕದಲ್ಲಿ ಇದು ಅಪರೂಪ.

ತಾರಕೇಶ್ವರ ದೇವಾಲಯದಲ್ಲಿ ಕುಸುರಿನ ಶಿಲ್ಪಾಲಂಕಾರಕ್ಕೆ ಪ್ರಾಧಾನ್ಯ ನೀಡಲಾಗಿದೆಯಾದರೂ, ಕೆಲವು ಕಥಾನಿರೂಪಕ ಶಿಲ್ಪಗಳೂ ಇವೆ. ಇವುಗಳನ್ನು ಗೂಢಮಂಟಪದ ಮೂರು ಪ್ರವೇಶಗಳಲ್ಲಿರುವ ಮುಖಮಂಟಪಗಳ ಕಕ್ಷಾಸನ ಹೊರಮೈಯಲ್ಲಿ ಕಾಣಬಹುದು, ಪೂರ್ವ

ಮುಖಮಂಟಪದ ಪೂರ್ವಭಾಗದ ಕಕ್ಷಾಸನದಿಂದ ಪ್ರಾರಂಭವಾಗಿರುವ ಕೃಷ್ಣಚರಿತದ (ಕಾಲಿಯಾದಮನ, ಯಮಳಾರ್ಜುನಭಂಗ, ಶಕಟಭಂಗ ಇತ್ಯಾದಿ) ಘಟನೆಗಳ ನಿರೂಪಣೆ ಪ್ರದಕ್ಷಿಣಾ ರೀತಿಯಲ್ಲಿ ದಕ್ಷಿಣ ಭಾಗದಲ್ಲಿ ಮುಂದುವರಿದಿದೆ (ಛಾಯಾಚಿತ್ರ ೧೦). ತದನಂತರ ದಕ್ಷಿಣ ಮುಖಮಂಟಪದಲ್ಲಿ ರಾಮಾಯಣದ ಕೆಲವು ಘಟನೆಗಳ ನಿರೂಪಣೆ ಕಾಣುತ್ತದೆ. ಈ ಕಥಾನಿರೂಪಣೆ ಶಿಲ್ಪಗಳಲ್ಲಿ ಅನುಸರಿಸಿದ ತಂತ್ರ ಗಮನಾರ್ಹವಗಿದ್ದು, ಅಧ್ಯಯನ ಯೋಗ್ಯವಾಗಿದೆ.

ಹಾನಗಲ್ಲು ಕದಂಬ ವೀರ ಸೋಯಿದೇವನ ೧೧೭೯ರ ಶಾಸನದಲ್ಲಿ ಈ ದೇಗುಲವನ್ನು ಅಮರೇಶ್ವರ ದೇವಾಲಯವೆಂದು ಕರೆದಿದೆ.[2] ಆದರೆ ಆ ಶಾಸನ ದೇಗುಲದ ಪ್ರತಿಷ್ಠಾಪನೆಯನ್ನು ಉಲ್ಲೇಖಿಸುವುದಿಲ್ಲ. ಮೋರೇಸ್ ಅವರು ಪ್ರಕಟಿಸಿರುವ ಈ ಶಾಸನದ ಓದನ್ನು ಪರಿಷ್ಕರಿಸುವ ಅವಶ್ಯಕತೆಯಿದೆ. ಇದಕ್ಕಿಂತ ಮುಂಚಿನ ೧೧ - ೧೨ನೆಯ ಶತಮಾನದ ಶಾಸನದಲ್ಲಿ ಆಗಲೇ ತಾರಕೇಶ್ವರ ದೇವಾಲಯಕ್ಕೆ ನೀಡಿದ ದತ್ತಿಯ ಉಲ್ಲೇಖವಿದೆ.[3] ಅದರ ಬೃಹತ್ ಗಾತ್ರ, ಅಲಂಕಾರ ಮುಂತಾದವು ಇದೊಂದು ರಾಜಪ್ರೋತ್ಸಾಹದಿಂದ ರಚಿತ ದೇಗುಲವೆಂಬುದನ್ನು ಸೂಚಿಸುತ್ತವೆ. ಕೇವಲ ಕಂಬಗಳ ರೂಪ ವಿವರವನ್ನು ಸರಿಸಿದರೆ, ವಿಮಾನ (ಮೂಲಪ್ರಾಸಾದ) ಮತ್ತು ಅದರ ಗೂಢಮಂಟಪಗಳು ರಂಗಮಂಟಪಕ್ಕಿಂತ ಮುಂಚೆ ರಚಿತವಾದವೆಂದು ಭಾವಿಸಬೇಕಾಗುತ್ತದೆ. ಆದರೆ ಇವೆರಡೂ ಪೂರ್ವಯೋಜಿತ ಒಂದೇ ವಿನ್ಯಾಸದ ಅಂಗಗಳಂತೆ ಗೋಚರಿಸುವುದರಿಂದ ರಂಗಮಂಟಪವು ನಂತರದ್ದೆಂದು ಹೇಳುವುದು ಸಮಂಜಸವಾಗದು. ಆದುದರಿಂದ ಇದು ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಕದಂಬ ತೈಲಪನ ಆಳ್ವಿಕೆಯಲ್ಲಿ (೧೨ನೆಯ ಶತಮಾನದ ಮೊದಲ ಎರಡು ದಶಕಗಳಲ್ಲಿ) ರಚಿತವಾಯಿತೆಂದು ಭಾವಿಸುವುದು ಉಚಿತ.



ಹಾನಗಲ್ಲಿನ ತಾರಕೇಶ್ವರ ದೇಗುಲದ ತಲವಿನ್ಯಾಸ

**ಗಣೇಶದೇಗುಲ**

ತಾರಕೇಶ್ವರ ದೇವಾಲಯದ ಸಂಕೀರ್ಣದ ಭಾಗವೆನ್ನುವಂತೆ ದಕ್ಷಿಣಾಭಿಮುಖವಾಗಿ ಚಿಕ್ಕ ಗಣೇಶ ದೇಗುಲ ನಿಂತಿದೆ (ಛಾಯಾಚಿತ್ರ ೧೧). ಇದು 'ನಾಗರ' ಶೈಲಿಯ ದೇವಾಲಯವೆಂಬುದು ವೈಶಿಷ್ಟ್ಯವಾಗಿದೆ. ನಾಗರ ಶೈಲಿಯ ಅನೇಕ ಪ್ರಭೇದ ಮಾದರಿಗಳು ಕರ್ನಾಟಕದ ಕಲ್ಯಾಣ ಚಾಲುಕ್ಯರ - ಹೊಯ್ಸಳರ ದೇವಾಲಯಗಳ ಗೋಡೆಗಳಲ್ಲಿ ಯಥಾವತ್ತಾಗಿ ಕಂಡುಬರುತ್ತವೆ. ಆದರೆ ಆ ಕಾಲದ ಸ್ವತಂತ್ರ ನಾಗರ ದೇಗುಲಗಳು ಅಪರೂಪ. ಬೆಳಗಾವಿಯ ಸಮೀಪ ಹತ್ತರಗಿಯಲ್ಲಿರುವ ಶಿಖರೇಶ್ವರ ಗುಡಿ, ಬಾಗಲಕೋಟೆಯ ಸಮೀಪ ಶಿರೂರಿನಲ್ಲಿರು ಸಿದ್ಧೇಶ್ವರ ಗುಡಿ, ಬೀದರಿನ ಉಮಾಪುರದಲ್ಲಿರುವ ಶಿವ ದೇವಾಲಯಗಳು 'ನಾಗರ' ಸಂಪ್ರದಾಯದ ದೇಗುಲಗಳಿಗೆ ಕೆಲವು ಉದಾಹರಣೆಗಳು. ಹಾನಗಲ್ಲಿನ ಗಣೇಶ ಇವೆಲ್ಲವುಗಳಿಗಿಂತ ಭಿನ್ನವಾಗಿದೆ. ಇದನ್ನು ಶೇಖರೀ ನಾಗರ ಪ್ರಾಸಾದವೆಂದು ಗುರುತಿಸಲಾಗುತ್ತದೆ.

ಈ ಚಿಕ್ಕ ದೇಗುಲ ಗರ್ಭಗೃಹ, ಅಂತರಾಳ ಮತ್ತು ಒಂಬತ್ತು ಅಂಕಣಗಳುಳ್ಳ ತೆರೆದ ಮಂಟಪವನ್ನು ಹೊಂದಿದೆ. ಮೂಲಪ್ರಾಸಾದದ ಗಾತ್ರ ಸುಮಾರು ೩.೫ ಮೀಟರ್ ಮಾತ್ರ. ಅದು ಪಂಚರಥ ವಿನ್ಯಾಸವನ್ನನುಸರಿಸಿದೆ. ಪ್ರತಿಯೊಂದು ರಥವನ್ನು ಕಂಬವೆಂಬಂತೆ ಕಲ್ಪಿಸಿ ಅದರ ಮೇಲೆ ನಾಗರ ಶಿಖರವನ್ನಿರಿಸಲಾಗಿದೆ. ಪ್ರತಿಯೊಂದು ಪಾರ್ಶ್ವದ ಮಧ್ಯದ ರಥವು ಹೆಚ್ಚು ಅಗಲವಿದ್ದು, ಅವುಗಳ ಮೇಲೆ ಹೆಚ್ಚು ದೊಡ್ಡ ನಾಗರ ಶಿಖರಗಳನ್ನು ರೂಪಿಸಲಾಗಿದೆ. ಈ ಶಿಖರಗಳ ಲತಾ ಭಾಗವನ್ನು ಬಳ್ಳಿಯ ಕೆತ್ತನೆಯಿಂದ ಅಲಂಕರಿಸಿದೆ. ಒಟ್ಟು (ಚಿಕ್ಕ -

ದೊಡ್ಡ) ೨೫ ನಾಗರ ಶಿಖರಗಳಿದ್ದು, ಮಧ್ಯದ ಶಿಖರವು ಎಲ್ಲವುಗಳಿಗಿಂತ ದೊಡ್ಡದಾಗಿದೆ. ಎಲ್ಲ ಶಿಖರಗಳಿಗೂ ಚಪ್ಪಟೆಯಾದ ಆಮಲಕಗಳಿವೆ (ಛಾಯಾಚಿತ್ರ ೧೨). ಪರಮಾರ ಭೋಜನು ರಚಿಸಿರುವ 'ಸಮರಾಂಗಣ ಸೂತ್ರಧಾರ' (೧೧ನೆಯ ಶತಮಾನ) ವಾಸ್ತುಗ್ರಂಥವು ಹೆಸರಿಸಿರುವ 'ವಿಮಾನ ನಾಗರ' ಪ್ರಕಾರದ ಪ್ರತಿನಿಧಿಯೆಂದು ಕೆಲವು ವಿದ್ವಾಂಸರು ವಿಶ್ಲೇಷಿಸಿದ್ದಾರೆ. ಸಾಮಾನ್ಯವಾಗಿ ವಿದ್ವಾಂಸರು ಇದನ್ನು ಶೇಖರೀ ನಾಗರ ಪ್ರಾಸಾದವೆಂದು ಗುರುತಿಸುತ್ತಾರೆ.

ಈ ದೇಗುಲದ ಎಲ್ಲ ವಾಸ್ತು ಭಾಗಗಳು 'ನಾಗರ' ರೀತಿಯಲ್ಲಿಯೇ ರಚಿತವಾಗಿವೆ. ಅಧಿಷ್ಠಾನದಲ್ಲಿ ಕೆಳಗಡೆ ಉಪಪೀಠವಿದ್ದು, ಇದು ಖುರಕ, ಪದ್ಮ, ಕಂಠ ಮತ್ತು ಕಪೋತ ಮಡಿಕೆಗಳಿಂದಾಗಿದೆ. ಉಪಪೀಠ ಮಟ್ಟದಲ್ಲಿ ಮೂಲಪ್ರಾಸಾದದ ಪೂರ್ವದಿಕ್ಕಿನಿಂದ ಪ್ರನಾಳವು ಹೊರಚಾಚಿಕೊಂಡಿದೆ. ಉಪಪೀಠದ ಮೇಲಿರುವ ಪೀಠವು ನಾಗರ ಪ್ರಕಾರದ್ದು, ಇದರಲ್ಲಿ ಕುಂಭ, ಕಲಶ, ಕಪೋತ ಮಡಿಕೆಗಳಿವೆ.

ಮಂಟಪದ ಅಂಚಿನ ಗುಂಟ ಕಕ್ಷಾಸನವಿದ್ದು, ಅದರ ಹೊರ ಮುಖದಲ್ಲಿ ಕಂಬಗಳನ್ನಾಧರಿಸಿರುವ ಸರಳ 'ನಾಗರ' ಶಿಖರಗಳ ಸಾಲುಗಳಿವೆ. ಛಾದ್ಯದ ಮೇಲ್ಗಡೆ ನಾಗರ ಶಿಖರಗಳ ಸಾಲಿನಿಂದಾದ ಹಾರವಿದ್ದಿರಬೇಕು. ನುಗ್ಗೆಹಳ್ಳಿಯ (ಹಾಸನ ಜಿಲ್ಲೆ) ಸದಾಶಿವ ದೇವಾಲಯ ಮತ್ತು ತುರುವೇಕೆರೆಯ ಮೂಲೆಶಂಕರ ದೇವಾಲಯಗಳಲ್ಲಿ ಈ ಲಕ್ಷಣಗಳು ಕಾಣುತ್ತವೆ. ತೆರೆದ ಮಂಟಪದಲ್ಲಿರುವ ಕಂಬಗಳು ತಾರಕೇಶ್ವರ ದೇವಾಲಯದ ರಂಗಮಂಟಪದ ಕಂಬಗಳಂತೆ ಸರಳವಾಗಿವೆ. ಇವುಗಳ ವಿವರಗಳು ಗಣೇಶ ದೇವಾಲಯವೂ ತಾರಕೇಶ್ವರ ದೇವಾಲಯವೂ ಒಂದೆ ಕಾಲದವೆಂದು ಸೂಚಿಸುತ್ತಿವೆ.

ಅಂತರಾಳವು ತೆರೆದುಕೊಂಡಿದೆ. ಅದರ ವಿತಾನದಲ್ಲಿ ಪದ್ಮವಿದೆ. ಗರ್ಭಗೃಹ ದ್ವಾರಬಂಧವು ಸರಳವಾಗಿದೆ. ಅದರ ಲಲಾಟಬಿಂಬದಲ್ಲಿ ಗಣೇಶ ಶಿಲ್ಪವಿದೆ. ಗರ್ಭಗೃಹದ ವಿತಾನದಲ್ಲಿಯೂ ಪದ್ಮವಿದೆ. ಹಿಂಗೋಡೆಗೆ ಆತುಕೊಂಡು ಚಿಕ್ಕ ಗಣೇಶ ವಿಗ್ರಹವನ್ನಿರಿಸಿದೆ. ಒಟ್ಟಾರೆ ನೋಡಿದಾಗ ಈ ವಿಶಿಷ್ಟ ದೇಗುಲವು ಸುಮಾರು ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ರಚಿತವಾಗಿರಬೇಕು.

**ಕೋಟೆಯಲ್ಲಿರುವ ಜೈನ ದೇಗುಲ**

ಹಾನಗಲ್ಲಿನ ಇನ್ನೊಂದು ಸುಂದರ ದೇಗುಲವೆಂದರೆ, ಕೋಟೆಯಲ್ಲಿರುವ ಜೈನ ದೇಗುಲ (ಛಾಯಾಚಿತ್ರ ೧೩). ಕೋಟೆಯಲ್ಲಿರುವ ಹಾಳಾದ ಗುಡಿಗಳಲ್ಲಿ ಇದು ಹೆಚ್ಚು ಉತ್ತಮ ಸ್ಥಿತಿಯಲ್ಲಿದೆ. ಮೂಲಪ್ರಾಸಾದದ ಶಿಖರ ಈಗಿಲ್ಲ. ಆದರೆ ಅದರ ಏರುನೋಟವು ಕೆಲವು ಅಪೂರ್ವ ಲಕ್ಷಣಗಳನ್ನು ಬಿತ್ತರಿಸುತ್ತದೆ. ಅಧಿಷ್ಠಾನವು ಕಪೋತಬಂಧ ರೀತಿಯದು. ಅದರ ಕರ್ಣಕದ ಮೇಲೆ ಮತ್ತು ಕೆಳಗೆ ಅಲಂಕಾರಪೂರಿತ ಪಟ್ಟಿಕೆಗಳಿವೆ. ಗೋಡೆಯ ಕರ್ಣಗಳಿಗೆ ಕೋಷ್ಠಪಂಜರಗಳಿಲ್ಲ. ಭದ್ರಕ್ಕೆ ಎರಡು ಉಪಭದ್ರಗಳಿವೆ. ಅಗಲವಾದ ಸುಭದ್ರದ ಮುಖದಲ್ಲಿ ದೊಡ್ಡ, ಅಲಂಕಾರಪೂರ್ಣ, ಆಕರ್ಷಕ, ಭೂಮಿಗಳಿಂದಾದ, ಫಾಂಸಾನಾ ಶಿಖರ ಹೊತ್ತಿರುವ ರಂಗಮಂಟಪದ ಮಾದರಿಯನ್ನು ಶಿಲ್ಪಸಿದೆ (ಛಾಯಾಚಿತ್ರ ೧೪ -೧೫). ಇದರ ಮೇಲ್ಭಾಗದಲ್ಲಿ ಕುಸುರಿನ ಕೆಲಸದಿಂದ ಕೂಡಿರುವ ಆಕರ್ಷಕ ತೋರಣವಿದೆ. ಕಪಿಲಿಯಲ್ಲಿ ಎತ್ತರವಾದ ಅರೆಗಂಬದ ಬದಲು ಅಗಲವಾದ ಕೂಟಸ್ತಂಭವನ್ನು ತೋರಿಸಿದ್ದು, ಅದರ ಕೂಟವು ರಂಗಮಂಟಪದ ಮಾದರಿಯಲ್ಲಿದೆ. ಗೋಡೆಯ ಮೇಲ್ಭಾಗದಲ್ಲಿ ಮೂರು ಪಟ್ಟಿಗಳಿದ್ದು, ಇವು ವಲ್ಲೀಪಟ್ಟಿಕಾ ಮತ್ತು ನಿಧಿಗಳನ್ನೊಳಗೊಂಡ ತೋರಣದಿಂದಾಗಿವೆ. ಇವು ಮೂಲಪ್ರಾಸಾದದ ಹಾಗೂ ಮಂಟಪದ ಹಿಂಗೋಡೆಯಗುಂಟ ಸಾಗಿವೆ. ಕಪೋತದ ಅಂಚಿನಗುಂಟ ಗಗಾರಪಟ್ಟಿಕೆಯಿದೆ.


ರಂಗಮಂಟಪವು ಪ್ರಮಾಣಬದ್ಧವಾಗಿದ್ದು, ಮಂಚಬಂಧ ಅಧಿಷ್ಠಾನದ ಮೇಲೆ ನಿಂತಿದೆ. ಅಧಿಷ್ಠಾನದ ಕಂಠದಲ್ಲಿ ಸಾಲಾಗಿ ವಜ್ರಗಳ ಅಲಂಕಾರವಿದೆ. ವೇದಿಕಾ ಭಾಗದ ಮೇಲೆ ಈಗ ಕಕ್ಷಾಸನವಿಲ್ಲವಾದರೂ ಮೂಲತಃ ಇದ್ದುದರ ಸ್ಪಷ್ಟ ಸೂಚನೆಗಳಿವೆ. ಕಕ್ಷಾಸನದ ವೇದಿಕೆಯ ಮೇಲಿರುವ ಕುಳ್ಳ ಕಂಬಗಳು ಶ್ರೀಕಾರ ರೀತಿಯವು. ನಾಭಿಗೆ ರಂಗಭೂಮಿಕೆಯಿಲ್ಲ. ಮಧ್ಯಾಂಕಣದಲ್ಲಿರುವ ನಾಲ್ಕೂ ಶ್ರೀಕಾರ ಕಂಬಗಳನ್ನು ಸುಂದರವಾಗಿ ಅಲಂಕರಿಸಿದೆ (ಛಾಯಾಚಿತ್ರ ೧೬). ಮಾಲಾಸ್ಥಾನದಲ್ಲಿ ಕುಶಲತೆಯಿಂದ ಮೂಡಿಸಿರುವ ಎಲೆಗಳ ವಿನ್ಯಾಸ ಮತ್ತು ಮಣಿಬಂಧ ಪಟ್ಟಿಗಳಿವೆ. ಹಿಂಭಾಗದಲ್ಲಿರುವ ಭದ್ರಕ ಕಂಬಗಳೂ ಅಲಂಕಾರಪೂರಿತವಾಗಿವೆ. ಗರ್ಭಗೃಹದ ಲಲಾಟಬಿಂಬದಲ್ಲಿ

ಮೂಲತಃ ಜಿನಬಿಂಬವಿತ್ತು, ಅದನ್ನು ಅಳಿಸಿ ಹಾಕಲಾಗಿದೆ. ದೇವಾಲಯದ ಅಲಂಕಾರ ವಿಧಾನ, ಪ್ರೌಢಿಮೆ ಮುಂತಾದವು ಅದನ್ನು ೧೨ನೆಯ ಶತಮಾನದ ಮೊದಲ ಪಾದದ್ದೆಂದು ಸೂಚಿಸುತ್ತವೆ. ಆದರೆ ಶ್ರೀಕಾರ ಕಂಬಗಳ ಕಾಂಡಗಳ ಅಲಂಕಾರವನ್ನು ನೋಡಿದಾಗ, ಕೆಲವು ದಶಕಗಳ ನಂತರ ನಿರ್ಮಾಣವಾಗಿರಬಹುದು ಎನಿಸುತ್ತದೆ.

ಈ ದೇಗುಲದ ಶಿಲ್ಪಿಯು ಸೃಜನಶೀಲನಾಗಿದ್ದು, ತನ್ನ ಸಮಕಾಲೀನ ವಾಸ್ತುಶಿಲ್ಪಿಗಳಿಗಿಂತ ಭಿನ್ನವಾದ ಪರಂಪರೆಯನ್ನು ಪ್ರತಿನಿಧಿಸುವಂತಿದೆ. ಇಲ್ಲಿ ಗೋಡೆಯ ಅಲಂಕಾರಿಕ ವಿನ್ಯಾಸಗಳು ಕರ್ನಾಟಕದಲ್ಲಿ ಬೇರೆಡೆ ಕಂಡುಬಂದಿಲ್ಲ.

ಹಾನಗಲ್ಲಿನಲ್ಲಿ ಈಗ ಉಳಿದು ಬಂದಿರುವ ೧೧ - ೧೨ನೆಯ ಶತಮಾನದ ಪ್ರಾಚೀನ ದೇಗುಲಗಳು ಕೆಲವೆ ಆದರೂ ಮೂಲತಃ ಇನ್ನೂ ಅನೇಕ ಸಂಖ್ಯೆಯಲ್ಲಿ ಇದ್ದಿರಬೇಕು. ೧೧೧೯ರ ಶಾಸನದಲ್ಲಿ ಬಿಲ್ಲೇಶ್ವರ, ಮೂಲಸ್ಥಾನ, ಚಿಕ್ಕೇಶ್ವರ, ಕೊಂತೇಶ್ವರ, ಭೈರವ ಹಾಗೂ ನಿಂಬೇಶ್ವರ ದೇವರುಗಳ ಉಲ್ಲೇಖವಿರುವುದರಿಂದ ಆ ಹೆಸರಿನ ದೇಗುಲಗಳಿದ್ದವೆಂದು ಗೊತ್ತಾಗುತ್ತದೆ.[4] ಇದಲ್ಲದೆ ಗಡಿಯಂಕಮಲ್ಲನ ಬೀಡಿನ ಸೋಮೇಶ್ವರ ದೇವಾಲಯ, ತಾರಕೇಶ್ವರ ದೇವಾಲಯ, ಅಮರೇಶ್ವರ (?), ತೈಲೇಶ್ವರ ದೇವರ ಉಲ್ಲೇಖಗಳು ಇತರ ಶಾಸನಗಳಲ್ಲಿವೆ.[5] ಅದೇನಿದ್ದರೂ ಇಂದು ನೋಡದೊರೆಯುವ ಕೆಲವೇ ದೇಗುಲಗಳು ಒಂದಿಲ್ಲೊಂದು ರೀತಿಯಿಂದ ವೈಶಿಷ್ಟ್ಯಪೂರ್ಣವಾಗಿವೆ. ತಾರಕೇಶ್ವರ ದೇವಾಲಯವು ಗಾತ್ರ ಮತ್ತು ಅಲಂಕಾರ ವಿನ್ಯಾಸದಲ್ಲಿ ವಿಶಿಷ್ಟವಾಗಿದೆಯಾದರೆ, ಕೋಟೆಯಲ್ಲಿರುವ ಜೈನ ದೇಗುಲ ಗೋಡೆ, ಕಂಬ ಮುಂತಾದವುಗಳ ಅಲಂಕಾರ ಕಲ್ಪನೆಯಲ್ಲಿ ವಿಶಿಷ್ಟವಾಗಿದೆ. ಗಣೇಶ ದೇವಾಲಯ ಇಡೀ ಕರ್ನಾಟಕದಲ್ಲಿ ಉಳಿದುಬಂದಿರುವ ಶೇಖರಿ ಪ್ರಕಾರದ (ಖುಜುರಾಹೋ ದೇವಾಲಯಗಳನ್ನು ನೆನಪಿಸುವ) ಏಕಮೇವ ಉದಾಹರಣೆಯಾಗಿದೆ.

ಈ ಪ್ರಬಂಧ ರಚನೆಯ ಕಾರ್ಯದಲ್ಲಿ ನನ್ನ ವಿದ್ಯಾರ್ಥಿ ಮಿತ್ರ ಶ್ರೀ ಚಂದ್ರಶೇಖರ ತಬೋಜಿಯವರು ಸಹಕರಿಸಿದ್ದು, ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ಛಾಯಾ ಚಿತ್ರಗಳಿಗಾಗಿ ಗೆರಾರ್ಡ್ ಫೋಕೆಮಾ ಹಾಗೂ ತಲವಿನ್ಯಾಸಗಳಿಗಾಗಿ ಎಂ.ಎ. ಢಾಕಿ ಅವರಿಗೆ ಧನ್ಯವಾದಗಳು.



ಹಾನಗಲ್ಲಿನ ಜೈನ ಗುಡಿಯ ತಲವಿನ್ಯಾಸ

**ಪಾರಿಭಾಷಿಕಪದಗಳು :**

| | |
|---|---|
| **ಅಂತರಾಳ** | ಢಮಂಟಪ ಮತ್ತು ಗರ್ಭಗೃಹದ ನಡುವೆ ಇರುವ ಕೋಣೆ. |
| **ಅಂಡಕ** | ಚಿಕ್ಕ ಗಾತ್ರದ ನಾಗರ ಶಿಖರ. |
| **ಅಷ್ಟದಿಕ್ಪಾಲಕರು** | ಎಂಟು ದಿಕ್ಕುಗಳ ದೇವತೆಗಳು: ಇಂದ್ರ (ಪೂರ್ವ), ವರುಣ (ಪಶ್ಚಿಮ), ಕುಬೇರ (ಉತ್ತರ), ಯಮ (ದಕ್ಷಿಣ), ವಾಯು (ವಾಯುವ್ಯ), ಅಗ್ನಿ (ಆಗ್ನೇಯ), ನಿಋತಿ (ನೈರುತ್ಯ), ಈಶಾನ (ಈಶಾನ್ಯ). |
| **ಅಮಲಕ** | ನೆಲ್ಲಿಕಾಯಿ ಆಕಾರದ ರಚನೆ. ನಾಗರ ಪ್ರಾಸಾದಗಳಲ್ಲಿ ಶಿಖರದ ಕಳಶದ ಕೆಳಗಡೆ ಇರುತ್ತದೆ. |
| **ಅನೇಕಾಂಡಕ** | ನಾಗರ ರೀತಿ ಅನೇಕ ಶಿಖರಗಳ ಸಮೂಹದಿಂದಾದ ಶಿಖರ. |

| | |
|---|---|
| **ಆಸನಪಟ್ಟಕ** | ಮುಖಮಂಟಪ ಅಥವಾ ರಂಗಮಂಟಪದ ಅಂಚಿನಗುಂಟ ಕುಳಿತುಕೊಳ್ಳಲು ರಚಿಸಿರುವ ಬೆಂಚಿನಂತಹ ಆಸನ. |
| **ಕರ್ಣ** | ಮೂಲೆ. ಅಧಿಷ್ಠಾನ ಮತ್ತು ಗೋಡೆಯ ಮೂಲೆಯಲ್ಲಿ (ಕೋನದಲ್ಲಿ) ಇರುವ ಮುಂಚಾಚು. |
| **ಕಪಿಲಿ** | ಮೂಲಪ್ರಾಸಾದ ಮತ್ತು ಮಂಟಪದ ಗೋಡೆಗಳ ನಡುವಿರುವ ಅಂತರಾಳದ ಗೋಡೆ. |
| **ಕಪೋತ** | ವೃತ್ತದ ಕಾಲುಭಾಗದಂತೆ ಇಳಿಜಾರಾಗಿರುವ, ಅಧಿಷ್ಠಾನದ ಇಲ್ಲವೆ ಗೋಡೆಯ ಮೇಲ್ಗಡೆ ಸಾಗಿರುವ ಚಚ್ಚಾದಂತಹ ಭಾಗ. |
| **ಕರೋಟಕ** | ಮಂಟಪದಲ್ಲಿ ಮಗುಚಿ ಹಾಕಿರುವ ಬಡರಿಯಂತಿರುವ (ತೆಂಗಿನ ಕರಟದಂತಿರುವ) ದೊಡ್ಡ ಛತ್ತು. |
| **ಕಲಶ** | ಕಳಸ |
| **ಕಕ್ಷಾಸನ** | ರಂಗಮಮಟಪ, ಸಭಾಮಂಟಪ ಇಲ್ಲವೆ ಮುಖಮಂಟಪದ ಅಂಚಿನಗುಂಟ ಕುಳಿತುಕೊಳ್ಳಲು ಇರುವ ಬೆನ್ನಿಗೆ ಆನಿಕೆ ಕೊಡುವ ಆಸನ. |
| **ಕಲ್ಪದ್ರುಮ** | ಬೇಡಿದ್ದನ್ನು ಕೊಡುವ ವೃಕ್ಷ. |
| **ಕುಮುದ** | ಅಧಿಷ್ಠಾನದ ಮಡಿಕೆಗಳಲ್ಲಿ (ಕುಂಭ) ಮತ್ತು ಕಪೋತದ ನಡುವಿನ ಮಡಿಕೆ. |
| **ಕೂಟ** | ಚೌಕ ವಿನ್ಯಾಸದ ನಾಲ್ಕೂ ಕಡೆ ಇಳಿಜಾರಾದ ಚಾವಣಿಯುಳ್ಳ ಗುಡಿಸಲಿನಂತೆ ಕಾಣುವ ದೇಗುಲ ಮಾದರಿ. |
| **ಕೂಟಸ್ತಂಭ** | ಕೂಟವನ್ನು ಹೊತ್ತಿರುವ ಕಿರುಕಂಬ |
| **ಕೋಲ** | ಛತ್ತಿನ ಅಲಂಕಾರಿಕ ಸಾಲುಗಳು. |
| **ಕೋಷ್ಠ** | ಗೂಡು. |
| **ಕೋಷ್ಠಪಂಜರ** | ಜೋಡು ಅರೆಗಂಬಗಳ ಮೇಲೆ ಶಿಖರ ಮಾದರಿಯನ್ನು ಹೊತ್ತಿರುವ ಕೋಷ್ಠದಂತೆ ಕರ್ಣ ಅಥವಾ ಭದ್ರದ ಮುಖದಲ್ಲಿರುವ ಅಲಂಕಾರ. |
| **ಖಲ್ವ** | ದ್ವಾರಬಂಧದಲ್ಲಿರುವ ಶಾಖೆಗಳಲ್ಲಿ ಹಿಂಚಾಚಿರುವ ಶಾಖಾಪಟ್ಟಿ. |
| **ಗಗಾರಪಟ್ಟಿ** | ನೇತುಬಿದ್ದಿರುವ ವ್ಯಾಜುಗಳ ಸಾಲಿನಂತಿರುವ ವಿನ್ಯಾಸವುಳ್ಳ ಪಟ್ಟಿ. |
| **ಗರ್ಭಗೃಹ** | ಗರ್ಭಗುಡಿ |
| **ಗ್ರೀವ** | ಶಿಖರದ ಕುತ್ತಿಗೆಯಂತಿರುವ ಭಾಗ. |
| **ಗೂಢಮಂಟಪ** | ಗೋಡೆಗಳಿರುವ ಮಂಟಪ. |
| **ಘಂಟಾ** | ಮೂಲಪ್ರಾಸಾದದ ಶಿಖರದ ಗ್ರೀವದ ಮೇಲೆ, ಕೆಳಗೆ ಇರುವ ಚೌಕ ಘಂಟಾಕಾರದ ಭಾಗ. |
| **ಚತುರ್ಭೂಜ** | ನಾಲ್ಕು ತಲಗಳ ರಚನೆಯಿರುವ ಶಿಖರ. |
| **ತಲ** | ಮಹಡಿ. |
| **ದ್ವಾರಬಂಧ** | ಬಾಗಿಲುವಾಡ. ಸಾಮಾನ್ಯವಾಗಿ ಶಾಖೆಗಳ ಅಲಂಕಾರದಿಂದ ಕೂಡಿರುತ್ತದೆ. |
| **ದೇವಕೋಷ್ಠ** | ದೇವತಾ ವಿಗ್ರಹವನ್ನಿರಿಸಲು ಗೋಡೆಯಲ್ಲಿ ಮಾಡಿರುವ ಗೂಡು. ಇದಕ್ಕೆ ದೇಗುಲದಂತೆ ಶಿಖರ ಮುಂತಾದ ಅಲಂಕಾರವಿರುತ್ತದೆ. |
| **ನಾಗರ** | ಉತ್ತರ ಭಾರತದ ಶೈಲಿಯ ರೇಖಾ ಶಿಖರ. ಇದು ಏಕಾಂಡ (ಲತಿನ, ಒಂದೇ ಶಿಖರವುಳ್ಳ) ಅಥವಾ ಅನೇಕಾಂಡ (ಶೇಖರಿ) ಶಿಖರವಾಗಿರಬಹುದು. |
| **ನಾಗಶಾಖಾ** | ನಾಗ - ನಾಗಿಣಿ ಜೋಡಿಗಳ ಸಾಲಿನಿಂದಾದ ದ್ವಾರಬಂಧದ ಶಾಖ. |
| **ನಿರಂಧಾರ** | ಗರ್ಭಗೃಹದ ಸುತ್ತ ಒಳಗಡೆ ಪ್ರದಕ್ಷಿಣೆ ಪಥವಿಲ್ಲದ ಪ್ರಾಸಾದ. |
| **ಪದ್ಮ** | ಅಧಿಷ್ಠಾನದಲ್ಲಿ ಸಾಮಾನ್ಯವಾಗಿ ಖುರಕದ ಮೇಲೆ ಬರುವ ಮಗುಚಿದ ಪದ್ಮದ ಆಕಾರದ ಮಡಿಕೆ. |
| **ಪದ್ಮನಾಭ** | ಹೊಕ್ಕಳು ಭಾಗದಲ್ಲಿ ಪದ್ಮ ಪದಕಗಳಿಂದ ಅಲಂಕೃತವಾಗಿರುವ ವಿತಾನದ ಪ್ರಕಾರ. |
| **ಪದ್ಮಶಾಖಾ** | ಪದ್ಮದ ಪಕಳೆಗಳ ಸಾಲಿನಿಂದಾದ ದ್ವಾರಬಂಧದ ಶಾಖೆ. |

| | |
|---|---|
| **ಪ್ರನಾಲ** | ಗರ್ಭಗೃಹದಲ್ಲಿರುವ ದೇವತೆಯ ವಿಗ್ರಹಕ್ಕೆ ಮಾಡುವ ಅಭಿಷೇಕದ ನೀರು ಹೊರಗೆ ಹರಿದು ಬರಲು ಮಾಡಿರುವ ಹರಿ. |
| **ಪ್ರಾಸಾದ** | ದೇಗುಲ. ದೇವರ ಅರಮನೆ. |
| **ಪೇದ್ಯಾ** | ದ್ವಾರಬಂಧದ ತೋಳುಗಳ ಕೆಳಭಾಗ. ಇದರಲ್ಲಿ ಸಾಮಾನ್ಯವಾಗಿ ದ್ವಾರಪಾಲ, ನದಿದೇವತೆ, ಕಾಮ, ರತಿ ಇತ್ಯಾದಿ ಶಿಲ್ಪಗಳಿರುತ್ತವೆ. |
| **ಫಾಂಸನಾ** | ಕದಂಬನಾಗರ ಎಂದು ಕರೆಯಲಾಗುತ್ತಿದ್ದ ಶಿಖರ. ಒಂದರ ಮೇಲೆ ಒಂದರಂತೆ ಕಿರಿದಾಗುತ್ತ ಸಾಗಿರುವ ನಾಸಿ ಅಲಂಕಾರಯುಕ್ತ ಕಪೋತಗಳುಳ್ಳ ಪಿರೆಮಿಡ್ಡಿನಾಕಾರದ ಶಿಖರ. ಇದರ ಮೇಲೆ ಗ್ರೀವದ ತರುವಾಯ ಚೌಕ ಘಂಟಾ ಮತ್ತು ಕಲಶ ಇರುತ್ತದೆ. |
| **ಬಾಹ್ಯಶಾಖಾ** | ದ್ವಾರಬಂಧದ ಹೊರ ಅಂಚಿನ ಶಾಖೆ. |
| **ಭದ್ರ** | ತಲವಿನ್ಯಾಸ ಮತ್ತು ಲಂಬವಿನ್ಯಾಸದಲ್ಲಿ ಮಧ್ಯದ ಮುಂಚಾಚು. |
| **ಭದ್ರಕ** | ಪ್ರತಿಯೊಂದು ಮುಖದ ಮಧ್ಯದಲ್ಲಿ ಮುಂಚಾಚುಗಳಿರುವ ಚೌಕ ಕಂಬ. |
| **ಭದ್ರಖಟ್ಟಕ** | ಮೂಲವಿಮಾನದ (ಪ್ರಾಸಾದದ) ಭದ್ರದಲ್ಲಿರುವ ಕೋಷ್ಠ ರಚನೆ. |
| **ಭೂಮಿ** | ತಲ ಅಥವಾ ಮಹಡಿ. |
| **ಭೂಮಿಜ** | ನಾಗರ ಕೂಟಸ್ತಂಭ/ಶಿಖರಿಕಾಗಳನ್ನೊಳಗೊಂಡು ಒಂದರ ಮೇಲೊಂದರಂತೆ ಸಾಲುಗಲಲ್ಲಿ ಭೂಮಿ (ಮಹಡಿಗಳ) ಆಭಾಸ ನೀಡುವ ಅಲಂಕಾರದಿಂದ ರಚಿತ ಶಿಖರವುಳ್ಳ ದೇಗುಲ. |
| **ಮಕರಪಟ್ಟಿಕಾ** | ಮಕರಗಳ ಸಾಲಿನಿಂದಾದ ಪಟ್ಟಿಕೆ. ದ್ರಾವಿಡ ದೇಗುಲಗಳಲ್ಲಿ ಅಧಿಷ್ಠಾನದ ಕಪೋತ ಮಡಿಕೆಯ ಮೇಲ್ಗಡೆ ಇರುತ್ತದೆ. ಪ್ರಸ್ತರದ ಕಪೋತದ ಮೇಲೂ ಈ ಪಟ್ಟಿಕೆ ಇರುತ್ತದೆ. |
| **ಮಂಚಬಂಧ** | ಮಂಚದಂತೆ ಕಾಣುವ ಅಧಿಷ್ಠಾನ ಪ್ರಕಾರ. |
| **ಮಂಟಪ** | ಸಾಮಾನ್ಯವಾಗಿ ಕಂಬಗಳಿರುವ ಸಭಾಗೃಹ. |
| **ಮಿಥುನ** | ಶುಭಸಂಕೇತವೆಂದು ಭಾವಿಸಲಾಗುವ ಗಂಡು - ಹೆಣ್ಣು ಜೋಡಿ. |
| **ಮಿಥುನಶಾಖಾ** | ಮಿಥುನಗಳನ್ನು ಅಲಂಕಾರಿಕವಾಗಿ ಬಳಸಿರುವ ದ್ವಾರಬಂಧದ ಶಾಖೆ. |
| **ಮುಖಮಂಟಪ** | ದೇವಾಲಯದ ಪ್ರವೇಶ ಮಂಟಪ. |
| **ರಂಗಮಂಟಪ** | ನೃತ್ಯಾದಿಗಳಿಗೆ ಉಪಯುಕ್ತ ಅರೆತೆರೆದ, ಕಂಬಗಳುಳ್ಳ ಮಂಟಪ, ಸಭಾಮಂಟಪ. |
| **ರಥ** | ಭದ್ರ, ತಲವಿನ್ಯಾಸ ಮತ್ತು ಲಂಬ ವಿನ್ಯಾಸಗಳೆರಡರಲ್ಲೂ ಮುಂಚಾಚಿರುವ ದೇಗುಲದ ಭಾಗ. |
| **ರತ್ನಶಾಖಾ** | ರತ್ನಗಳ ಸಾಲಿನ ಅಲಂಕಾರವುಳ್ಳ ದ್ವಾರಬಂಧದ ಶಾಖೆ. |
| **ಲಂಬನ** | ಸಭಾಮಂದಾರಕ ಮತ್ತು ಸಭಾಪದ್ಮ ಮಂದಾರಕ ಪ್ರಕಾರದ ವಿತಾನಗಳಲ್ಲಿ ಇಳಿಬಿದ್ದಿರುವ ಮಧ್ಯ ಪದಕ. |
| **ಲತಾ** | ಬಳ್ಳಿ |
| **ಲಲಾಟ** | ದ್ವಾರಬಂಧದ ಹಣೆಯಲ್ಲಿರುವ ಘನ. |
| **ಲಲಾಟಬಿಂಬ** | ದ್ವಾರಬಂಧದ ಹಣೆಯ ಗನದಲ್ಲಿ ಶಿಲ್ಪಸಿರುವ ದೇವತೆಯ ವಿಗ್ರಹ. |
| **ಲೂಮಾ** | ಮಧ್ಯದ ಲಂಬನದ ಸುತ್ತ ಇರುವ ಅಲಂಕಾರಿಕ ಉಪಪದಕಗಳು. |
| **ವಿತಾನ** | ಛತ್ತು |
| **ವಿಮಾನ** | ಗರ್ಭಗೃಹದ ಪೂರ್ತಿ ರಚನೆ (ಅಧೀಷ್ಠಾನದ ಕೆಳ ಮಡಿಕೆಯಿಂದ ಹಿಡಿದು ಕಲಶದವರೆಗೆ). |
| **ಶಾಖಾ** | ದ್ವಾರಬಂಧದ ತೋಳುಗಳ (ಸಾಮಾನ್ಯವಾಗಿ ಅಲಂಕೃತ) ಲಂಬ ಪಟ್ಟಿಗಳು. |
| **ಶ್ರೀಕಾರ** | ಕಂಬದ ಒಂದು ಪ್ರಕಾರ. ವೃತ್ತಾಕಾರದ ಕಾಂಡ ಇತ್ಯಾದಿ ಭಾಗಗಳಿರುತ್ತವೆ. |
| **ಶೇಖರ** | ಆದಿ ತಲ ಮುಗಿದ ಮೇಲೆ ಗರ್ಭಗೃಹದ ಮೇಲ್ಕಟ್ಟಡ. ಭೂಮಿ (ಮಹಡಿ) ಗಳಿಂದಾಗಿರುತ್ತದೆ. |

| | |
|---|---|
| **ಶೇಖರಿ** | ನಾಗರ ಪ್ರಕಾರದ ಅನೇಕ ಅಂಡಕಗಳಿಂದಾದ (ಲತಿನ ಶಿಖರಗಳಿಂದಾದ) ಶಿಖರ. |
| **ಸಭಾಮಂದಾರಕ** | ಮಧ್ಯದಲ್ಲಿ ಲಂಬನ ಪದಕವಿರುವ ವಿಶಿಷ್ಟ ವಿತಾನ (ಚತ್ತಿನ) ಪ್ರಕಾರ. |
| **ಸಭಾಪದ್ಮಮಂದಾರಕ** | ಅನೇಕ ಪದ್ಮಗಳ ಪದಕಗಳಿಂದ ಸುತ್ತುವರಿಯಲ್ಪಟ್ಟ ಮಧ್ಯ ಇಳಿಬಿದ್ದಿರುವ ಪದಕವಿರುವ ವಿತಾನ ಪ್ರಕಾರ. |
| **ಸ್ತಂಭಶಾಖಾ** | ಕಂಬದ ಪ್ರತಿರೂಪವಾಗಿ ಮಾಡಿರುವ ದ್ವಾರಬಂಧದ ಶಾಖೆ. |
| **ಸಲಿಲಾಂತರ** | ಗೋಡೆಯ ಭದ್ರಗಳ ಮಧ್ಯಂತರದ ಹಿಂಚಾಚು. |
| **ಶುಕನಾಸ** | ಶಿಖರದಿಂದ ಮೂಗಿನಂತೆ ಮುಂಚಾಚಿರುವ ಭಾಗ. ಅಂತರಾಳದ ಮೇಲೆ ಬಂದಿರುತ್ತದೆ. |
| **ಸುಭದ್ರ** | ಭದ್ರದ ಮಧ್ಯದ ಮುಂಚಾಚು. |
| **ಹಾರ** | ಸಾಮಾನ್ಯ ಕೂಟ - ಶಾಲಗಳ ಸಾಲಿನಿಂದಾದ, ಭೂಮಿಯ (ಮಹಡಿಯ) ಅಂತ್ಯವನ್ನು ಸೂಚಿಸುವ, ಗೋಡೆಯ ಮೇಲ್ಗಡೆ ಅಂಚಿನ ಗುಂಟ ಸಾಗಿರುವ ಕುಂಬಿ. ಮೂಲಪ್ರಾಸಾದದ ಪ್ರತಿ ಭೂಮಿಗೂ ಸುತ್ತಲೂ ಸಾಗಿರುವುದರಿಂದ ಮಾಲೆಯಂತೆ ಕಾಣುತ್ತದೆ. |

**ಗ್ರಂಥಋಣ**


- ಕಲಬುರ್ಗಿ ಎಂ.ಎಂ., ಧಾರವಾಡ ಜಿಲ್ಲೆಯ ಶಾಸನ ಸೂಚಿ, ಧಾರವಾಡ - ೧೯೭೫
- ಪ್ರಭಾಕರ ಎಂ.ಎಸ್., ಕರ್ನಾಟಕದಲ್ಲಿ ವಿಮಾನ ನಾಗರ ಶೈಲಿ ಹಾನಗಲ್ಲಿನ ಗಣಪತಿ ದೇವಾಲಯ, ಇತಿಹಾಸ ದರ್ಶನ, ಸಂ.೭, ಪು.೬೧, ಬೆಂಗಳೂರು - ೧೯೯೨
- Adam Hardy, Indian Temple Architecture From and Transformation, Dehli – 1995
- Cousens H., The Chalukyan Architecture of the Kanarese Districts, Culcutta – 1926
- Dhaky M.A., The Indian Temple From in Karnataka Inscriptions and Architecture, New Dehli – 1977
- Dhaky M.A., Encyclopaedia of Indian Temple Architecture: North India Beginnings of Medieval Idioms, Dehli – 1998
- George M. Moraes, The Kadamba Kula, New Dehli – 1931
- Gerard Foekema, Chalukyan Architecture Dehli – 2003
- Gopal B.R., (ED), Karnataka Inscriptions, Dharwad – 1996
- Horle J.C., The Art and Architecture of the Indian Subcontinent, Lodon – 1986

Soundara Rajan K.V., Indian Temple Styles: The Personality of Hindu Architecture, Dehli – 1972


---

[1] K.I., V, 18

[2] Kadamba Kula, P.445 – 56

[3] ಧಾ.ಜಿ.ಶಾ.ಸೂ., ಹಾನಗಲ್ಲ ತಾ., ಶಾ.ನಂ.೨೯೦

[4] K.I., V, 18

[5] Kadamba Kula, P.445 – 56 ಮತ್ತು ಧಾ.ಜಿ.ಶಾ.ಸೂ., ಹಾನಗಲ್ಲ ತಾ., ಶಾ.ನಂ.೨೯೮

# ೧೨. ರಕ್ಷಣಾ ವಾಸ್ತುಶಿಲ್ಪ

ಹಾನಗಲ್ಲು ಹಾವೇರಿ ಜಿಲ್ಲೆಯ ಏಳು ತಾಲೂಕುಗಳಲ್ಲಿ ಒಂದು. ಇದು ಜಿಲ್ಲಾ ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿದೆ. ಈ ಊರಿಗೆ ಹಿಂದೆ ಪಾಂತಿಪುರ, ಪಂಕ್ತಿಪುರ, ವೈರಾಟಪುರ, ವಿರಾಟಪುರ, ವಿರಾಟಕೋಟೆ, ಪಾನುಂಗಲ್ಲು ಮತ್ತು ಹಾನುಗಲ್ಲು ಎಂಬ ಹೆಸರುಗಳಿದ್ದ ಬಗ್ಗೆ ಮಾಹಿತಿಗಳಿವೆ.

[1]ಇಲ್ಲಿಯನಿಸರ್ಗದತ್ತಹಸಿರುಪರ್ವತಶ್ರೇಣಿಗಳು,ನದಿ,ಕಣಿವೆ,ವಿಶಾಲಬಯಲು,ಫಲವತ್ತಾದಭೂಮಿಮೊದಲಾದನಿಸರ್ಗದತ್ತಅನುಕೂಲಗಳಿಂದಈಪರಿಸರಪ್ರಾಚೀನಕಾಲದಿಂದಲೂಜನಸಮುದಾಯನೆಲೆನಿಲ್ಲಲುಸಹಕಾರಿಯಾಗಿದೆ.ಇತಿಹಾಸಕಾಲದಲ್ಲಿಸಾತವಾಹನರಿಂದಮೊದಲ್ಗೊಂಡುಕೆಳದಿಯವರೆಗೆಅನೇಕರಾಜಸತ್ತೆಗಳುಈಪ್ರದೇಶವನ್ನುಆಳಿವೆ.ವಿಶೇಷವಾಗಿಹಾನಗಲ್ಲನ್ನುಕದಂಬರುರಾಜಧಾನಿಯನ್ನಾಗಿಮಾಡಿಕೊಂಡು೧೧ನೆಯಶತಮಾನದಿಂದ೧೩ನೆಯಶತಮಾನದವರೆಗೆಆಳಿದರು.ಇವರಕಾಲದಲ್ಲಿನಿರ್ಮಾಣವಾದದೇವಾಲಯಹಾಗೂಅಸಂಖ್ಯಾತಮೂರ್ತಿಶಿಲ್ಪಗಳುಮನೋಜ್ಞವಾಗಿವೆ.ಅಲ್ಲದೆಇದೇಕಾಲಘಟ್ಟದಲ್ಲಿಮೊದಲಿದ್ದಅಪೂರ್ವಕೋಟೆಯನ್ನುಜೀರ್ಣೋದ್ಧಾರಗೊಳಿಸಿವಿಸ್ತರಿಸಲಾಯಿತು.

**ಕೋಟೆಯ ಸ್ವರೂಪ**

ಪ್ರಾಚೀನ ಕರ್ನಾಟಕದ ರಾಜಕೀಯದಲ್ಲಿ ಕದಂಬರಿಗೆ ಮಹತ್ವದ ಸ್ಥಾನವಿರುವಂತೆ ಕೋಟೆ ನಿರ್ಮಾಣದಲ್ಲೂ ಇವರ ಕಾಲ ಒಂದು ಮಹತ್ವದ ಘಟ್ಟ. ಧರ್ಮಾ ನದಿಯ ದಡದಲ್ಲಿ ಇವರು ನಿರ್ಮಿಸಿದ ಮಣ್ಣಿನ ಕೋಟೆ ಪ್ರಥಮದರ್ಜೆಯದು. ಬಸವಕಲ್ಯಾಣ ಕೋಟೆಯ ಹೊರಗೆ ಮೂರು ಸುತ್ತಿನ ಕಂದಕವಿದ್ದು, ಇದಕ್ಕೆ ನದಿ ಮತ್ತು ಕೆರೆಯಿಂದ ನೀರನ್ನು ಒದಗಿಸುತ್ತಿದ್ದರು. ಈ ಲಕ್ಷಣಗಳನ್ನು ಹಾನಗಲ್ಲು ಕೋಟೆಯಲ್ಲೂ ಕಾಣಬಹುದು. ಆದ್ದರಿಂದ ಹಾನಗಲ್ಲು ಮತ್ತು ಬಸವಕಲ್ಯಾಣ ಕೋಟೆಗಳು ಸ್ಥಲದುರ್ಗದ ಪ್ರತಿನಿಧಿಗಳಾಗಿವೆ. ಸ್ಥಲದುರ್ಗದ ಸುತ್ತ ಕಂದಕವಿರುವ ವಿಷಯ ಸಾಮಾನ್ಯ ಎಲ್ಲಾ ಕವಿಗಳ ವರ್ಣನೆಯಲ್ಲಿ ಬಂದಿದೆ. ಬನವಾಸಿಯನ್ನು ಸ್ಥಲದುರ್ಗವೆಂದು ಐಹೊಳೆ ಶಾಸನದಲ್ಲಿ ಉಲ್ಲೇಖಿಸಿದೆ.[2] ಬನವಾಸಿ ಕೋಟೆಯ ಸುತ್ತಲೂ ದಟ್ಟವಾದ ಅರಣ್ಯವಿದ್ದಿರಬಹುದೆಂದು ನಾವು ಊಹಿಸಬಹುದು. ವರದಾ ನದಿಯ ಉಪನದಿಯಾದ ಧರ್ಮಾ ನದಿಯ ಎಡದಂಡೆಯ ಮೇಲಿರುವ ಮಣ್ಣಿನ ರಚನೆಯನ್ನು ಹೊಂದಿದ ಹಾನಗಲ್ಲು ಕೋಟೆ, ನಾಲ್ಕು ಸುತ್ತುಗಳನ್ನು ಹೊಂದಿದೆ. ರಾಜಧಾನಿ ಮತ್ತು ಕೋಟೆಯ ನಿರ್ಮಾಣದಲ್ಲಿ ಸ್ಥಳದ ಆಯ್ಕೆ ಬಹುಮುಖ್ಯವಾದ ವಿಷಯ. ನೈಸರ್ಗಿಕ ರಕ್ಷಣೆಯ ದೃಷ್ಟಿಯಿಂದ ನದಿಯ ದಡಗಳು ಹೆಚ್ಚು ಉಪಯುಕ್ತ. ಅದರಲ್ಲೂ ನದಿಯೂ ತೀವ್ರವಾಗಿ ತಿರುವು ಪಡೆದುಕೊಂಡು ಸ್ವಲ್ಪಮಟ್ಟಿಗೆ ವೇಗವಾಗಿ ಹರಿಯುವ ಸ್ಥಳ ಕೋಟೆಯ ನಿರ್ಮಾಣಕ್ಕೆ ಸೂಕ್ತ ಪ್ರದೇಶವೆಂದೇ ಭಾವಿಸಲಾಗಿದೆ. ಸದಾ ತುಂಬಿ ಹರಿಯುವ ನದಿ, ಕೋಟೆಗೆ ನಿಸರ್ಗದತ್ತ ಕಂದಕವಾಗಿ ಒಂದು ಪಾರ್ಶ್ವಕ್ಕೆ ರಕ್ಷಣೆ ನೀಡುವುದು. ಉಳಿದೆಡೆ ಕೋಟೆಯ ಸುತ್ತ ಕಂದಕವನ್ನು ತೋಡಿ ಅದಕ್ಕೆ ಕಾಲುವೆ ಮೂಲಕ ನೀರನ್ನು ಹರಿಸುವುದು ಸುಲಭದ ಕೆಲಸ. ವೇಗವಾಗಿ ಹರಿಯುವ ನೀರು ತಿರುವಿನಲ್ಲಿ ಸುಲಭವಾಗಿ ಕಾಲುವೆಯ ಮೂಲಕ ಕಂದಕವನ್ನು ತುಂಬುತ್ತದೆ. ಮಳೆಗಾಲದಲ್ಲಿ ನದಿ ಉಕ್ಕಿ ಹರಿಯುವಾಗ, ಈ ಪಾರ್ಶ್ವದ ಕೋಟೆ ಗೋಡೆಗೆ ಅಲ್ಪಸ್ವಲ್ಪ ಹಾನಿಯುಂಟಾದರೂ, ಅದನ್ನು ಸುಲಭವಾಗಿ ದುರಸ್ಥಿ ಮಾಡಬಹುದು. ಈ ಹಿನ್ನೆಲೆಯಲ್ಲಿ ಹಾನಗಲ್ಲು ಕೋಟೆ ನಿರ್ಮಾಣವನ್ನು ಗಮನಿಸಿದಾಗ, ಮಲೆನಾಡು ಮತ್ತು ಅರೆಮಲೆನಾಡು ಪ್ರದೇಶಗಳಲ್ಲಿ ಮಣ್ಣಿನ ಕೋಟೆಗಳನ್ನೆ ಹೆಚ್ಚಾಗಿ ನಿರ್ಮಿಸಲು ಕಾರಣಗಳೇನಿರಬಹುದು? ಈ ಪರಿಸರದಲ್ಲಿ ಕೋಟೆ ನಿರ್ಮಾಣಕ್ಕೆ ಕಲ್ಲುಗಳ ಕೊರತೆ ಇರಬಹುದೆ? ಅಥವಾ ರಕ್ಷಣೆಗಾಗಿ ದುರ್ಗದಲ್ಲಿ ಮರಗಿಡಗಳನ್ನು ಬೆಳೆಸಲು ಸಹಕಾರಿಯಾಗುತ್ತಿತ್ತೆ ಇತ್ಯಾದಿ ಹಲವು ಪ್ರಶ್ನೆಗಳು ಕಾಡುತ್ತಿವೆ. ಇದಕ್ಕೆ ಉತ್ತರವನ್ನು ಹುಡುಕಬೇಕಿದೆ.

ಹಾನಗಲ್ಲು ಕೋಟೆಯು ಮಣ್ಣಿನಿಂದ ಮಾಡಿದ ರಚನೆ. ಇದನ್ನು 'ಅಭಿಲಷಿತಾರ್ಥ ಚಿಂತಾಮಣಿ' ಹಾಗೂ 'ಶಿವತತ್ವರತ್ನಾಕರ' ಇತ್ಯಾದಿ ಕೃತಿಗಳಲ್ಲಿ ದುರ್ಗಪ್ರಬೇಧಗಳನ್ನು ಉಲ್ಲೇಖಿಸುವಾಗ, ಈ ದುರ್ಗವನ್ನು 'ಮೃತ್ತಿಕಾದುರ್ಗ'ವೆಂದು ಉಲ್ಲೇಖಿಸಲಾಗಿದೆ. ಸುತ್ತಲೂ ಕಂದಕವಿದ್ದು, ಪ್ರಧಾನವಾಗಿ ಮಣ್ಣಿನಿಂದಲೆ ರಚಿಸಿದ ಕೋಟೆಯನ್ನು ಮೃತ್ತಿಕಾಮಯ ದುರ್ಗವೆಂದು ಅರ್ಥೈಸಬಹುದು.

ಕೋಟೆ ನಿರ್ಮಾಣಕ್ಕೆ ಕಂದಕದಿಂದ ತೆಗೆದ ಮಣ್ಣು ಹಾಗೂ ಜಂಬಿಟ್ಟಿಗೆಯನ್ನು ಬಳಸಲಾಗಿದೆ. ಅಲ್ಲದೆ ಕೋಟೆ ಗೋಡೆ ಭದ್ರವಾಗಿರಲು ಅದಕ್ಕೆ ರಬ್ಬರ, ಮರದ ದಿನ್ನೆ ಇತ್ಯಾದಿಗಳನ್ನು ಬಳಸಿರುವ ಸಾಧ್ಯತೆ ಇದೆ ಎಂಬ ಡಾ. ಎಸ್. ರಾಜಶೇಖರ ಅವರ ಅಭಿಪ್ರಾಯವನ್ನು ತಳ್ಳಿಹಾಕುವಂತಿಲ್ಲ. ಈ ಸಂದರ್ಭದಲ್ಲಿ ಮಣ್ಣು ಜಾರದ ರೀತಿಯಲ್ಲಿ ಎಚ್ಚರಿಕೆ ವಹಿಸಿರುವುದು ಇಂದಿಗೂ ಉಳಿದಿರುವ ಹಾನಗಲ್ಲು ಕೋಟೆ ಸಾಕ್ಷಿಯಾಗಿದೆ. ಇದು ಕೆಳಗೆ ವಿಸ್ತಾರವಾಗಿದ್ದು, ಮೇಲಕ್ಕೆ ಬಂದಂತೆ ಕೃಶವಾಗಿ ಊರ್ಧ್ವಚಯದಂತೆ ಅಥವಾ ಎಲ್ಲೆಡೆ ಒಂದೆ ವಿಧವಾಗಿರುವುದು. ಆನೆ, ದನಗಳಿಂದ ತುಳಿಸಿ ಹದಮಾಡಿದ ಮಣ್ಣನ್ನು ಇದಕ್ಕೆ ಉಪಯೋಗಿಸಿರಬೇಕು. ಕೋಟೆಯ ಮೇಲೆ ರಥ ಹೋಗಿ ಬರುವಷ್ಟು ವಿಸ್ತಾರವಾದ ಸ್ಥಳಾವಕಾಶವಿದೆ. ಇದರ ಮೇಲೆ ಇದ್ದಿರಬಹುದಾದ ಅಟ್ಟಾಲಕ ಮತ್ತು ಕೋಟೆ ತೆನೆ ರಚನೆಗಳು ಇಂದು ಗೋಚರಿಸುವುದಿಲ್ಲ.

ಹಾನಗಲ್ಲನ್ನು ಪ್ರವೇಶಿಸುವಾಗ ಸಿಗುವ ಮೊದಲನೆಯ ಕೋಟೆ ಅಥವಾ ಹೊರಕೋಟೆ ಬಹಳ ವಿಶಾಲವಾಗಿದೆ. ಇದು ಸಂಪೂರ್ಣ ನಗರವನ್ನಲ್ಲದೆ ಇನ್ನೂ ಹೆಚ್ಚಿನ ಪ್ರದೇಶವನ್ನೂ ಸುತ್ತುವರಿದಿದೆ. ಇದರ ಆಗ್ನೇಯಕ್ಕೆ ಧರ್ಮಾ ನದಿ, ಈಶಾನ್ಯಕ್ಕೆ ಅಚ್ಚಕೆರೆ, ವಾಯುವ್ಯಕ್ಕೆ ಕಂಬಳ ಕೆರೆ ಹಾಗೂ ನೈರುತ್ಯಕ್ಕೆ ಆನೆಕೆರೆಗಳಿವೆ. ಕೋಟೆಯ ಸುತ್ತ ನದಿ ಮತ್ತು ಮೂರು ಕೆರೆಗಳಿವೆ. ಇವುಗಳಲ್ಲಿ ಆನೆಕೆರೆ ಬಹಳ ದೊಡ್ಡದು. ಶಾಸನದಲ್ಲಿ ಇದನ್ನು ಅತ್ತಿಕೆರೆ ಎಂದು ಕರೆಯಲಾಗಿದೆ.[3] ಕದಂಬ ಅರಸರು ತಮ್ಮ ಆನೆಗಳಿಗೆ ಸ್ನಾನ ಮಾಡಿಸುತ್ತಿದ್ದರೆಂಬ ಪ್ರತೀತಿ ಇದೆ. ಆನೆಕೆರೆ ಮತ್ತು ಅಚ್ಚಕೆರೆಯಿಂದ ನೀರು ಕಂದಕಕ್ಕೆ ಬರುತ್ತದೆ. ಈ ಕೋಟೆಯ ವಾಯುವ್ಯ ದಿಕ್ಕಿನಲ್ಲಿ ಮತ್ತು ನದಿಯ ದಂಡೆಯ ಮೇಲೆ ದಕ್ಷಿಣ ದಿಕ್ಕಿನಲ್ಲಿ ಒಂದೊಂದು ದಿಡ್ಡಿ ಬಾಗಿಲುಗಳಿವೆ. ಪಶ್ಚಿಮ ದಿಕ್ಕಿಗೆ ಹಾಗೂ ಅಚ್ಚಕೆರೆ ಕಡೆಗೆ ಈಶಾನ್ಯ ದಿಕ್ಕಿನಲ್ಲಿ ಪ್ರವೇಶ ದ್ವಾರಗಳಿವೆ. ಮೊದಲನೆಯ ಕೋಟೆ ಮತ್ತು ಎರಡನೆಯ ಕೋಟೆಯ ನಡುವೆ ಹೆಚ್ಚು ಅಂತರವಿಲ್ಲ. ಇವೆರಡೂ ಕೋಟೆಗಳ ಮಧ್ಯದಲ್ಲಿ ಹೊಲ,ತೋಟ, ಗದ್ದೆಗಳಿವೆ.

ಎರಡನೆಯ ಕೋಟೆ ಇಡೀ ನಗರವನ್ನು ಮತ್ತು ಮೂರನೆಯ ಕೋಟೆಯ ಪೂರ್ವ, ಉತ್ತರ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಮಾತ್ರ ಸುತ್ತುವರಿದಿದೆ. ಈ ಕೋಟೆಗೆ ಪಶ್ಚಿಮ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಒಂದೊಂದು ಪ್ರವೇಶ ಬಾಗಿಲುಗಳಿವೆ. ಈಶಾನ್ಯ ಬಾಗಿಲಿರುವ ಸ್ಥಳದಲ್ಲಿ ಕೋಟೆ ಗೋಡೆಯನ್ನು ಹಿಂದಕ್ಕೆ ಸರಿಸಿ ಕಟ್ಟಲಾಗಿದೆ. ಇದರಿಂದ ಬಾಗಿಲು ವೈರಿಯ ಕಣ್ಣಿಗೆ ಬೇಗ ಕಾಣುವುದಿಲ್ಲ. ಕೋಟೆಯೊಳಗೆ ಪಶ್ಚಿಮ ಭಾಗದಲ್ಲಿ ಪ್ರಸ್ತುತ ನಗರವಿದೆ. ಈಶಾನ್ಯ ಭಾಗದಲ್ಲಿ ಶಾಸ್ತ್ರಿಕೆರೆ ಮತ್ತು ಅದರ ದಕ್ಷಿಣಕ್ಕೆ ಮೂರನೆಯ ಕೋಟೆ ಇದೆ. ನಗರ ಮಧ್ಯದಲ್ಲಿ ತಾರಕೇಶ್ವರ ಹಾಗೂ ಅದರ ಪಕ್ಕದಲ್ಲಿ ರೇಖಾನಾಗರ ಶೈಲಿಯಲ್ಲಿ ಕಟ್ಟಿದ ಗಣೇಶ ದೇವಾಲಯಗಳಿವೆ. ಮೂರನೆಯ ಕೋಟೆ, ನಾಲ್ಕನೆಯ ಕೋಟೆಯನ್ನು ಪೂರ್ವ, ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಿಂದ ಆವರಿಸಿದೆ. ಇದು ಸಹ ಮಣ್ಣಿನ ಕೋಟೆ. ಆದರೆ ಕೋಟೆಯ ಮಧ್ಯದಲ್ಲಿ ಇಟ್ಟಿಗೆಯ ಗೋಡೆಯನ್ನು ಕಟ್ಟಿ, ಅದನ್ನು ಮಣ್ಣಿನಿಂದ ಮುಚ್ಚಲಾಗಿದೆ. ಈ ಕೋಟೆಯ ವಾಯುವ್ಯ ದಿಕ್ಕಿನಲ್ಲಿ, ಒಳಕೋಟೆಯನ್ನು ಸೇರುವ ಸ್ಥಳದಲ್ಲಿ ಪ್ರವೇಶ ಬಾಗಿಲವಿದೆ. ಪಶ್ಚಿಮ ಮತ್ತು ಪೂರ್ವ ದಿಕ್ಕುಗಳಲ್ಲೂ ಒಂದೊಂದು ಬಾಗಿಲುಗಳಿವೆ. ಇದರ ಸುತ್ತಲಿನ ಆಳವಾದ ಕಂದಕಕ್ಕೆ ಆನೆಕೆರೆ ಮತ್ತು ಶಾಸ್ತ್ರಿಕೆರೆಯಿಂದ ನೀರು ಬರುತ್ತದೆ. ಈ ಕೋಟೆಯೊಳಗೆ ಪಟ್ಟಣದ ಅವಶೇಷಗಳಿವೆ. ಪ್ರಾಯಶಃ ಬೆಳೆಯುತ್ತಿರುವ ನಗರ ಮತ್ತು ಉಳುಮೆಯಿಂದಾಗಿ ಈ ಅವಶೇಷಗಳು ನಾಶ ಹೊಂದಿವೆ. ಆದರೂ ಆಗಿನ ಕಾಲದ ಭಗ್ನಾವಸ್ಥೆಯಲ್ಲಿರುವ ದೇವಾಲಯ ಮತ್ತು ಇಟ್ಟಿಗೆಯಿಂದ ಕಟ್ಟಿದ ವೃತ್ತಾಕಾರದ ಬಾವಿಗಳು ಗೋಚರಿಸುತ್ತವೆ. ಇಲ್ಲಿ ಶಾತವಾಹನ ಕಾಲದ ಮಣ್ಣಿನ ಮಡಕೆಯ ಅವಶೇಷಗಳು ಸಿಗುತ್ತವೆ ಎಂದು ಡಾ. ಸಿ.ಎಸ್. ಪಾಟೀಲರ ಕರ್ನಾಟಕದ ಕೋಟೆಗಳು ಎಂಬ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಒಂದು ಭಾಗದಲ್ಲಿ ಗಚ್ಚಿನ ಕೋಣೆ, ಕೀಚಕನ ಗರಡಿಮನೆ, ವಿರಾಟರಾಜನ ಅರಮನೆ ಇದ್ದವೆಂದು ಪ್ರತೀತಿ ಇದೆ.

ನಾಲ್ಕನೆಯದು ಒಳಕೋಟೆ. ಇದು ಸಹ ಮಣ್ಣಿನ ಕೋಟೆ. ಇದಕ್ಕೆ ಉತ್ತರ ದಿಕ್ಕಿನಲ್ಲಿ ಒಂದು ಪ್ರವೇಶ ಬಾಗಿಲಿದ್ದು, ಒಳಗೆ ತೋಟಗಾರಿಕೆ ಇಲಾಖೆಯವರು ಹಣ್ಣಿನ ಮರಗಳನ್ನು ಬೆಳೆಸಿದ್ದಾರೆ. ಇಲ್ಲಿ ಕ್ರಿ.ಶ.ಸು. ೧೩ನೆಯ ಶತಮಾನದ ಶಿವದೇವಾಲಯವಿದೆ. ಇದು ಮೂಲತಃ ಜೈನ ದೇವಾಲಯವಾಗಿತ್ತೆಂಬ ಅಭಿಪ್ರಾಯವಿದೆ.[4]

**ಕೋಟೆಯ ಲಕ್ಷಣಗಳು**

ಮಣ್ಣಿನ ಕೋಟೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಹಾನಗಲ್ಲು ಕೋಟೆಯ ಲಕ್ಷಣಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು.

ಅಳ್ವೇರಿ : ಅಳ್ವೇರಿಯು ಕೋಟೆಯ ಗೋಡೆಯನ್ನು ಸೂಚಿಸುತ್ತದೆ. ಪರಿಷತ್ತಿನ ನಿಘಂಟಿನಲ್ಲಿ ಇದಕ್ಕೆ ಕೋಟೆಯ ಸುತ್ತಣ ಗೋಡೆ, ಕೋಟೆಯ ಎತ್ತರವಾದ ಗೋಡೆ ಎಂದಿದೆ. ಇದಕ್ಕೆ 'ಪ್ರಾಕಾರ ವಪ್ರ' ಎಂತಲೂ ಕೆಲವೆಡೆ ಹೇಳಿದೆ. ಬೆಳ್ವೊಲದ ಸುತ್ತ ಪ್ರಾಕಾರವಿದ್ದರೆ, ಕಲ್ಯಾಣದ ಸುತ್ತ ಆಕಾಸದೆತ್ತರದ ವಪ್ರವಿತ್ತು. ಕೆಲವು ಕಾವ್ಯಗಳಲ್ಲಿ ಕೋಟೆಯ ಗೋಡೆಗೆ ಪ್ರಾಕಾರ ಎಂದು ಹೇಳಲಾಗಿದೆ.[5]

ಕೋಟೆಯಲ್ಲಿ ಶತ್ರುವಿಗೆ ಸವಾಲಾಗುವ ಮೊದಲ ಅಂಶವೆಂದರೆ ಅದರ ಎತ್ತರ ಮತ್ತು ಅಗಲ, ನಾಲ್ಕು ಸುತ್ತಿನ ಈ ಕೋಟೆಯ ಮೊದಲ ಹೊರಸುತ್ತಿನಲ್ಲಿ ೫ ಮೀಟರ್ ಎತ್ತರ ಮತ್ತು ೧೦ ಮೀಟರ್ ಅಗಲವಿದೆ ಎಂಬ ಅಭಿಪ್ರಾಯವನ್ನು ಡಾ. ಸಿ.ಎಸ್. ಪಾಟೀಲರು ವ್ಯಕ್ತಪಡಿಸಿದ್ದಾರೆ.[6] ಇದೆ ಅಭಿಪ್ರಾಯವು ಡಾ. ಚೆನ್ನಕ್ಕ ಪಾವಟೆ ಅವರದಾಗಿದೆ.[7] ಈ ವಿದ್ವಾಂಸರು ಯಾವ ಮಾಪನವನ್ನು ಗಮನದಲ್ಲಿಟ್ಟು ಹೇಳಿದ್ದಾರೆಂದು ತಿಳಿಯದು. ಆದರೆ ಈಗ ಉಳಿದಿರುವ ಪ್ರಸ್ತುತ ಕೋಟೆಯ ಅಳತೆಯನ್ನು ನಿಖರವಾಗಿ ಸೂಚಿಸಲು ಸಾಧ್ಯವಿಲ್ಲ.

ಇಡೀ ನಗರವನ್ನು ಸುತ್ತುವರೆದಿರುವ ೨ನೆಯ ಕೋಟೆಯ ಆಳ್ವೇರಿಯು ೧೦ ಮೀಟರ್ ಎತ್ತರ ಹಾಗೂ ೧೫ ಮೀಟರ್ ಅಗಲವಾಗಿದೆ ಎಂದು ಡಾ.ಸಿ.ಎಸ್. ಪಾಟೀಲ ಹಾಗೂ ಡಾ. ಚೆನ್ನಕ್ಕ ಪಾವಟೆ ಅವರ ಹೇಳಿಕೆ ಒಂದಾಗಿದೆ. ಮೂರನೆಯ ಸುತ್ತಿನ ಕೋಟೆ ೨೦ ಮೀಟರ್ ಎತ್ತರ ೨ ಮೀಟರ್ ಅಗಲವಿದ್ದರೆ, ನಾಲ್ಕನೆಯ ಸುತ್ತಿನ ಕೋಟೆಯ ಆಳ್ವೇರಿಯು ೨೫ ಮೀಟರ್ ಎತ್ತರ ೨೦ ಮೀಟರ್ ಅಗಲವಾಗಿದೆ. ಆದರೆ ಡಾ. ಸಿ.ಎಸ್. ಪಾಟೀಲರು ೩ನೆಯ ಸುತ್ತಿನ ಕೋಟೆಯ ಅಗಲ ೨೦ ಮೀಟರ ಎಂದು ಉಲ್ಲೇಖಿಸಿದ್ದಾರೆ. ಇದು ಸರಿಯಾದ ಅಳತೆ ಅಲ್ಲವೆಂದು ಹೇಳಬೇಕಾಗುತ್ತದೆ.

**ಕೋಟೆ ತೆನೆ**

ಕೋಟೆಯ ವರ್ಣನೆಯಲ್ಲಿ ಕಂಡುಬರುವ ತೆನೆ ಎಂಬ ಪದ ಬಳಕೆಯನ್ನು ಕನ್ನಡ ಕಾವ್ಯಗಳಲ್ಲಿ ಕಾಣಬಹುದು. ಪೊಂದನೆ ರಥಾಂಗಮಗೆತ್ತರುಣಂ ತೆನೆಯನೆತ್ತಿನಗಿಸುನಿನಂ,[8] ತೆನೆಗಳ ಪುದಿವು ತರಂಗಗಳಾಗೆ,[9] ಬಟ್ಟದೆನೆ[10] ಎಂಬ ಹರಿಹರನ ಮಾತನ್ನು ಹೊರತುಪಡಿಸಿದರೆ, ಉಳಿದೆಲ್ಲವೂ ಸಾಂಪ್ರದಾಯಕವಾಗಿವೆ. 'ಬಟ್ಟ ಅಥವಾ ವೃತ್ತಾಕಾರವಾಗಿರುವ ತೆನೆ' ಎಂಬುದು ಚಿದಾನಂದಮೂರ್ತಿ ಅವರ ಅಭಿಪ್ರಾಯ. ಶಿವಮೊಗ್ಗ ಕೋಟೆಯೊಳಗಿನ ಪೋಲೀಸ್ ಠಾಣೆಯಲ್ಲಿರುವ ವೀರಗಲ್ಲಿನಲ್ಲಿ ಕೋಟೆ ಗೋಡೆಯ ಸುತ್ತಲೂ ವೃತ್ತಾಕಾರದ ತೆನೆಗಳಿವೆ. ಕೋಟೆಯ ಪ್ರಾಕಾರದ ತುದಿಯ ಗಾಲಿಯಾಕಾರದ ರಚನೆ ಎಂದು ಇದಕ್ಕೆ ಪರಿಷತ್ತಿನ ನಿಘಂಟಿನಲ್ಲಿ ಅರ್ಥವನ್ನು ಹೇಳಿದೆ. ಎಲೆಬೇತೂರು, ಲಕ್ಷ್ಮೇಶ್ವರ ವೀರಗಲ್ಲು ಶಾಸನಗಳಲ್ಲಿ ತೆನೆ ಅರ್ಧವೃತ್ತಾಕಾರವಾಗಿರುವಂತಿದೆ. ಹಾನಗಲ್ಲಿನ ತಾರಕೇಶ್ವರ ಗುಡಿಯಲ್ಲಿರುವ ವೀರಗಲ್ಲಿನಲ್ಲಿ ಅರ್ಧವೃತ್ತಾಕಾರ ತೆನೆಗಳನ್ನು ಕಾಣಬಹುದು.

ಆಳ್ವೇರಿಯ ಮೇಲೆ ಇಂತಹ ತೆನೆಗಳು ಸಾಲಾಗಿರುತ್ತಿದ್ದವು.[11] ವೈರಿಗಳು ಬರುವ ಸೂಚನೆ ದೊರೆತಾಕ್ಷಣ ಅಥವಾ ವರ್ಷಾಕಾಲ ಮುಗಿಯುತ್ತಿದ್ದಂತೆ ಇವುಗಳನ್ನು ನವೀಕರಿಸುತ್ತಿದ್ದರು. 'ಸೈನಿಕರ ಸಾಲಿನಂತೆ ಕೋಟೆಯ ನೂತನ ತೆನೆಗಳೊಪ್ಪಿದವು' ಎಂಬ ವರ್ಣನೆ ಮೋಹನತರಂಗಿಣಿಯಲ್ಲಿದೆ.[12] ಹಾನಗಲ್ಲು, ಎಲೆಬೇತೂರು ಮತ್ತು ಲಕ್ಷ್ಮೇಶ್ವರ ವೀರಗಲ್ಲುಗಳಲ್ಲಿರುವ ಚಿತ್ರಗಳು ಇದಕ್ಕೆ ಸಾಮೀಪ್ಯವನ್ನು ಹೊಂದಿದ್ದು, ಇಲ್ಲಿ ಸೈನಿಕರು ಕೋಟೆಯ ತೆನೆಗಳ ನಡುವೆ ನಿಂತು ಯುದ್ಧ ಮಾಡುತ್ತಿರುವ ದೃಶ್ಯವನ್ನು ಬಿಡಿಸಲಾಗಿದೆ.[13] ಅವರು ಕೋಟೆ ಗೋಡೆಯ ಮೇಲೆ ನಿಂತು ತೆನೆಗಳ ಮರೆಯಿಂದ ಬಾಣ ಪ್ರಯೋಗ ಮಾಡುತ್ತಿದ್ದರೆಂದು ತೋರುತ್ತದೆ. ಪ್ರಸ್ತುತ ಹಾನಗಲ್ಲು ಕೋಟೆಯಲ್ಲಿ ತೆನೆಗಳು ಕಂಡುಬರುವುದಿಲ್ಲ.

**ಕೋಟೆ ತೆನೆಗಳ ಮಹತ್ವ**

ತೆನೆಗಳ ನಿರ್ಮಾಣ ಕೋಟೆಯ ಅಲಂಕರಣೆಗಾಗಿ ಅಲ್ಲ. ಯುದ್ಧದ ಸಮಯದಲ್ಲಿ ರಕ್ಷಣೆಯ ದೃಷ್ಟಿಯಿಂದ ಇವು ಗಮನಾರ್ಹವಾಗಿದ್ದವು. ಎರಡು ತೆನೆಗಳ ಮಧ್ಯೆ ತಲೆಹಾಕಿ ಕೆಳಕ್ಕೆ ಇಣುಕಿ ನೋಡಿ ಅವುಗಳ ಹಿಂದೆ ಕುಳಿತು, ಅಂಬುಗಂಡಿಯಿಂದ ಬಾಣಗಳನ್ನು ಬಿಡಬಹುದಿತ್ತು.[14] ಕೋಟೆಯ ರಕ್ಷಣೆಗೆಂದು ನಿಯುಕ್ತರಾದವರು ತೆನೆಗಳ ಮರೆಯಲ್ಲಿ ನಿಂತು ಬಾಣ ಬಿಡಲು ಇಲ್ಲಿ ಅನುಕೂಲವಿತ್ತು. ಹಾನಗಲ್ಲು ವೀರಗಲ್ಲಿನಲ್ಲಿ ಕೋಟೆಯ ಸಂರಕ್ಷಕರು ತೆನೆಗಳ ನಡುವೆ ನಿಂತು ಯುದ್ಧ ಮಾಡುತ್ತಿರುವ ದೃಶ್ಯವಿದೆ.[15] ದೇಹದ ಅರ್ಧಭಾಗಕ್ಕೆ ಇದರಿಂದ ರಕ್ಷಣೆ ದೊರೆಯುವಂತಿದೆ. ಆದ್ದರಿಂದ ವೈರಿಗಳ ದೃಷ್ಟಿಯಿಂದ ತೆನೆಗಳು ಅಪಾಯಕಾರಿಯಾಗಿದ್ದವು. ಇವುಗಳನ್ನು ಮುರಿದರೆ ಮರೆಯಲ್ಲಿ ನಿಂತವರನ್ನು ನಾಶಮಾಡಲು ಸಾಧ್ಯವಿತ್ತು. ಹೀಗಾಗಿ ಕೋಟೆಯ ಕಾಳಗದಲ್ಲಿ ಕಲ್ಲುಗಳನ್ನು ಕಿತ್ತು ಹಾಕುತ್ತಿದ್ದರು. ಮಾತ್ರವಲ್ಲದೆ ಕೋಟೆಯ ತೆನೆಗಳನ್ನು ಮುರಿದು ಹಾಕುತ್ತಿದ್ದರು.[16] ಲಗ್ಗೆಯಿಟ್ಟ ಯೋಧರು ಕೋಟೆಯನ್ನು ಹತ್ತಿ ತೆನೆಗಳ ಮೇಲೆ ಕಾಲಿಟ್ಟು ನಿಲ್ಲುತ್ತಿದ್ದರು (ಸಾಮ್ಯ ಕೌ.ಲಾ.೩೦). ಕೋಟೆಯನ್ನು ಹತ್ತುವಲ್ಲಿ ತೆನೆಗಳಿಂದ ಸ್ವಲ್ಪ ಮಟ್ಟಿಗೆ ಪ್ರಯೋಜನವಿತ್ತೆಂದು ತಿಳಿಯುವುದು. ತೆನೆಯ ತುದಿಯಲ್ಲಿ ಯೋಧರು ಹತ್ತಿದರೆಂದರೆ ಕೋಟೆಯ ಒಳಗೆ ಗೊಂದಲಮಯ ವಾತಾವರಣ ನಿರ್ಮಾಣವಾಗುತ್ತಿತ್ತು. ಹೀಗಾಗಿ ತೆನೆಗಳು ಕೋಟೆಯ ಸಂರಕ್ಷಕರಿಗೆ ನೆರವಿತ್ತಂತೆ, ಲಗ್ಗೆ ಇಡುವವರಿಗೂ ತಕ್ಕ ಮಟ್ಟಿಗೆ ಉಪಯುಕ್ತವಾಗಿತ್ತೆಂದು ತಿಳಿದುಬರುತ್ತದೆ.

**ಧ್ವಜ**

ಕೋಟೆಯ ಮೇಲೆ ಧ್ವಜಗಳು ಹಾರಾಡುತ್ತಿದ್ದ ವರ್ಣನೆ ಕಾವ್ಯಗಳಲ್ಲಿದೆ. ಪಂಪಭಾರತದಲ್ಲಿ (ಪಂ.ಭಾ. ೪-೧೦) ಆಕಾಶದವರೆಗೆ ಮೇಲಕ್ಕೆದ್ದು ಅಲುಗಾಡುವ ಭಾವುಟಗಳ ಸಾಲು ಎಂದಿದೆ. ವಿಕಟಾಟ್ಟಾಲಂಗಳೊಳ್ ಕೇತನಾನೀಕಂಗಳ್ ಎಂಬುದು ಆದಿಪುರಾಣದಲ್ಲಿ (ಆ.ಪು. ೭-೧೦೪) ಮೂಡಿಬಂದಿದೆ. ವಿಸ್ತ್ರತಾಟ್ಟಾಳ ಮುದ್ಧ ಸಮೀಚೀನ ಪಟಧ್ವಜಂ ಎಂದಿದೆ.[17] ಈ ಎಲ್ಲಾ ಕಾವ್ಯ ಪ್ರಯೋಗಗಳನ್ನು ನೋಡಿದರೆ, ಅಟ್ಟಳೆಗಳ ಮೇಲೆ ಧ್ವಜಗಳು ಹಾರುತ್ತಿದ್ದವು ಎಂಬುದು ಖಚಿತ. ಕ್ರಿ.ಶ. ೧೦೪೪-೪೫ರ ತ್ರೈಳೋಕ್ಯಮಲ್ಲನ ಆಡೂರು ಶಾಸನದಲ್ಲಿ ಬನವಾಸಿ ಪುರವರೇಶ್ವರಂ ಶ್ರೀ ಮನ್ಮಯೂರವರ್ಮದೇವಂ ಪಾನುಂಗಲ್ಲು ಯನ್ನೂರಕ್ಕನಮಸರಸುಗೆಯ್ಯ ಇಲ್ಲಿಂದ ಆರಂಭವಾಗಿ ಶಾಸನದ ೮ನೇ ಸಾಲಿನಲ್ಲಿ ಕೋಟೆಯ ದೀಪಧ್ವಜ ಸಿಂಗರಿದಾರಿಸುವೆ ಎಂದಿದೆ. ಅಂದರೆ ಹಾನಗಲ್ಲು ಕೋಟೆಯ ಮೇಲೆ ಧ್ವಜ ಗಾಳಿಗೆ ಹಾರಾಡುತ್ತಿತ್ತು. ಇದು ರಾಜ್ಯದ ಜನತೆಯ ಆತ್ಮವಿಶ್ವಾಸದ, ಸ್ವಾತಂತ್ರ್ಯದ ಪ್ರತೀಕ. ಆದ್ದರಿಂದ ಯುದ್ಧ ಸನ್ನದ್ಧ ಕೋಟೆಯಲ್ಲಿ ಧ್ವಜಾಳಿ,[18] ಧ್ವಜಕೇತನಗಳು[19] ಇರುತ್ತಿದ್ದವು. ಇವು ಅತ್ಯಂತ ಎತ್ತರದಲ್ಲಿ ಬಹುದೂರದವರೆಗೆ ಕಾಣುವಂತೆ ಹಾರಾಡುತ್ತಿದ್ದವು.

ಅಟ್ಟಳೆಯ ಕಂಬಗಳಿಗೆ ಧ್ವಜ ದಂಡವನ್ನು ಕಟ್ಟುತ್ತಿದ್ದರು. ಯುದ್ಧದ ಮುನ್ನಾ ದಿನ ಕೋಟೆಯ ಮೇಲಿನ ಈ ಪವಿತ್ರ ಧ್ವಜವನ್ನು ಪೂಜಿಸುತ್ತಿದ್ದರು. ಯುದ್ಧದ ಅಟ್ಟಳೆಯನ್ನು ಪೂಜಿಸಿ ಪಾಲಿಕೆಯನ್ನು ಎತ್ತಿ ನಿಲ್ಲಿಸುತ್ತಿರಬಹುದು. ಅರ್ಚಿಸಿದಟ್ಟಳೆಯೊಂ ಎತ್ತಿದ ಪತಾಕೆಯೊಳಂ ಎಂಬುದು ಅನಂತಪುರಾಣ (೧೧-೧೨)ದಲ್ಲಿ ಪ್ರಸ್ತಾಪವಾಗಿದೆ. ಬೇವಿನ ದಂಡೆಯನ್ನು ಪೂಜೆಯ ಸಂದರ್ಭದಲ್ಲಿ ಧ್ವಜಕ್ಕೆ ಸುತ್ತುತ್ತಿದ್ದಿರಬೇಕು. ಹಾಗಾಗಿ ಸುತ್ತಿದ ಬೇವಿನದಂಡೆ ಎಂದು ಅನಂತಪುರಾಣ(೧೧-೮೨)ದಲ್ಲಿ ಸ್ಪಷ್ಟವಾಗಿದೆ. ಯುದ್ಧದಲ್ಲಿ ಲಗ್ಗೆಯಿಟ್ಟವರು ಗೆದ್ದರೆ ತಮ್ಮ ಮಹಾಧ್ವಜವನ್ನು ಎತ್ತಿನಿಲ್ಲಿಸುತ್ತಿದ್ದ ಮಾಹಿತಿ ಶಾಸನವೊಂದರಲ್ಲಿದೆ. ಕೋಟೆಯ ಮೇಲೆ ಸಾಕಷ್ಟು ಅಟ್ಟಳೆಗಳಿರುವುದರಿಂದ ಭಾವುಟಗಳೂ ಅಟ್ಟೆಗೊಂದರಂತೆ ಇದ್ದಿರಬಹುದು. ಯೋಧರು ಈ ಧ್ವಜಗಳ ರಕ್ಷಣೆಯನ್ನು ಮಾಡುತ್ತಿದ್ದರು.

ಕೋಟೆ ಕಾಳಗದಲ್ಲಿ ಗೆದ್ದ ನಂತರ ಕೋಟೆಯ ಹಲವೆಡೆ ತಮ್ಮ ಮಹಾಧ್ವಜವನ್ನು ನಿಲ್ಲಿಸುತ್ತಿದ್ದರು. ಯುದ್ಧಕ್ಕೆ ಮುನ್ನ ಪೂಜಿಸಿ ಎತ್ತಿ ಕಟ್ಟಿದ ಶತ್ರು ಪಕ್ಷದ ಧ್ವಜವನ್ನು ಇಳಿಸಿ ಲಗ್ಗೆ ಹಾಕಿದವರು, ತಮ್ಮ ಧ್ವಜವನ್ನು ಗೆಲುವಿನ ಸಂಕೇತವಾಗಿ ನಿಲ್ಲಿಸುತ್ತಿದ್ದರೆಂದು ಕ್ರಿ.ಶ. ೯೭೫ರ ಶಾಸನವೊಂದರಲ್ಲಿ ಕಾಣಬಹುದು. ಈ ಶಾಸನದಲ್ಲಿ ಕಾದಿಗೆಲ್ದು ಪಲವೆಡೆಗಳೊಳಂ ಮಹಾಧ್ವಜಮನೆತ್ತಿಸಿ ಎಂದಿದೆ.[20]

**ಕೊತ್ತಳಗಳು**

ಕೊತ್ತಳವೆಂದರೆ ಕೋಟೆಯ ಮೇಲ್ಭಾಗವೆಂತಲೂ ಕೋಟೆಯ ಮೇಲೆ ಸೈನಿಕರು ನಿಂತು ಕಾದುವ ಎತ್ತರ ಪ್ರದೇಶವೆಂದು ಅರ್ಥ ಕೊಡುತ್ತದೆ. ಕೊತ್ತಳಗಳ ಹೊರಗಿನ ಚಲನ ವಲನವನ್ನು ಸೂಕ್ಷ್ಮವಾಗಿ ಗಮನಿಸುವ ವೀಕ್ಷಣಾ ಕೇಂದ್ರವಾಗಿದ್ದರಿಂದ ಅದರೊಳಗೆ ಅಂಬುಗಂಡಿಯಿದ್ದಿರಬೇಕು. ಅಪಾಯಕಾರಿ ವ್ಯಕ್ತಿಗಳನ್ನು ಕಂಡೊಡನೆ ಕೊತ್ತಳದೊಳಗಿನಿಂದಲೇ ಪ್ರಹರಿಸಿ ಬಿಡುತ್ತಿದ್ದರು. ಅಂಬುಗಂಡಿ ಮತ್ತು ಕೊತ್ತಳ ಬೇರೆ ಬೇರೆ ಅಲ್ಲ. ಕೊತ್ತಳದೊಳಗೆ ಅಂಬುಗಂಡಿ ಇರುತ್ತಿತ್ತು ಎಂಬುದು ಸಾಹಿತ್ಯದಲ್ಲಿ ಉಲ್ಲೇಖಗೊಂಡಿದೆ.

ವಿರಾಜಿಪ ಗೊಂಟುಗೊಂಟಿನೊಳ್ ಬಳಸಿದ ಕೊತ್ತಳಂ[21] ಎಂಬುದು ಹರಿಹರನ ವರ್ಣನೆ. 'ಗೊಂಟು' ಎಂಬುದು ಬಹುಶಃ ಕೋಟೆಯ ಗೋಡೆಗಳು ಸಂಧಿಸುವ ಸ್ಥಳ. ಅಂತಹ ಸಂಧಿಸ್ಥಾನಗಳಲ್ಲಿ ಅಟ್ಟಳೆಗಳಿಗಿಂತ ಎತ್ತರವಾಗಿ ಕಟ್ಟಿದ ವೀಕ್ಷಣೆ ಕೇಂದ್ರಗಳೆ ಕೊತ್ತಳಗಳು. ಕೋಟೆಯ ನಾಲ್ಕು ಅಥವಾ ಎಂಟು ದಿಕ್ಕುಗಳಲ್ಲಿಯೂ ಕೊತ್ತಳಗಳಿರುತ್ತಿದ್ದವೆಂದು ಚಿದಾನಂದಮೂರ್ತಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಹಾನಗಲ್ಲು ಕೋಟೆಯ ಮೊದಲ ಸುತ್ತಿನ ಹೊರಕೋಟೆಯಲ್ಲಿ ಸುಮಾರು ಕೊತ್ತಳಗಳು ಇದ್ದ ಬಗ್ಗೆ ಗುರುತುಗಳಿವೆ. ಇವುಗಳಲ್ಲಿ ನಾಲ್ಕು ವೃತ್ತಾಕಾರದಲ್ಲಿವೆ. ಒಂದು ಮಾತ್ರ ಆಯತಾಕಾರದಲ್ಲಿದೆ. ಈ ಕೊತ್ತಳಗಳು, ಪ್ರಮಾಣ ಮತ್ತು ಆಕಾರದಲ್ಲಿ ಒಂದಕ್ಕಿಂತ ಒಂದು ಭಿನ್ನವಾಗಿವೆ.

**ಕಂದಕ**

ಸ್ಥಲದುರ್ಗದ ಸುತ್ತ ಕಂದಕವಿರುವ ವಿಷಯ ಸಾಮಾನ್ಯವಾಗಿ ಎಲ್ಲಾ ಕವಿಗಳ ವರ್ಣನೆಯಲ್ಲಿ ಬಂದಿದೆ. ಕಂದಕಕ್ಕೆ ಅಗಳು, ನೀರ್ಗಾದಿಗೆ, ಪರಿಖೆ ಎಂಬ ಪದಗಳನ್ನು ಪರ್ಯಾಯವಾಗಿ ಬಳಸಿದೆ. ಕೊಡವ ಭಾಷೆಯಲ್ಲಿ ಕಂದಕಕ್ಕೆ 'ಕಡಂಗ'ವೆಂದು ಹೆಸರು. ಕಡಂಗವೆಂದರೆ ಯುದ್ಧ ಸಮಯದಲ್ಲಿ ತೋಡಿಸಲಾದ ಕಂದಕವೆಂದು ಬಿ.ಎಲ್. ರೈಸ್ ಹೇಳಿದ್ದಾರೆ. ಈಗಲೂ ವಿರಾಜಪೇಟೆ ತಾಲೂಕಿನಲ್ಲಿ ಕಡಂಗವೆಂಬ ಒಂದು ಊರಿದೆ. ಎಪಿಗ್ರಾಫಿಯಾ ಕರ್ನಾಟಕದ ಮೊದಲ ಸಂಪುಟದ ೯ನೆಯ ಶಾಸನ ಬಿಳಿಯೂರಿನ ಸಮೀಪದ 'ಕಡಂಗ'ದಲ್ಲಿ ದೊರೆತಿದೆ.

ಸಾಮಾನ್ಯವಾಗಿ ಕಂದಕ ಮತ್ತು ಕೋಟೆ ಗೋಡೆಯ ನಡುವೆ ಅನಗತ್ಯ ಸ್ಥಳವಿರುವುದಿಲ್ಲ. ಕಂದಕದ ಅಗಲ ಬುಡಕ್ಕಿಂತ ಮೇಲ್ಭಾಗದಲ್ಲಿ ಯಾವಾಗಲೂ ಹೆಚ್ಚಿರುತ್ತದೆ. ಬನವಾಸಿಯ ಕಂದಕದ ಅಗಲ ಬುಡದಲ್ಲಿ ೧೦ ಮೀಟರ್, ಮೇಲ್ಭಾಗದಲ್ಲಿ ೧೪ ಮೀಟರ್ ಇದೆ. ಕೌಟಿಲ್ಯ ಗೋಡೆ ಮತ್ತು ಕಂದಕದ ಅಳತೆಗಳ ಬಗೆಗೆ ಮಾಹಿತಿ ನೀಡಿದ್ದಾನೆ. ಅತ್ಯಂತ ಹೊರಗಿನದು ೧೪ ದಂಡ, ಮಧ್ಯದಲ್ಲಿರುವುದು ೧೨ ದಂಡ, ಒಳಗಿನದು ೧೦ ದಂಡ ಅಗಲವಿರುತ್ತದೆ. ಎರಡು ಕಂದಕಗಳ ನಡುವೆ ಎರಡು ದಂಡ ಅಗಲದ ಒಂದು ದಂಡ ಇರುತ್ತದೆ. ಅಂದರೆ ಎರಡು ಕಂದಕಗಳ ನಡುವಿನ ಅಂತರ ೨ ದಂಡ. ಒಂದು ದಂಡವೆಂದರೆ ೬ ಅಡಿ ಅಥವಾ ೧.೮೦ ಮೀಟರ್ ಎಂದು ಶಾಮಶಾಸ್ತ್ರಿ ಅವರ ಅಭಿಪ್ರಾಯವಿದೆ.[22] ಶತ್ರು ಒಂದು ಬಾಣವನ್ನು ಎಲ್ಲಾ ಬಲ ಹಾಕಿ ಪ್ರಯೋಗಿಸಿದರೆ, ೬೦ ಮೀಟರ್ ಹೋಗಬಲ್ಲದು. ಅದು ಗುರಿಯ ಸಮೀಪ ಬಂದಂತೆ ನಿಧಾನವಾಗಿ ವೇಗವನ್ನು ಕಳೆದುಕೊಂಡ ಪರಿಣಾಮ ತೀವ್ರವಾಗಿರುವುದಿಲ್ಲ. ಆದ್ದರಿಂದ ಶತ್ರು ಹೊರಗಿನ ಕಂದಕದ ಅಂಚಿನಲ್ಲಿ ನಿಂತು ಬಿಡುವ ಬಾಣದಲ್ಲಿ ವೇಗದ ಮೊನಚು ಇರುವುದಿಲ್ಲ. ಕಂದಕ ಸಾಕಷ್ಟು ಅಗಲವಿರುವುದರಿಂದ ಅದರಲ್ಲಿ ಮೊಸಳೆಯಂಥ ಅಪಾಯಕಾರಿ ಜಲಚರಗಳು ಇದ್ದು, ದಾಟುವುದು ಸುಲಭವಾಗಿರಲಿಲ್ಲ. ಕಂದಕವನ್ನು ದಾಟಲು ರಸ್ತೆ ಕಿರಿದಾಗಿದ್ದು, ಅದಕ್ಕೆ ಬಲವಾದ ಕಾವಲು ಇರುತ್ತಿತ್ತು. ಒಮ್ಮೆ ಏನಾದರೂ ಗೋಡೆ ಸಮೀಪ ಬಂದರೆ ಅಲ್ಲಿದ್ದ ಮಾರಕವಾದ ಆಯುಧಗಳಿಂದ ಗಾಯಗೊಳ್ಳುತ್ತಿದ್ದರು. ಕೋಟೆಯ ಮೇಲ್ಭಾಗವು ಹೊರಗೆ ಉಬ್ಬಿದಂತಿದ್ದುದರಿಂದ ಹತ್ತುವುದು ಕಠಿಣ ಕೆಲಸವೆ ಆಗಿತ್ತು.

ಭೀಮಾನದಿಯ ದಂಡೆಯ ಮೇಲಿರುವ ಸನ್ನತಿ ಕೋಟೆ ಈಗಾಗಲೆ ಗಮನಿಸಿದಂತೆ ನೈಸರ್ಗಿಕ ರಕ್ಷಣೆಯನ್ನು ಸಹಜವಾಗಿ ಹೊಂದಿದೆ. ದಕ್ಷಿಣದಿಂದ ಪೂರ್ವಕ್ಕೆ ನದಿ ಒಮ್ಮೆಲೆ ತಿರುವು ಪಡೆದುಕೊಂಡ ಸ್ಥಳ ಎತ್ತರವಿರುವುದರಿಂದ ಪ್ರವಾಹದ ಬೆದರಿಕೆ ಇಲ್ಲ.

ಕೋಟೆಯುದ್ಧ ಆರಂಭವಾಯಿತೆಂದರೆ ಮೊದಲು ಕಂದಕವನ್ನು ದಾಟಲು ವ್ಯವಸ್ಥೆ ಮಾಡುತ್ತಿದ್ದರು. ಹುಲ್ಲು ಹೊರೆ, ಕೊರಡು, ಕಲ್ಲುಗುಂಡು, ಮಣ್ಣನ್ನು ಅಗಳಕ್ಕೆ ತುಂಬಿ ನೆಲವನ್ನು ಸರಿ ಮಾಡುತ್ತಿದ್ದ ವಿಷಯ ಚೆನ್ನಬಸವಪುರಾಣದಲ್ಲಿದೆ.[23] ಕೋಟೆಯ ಮೇಲಿನವರು ಪ್ರತಿ

ಆಕ್ರಮಣವಾಗಿ ಕೊತ್ತಳದೊಳಗಿನ ಅಂಬುಗಂಡಿಯಿಂದ ಬಾಣದ ಸುರಿಮಳೆ, ಡೆಂಕಣಿ ಅಲ್ಲಲ್ಲಿ ಆಡಿದರೆ, ಕವಣೆಗಲ್ಲು, ಕಾಯ್ದೆಣ್ಣೆ, ಮಳಲು, ಅರಗು, ಸುಣ್ಣ, ಕಲ್ಲು, ಅಂಬಲಿಯನ್ನು ಮೇಲಿಂದ ಸುರಿಯುತ್ತಿದ್ದರು.[24] ಹೀಗಾಗಿ ಕೋಟೆ ಕಾಳಗದಲ್ಲಿ ಕಂದಕ ಬಹಳ ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತದೆ.

ಹಾನಗಲ್ಲಿನ ಕೋಟೆಯ ದಕ್ಷಿಣ ಮತ್ತು ಪೂರ್ವ ಸ್ವಲ್ಪ ಭಾಗಕ್ಕೆ ನದಿಯು ನೈಸರ್ಗಿಕ ರಕ್ಷಣೆಯನ್ನು ಒದಗಿಸಿದೆ. ಇನ್ನುಳಿದಂತೆ ಸುತ್ತಲು ಕಂದಕವಿದೆ. ಇಲ್ಲಿಯ ಕೋಟೆ ಕಂದಕವನ್ನು ಇಂದಿಗೂ ಕಾಣಬಹುದಾದರೂ, ನಿಖರವಾದ ಅಳತೆ ಸಿಗಲಾರದು.

**ವೀರಗಲ್ಲಿನಲ್ಲಿ ನಿರೂಪಿತವಾದ ಹಾನಗಲ್ಲಿನ ಕೋಟೆಯ ಚಿತ್ರಣ**

ತಾರಕೇಶ್ವರ ಗುಡಿಯ ಮುಂದಿನ ಮುಖಮಂಟಪದಲ್ಲಿರುವ ೨ ವೀರಗಲ್ಲುಗಳು ಕೋಟೆ ಕಾಳಗಕ್ಕೆ ಸಂಬಂಧಿಸಿವೆ. ಇಲ್ಲಿ ಕೋಟೆಯನ್ನು ಕಳೆದುಕೊಂಡವರ ಹೋರಾಟವನ್ನು ನಿರೂಪಿಸಲಾಗಿದೆ. ವೀರಗಲ್ಲು ಶಿಲ್ಪದಲ್ಲಿ ಕೋಟೆಯ ಮೇಲೆ ಆಕ್ರಮಣ ಮಾಡುತ್ತಿದ್ದ ಶತ್ರುಗಳನ್ನು ಸಮರ್ಥವಾಗಿ ಎದುರಿಸಿದಂತೆ ಬಿಡಿಸಲಾಗಿದೆ. ಅನ್ಯಥಾ ಮಾರ್ಗವಿಲ್ಲದೆ ಕದಂಬರ ವೀರರು ಕೋಟೆಯಿಂದ ಹೊರಬಂದು ಯುದ್ಧ ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ಇಲ್ಲಿಯ ಯುದ್ಧ ಬಹಳ ಗಲಿಬಿಲಿಯಿಂದ ಆಗುತ್ತಿರುವಂತೆಯೂ, ಎರಡೂ ಕಡೆಯ ವೀರರು ಮುಖಾಮುಖಿ ಹೋರಾಡುತ್ತಿರುವಂತೆಯೂ ತೋರಿಸಲಾಗಿದೆ.

ವಿಷ್ಣುವರ್ಧನನು ಹಾನಗಲ್ಲು ಕೋಟೆಗೆ ಲಗ್ಗೆ ಹಾಕಿದಾಗ, ಕದಂಬರ ಪರವಾಗಿ ಲೆಂಕರಾಯ ಎಂಬುವವನು ಹೋರಾಡುತ್ತಾನೆ. ಶಾಸನಕವಿ ಲೆಂಕರಾಯನು ತೋರಿದ ಪರಾಕ್ರಮವನ್ನು ಈ ರೀತಿ ವರ್ಣಿಸಿದ್ದಾನೆ.

"ಸುರಿವ ಸರಲ್ಗೆ ಪಾಯ್ವ ಚತುರಂಗದಳಕ್ಕಣಿದಾರ್ದು ನೂಂಕುವಾ

ಸುರತರಮಪ್ಪ ಸಿಂಧುರ ಘಟಾವಳಿಗಳ್ಕದೆ ಕಾದಿ ಬೀರಮ

ಚ್ಚರಿವಡೆ ಮಾಚಗಾವುಂಡನ ಮಗಂ ಕಲಿರಾಯನೆ ಕೀರ್ತಿಯಂ ವಸು

ಧರೆ ಪೊಗಳ್ವನ್ನೆಗಂ ಪಡೆದನಾಹವರಂಗದೊಳುರಣಂಗಶೂದ್ರಕಂ"

ಕವಿಯ ಈ ವರ್ಣನೆಯಿಂದ ಕೋಟೆಯ ಸಂರಕ್ಷಕರ ಬಾಣಗಳನಲ್ಲದೆ, ಶತ್ರುಗಳ ಮೇಲೆ ಬಿಡುತ್ತಿದ್ದ ಉನ್ಮತ್ತ ಆನೆಗಳನ್ನು ಎದುರಾಳಿಗಳು ಎದುರಿಸಬೇಕಾಗಿತ್ತು ಎಂಬ ಅಂಶ ವ್ಯಕ್ತವಾಗುತ್ತದೆ.[25]

ಈ ವೀರಗಲ್ಲಿನಲ್ಲಿ ಕೋಟೆಯ ಪಾರ್ಶ್ವನೋಟವೊಂದು ಕಾಣಸಿಗುತ್ತದೆ. ಕೋಟೆಯ ಒಂದು ಗೋಡೆಯನ್ನು ಬಿಡಿಸಿ, ಅದನ್ನು ವೀರನು ಹೇಗೆ ಆಕ್ರಮಿಸುತ್ತಿದ್ದನೆಂಬುದನ್ನು ಆ ಮೂಲಕ ಚಿತ್ರಿಸಲಾಗಿದೆ. ಈ ರೀತಿಯ ಶಿಲ್ಪಗಳನ್ನು ಎಲೆಬೇತೂರು ಹಾಗೂ ಲಕ್ಷ್ಮೇಶ್ವರದಲ್ಲಿಯೂ ಕಾಣಬಹುದು.

ಹಾನಗಲ್ಲು ಕೋಟೆಯ ಮೇಲೆ ಲಗ್ಗೆ ಹಾಕಿದಾಗ, ಸ್ವತಃ ವಿಷ್ಣುವರ್ಧನನೆ ತನ್ನ ಕೈಕೆಳಗಿನವರಿಗೆ ಯುದ್ಧ ಮಾಡುವ ವಿಧಾನವನ್ನು ಸೂಚಿಸಿದ್ದನೆಂಬುದಾಗಿ ವೀರಗಲ್ಲಿನಿಂದ ತಿಳಿದುಬರುತ್ತದೆ.[26]

ಕ್ರಿ.ಶ. ೧೧೩೦ರ ಮತ್ತೊಂದು ವೀರಗಲ್ಲಿನ ಶಾಸನ ಪಾಠದಿಂದ ಕಾಳಗಾವುಂಡನ ತಮ್ಮನಾದ ಲೆಂಕರಾಯನು ಹಾನಗಲ್ಲು ಕೋಟೆಯಲ್ಲಿ ಶತ್ರು ಪಕ್ಷದವರು ಆನೆ, ಕುದುರೆಗಳನ್ನು ಸಂಹಾರ ಮಾಡುತ್ತಿರುವುದನ್ನು ವಿಷ್ಣುವರ್ಧನನು ಆನೆಯ ಮೇಲೆ ಕುಳಿತು ನೋಡುತ್ತಿದ್ದನೆಂಬುದಾಗಿ ಸ್ಪಷ್ಟವಾಗುತ್ತದೆ.[27]

ತಾರಕೇಶ್ವರ ದೇವಾಲಯದಲ್ಲಿರುವ ವೀರಗಲ್ಲಿನ ಮೂರನೆಯ ಹಂತದ ಕೆಳಪಟ್ಟಿಯಲ್ಲಿ ಕೋಟೆಯ ತೆನೆಗಳನ್ನು ಚಿತ್ರಿಸಲಾಗಿದೆ. ಕೆಳಹಂತದಲ್ಲಿ ಗಜಯುದ್ಧ, ಎರಡನೆಯ ಹಂತದಲ್ಲಿ ಅಶ್ವಯುದ್ಧ, ಮೂರನೆಯ ಹಂತದಲ್ಲಿ ಕೋಟೆಯನ್ನು ಚಿತ್ರಿಸಲಾಗಿದೆ. ಒಳಗಡೆ

ಸೈನಿಕರು ಯುದ್ಧ ಸನ್ನದ್ಧರಾಗಿ ಕಾಳಗವನ್ನು ನೋಡುತ್ತಾ ಸಿದ್ಧವಾಗಿದ್ದಾರೆ. ಯುದ್ಧದ ಮಧ್ಯೆ ಒಬ್ಬ ಧ್ವಜವನ್ನು ಹಿಡಿದು ನಿಂತಿದ್ದಾನೆ. ಇವರೆಲ್ಲರೂ ಕೋಟೆಯ ಹೊರಗೆ ಮತ್ತು ಕೋಟೆಯ ತೆನೆಗಳ ಮೇಲೆ ಬಾಣಗಳನ್ನು ಹಿಡಿದುಕೊಂಡು ನಿಂತಿರುವರು.

**ಕೋಟೆಯ ಮಹತ್ವ**

ಪ್ರಾಚೀನ ಸಾಹಿತ್ಯ ಕೃತಿಗಳಾದ ಕೌಟಿಲ್ಯನ ಅರ್ಥಶಾಸ್ತ್ರ, ಕಾಮಂದಕನ ನೀತಿಸಾರ, ಶುಕ್ರನ ಶುಕ್ರನೀತಿ, ಮೂರನೆಯ ಸೋಮೇಶ್ವರನ ಮಾನಸೋಲ್ಲಾಸಗಳಲ್ಲಿ ಕೋಟೆಗಳ ಮಹತ್ವವನ್ನು ವಿವರಿಸಲಾಗಿದೆ. ಅದೆ ರೀತಿ ಮಧ್ಯಕಾಲೀನ ಸಾಹಿತ್ಯ ಕೃತಿಗಳಾದ ಜನ್ನನ ಅನಂತನಾಥ ಪುರಾಣ, ನಂಜುಂಡನ ಕುಮಾರರಾಮ ಚರಿತೆ, ಬಸವರಾಜನ ಶಿವತತ್ವರತ್ನಾಕರ, ಮೋಹನತರಂಗಿಣಿ, ಲಿಂಗಣ್ಣ ಕವಿಯ ಕೆಳದಿ ನೃಪವಿಜಯ, ಚಂದ್ರಕವಿಯ ಪಂಪಾಕ್ಷೇತ್ರವರ್ಣನಂ, ಚಾಮರಸನ ಪ್ರಭುಲಿಂಗಲೀಲೆ, ಶೃತಿಕೀರ್ತಿಯ ವಿಜಯಾಂಬುಧಿ ಚರಿತೆ, ಸಿಂಗಿರಾಜನ ಸಿಂಗಿರಾಜ ಪುರಾಣ ಮೊದಲಾದವುಗಳಲ್ಲಿ ಕೋಟೆಯ ವರ್ಣನೆಯನ್ನು ಕಾಣಬಹುದು. ತಂಬೂರಿಯ ವೀರಗಲ್ಲಿನಲ್ಲಿ ಬಿಜ್ಜಳ ಆನೆಯ ಮೇಲೆ ಕುಳಿತು ಸ್ವತಃ ಯುದ್ಧ ಮಾಡುತ್ತಿರುವ ವಿವರವಿದೆ.[28] ಕಳಚುರ್ಯ ಬಿಜ್ಜಳನನ್ನು :

ಬಂಟಿನ ಮೆಯ್ಗೆಲಿ ತೈಲಂ

ಟೆಂಟಣಿಸುವರಳವೆ ಬಯಲಕಾಳೆಗಮಂ ನೂ

ರೆಂಟಂ ಕಾದಿದನೆಣ್ಬ

ತ್ತೆಂಟಂ ಕೊಂಡಂ ಪ್ರತಾಪದಿಂ ಕೋಟೆಗಳು

ಎಂದಿದೆ.[29] ಅಮಲಬಸವ ಚರಿತೆ, ಭೀಮಕವಿಯ ಬಸವಪುರಾಣ, ಬಾಹುಬಲಿ ಪಂಡಿತನ ಧರ್ಮನಾಥ ಪುರಾಣ ಇತ್ಯಾದಿಗಳಲ್ಲಿ ಹಾಗೂ ಕರ್ನಾಟಕದಾದ್ಯಂತ ದೊರೆತಿರುವ ಶಾಸನಗಳಲ್ಲಿಯೂ ಕೂಡ ಕೋಟೆಗಳ ಮಹತ್ವವನ್ನು ರಸವತ್ತಾಗಿ ವರ್ಣಿಸಲಾಗಿದೆ. ಮನಸ್ಮೃತಿಯ ಪ್ರಕಾರ,

ಏಕಂ ಶತಂ ಯೋಧಮತಿ ಪ್ರಾಕಾರಸ್ಥೊ ಧನುರ್ಧರಃ

ಶತಂ ದಶಸಹಪ್ರಾಣಿ ತಸ್ಮಾದ್ದುರ್ಗಂ ವಿಧೀಯತೇ

ಕೋಟೆಯಲ್ಲಿದ್ದ ಬಿಲ್ಲುಗಾರರು ಹೊರಗಿನ ನೂರು ಯೋಧರೊಂದಿಗೆ ಹಾಗೂ ಅದೆ ರೀತಿ ನೂರು ಧನುರ್ಧಾರಿಗಳು, ಹತ್ತು ಸಾವಿರ ಯೋಧರೊಂದಿಗೆ ಯುದ್ಧ ಮಾಡಬಲ್ಲರು. ಆದ್ದರಿಂದ ರಾಜನಿಗೆ ರಕ್ಷಣೆಯ ದೃಷ್ಟಿಯಿಂದ ಕೋಟೆಯು ಅತ್ಯಗತ್ಯ. ಒಟ್ಟಿನಲ್ಲಿ ಸಾಮ್ರಾಜ್ಯದ ಉಳಿವು ಅಳಿವು ಕೋಟೆ, ಅದರಲ್ಲಿ ಸಂಗ್ರಹವಾಗಿರುವ ಆಹಾರ ಸಾಮಗ್ರಿಗಳನ್ನು ಅವಲಂಬಿಸಿತ್ತು. ಇಷ್ಟಾಗಿಯೂ ಅಗ್ನಿ ಪುರಾಣವು ಇದರ ದೋಷಗಳನ್ನು ಗುರುತಿಸಿದೆ. ಸಾಮಾನ್ಯವಾಗಿ ಸುತ್ತಲೂ ಇರುವ ಕಂದಕದಲ್ಲಿ ಕೆಸರು, ಮರಳು ತುಂಬಿಕೊಳ್ಳುವುದರಿಂದ ಅದರಲ್ಲಿ ಹರಿಯುವ ನೀರಿನ ವ್ಯವಸ್ಥೆಯಲ್ಲಿ ವ್ಯತ್ಯಯವುಂಟಾಗಿ ಒಣಗಿ ಹೋಗಬಹುದು. ಅದನ್ನು ತಕ್ಷಣ ಸರಿಪಡಿಸಿ, ಮೊದಲಿನ ಸ್ಥಿತಿಗೆ ತರುವ ಜವಾಬ್ದಾರಿ ಅರಸನ ಮೇಲಿರುತ್ತದೆ.

ಕೋಟೆಯನ್ನು ಗೆದ್ದುದಾದರೆ ಇಡೀ ರಾಜ್ಯವೆ ಸಿಕ್ಕಂತೆ. ಅಂದು ಕೋಟೆಯನ್ನು ಕಟ್ಟಿಸುವುದು ಮತ್ತು ಗೆಲ್ಲುವುದು ಪ್ರತಿಷ್ಠೆಯ ವಿಷಯವಾಗಿತ್ತು. ಹಾನಗಲ್ಲು ಕೋಟೆಯು ಮಹತ್ವದ ಮತ್ತು ಅಭೇದ್ಯವಾದ ಕೋಟೆಯಾಗಿದ್ದು, ವಿಷ್ಣುವರ್ಧನನಿಗೆ ಇದನ್ನು ಗೆಲ್ಲುವುದು ಹೆಮ್ಮೆಯಾಗಿತ್ತು. ತಾನು ಗೆದ್ದ ಕೋಟೆಗಳ ಸಾಲಿನಲ್ಲಿ ಇದನ್ನೂ ಸೇರಿಸಿದ್ದ ವಿಷಯ ಶಾಸನಗಳು ವ್ಯಕ್ತಪಡಿಸುತ್ತವೆ. ವಿಷ್ಣುವರ್ಧನನು ಕ್ರಿ.ಶ. ೧೧೧೮ರಲ್ಲಿ ಹಾನಗಲ್ಲು ಕದಂಬರ ರಾಜ್ಯದ ಮೇಲೆ ಆಕ್ರಮಣ ಮಾಡಿದನು. ಕ್ರಿ.ಶ. ೧೧೨೨ರಲ್ಲಿ ಕಲ್ಯಾಣ ಚಾಲುಕ್ಯರು ಅವನನ್ನು ಸೋಲಿಸಿದರು. ವಿಷ್ಣುವರ್ಧನನ ಆದೇಶದ ಮೇರೆಗೆ ೧೧೨೫ರಲ್ಲಿ ಬಿದನೂರಿನ 'ಮುರವನಹಿಸ' ಕದಂಬರ ದಂಡನಾಯಕ ಮಸಣನ

ಮೇಲೆ ದಂಡೆತ್ತಿ ಹೋಗಿ ಹಾನಗಲ್ಲು ಕೋಟೆಯೊಳಗೆ ಆನೆ, ಕುದುರೆ ದಳದ ವಿರುದ್ಧ ಹೋರಾಡಿ ವೀರ ಸ್ವರ್ಗವನ್ನು ಪಡೆದನು. ಅದೆ ವರ್ಷ ವಿಷ್ಣುವರ್ಧನನು ಹಾನಗಲ್ಲು ಕೋಟೆಯನ್ನು ಮುತ್ತಿದಾಗ, ಬಿದನೂರು ರಕ್ಕಸ ಮೊನೆಯಾಳ್ವದೇವ ಆನೆ ಮತ್ತು ಕುದುರೆ ದಳಗಳ ಮೇಲೆ ದಾಳಿ ಮಾಡಿ ತನ್ನ ಬಾಣಗಳು ಮುಗಿದಾಗ, ದೇವಣ್ಣನ ಬತ್ತಳಕೆಯನ್ನು ಪಡೆದು ದಾಳಿಯನ್ನು ಮುಂದುವರಿಸಿ ಯುದ್ಧದಲ್ಲಿ ವೀರಸ್ವರ್ಗವನ್ನು ಪಡೆದನು. ಇಮ್ಮಡಿ ತೈಲನು ಮಾತ್ರ ವಿಷ್ಣುವರ್ಧನನ ದಾಳಿಗಳಿಂದ ತನ್ನ ಪ್ರಾಂತವನ್ನು ರಕ್ಷಿಸಿಕೊಂಡನು.

ವಿಷ್ಣುವರ್ಧನನು ಕ್ರಿ.ಶ. ೧೧೩೧ರಲ್ಲಿ ಹಾನಗಲ್ಲು ಕೋಟೆಯನ್ನು ಪುನಃ ವಶಪಡಿಸಿಕೊಂಡರೂ, ಹೆಚ್ಚು ಕಾಲ ಉಳಿಯಲಿಲ್ಲ. ಮಯೂರವರ್ಮನ ಮಗ ಮಲ್ಲಿಕಾರ್ಜುನ ವಿಷ್ಣುವರ್ಧನನ ದಾಳಿಯನ್ನು ಎದುರಿಸಿ, ಕ್ರಿ.ಶ. ೧೧೩೫ರಲ್ಲಿ ಹಾನುಗಲ್ಲು ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಕ್ರಿ.ಶ. ೧೧೩೮ರಲ್ಲಿ ವಿಷ್ಣುವರ್ಧನ ಹಾನಗಲ್ಲು ಪ್ರದೇಶವನ್ನು ಪುನಃ ವಶಪಡಿಸಿಕೊಂಡನು. ಆದರೆ ಕ್ರಿ.ಶ. ೧೧೩೮ರಲ್ಲಿ ಕಲಚುರಿ ಬಿಜ್ಜಳನು ಸ್ವತಃ ಆನೆಯ ಮೇಲೇರಿ ಹಾನಗಲ್ಲು ಕೋಟೆಯನ್ನು ಪೂರ್ವದಿಂದ ಮುತ್ತಿದನು. ಮಹಾಸಾಮಂತ ಮಯ್ದರಸ ಕೋಟೆಯವರೆಗೆ ಬಂದು ಬಿಜ್ಜಳನಿಗೆ ತಡೆಯೊಡ್ಡಿದನು. ಆಗ ಜಾಲಗಾರ ಮಾಚಿಸೆಟ್ಟಿಯ ಮಗ ಕೇತನಾಯಕ ಅನೇಕ ಸೈನಿಕರನ್ನು ಕೊಂದನು. ರಣರಂಗದ ತುಂಬ ಹೆಣಗಳ ರಾಶಿ ಬಿದ್ದಿತು. ನಂತರ ಬಿಜ್ಜಳನ ಕುದುರೆ ದಳದ ಮೇಲೆ ಬಿದ್ದನು. ಆಗ ಬಿಜ್ಜಳನು ಕೇತನಾಯಕನನ್ನು ಎದುರಿಸುವುದು ತನ್ನಿಂದಲ್ಲದೆ ಬೇರೆಯವರಿಂದ ಸಾಧ್ಯವಿಲ್ಲವೆಂದು ಆನೆಯನ್ನು ಅವನತ್ತ ತಿರುಗಿಸಿದನು. ಕೇತನಾಯಕ ದಿಟ್ಟತನದಿಂದ ಹೋರಾಡಿ ಆನೆಯನ್ನು ಹಿಮ್ಮೆಟ್ಟಿಸಿ, ವೀರಸ್ವರ್ಗವನ್ನು ಹೊಂದಿದನು. ಈ ವಿವರಗಲನ್ನು ನೀಡುವ ವೀರಗಲ್ಲು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನಲ್ಲಿ ಸಿಕ್ಕಿದೆ. ಕ್ರಿ.ಶ. ೧೧೩೮ರಲ್ಲಿ ವಿಷ್ಣುವರ್ಧನ ಮತ್ತೊಮ್ಮೆ ಹಾನಗಲ್ಲು ಕೋಟೆಯನ್ನು ವಶಪಡಿಸಿಕೊಂಡನು. ಪುನಃ ಚಾಲುಕ್ಯ ಜಗದೇಕಮಲ್ಲ, ಕದಂಬ ಮಲ್ಲಿಕಾರ್ಜುನ ವಿಷ್ಣುವರ್ಧನನ ವಿರುದ್ಧ ಕಾದಾಡಿದರು. ವಿಷ್ಣುವರ್ಧನ ೧೧೪೪ರಲ್ಲಿ ಪುನಃ ಹಾನಗಲ್ಲು ಕೋಟೆಯಲ್ಲಿ ಆಳ್ವಿಕೆ ನಡೆಸಿದ.

ಹೊಯ್ಸಳರ ದಾಳಿಯನ್ನು ಎದುರಿಸಲು ಕಾಮದೇವನು ಕೋಟೆಯ ದಕ್ಷಿಣ ಗೋಡೆಯನ್ನು ದುರಸ್ಥಿ ಮಾಡಿಸಿದನು. ವಿಜಯನಗರದ ಅರಸ ಕೃಷ್ಣದೇವರಾಯನು ಹಾನಗಲ್ಲು ಕೋಟೆ ವಶಪಡಿಸಿಕೊಂಡ ವಿಷಯ ೧೫೨೧ರ ಶಾಸನದಿಂದ ತಿಳಿಯುತ್ತದೆ.

ಹಾನಗಲ್ಲು ಕೋಟೆಯ ಹಿನ್ನೆಲೆಯನ್ನು ಗಮನಿಸಿದಾಗ, ಸಹಜವಾಗಿ ಕೆಲವು ಪ್ರಶ್ನೆಗಳುಂಟಾಗುತ್ತವೆ.

೧. ಹಾನುಗಲ್ಲು ಕೋಟೆಯನ್ನು ಗೆಲ್ಲಲು ಏಕೆ ಪರಿತಪಿಸುತ್ತಿದ್ದರು

೨. ಇದನ್ನು ಗೆಲ್ಲುವುದರ ಮಹತ್ವವೇನು

೩. ಗೆದ್ದವರ ಪ್ರತಿಷ್ಠೆ ಏಕೆ ಹೆಚ್ಚುತ್ತಿತ್ತು

ಈ ಪ್ರದೇಶದಲ್ಲಿ ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದ ಹಾನುಗಲ್ಲು ಆರಂಭದಲ್ಲಿ ಕಲ್ಯಾಣ ಚಾಲುಕ್ಯರು, ಕಲಚುರಿಗಳು, ಹೊಯ್ಸಳರು ನಂತರ ಕೆಳದಿ ಅರಸರು ಮತ್ತು ವಿಜಾಪೂರ ಸುಲ್ತಾನರಿಗೆ ಗಡಿಭಾಗವಾಗಿ ಪರಿಣಮಿಸಿತ್ತು. ಹಾಗಾಗಿ ಇದನ್ನು ಗೆಲ್ಲಲು ಪರಸ್ಪರರು ಹೋರಾಡುತ್ತಿದ್ದುದು ಸಹಜವಾಗಿತ್ತು.

ನಾಲ್ಕು ಸುತ್ತಿನಿಂದ ಕೂಡಿದ ಈ ಕೋಟೆ ಬಹಳ ಪ್ರಬಲತರವಾಗಿತ್ತು. ಆರಂಭದ ಮೊದಲ ಸುತ್ತಿನ ಕೋಟೆ ಗೋಡೆಯು ಎತ್ತರದಲ್ಲಿ ಕಡಿಮೆ ಇದ್ದು, ಒಳ ಸುತ್ತುಗಳು ತುಂಬಾ ಎತ್ತರದಲ್ಲಿವೆ. ವೈರಿಪಡೆಯು ಮೊದಲ ಸುತ್ತನ್ನು ಕ್ರಮಿಸಿ ಒಳಬಂದರೆ, ಇಲ್ಲಿಯ ವಿಶಾಲ ಬಯಲಿನಲ್ಲಿ ವೈರಿಪಡೆಯನ್ನು ಒಳನುಗ್ಗದಂತೆ ತಡೆಯಲಾಗುತ್ತಿತ್ತು. ಹಾಗಾಗಿ ವಿಷ್ಣುವರ್ಧನನು ಕೋಟೆ ಗೋಡೆ ಮೇಲೆ ನಿಂತು ಯುದ್ಧದ ಸನ್ನಿವೇಶವನ್ನು ವೀಕ್ಷಿಸಿದ ವಿವರಗಳು ನಮಗೆ ಶಾಸನಗಳಿಂದ ಲಭ್ಯವಾಗುತ್ತವೆ. ಹೊರಸುತ್ತಿನ ಕೋಟೆಗೆ ಮೂರು ಬಾಗಿಲುಗಳಿದ್ದರೆ, ಒಳಸುತ್ತಿನ ೨ನೆಯ ಕೋಟೆಗೆ ೨ ಬಾಗಿಲುಗಳಿವೆ. ಮೂರು ಮತ್ತು ನಾಲ್ಕನೆಯ ಸುತ್ತಿನ ಕೋಟೆಗಳಿಗೆ ಒಂದೊಂದು ಬಾಗಿಲುಗಳಿವೆ. ಈ ಹಿನ್ನೆಲೆಯಲ್ಲಿ ಕೋಟೆಯನ್ನು ಗೆಲ್ಲುವುದು ಕಷ್ಟತರವಾಗಿತ್ತು. ಆದರೂ ವಿಷ್ಣುವರ್ಧನನು ಐದಾರು ಬಾರಿ ಕೋಟೆಯನ್ನು

ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದನು. ಆದರೆ ಪ್ರತಿ ಬಾರಿಯೂ ಗೆದ್ದು ವಶಪಡಿಸಿಕೊಂಡರೂ, ಪುನಃ ತಪ್ಪಿ ಹೋಗುತ್ತಿತ್ತು. ಇದೆ ಈ ಕೋಟೆಯ ಮರ್ಮ.

ಕೋಟೆ ಒಳಗೆ ನೀರಿನ ಪೂರೈಕೆ ಹೇರಳವಾಗಿತ್ತು. ಹೊರಗೆ ಶತ್ರುಗಳು ಕೋಟೆಯನ್ನು ವಶಪಡಿಸಿಕೊಂಡರೂ, ಒಳಭಾಗದಲ್ಲಿ ಶಾಸ್ತ್ರಿಕೆರೆಯಿಂದ ನೀರನ್ನು ಪೂರೈಸಲಾಗುತ್ತಿತ್ತು. ಈ ಎಲ್ಲ ಸೌಲಭ್ಯಗಳಿಂದ ಕೂಡಿದ್ದ ಹಾನಗಲ್ಲು ಕೋಟೆ, ಕರ್ನಾಟಕದ ಪ್ರಮುಖ ಕೋಟೆಗಳ ಸಾಲಿನಲ್ಲಿ ಒಂದೆನಿಸಿದೆ.

---

[1] ಚೆನ್ನಕ್ಕ ಪಾವಟೆ, ಹಾನಗಲ್ಲ ಕದಂಬರು

[2] ಪ್ರಾಚೀನ ಭಾರತದಲ್ಲಿ ಯುದ್ಧ ಕಲೆ

[3] ಪಾಟೀಲ ಸಿ.ಎಸ್., ಕರ್ನಾಟಕದ ಕೋಟೆಗಳು

[4] ಅದೆ

[5] ಚಂದ್ರಪುರಾಣ, ೧೧ - ೯

[6] ಅದೆ

[7] ಚೆನ್ನಕ್ಕ ಪಾವಟೆ, ಹಾನಗಲ್ಲ ಕದಂಬರು

[8] ಪ್ರಾಚೀನ ಭಾರತದಲ್ಲಿ ಯುದ್ಧ ಕಲೆ

[9] ಚಂದ್ರಪುರಾಣ, ೧ - ೧೧೮

[10] ಅನಂತಪುರಾಣ, ೧ - ೧೦೧

[11] ಗಿರಿಜಾಕಲ್ಯಾಣ, ೨ - ೨೯

[12] ಮೋಹನತರಂಗಿಣಿ, ೩ - ೮ - ೨೦

[13] Willaen Coelho, The Hoysala Vamsa, P.258

[14] ಕ.ಸಾ.ಅ. ಪು.೨೮೭

[15]

[16] ಕರ್ನಾಟಕ ಕೋಟೆಗಳು, ಪು.೧೯೪

[17] ರುದ್ರಭಟ್ಟ, ಜಗನ್ನಾಥ ವಿಜಯಂ, ಆರ್.ಶಾಮಶಾಸ್ತ್ರಿ(ಸಂ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು - ೧೯೭೬, ೯೯೪

[18] ಚೆನ್ನಬಸವ ಪುರಾಣ, ४೨ - ೨೨

[19] ಮೋಹನತರಂಗಿಣಿ, ೨೦ - ೯

[20] ಶಾಸಾಸಂ., ೧೧

[21] ನಂಜುಂಡ ಭಾ.೩.೧೧.೬

[22] ಆರ್.ಶಾಮಶಾಸ್ತ್ರಿ(ಸಂ), ಅರ್ಥಶಾಸ್ತ್ರ, ಪುಟ. ೬೦ - ೬೧, ೧೯೫೬

[23] E.C.V.B.I., 202, (1138 A.D.)

[24] ಚಂದ್ರಪುರಾಣ, ೫ - ೧೦೬

[25] ಗಿರಿಜಾಕಲ್ಯಾಣ, ೨ - ೭೬

[26] M.A.R., 1932 – 30, (1125 A.D.)

[27] E.C.U.B-202, (1130 A.D.)

[28] I.A., VIII, P.241 (634 A.D.)

[29] S.I.I., XX, 31, Aduru, P.33

# ೧೩. ಮಠ - ಮಾನ್ಯ

ಧರ್ಮವು ವಿಶ್ವವ್ಯಾಪಿಯಾಗಿದ್ದು, ಹುಟ್ಟಿದ ಪ್ರತಿಯೊಬ್ಬ ಮನುಷ್ಯನಿಗೂ ಯಾವುದಾದರೂ ಒಂದು ಧರ್ಮ ಅಂಟಿಕೊಂಡಿರುತ್ತದೆ. ಅಂತೆಯೆ ಭರತ ಖಂಡದಲ್ಲಿ ಅನೇಕ ಧರ್ಮಗಳು ಹುಟ್ಟಿ ಬೆಳೆದು ವಿಶ್ವವ್ಯಾಪಿಯಾಗಿರುವವು. ಒಬ್ಬ ಮನುಷ್ಯ ತನ್ನ ಒಂದು ಧರ್ಮದ ಧಾರ್ಮಿಕ ವಿಧಿವಿಧಾನಗಳನ್ನು ಅನುಸರಿಸುತ್ತಾನೆ. ಅಂತಹ ಧರ್ಮಗಳಲ್ಲಿ ಬೌದ್ಧ, ಜೈನ, ವೈದಿಕ, ಶಿಖ್ ಮತ್ತು ಕ್ರೈಸ್ತ ಮೊದಲಾದವುಗಳು ಪ್ರಮುಖವಾದವು. ಈ ಎಲ್ಲಾ ಧರ್ಮಗಳು ಕಾಲದಿಂದ ಕಾಲಕ್ಕೆ ಹಿಗ್ಗುತ್ತಾ ಕುಗ್ಗುತ್ತಾ ನಡೆದಿರುತ್ತವೆ. ಹೀಗಾಗಿ ಆಯಾ ಧರ್ಮದ ಅನುಯಾಯಿಗಳು ಒಂದು ವೇದಿಕೆಯನ್ನು ನಿರ್ಮಿಸಿ, ಧರ್ಮಪ್ರಚಾರ ಮಾಡಿದರು. ಈ ಹಿನ್ನೆಲೆಯಲ್ಲಿ ಬೌದ್ಧರಿಗೆ ಸ್ತೂಪ, ಜೈನರಿಗೆ ಬಸದಿ, ವೈದಿಕರಿಗೆ ದೇವಸ್ಥಾನ, ಮುಸ್ಲಿಂರಿಗೆ ಮಸೀದಿ, ಶಿಖ್ ರಿಗೆ ಮಂದಿರ ಹಾಗೂ ಕ್ರೈಸ್ತರಿಗೆ ಚರ್ಚುಗಳು ವೇದಿಕೆಗಳಾದವು. ಅವುಗಳ ಮೂಲಕ ಧರ್ಮ ಪ್ರಚಾರ ಕೈಗೊಳ್ಳುತ್ತ ಬಂದಿದ್ದಾರೆ. ಯಾವುದೇ ಒಂದು ಧರ್ಮದ ಬೆಳವಣಿಗೆಯಲ್ಲಿ ಆಯಾ ಧರ್ಮದಲ್ಲಿ ಆರಾಧಿಸುತ್ತಾ ಬಂದ ದೇವರು, ತತ್ವ ಸಿದ್ಧಾಂತಗಳು ಪ್ರಮುಖ ಪಾತ್ರವಹಿಸುತ್ತವೆ.

ಪ್ರತಿಯೊಂದು ಧರ್ಮಕ್ಕೂ ಒಂದೊಂದು ಆರಾಧ್ಯ ದೇವರು ಇರುವುದನ್ನು ಕಾಣುತ್ತೇವೆ. ದೇವರ ಕಾರ್ಯವನ್ನು ಮಂಗಲ ಕಾರ್ಯವೆಂದು ಯಾವಾಗಲೂ ಮಂಗಳವನ್ನೇ ನುಡಿ, ಮಂಗಳವನ್ನೇ ಕೇಳು, ಮಂಗಳವನ್ನೇ ಚಿಂತಿಸು ಎಂದು ಧರ್ಮವು ಹೇಳುತ್ತದೆ. ಹಾಗೆಯೇ ಬೋಧಿಸುತ್ತದೆ. ಧರ್ಮಸಂಕೇತವಾಗಿ, ಬೌದ್ಧರು ಬುದ್ಧನನ್ನು , ಜೈನರು ತೀರ್ಥಂಕರರನನ್ನು, ಶೈವರು ಶಿವನನ್ನು, ವೈಷ್ಣವರು ವಿಷ್ಣುವನ್ನು ಪೂಜಿಸುವುದನ್ನು ಕಾಣುತ್ತೇವೆ. ಅಲ್ಲದೆ ವಿಶ್ವದಲ್ಲಿ ಹೆಚ್ಚಾಗಿ ಆಯಾ ಧರ್ಮದ ಆಚಾರ್ಯ ಪುರುಷರನ್ನು ಪೂಜಿಸುವುದು ರೂಡಿಯಲ್ಲಿದೆ. ಆಚಾರ್ಯ ಪುರುಷರ ಮೂರ್ತಿಗೆ ಪೂಜೆ ಸಲ್ಲಿಸಲು ಒಂದು ಕಟ್ಟಡವನ್ನು ನಿರ್ಮಿಸಿ, ಅದಕ್ಕೆ ತಮ್ಮ ತಮ್ಮ ಧರ್ಮದ ಪ್ರಕಾರ ಮಂದಿರ, ಚೈತಾಲಯ, ಬಸದಿ, ದೇವಾಲಯ, ಚರ್ಚು, ಮಸೀದಿ ಎಂತಲೂ ಕರೆಯುವ ವಾಡಿಕೆ ಇದೆ.

ನಮ್ಮ ದೇಶದಲ್ಲಿ ಧರ್ಮಪ್ರಚಾರಕ್ಕೆ ಮೂರ್ತಿ ಪ್ರತಿಷ್ಠಾಪನೆಯ ಇತಿಹಾಸ ಸಾವಿರಾರು ವರ್ಷಗಳ ಹಳೆಯದು. ಪ್ರಾಚೀನ ಸಾಂಸ್ಕೃತಿಕ ನಗರಗಳಾದ ಹರಪ್ಪ, ಮೊಹೆಂಜೋದಾರೊಗಳಲ್ಲಿ ಕೆಲವು ಧಾರ್ಮಿಕ ಕುರುಹುಗಳು ಕಂಡುಬಂದಿವೆ. ಅಲ್ಲಿ ದೊರೆತಿರುವ ಅವಶೇಷಗಳಿಂದ ಲಿಂಗಪೂಜೆ ಪ್ರಚಲಿತದಲ್ಲಿತ್ತೆಂದು ವಿದ್ವಾಂಸರು ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಲಿಂಗಪೂಜೆ ವಿಸ್ತ್ರತಗೊಂಡು ಕಾಲಾನಂತರ ಅವುಗಳಿಗೆ ಸ್ಥಳಗಳನ್ನು ಗುರುತು ಮಾಡಿ, ಅವು ಬಹಳ ಪವಿತ್ರವೆಂದು ಜನಮನದಲ್ಲಿ ಬೇರೂರಿರಲು ಸಾಧ್ಯತೆ ಇದೆ.

ದ್ರಾವಿಡ, ಆರ್ಯ ಸಂಸ್ಕೃತಿಗಳ ಸಂಗಮದಿಂದ ವೈದಿಕ ಧರ್ಮದಲ್ಲಿ ಅನೇಕ ಪಂಗಡಗಳಾಗಿ ಶೈವ, ವೈಷ್ಣವ, ಶಾಕ್ತೇಯ, ಗಾಣಪತ್ಯ, ಮೊದಲಾದ ಪಂಥಗಳು ಉಗಮಗೊಂಡು ಶೈವ ಧರ್ಮವು ವಿಭಜನೆ ಹೊಂದಿ ಅನೇಕ ಶಾಖೆಗಳಾಯಿತು. ಅವುಗಳಲ್ಲಿ ವೀರಶೈವ ಧರ್ಮವೂ ಒಂದು. ಆ ಧರ್ಮದ ಏಳಿಗೆಗಾಗಿ ೧೨ನೆಯ ಶತಮಾನದಲ್ಲಿ ಬಸವಾದಿ ಶರಣರು ಶ್ರಮಿಸಿ ಪವಾಡ ಪುರುಷರೆನಿಸಿದರು. ಇವರು ದೇವರ ಅವತಾರ ಪುರುಷರೆನಿಸಿಕೊಂಡು ಇಂದಿಗೂ ಪೂಜೆಗೊಳ್ಳುತ್ತಿದ್ದಾರೆ. ಬಸವಣ್ಣನವರು ಹಾಕಿಕೊಟ್ಟ ಶರಣ ಧರ್ಮಪೀಠ ಅಥವಾ ಅನುಭವ ಮಂಟಪದ ಮೂಲಕ ತತ್ತ್ವಗಳನ್ನು ಪ್ರಚಾರ ಮಾಡಿದರು. ಶರಣರ ತತ್ತ್ವಗಳು ಮುಂದೆ ವೀರಶೈವ ಧರ್ಮವಾಗಿ ವಿಸ್ತಾರ ಪಡೆಯಿತು.

ಪ್ರಾಚೀನ ಕಾಲದಲ್ಲಿ ದೇವಸ್ಥಾನಗಳಿಗೆ ಮಠಗಳೆಂದೂ ಕರೆಯಲಾಗಿದೆ. ಮಠವೆಂದು ಕರೆಯಲು ಯಾವ ಅಂಶಗಳು ಕಾರಣ ಎನ್ನುವುದನ್ನು ಪರಿಶೀಲಿಸಿದರೆ, ಲಕುಲೀಶ ಪಾಶುಪತರ ದೇವಸ್ಥಾನಗಳನ್ನು ಗಮನದಲ್ಲಿಟ್ಟುಕೊಂಡು ಶಾಸನ ಮೊದಲಾದ ಆಧಾರಗಳಿಂದ ಸನ್ಯಾಸಿಗಳು ದೇವಸ್ಥಾನಗಳಲ್ಲಿ ವಾಸಿಸುತ್ತ ತಮ್ಮ ತಪೋಕರ್ಮದ ಜೊತೆಗೆ ವಿದ್ಯಾದಾನವನ್ನು ಮಾಡುತ್ತಿದ್ದರು.

ದೇವಸ್ಥಾನಗಳಲ್ಲಿಯ ಸನ್ಯಾಸಿಗಳನ್ನು ಪೂಜ್ಯ ಭಾವನೆಯಿಂದ ನೋಡಿರುವುದಲ್ಲದೇ ಅವರ ಕಾಲುಗಳನ್ನು ತೊಳೆದು ಅನೇಕ ವಸ್ತುಗಳನ್ನು ದಾನ ಕೊಡುತ್ತಿದ್ದರು. ಇಂತಹ ಗೌರವಯುತವಾದ ಸನ್ಯಾಸಿಗಳಿರುವ ಸ್ಥಾನವೇ ದೇವಸ್ಥಾನವೆಂದಮೇಲೆ ಮಠಗಳ ಹೆಸರನ್ನು ಹೇಳುವಾಗ ಸನ್ಯಾಸಿಗಳು ಇರುವ ದೇವಸ್ಥಾನಗಳಿಗೆ ಮಠವೆಂದು ಕರೆಯುತ್ತೇವೆ. ಮುಳುಗುಂದದ ನಗರೇಶ್ವರ ಮಠ, ವಿಕ್ರಮಪುರದ ಸ್ವಯಂಭು ನಗರೇಶ್ವರ ದೇವರ ಮಠ ಮೊದಲಾದವು ದೇವಸ್ಥಾನಕ್ಕೆ ಸಂಬಂಧಿಸಿದ ಮುನಿಗಳ ವಾಸಸ್ಥಳಗಳಾಗಿವೆ. ಅಂದರೆ ಅನೇಕ ಕಡೆ ದೇವಸ್ಥಾನಗಳು ಮಠದ ಅಂಗವಾಗಿ ಕಾಣಿಸಿಕೊಳ್ಳುವುದುಂಟು. ಬಾವಿ ಮಠದ ಶ್ರೀ ಕಲಿದೇವಸ್ವಾಮಿ ದೇವರು. ಇಲ್ಲಿಯು ಕೂಡ ಆ ಮಠವು ಯಾವುದೋ ದೇವಸ್ಥಾನದ ಅಂಗವಾಗಿದ್ದು, ಜನರ ಬಾಯಲ್ಲಿ ಕ್ರಮೇಣ ಬೇರೊಂದು ಹೆಸರು ಸೇರ್ಪಡೆಯಾಗಿರಬಹುದು. ಉದಾಃ ಬಳ್ಳಿಗಾವಿಯ ಕೋಡಿಯ ಮಠದ ನಿಜವಾದ ಹೆಸರು ಕೇದಾರೇಶ್ವರ ಮಠ. ಅದು ಕೇದಾರೇಶ್ವರ ದೇವಸ್ಥಾನ ಇದ್ದುದರಿಂದ ಕೋಡಿ ಮಠವೆಂದು ಕರೆದಿರಬಹುದು. ಪ್ರಾಚೀನ ಕರ್ನಾಟಕದಲ್ಲಿ ಪ್ರಸಿದ್ಧ ಶೈವಮಠ ಇದಾಗಿತ್ತು. ಕೇದಾರೇಶ್ವರ ದೇವಸ್ಥಾನವು ಕೇದಾರ ಪರ್ವತದಂತೆ ಪ್ರಸಿದ್ಧವಾಗಿತ್ತೆಂದೂ, ಅಲ್ಲಿ ತಪಸ್ಸು ಮಾಡುತ್ತಿದ್ದ ದಿವ್ಯ ತಪೋಧನರು ಕೇದಾರ ಪರ್ವತದ ತಪಸ್ವಿಗಳಿಗೆ ಸಮಾನರೆಂದೂ, ಆ ಮಠವನ್ನು ಹಲವು ಸ್ಥಾನಾಪತಿಗಳು ಬೆಳಗಿದರೆಂದೂ ಶಾಸನ ತಿಳಿಸುತ್ತದೆ. ಹೀಗಾಗಿ ದೇವಸ್ಥಾನ ಮತ್ತು ಮಠ ಭಿನ್ನವಲ್ಲವೆಂಬ ವಿಷಯ ವ್ಯಕ್ತವಾಗುತ್ತದೆ. ಆದರೆ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಅದರ ಅಂಗವಾಗಿ ಮಠವಿತ್ತು. ಮಠಕ್ಕೆ ಪ್ರತ್ಯೇಕ ಅಸ್ತಿತ್ವವಿರಲಿಲ್ಲ. ಆದ್ದರಿಂದ ಒಂದು ರೀತಿಯಲ್ಲಿ ಅವೆರಡು ಅಭಿನ್ನ. ಸನ್ಯಾಸಿಗಳು ವಾಸಿಸುತ್ತಿದ್ದುದು ಮಠದಲ್ಲಿ. ಮಠವು ದೇವಸ್ಥಾನಕ್ಕೆ ಹೊಂದಿಕೊಂಡಂತೆ ಅಥವಾ ಮಠದ ಅಧೀನದಲ್ಲಿ ಹಲವಾರು ದೇವಸ್ಥಾನಗಳಿದ್ದವು. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಮಠವು, ದೇವಸ್ಥಾನದಿಂದ ಭಿನ್ನವಲ್ಲವೆಂದು ತಿಳಿಯುತ್ತದೆ.

ಏಳನೆಯ ಶತಮಾನದ ನಂತರ ಲಾಕುಳ ಶೈವ ಧರ್ಮದ ಪ್ರಚಾರ ಹೆಚ್ಚಾಯಿತು. ಮಠಕ್ಕೆ ಸಂಬಂಧಿಸಿದ ಒಬ್ಬ ಸನ್ಯಾಸಿ ದೇವಸ್ಥಾನದಲ್ಲಿದ್ದು, ಆಡಳಿತ ಮೇಲ್ವಿಚಾರಕನಾಗಿ, ತಪಸ್ವಿಯಾಗಿ, ವಿದ್ಯಾದಾನ ಮಾಡುತ್ತಿದ್ದನು. ತನ್ನ ಜೊತೆಗಿದ್ದ ಪರಿಚಾರಕರ ವರ್ಗಕ್ಕೆ ಸ್ಥಾನಾಪತಿಯಾಗಿದ್ದು, ಅವರಿಗೆ ಆಜ್ಞೆಯನ್ನು ಮಾಡುತ್ತಿದ್ದನು. ದೇವಸ್ಥಾನಕ್ಕೆ ಸಂಬಂಧಿಸಿದ ಭೂಮಿಯನ್ನು ನೋಡಿಕೊಳ್ಳುವುದಲ್ಲದೇ, ದೇವಸ್ಥಾನದ ಪರವಾಗಿ ಭೂಮಿ ರೂಪದ, ಧನರೂಪದ ದತ್ತಿಗಳನ್ನು ಸ್ವೀಕರಿಸುವುದು, ದೇವಸ್ಥಾನದ ಆಸ್ತಿಯನ್ನು ಹೆಚ್ಚಿಸುವುದು, ಭೂಮಿಯನ್ನು ರೈತರಿಗೆ ಗೇಣಿಯಾಗಿ ಕೊಡುವುದು ಒಟ್ಟಿನಲ್ಲಿ ದೇವಸ್ಥಾನದ ಐಶ್ವರ್ಯದ ಮೇಲ್ವಿಚಾರಣೆ ಮಾಡುವತ್ತ ಬ್ರಹ್ಮಚಾರಿ ವ್ರತವನ್ನು ಪಾಲಿಸಿಕೊಂಡು ಬಂದಿದ್ದನು. ಆದರೆ ಕೆಲವೊಂದು ಸನ್ಯಾಸಿಗಳು ಭ್ರಷ್ಟರಾದಾಗ, ಭಕ್ತರಿಂದ ಪಡೆದ ಹಣವನ್ನು ಸುಕ್ಕು ಜೆಡೆಗಳ ಸಂದುಗಳಲ್ಲಿ ಮುಚ್ಚಿಟ್ಟು ಮಿಂಡಿದತ್ತುಗಳಿಗೆ ಕೊಡುತ್ತಿದ್ದ ತುಡುಗುಣಿ ಗೊರವರೆಂದು ಶಾಸನಗಳು ಹೇಳುತ್ತವೆ. ಪ್ರಾಚೀನ ಕಾಲದ ಮಠಗಳಲ್ಲಿ ವಾಸಿಸುವ ಸ್ವಾಮಿಗಳು ಇಂತಹ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿರುವ ಉದಾಹರಣೆಗಳು ಸಿಗುತ್ತವೆ.

ಮಠ ಎಂಬ ಪದಕ್ಕೆ ಸನ್ಯಾಸಿ, ಗುರು, ಯತಿಗಳು ವಾಸಿಸುವ ಸ್ಥಳವೆಂಬ ಅರ್ಥವಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಬಳಕೆಯಲ್ಲಿರುವ ವೀರಶೈವ ಸಂಪ್ರದಾಯದಲ್ಲಿ ಗುರುಗಳು, ಸನ್ಯಾಸಿಗಳು, ಯತಿಗಳು ಜನರ ಮೇಲೆ ಪ್ರಭಾವ ಬೀರಿ ಅನೇಕ ಪವಾಡಗಳನ್ನು ಮೆರೆದು ಐಕ್ಯ ಹೊಂದಿದ ಮೇಲೆ ಇವರ ಗದ್ದುಗೆಯನ್ನು ನಿರ್ಮಿಸಿ, ಅದಕ್ಕೆ ಪೂಜೆ - ಪುನಸ್ಕಾರಗಳು ನಡೆಯುತ್ತಿರುವುದನ್ನು ನೋಡುತ್ತೇವೆ. ಇದೆ ರೀತಿ ಇತರೆ ಧರ್ಮಗಳಲ್ಲಿಯೂ ಆಯಾ ಧರ್ಮದ ಗುರುಗಳು, ಯತಿಗಳು, ಸನ್ಯಾಸಿಗಳು ಐಕ್ಯ ಹೊಂದಿದ ಮೇಲೆ ಅವರಿಗೆ ಗದ್ದುಗೆಗಳನ್ನು ಇಲ್ಲವೆ ಕಟ್ಟಡಗಳನ್ನು ನಿರ್ಮಿಸಿ, ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿ ಪೂಜಿಸುವುದನ್ನು ನೋಡುತ್ತೇವೆ.

ವೀರಶೈವ ಧರ್ಮದ ಪರಂಪರೆಯು ೧೨ನೆಯ ಶತಮಾನದಿಂದ ಬೆಳೆದುಬಂದಿರುವ ಗುರು ಪರಂಪರೆಯನ್ನು ನೋಡಿದಾಗ, ಅಲ್ಲಮಪ್ರಭು ಜಾತಿ ನಿರಪೇಕ್ಷ ಪೀಠವನ್ನೇರಿದ. ಆ ಪೀಠ ಪರಂಪರೆ ಮುಂದುವರೆಯದೆ ಚನ್ನಬಸವಣ್ಣ, ಸಿದ್ಧರಾಮರಲ್ಲಿಗೆ ನಿಂತು ಹೋಯಿತು. ಆನಂತರ ಮೂರ್ನಾಲ್ಕು ಶತಮಾನಗಳ ನಂತರ ಯತಿಶ್ರೇಷ್ಠ ಶ್ರೀ ತೋಂಟದ ಸಿದ್ಧಲಿಂಗ, ಅಲ್ಲಮಪ್ರಭು ಸಂಪ್ರದಾಯವನ್ನು ಮತ್ತೆ ಪ್ರಾರಂಭ ಮಾಡಿದರು. ಹೀಗಾಗಿ ಅವರನ್ನು ವೀರಶೈವ ಕಾವ್ಯಗಳು ದ್ವಿತೀಯ ಅಲ್ಲಮ, ತೋಂಟದ ಅಲ್ಲಮನೆಂದು ಕರೆಯುತ್ತವೆ. ೭೦೧ ಶಿಷ್ಯರನ್ನು ಹೊಂದಿದ್ದ ಇವರು ಬೋಳಬಸವೇಶ್ವರನಿಗೆ ಪಟ್ಟಗಟ್ಟಿದರು. ನಂತರ ಸಂಪಾದನೆಯ ಹರತಾಳ ಚನ್ನನಂಜೆದೇವ, ಪರ್ವತೇಂದ್ರ ಗುರುಶಾಂತದೇವ ಹೀಗೆ ವಿರಕ್ತ ಪೀಠವು ಬೆಳೆದುಬಂದು ಕಾಲಾನಂತರ ಅನೇಕ ಕವಲುಗಳಾಗಿ ಹೋಯಿತು. ನಂತರ ೫ ಭೇದಗಳಾಗಿ ಹರಿದು ನೂರೊಂದು ವಿರಕ್ತರು ಒಂದೊಂದು ಕಡೆಗೆ ಹೋಗಿ ಧರ್ಮ ಪ್ರಚಾರ ಮಾಡಿದರು. ಅಂತಹ ವಿರಕ್ತರಲ್ಲಿ ಒಬ್ಬರಾದಂತಹ ಹಳ್ಳಿ ರಾಜೋಟ ಸ್ವಾಮಿಗಳು ಹಾನಗಲ್ಲು ಕ್ಷೇತ್ರಕ್ಕೆ ಬಂದು, ಅದರಲ್ಲೂ ತಿಳವಳ್ಳಿಯನ್ನು ಆಯ್ದುಕೊಂಡು ವೀರಶೈವ ಧರ್ಮವನ್ನು ಪ್ರಪ್ರಥಮವಾಗಿ ಈ ಭಾಗದಲ್ಲಿ ಪ್ರಚಾರ ಮಾಡಲು ಪ್ರಾರಂಭಿಸಿದರು.

**ಕಲ್ಲುಮಠ, ತಿಳುವಳ್ಳಿ**

ಕಟ್ಟಿಗೆಹಳ್ಳಿ ಸಿದ್ಧಲಿಂಗ ಮಹಾಸ್ವಾಮಿಗಳು ತಿಳವಳ್ಳಿಯನ್ನು ಪ್ರಮುಖ ಕೇಂದ್ರವನ್ನಾಗಿ ಮಾಡಿಕೊಂಡು ಹಾನಗಲ್ಲು ನಾಡಿನ ಉಪ್ಪಣಸಿ ಹಿರೇಮಾಗಡಿ (ಸೊರಬ ತಾ.) ಮೊದಲಾದ ಕ್ಷೇತ್ರಗಳಲ್ಲಿ ಮುರುಘಾ ಸಮಯದ ಸಂಪ್ರದಾಯಕ್ಕೆ ಸೇರಿದ ಮಠಗಳನ್ನು ಸ್ಥಾಪಿಸಲು ಉತ್ತೇಜನ ಕೊಟ್ಟರು. ಇವರು ತಿಳವಳ್ಳಿಯಲ್ಲಿ (೧೬೨೦-೪೦) ಲಿಂಗೈಕ್ಯರಾಗಲು, ಅಲ್ಲಿ ಒಂದು ವಿರಕ್ತ ಮಠ ನಿರ್ಮಾಣವಾಯಿತು. ಅಲ್ಲಿಂದ ಪ್ರಾರಂಭವಾದ ಪೀಠ ಪರಂಪರೆ ನಾಡಿನ ಉದ್ದಗಲಕ್ಕೂ ಹರಡಿತು. ಇಂದಿಗೂ ತಿಲವಳ್ಳಿಯಲ್ಲಿ ರಾಜೋಟ ಸ್ವಾಮಿಗಳ ಗದ್ದುಗೆಗೆ ಪೂಜಾದಿ ಕರ್ಮಗಳು ನಡೆಯುತ್ತವೆ. ಅವರ ನಂತರ ಆ ಮಠದ ಪೀಠ ಪರಂಪರೆ ನಡೆಸಿಕೊಂಡು ಹೋದುದರ ಪುರಾವೆಗಳು ಲಭ್ಯವಿಲ್ಲ. ಇತ್ತೀಚೆಗೆ ಚಿತ್ರದುರ್ಗದ ಶ್ರೀಗಳು ಈ ಮಠದ ಪೀಠಾಧಿಪತಿಯನ್ನಾಗಿ ತೊಂಡುರಿನ (ಸವಣೂರು ತಾ.) ಚನ್ನಬಸವಪ್ಪಾ ಸ್ವಾಮಿಗಳನ್ನು ನೇಮಿಸಿದ್ದರು. ಆದರೆ ಕೆಲವು ಕಾರಣಗಳಿಂದ ಶ್ರೀಗಳವರು ಮಠವನ್ನು ಬಿಟ್ಟು ಹೋಗಿರುವರು. ಈ ಮಠಕ್ಕೆ ಕಲ್ಲು ಮಠ ಎಂದು ಹೆಸರಿದೆ. ಮಠದಲ್ಲಿ ಒಂದು ಕಡೆ ಶಿವಲಿಂಗ, ಇನ್ನೊಂದು ಕಡೆ ಕಟ್ಟಿಗೆಹಳ್ಳಿ ರಾಜೋಟ ಸ್ವಾಮಿಗಳ ಗದ್ದುಗೆಗೆ ಪೂಜೆ ಸಲ್ಲುತ್ತದೆ. ಬಹುಶಃ ಕಟ್ಟಿಗೆ ಎನ್ನುವುದರ ಬದುಲು ಗ್ರಾಮಸ್ಥರು ಕಲ್ಲುಮಠವೆಂದು ಕರೆದಿರಬಹುದು.

**ಕುಮಾರೇಶ್ವರ ವಿರಕ್ತಮಠ, ಹಾನಗಲ್ಲು**

ಈ ವಿರಕ್ತ ಮಠವು ಪ್ರಸಿದ್ಧವಾಗಲು ತಪೋನಿಷ್ಠೆಯಲ್ಲಿ ಗಟ್ಟಿಗೊಂಡ ವೈರಾಗ್ಯ ಶಾಲಿಗಳು ವಿರಕ್ತಾಶ್ರಮವನ್ನು ಸ್ವೀಕರಿಸುತ್ತಾ ಬಂದಿರುವುದರಿಂದ. ಈ ಮಠದ ಕೀರ್ತಿ ಕರ್ನಾಟಕದಲ್ಲಿ ಮಾತ್ರವಲ್ಲದೇ ಹೊರನಾಡು ವೀರಶೈವ ಸಮಾಜದಲ್ಲಿಯೂ ವ್ಯಾಪಿಸಿದೆ. ಅಲ್ಲದೆ ಇದು ವಿವಿಧ ಮಠಮಾನ್ಯಗಳ ಮತ್ತು ಸಾಮಾಜಿಕ ಬೆಳವಣಿಗೆಯ ಕೇಂದ್ರಬಿಂದುವಾಗಿ ರೂಪುಗೊಂಡಿದೆ.

**ಪಕ್ಕಿರೇಶ್ವರ ಮಹಾಸ್ವಾಮಿಗಳು**

ವಿರಕ್ತ ಮಠದ ಪರಂಪರೆಯು ಪಕ್ಕೀರೇಶ್ವರ ಸ್ವಾಮಿಗಳಿಂದ ಆರಂಭವಾಗುತ್ತದೆ. ಈ ಸ್ವಾಮಿಗಳು ತಪೋನಿಷ್ಠರು ವೈರಾಗ್ಯಶಾಲಿಗಳು ಆಧ್ಯಾತ್ಮಿಗಳು, ವಾಕ್ ಸಿದ್ಧಿಯನ್ನು ಪಡೆದುಕೊಂಡವರು. ಸಮಾಜದ ನಾಲ್ಕು ಭಾಗದೊಳಗೆ ಪ್ರಸಿದ್ಧರಾದ ವಿರಕ್ತಸ್ವಾಮಿಗಳು ಶ್ರೇಷ್ಠ ಚರ ಮೂರ್ತಿಗಳು. ಅನೇಕ ಭಕ್ತರನ್ನು ಹೊಂದಿದ್ದರಲ್ಲದೆ ಸೊರಬ, ಸಾಗರದ ಮಲೆನಾಡಿನ ಸೀಮೆಯಲ್ಲಿ ಅವರ ಪ್ರಭಾವ ಗಾಢವಾಗಿತ್ತು.

**ಕುಮಾರ ಮಹಾಸ್ವಾಮಿಗಳು**

ಪಕ್ಕೀರ ಸ್ವಾಮಿಗಳ ತರುವಾಯ ವೀರಕ್ತಮಠ ಪೀಠವನ್ನು ಇಡೀ ಕರ್ನಾಟಕಕ್ಕೆ ಪರಿಚಯ ಮಾಡಿಕೊಟ್ಟು ಪ್ರಸಿದ್ಧಿಯನ್ನು ಪಡೆಯುವಂತೆ ಮಾಡಿದವರು ಕುಮಾರ ಶಿವಯೋಗಿಗಳು. ಇವರು ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಜೋಯಿಸರ ಹಳ್ಳಿಯಲ್ಲಿ ಸಾಲಿಮಠದ ಬಸವಯ್ಯ ನೀಲಮ್ಮ ಎಂಬ ದಂಪತಿಗಳ ಉದರದಲ್ಲಿ ಕ್ರಿ.ಶ. ೧೮೬೭ರಲ್ಲಿ ಜನಿಸಿದರು. ಮಗು ಹುಟ್ಟಿದ ಐದಾರು ದಿನಗಳವರೆಗೆ ಮೊಲೆ ಹಾಲನ್ನು ಕುಡಿಯಲಿಲ್ಲವಂತೆ, ಜನರ ಅಪೇಕ್ಷೆಯ ಮೇರೆಗೆ ಹಾಲಯ್ಯನೆಂದು ಕರೆದರಂತೆ. ಆಗ ಹಾಲು ಕುಡಿಯಿತೆಂಬ ಪ್ರತೀತಿ. ಮುಂದೆ ಆ ಮಗುವಿಗೆ ಸದಾಶಿವ ಹಾಲಯ್ಯ ಎಂಬ ನಾಮಕರಣವು ರೂಢಿಯಾಯಿತು. ಸದಾಶಿವನ ಮನೆಯಲ್ಲಿ ಬಹಳ ಜನರಿದ್ದುದರಿಂದ ಬಡತನ ಅವರನ್ನು ಕಿತ್ತು ತಿನ್ನುತಿತ್ತು. ಎರಡು - ಮೂರು ಜನರು ಭಿಕ್ಷೆ ಬೇಡಿದರೂ ಬಡತನದ ದಾಹ ಇಂಗಲಿಲ್ಲ. ಇಂಥ ಸಂದರ್ಭದಲ್ಲಿ ಸದಾಶಿವನ ಜನಕ ತೀರಿಕೊಂಡರು. ಆಗ ಅಜ್ಜನಾದ (೧೦೫ ವರ್ಷದ) ಕೋಟಪ್ಪಯ್ಯರೊಂದಿಗೆ ಭಿಕ್ಷೆಬೇಡಿ ತಂದು, ಶಾಲೆಗೆ ಹೋಗವ ಪರಿಸ್ಥಿತಿ ನಿರ್ಮಾಣವಾಯಿತು.

ಈ ಸದಾಶಿವನು ಸಮೀಪದ ಕಜ್ಜರಿ ಗ್ರಾಮಕ್ಕೆ ಬಂದು ಊರ ಪ್ರಮುಖನ ಪರಿಚಯದಿಂದ ಮುಲ್ಕಿ ಶಿಕ್ಷಣವನ್ನು ಮುಗಿಸಿ, ನಂತರ ತಾಯಿಯ ತವರೂರಾದ ಲಿಂಗವಳ್ಳಿಗೆ ಹೋದರು. ಅಲ್ಲಿ ಶಾಲೆಯನ್ನು ಪ್ರಾರಂಭಿಸಿ ಶಿಕ್ಷಕ ವೃತ್ತಿ ಕೈಗೊಂಡರು. ಊರಿನ ಹಿರಿಯರಾದ ಬಸವಪ್ಪಯ್ಯನವರ ಮಾರ್ಗದರ್ಶನದಲ್ಲಿ ವೇದಾಂತ, ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳ ಸಂಪೂರ್ಣ ಅಧ್ಯಯನ ಮಾಡಿ, ನಿಜಗುಣ ಕೈವಲ್ಯ ಪದ್ಧತಿಯ ಬಾಳನ್ನು ಸ್ವೀಕರಿಸಿದರು. ಆದರೆ ತಾಯಿ ಮಗನಿಗೆ ಯೋಗ್ಯ ಕನ್ಯೆಯನ್ನು ಹುಡುಕಿ ಮದುವೆ ಮಾಡುವ ಪ್ರಯತ್ನದಲ್ಲಿದ್ದಾಗ, ಸತ್ಯವಾದ, ಚಿರಂತನವಾದ, ಲೋಕಹಿತಾರ್ಥವಾಗುವುದಕ್ಕೆ ತನ್ನನ್ನು ಅರ್ಪಿಸಿಕೊಂಡಿದ್ದೇನೆಂದು ಹೇಳಿ, ತಾಯಿಯ ಆಶೀರ್ವಾದ ಪಡೆದು ಆ ಸ್ಥಳದಿಂದ ಹೊರಟು ಹೋಗುತ್ತಾರೆ. ಲಿಂಗದಳ್ಳಿ ಬಿಟ್ಟು ಹುಬ್ಬಳ್ಳಿಗೆ ಬಂದು ಆರೋಢರ ಹತ್ತಿರ ವೇದಾಂತ ಕಲಿತರೂ ವೇದಾಂತಿ ಆಗಲಿಲ್ಲ. ಆನಂತರ ಎಮ್ಮಿಗನೂರು ಜಡೆಸಿದ್ಧರ ಹತ್ತಿರ ಬಂದಾಗ, ಜಡೆಸಿದ್ಧರು ಶಿವಯೋಗಿಯನ್ನು ಕಂಡು ಸಾಕ್ಷಾತ್ ಶಿವನ ರೂಪವನ್ನೇ ಕಂಡಂತಾಗಿ ತಮ್ಮ ಅಪಾರ ಶಕ್ತಿಯನ್ನು ಧಾರೆಯೆರೆದರು.

ಈ ಸದಾಶಿವಯೋಗಿ, ಯಳಂದೂರು ಬಸವಲಿಂಗ ಸ್ವಾಮಿಗಳ ಶಿಷ್ಯರು. ಆ ಸ್ವಾಮಿಗಳು ಈ ಶಿಷ್ಯನನ್ನು ಕರೆದುಕೊಂಡು ನಾಡಿನಲ್ಲೆಲ್ಲ ಸಂಚರಿಸಿ ಧರ್ಮ ಪ್ರಚಾರ ಮಾಡಿದರು. ಸಂಚಾರದ ವೇಳೆಯಲ್ಲಿ ಬಸವಲಿಂಗ ಸ್ವಾಮಿಗಳು ದೇಹತ್ಯಾಗ ಮಾಡುವ ಪೂರ್ವದಲ್ಲಿ ನಿನ್ನಲ್ಲಿ ಯೋಗಶಕ್ತಿ, ವಿರತಿ, ಕಾರ್ಯದಕ್ಷತೆ ಇರುವುದರಿಂದ ಧೈರ್ಯದಿಂದ ಸಿದ್ಧನಾಗು ಎಂದು ಶಿಷ್ಯನಿಗೆ ಹೇಳಿದರಂತೆ. ಬಸವಲಿಂಗ ಸ್ವಾಮಿಗಳು ದೇಹತ್ಯಾಗ ಮಾಡಿದ ಮೇಲೆ ನಿಜಗುಣರ ತಪೋಭೂಮಿಯಾದ ಶಂಭುಲಿಂಗ ಬೆಟ್ಟಕ್ಕೆ ಬಂದು ತಪಸ್ಸು ಕೈಗೊಂಡು ಸರ್ವಾರ್ಥಸಿದ್ಧಿಹೊಂದಿ ನಾಡಿನ, ಸಮಾಜದ ಸೇವೆಗೆ ಕಂಕಣಬದ್ಧರಾಗಿ ಹೊರಟರು.

ಇವರು ಹೋದಲ್ಲೆಲ್ಲ ಶಿಷ್ಯಕೋಟಿ ಅನಂತವಾಯಿತು. ಅವರು ತುಳಿದ ನೆಲ ಪಾವನ ಕ್ಷೇತ್ರವಾಯಿತು. ಹೀಗೆ ಸಂಚರಿಸುತ್ತಾ ಸೊರಬ ಕ್ಷೇತ್ರಕ್ಕೆ ಬಂದರು. ಭಕ್ತರ ಅಪೇಕ್ಷೆಯಂತೆ ಅಲ್ಲಿಯೇ ಕೆಲ ಕಾಲ ನೆಲೆಸಿದರು. ಹಾನಗಲ್ಲು ವಿರಕ್ತಮಠಾಧಿಪತಿಗಳಾದ ಪಕ್ಕೀರ ಸ್ವಾಮಿಗಳು ತುಂಬಾ ವಯೋವೃದ್ಧರಾಗಿದ್ದರು. ಆಗ ಸಮರ್ಥ ಉತ್ತರಾಧಿಕಾರಿಗಳನ್ನು ಹುಡುಕುತ್ತಿದ್ದ ವೇಳೆಗೆ ಸೊರಬ ಕ್ಷೇತ್ರದಲ್ಲಿ ನೆಲೆಸಿರುವ ಸದಾಶಿವ ಸ್ವಾಮಿಗಳನ್ನು ಭಕ್ತರು ಕರೆತಂದು ಇವರ ಒಪ್ಪಿಗೆ ಇಲ್ಲದಿದ್ದರೂ ಪೀಠಾಧಿಪತಿಯನ್ನಾಗಿ ಮಾಡಿದರು. ಆಗ ಅವರಿಗೆ ಕುಮಾರ ಸ್ವಾಮಿಗಳೆಂದು ನಾಮಕರಣವಾಯಿತು. ಇಲ್ಲಿಂದ ಅವರ ಭವ್ಯ ಜೀವನದ ಸಾಧನೆಗೆ ನಾಂದಿಯಾಯಿತು. ಹಾನಗಲ್ಲಿನಲ್ಲಿ ಪಾಠಶಾಲೆಯನ್ನು ತೆರೆದು, ನಂತರ ವೀರಶೈವ ಮಹಾಸಭೆ ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮುಖಾಂತರ ಸಮಾಜದಲ್ಲಿ ಧರ್ಮ

ಜಾಗೃತಿಯನ್ನು ಪ್ರಾರಂಭಿಸಿದರು. ನಾಡಿನಲ್ಲೆಲ್ಲ ಸಂಚರಿಸಿ ಅಲ್ಲಲ್ಲಿ ಸಮ್ಮೇಳನ, ಉಚಿತ ಪ್ರಸಾದ ನಿಲಯ, ವಾಚನಾಲಯ, ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿ ಸಮಾಜದಲ್ಲಿ ಹೊಸ ಬೆಳಕನ್ನು ತರಲು ಪ್ರಯತ್ನಿಸಿದರು. ವೀರಶೈವ ಇತಿಹಾಸ, ಧರ್ಮ, ಸಾಹಿತ್ಯ ಹಾಗೂ ಸಂಸ್ಕೃತಿಯ ಅಭಿವೃದ್ಧಿಗಾಗಿ ಮಲಪ್ರಭಾ ನದಿದಂಡೆಯ ಬನ್ನಿಯ ವನದಲ್ಲಿ ಶಿವಯೋಗ ಮಂದಿರವನ್ನು ಸ್ಥಾಪನೆ ಮಾಡಿದರು.

ಈ ಶಿವಯೋಗ ಮಂದಿರವು ಬಹು ಸುಂದರ ಸ್ಥಾನವಾಗಿತ್ತು. ಅಲ್ಲಿಯ ವಟುಗಳು ಗೋವುಗಳನ್ನು ಸಾಕಿ, ಬಸ್ಮ ತಯಾರಿಸುವ ಕೆಲಸದಲ್ಲಿ ನಿರತರಾಗಿದ್ದರಲ್ಲದೆ, ಪುರಾತನ ಗ್ರಂಥಗಳ ಸಂಶೋಧನೆಯಲ್ಲಿ ತೊಡಗಿದರು. ಶಿವಯೋಗ ಮಂದಿರದಲ್ಲಿ ಅಧ್ಯಯನ ಕೈಗೊಂಡ ಅನೇಕ ಸಂಶೋಧಕರನ್ನು ಕಾಣುತ್ತೇವೆ. ಇವರಿಗೆಲ್ಲ ಚೇತನ ಶಕ್ತಿಯಾಗಿ ನಿಂತವರು ಕುಮಾರ ಸ್ವಾಮಿಗಳು. ಅವರ ಆಶ್ರಯದಲ್ಲಿ ಅಸಂಖ್ಯಾತ ಯತಿ ಗಣ್ಯರು, ಕವಿಕಾವ್ಯ ಕೋವಿದರು, ಸಂಗೀತ ಸುಧಾರಕರು ಬೆಳವಣಿಗೆ ಕಂಡರು. ಇವರ ಸೇವೆ ನಾಡಿನ ಜನತೆಗೆ ಮತ್ತು ವೀರಶೈವ ಧರ್ಮಕ್ಕೆ ಅಪಾರವಾದುದು.

**ಮಹೇಶ್ವರ ಮಹಾಸ್ವಾಮಿಗಳು**

ಹಾನಗಲ್ಲು ಮಠದ ಪರಮಗುರು ಕುಮಾರ ಸ್ವಾಮಿಗಳ ನಂತರ ಉತ್ತರಾಧಿಕಾರ ಸ್ಥಾನವನ್ನು ಅಲಂಕರಿಸಿದವರು ಮಹೇಶ್ವರ ಸ್ವಾಮಿಗಳು. ಇವರು ಕುಮಾರ ಸ್ವಾಮಿಗಳು ಕಟ್ಟಿ ಬೆಳೆಸಿದ ಗೋಪುರವನ್ನು ಕಾಪಾಡಿಕೊಂಡು ಬಂದರು. ಆದರೆ ಕೆಲವೇ ದಿನಗಳಲ್ಲಿ ಲಿಂಗರೂಪಿಗಳಾದರು.

**ಸದಾಶಿವ ಮಹಾಸ್ವಾಮಿಗಳು**

ಮಹೇಶ್ವರ ಸ್ವಾಮಿಗಳ ನಂತರ ಹಾನಗಲ್ಲು ವಿರಕ್ತ ಪೀಠಕ್ಕೆ ಯೋಗ್ಯತಾ ಸಂಪನ್ನರನ್ನು ಹುಡುಕುತ್ತಿದ್ದಾಗ, ಶಿವಯೋಗ ಮಂದಿರದಲ್ಲಿದ್ದ ರೇಣುಕಾರಾಧ್ಯರನ್ನು ಕರೆತಂದು ಉತ್ತರಾಧಿಕಾರಿಯನ್ನಾಗಿ ಮಾಡಲು ಶ್ರೀ ಮೂಗಂ ಮೊದಲಾದ ಗಣ್ಯ ಮಹನೀಯರು ಆಸಕ್ತಿ ವಹಿಸಿದರು. ಇವರು ಜಡಮಠದ ಸಿದ್ಧಬಸವ ಮಹಾಸ್ವಾಮಿಗಳಿಂದ ಅಧಿಕಾರವನ್ನು ಪಡೆದು ಕ್ರಿ.ಶ. ೧೯೩೬ರಲ್ಲಿ ಶ್ರೀ ಸದಾಶಿವ ಮಹಾಸ್ವಾಮಿಗಳೆಂದು ಅಭಿದಾನ ಹೊಂದಿದರು.

ಅಪಾರ ಜ್ಞಾನ ಹೊಂದಿದ ಕುಮಾರ ಶಿವಯೋಗಿಗಳು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಅರಳಿಕಟ್ಟಿ ಗ್ರಾಮದ ಗಂಗಯ್ಯ ಮತ್ತು ಶೀಲಾವತಿ ರಾಚಮ್ಮನವರ ಉದರದಲ್ಲಿ ೧೯೦೬ರಲ್ಲಿ ಜನಿಸಿದರು. ಇವರಿಗೆ ಚಂದ್ರಶೇಖರ ಎಂದು ಹುಟ್ಟು ಹೆಸರಿತ್ತು. ಚಿಕ್ಕಮಗುವಿದ್ದಾಗ ಒಂದು ಘಟನೆ ನಡೆಯಿತು. ಚಂದ್ರಶೇಖರನ ತಲೆಯ ಮೇಲೆ ನಾಗರಹಾವು ಹೆಡೆಯೆತ್ತಿ ಲೀಲಾಜಾಲವಾಗಿ ಆನಂದದಿಂದ ಆಡತೊಡಗಿತ್ತು. ಇದನ್ನು ಕಂಡ ದಂಪತಿಗಳು, ೧೯೦೭ರಲ್ಲಿ ಭಿಕ್ಷಾಟನೆಗಾಗಿಬಂದ ಕುಮಾರಸ್ವಾಮಿಗಳ ಹತ್ತಿರ ಹೇಳಿದಾಕ್ಷಣ ಹೆದರಬೇಡಿ ಪುಣ್ಯ ಪುರುಷನಾಗುತ್ತಾನೆಂದು ಆಶೀರ್ವದಿಸಿದರು. ೧೯೧೫ರಲ್ಲಿ ಕುಮಾರಸ್ವಾಮಿಗಳು, ರೇಣುಕಾಚಾರ್ಯನೆಂದು ಕರೆದು ಅಲ್ಲಿಯ ಮಠದ ಅಧಿಕಾರಿಯನ್ನಾಗಿ ಮಾಡಿದರು. ಸಂಸ್ಕೃತ, ಲಲಿತಕಲೆ, ಸಂಗೀತ ಮೊದಲಾದ ಕ್ಷೇತ್ರಗಳ ಅನುಭವ ಅಮೃತ ನೀಡಿ ಪರಿಪೂರ್ಣ ಪಂಡಿತರನ್ನಾಗಿ ಮಾಡಿದರು. ಅದರ ಪ್ರತಿಫಲದಿಂದ ಸದಾಶಿವ ಸ್ವಾಮಿಗಳು ೭೭ ವರ್ಷಗಳ ಕಾಲ ಜೀವಿಸಿ ಲಿಂಗನಿಷ್ಠೆ, ತ್ರಿಕಾಲ ಪೂಜೆ, ಸಮಾಜ ಕಲ್ಯಾಣ, ವಟುಗಳ ಚಿಂತನೆ ಮೊದಲಾದ ಧ್ಯೇಯಗಳನ್ನು ಮೈಗೂಡಿಸಿಕೊಂಡು ಕಲ್ಯಾಣ ಕಾರ್ಯವನ್ನು ಮುಂದುವರಿಸಿದರು. ಅಲ್ಲದೆ ಕುಮಾರ ಸ್ವಾಮಿಗಳ ಭವ್ಯ ಗದ್ದುಗೆಯನ್ನು ಶಿವಯೋಗ ಮಂದಿರದಲ್ಲಿ ನಿರ್ಮಿಸಿದರು. ೧೯೭೨ರಲ್ಲಿ 'ಸುಕುಮಾರ' ಎಂಬ ಧಾರ್ಮಿಕ ಪತ್ರಿಕೆಯನ್ನು ಜಾರಿಗೆ ತಂದರು. ಗೋಶಾಲೆಯಲ್ಲಿ ವಿಭೂತಿ ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಿದರು. ಬಡ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳನ್ನು ಸ್ಥಾಪಿಸಿ ಉಚಿತ ದಾಸೋಹ ಪ್ರಾರಂಭಿಸಿದರು. ೧೯೮೩ರಲ್ಲಿ ಬಸವನ ಬಾಗೇವಾಡಿಯಲ್ಲಿ ೬೩ ಮಂಟಪಗಳ ಪೂಜೆ ನೆರವೇರಿಸುವಲ್ಲಿ ಶಿವನಲ್ಲಿ ಐಕ್ಯರಾದರು.

**ಕುಮಾರ ಮಹಾಸ್ವಾಮಿಗಳು**

ವಿರಕ್ತಪೀಠ ಪರಂಪರೆಯ ಘನತೆಯನ್ನು ಎತ್ತಿ ಹಿಡಿಯಲು ಸದಾಶಿವ ಸ್ವಾಮಿಗಳ ತರುವಾಯ ಶಿವಕುಮಾರ ಸ್ವಾಮಿಗಳು ಉತ್ತರಾಧಿಕಾರಿಯಾದರು. ಚಿಕ್ಕಮಗಳೂರು ಜಿಲ್ಲೆಯ ಕಡುರು ತಾಲೂಕಿನ ಕಲ್ಕೆರೆಯ ಶಿವಮೂರ್ತಿಯ್ಯ ಮತ್ತು ಗಂಗಮ್ಮ ಎಂಬ ಶರಣ ದಂಪತಿಗಳ ಉದರದಲ್ಲಿ ಜನಿಸಿದರು. ಶಿವಯೋಗಿ ಮಂದಿರದಲ್ಲಿ ಬೆಳೆದ ಕುಮಾರ ಸ್ವಾಮಿಗಳು ಕಿರಿಯ ವಯಸ್ಸಿನಲ್ಲಿಯೇ ಹಿರಿಯ ಮಠದ ಪೀಠವನ್ನು ಅಲಂಕರಿಸಿ ಸಾಮಾಜಿಕ, ಧಾರ್ಮಿಕ ಚಟುವಟಿಕೆಯ ಕೇಂದ್ರವನ್ನಾಗಿ ಮಾಡಿದ್ದಾರೆ. ಅವರ ಮೃದು ವಚನಗಳು ಭಕ್ತ ಸಮೂಹವನ್ನು ಸೆಳೆದರೆ, ಕಾರ್ಯ ಚಟುವಟಿಕೆಗಳು ಕುಮಾರ ಶಿವಯೋಗಿಗಳ ನೆನಪನ್ನು ತರುತ್ತವೆ. ಏಕೆಂದರೆ ಕುಮಾರ ಶಿವಯೋಗಿಗಳು ಲಿಂಗೈಕ್ಯರಾಗುವ ಮೊದಲು ಭಕ್ತರಿಗೆ, ನಾನು ಮತ್ತೊಮ್ಮೆ ಸಮಾಜ ಸೇವೆಗಾಗಿ ಹುಟ್ಟಿ ಬರುತ್ತೇನೆಂದು ಹೇಳಿದ್ದನ್ನು ನೋಡಿದರೆ, ಅವರ ಪ್ರತಿರೂಪವೆ ಇವರು ಎನ್ನಬಹುದು.

ಇವರು ಧರ್ಮ ಜಾಗೃತಿ ಹಾಗೂ ಶಿಕ್ಷಣ ಪ್ರಸಾರಕ್ಕಾಗಿ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ. ಪ್ರತಿವರ್ಷ ಕುಮಾರ ಶಿವಯೋಗಿಗಳ ಪುಣ್ಯ ತಿಥಿಯ ಸಂದರ್ಭದಲ್ಲಿ ಶಿವಕೀರ್ತನೆ, ಶಿವಭಜನೆ, ಧರ್ಮ ಜಾಗೃತಿಗಾಗಿ ಶಿವಾನುಭವ ಗೋಷ್ಠಿಯನ್ನು ಅವಿರತವಾಗಿ ನಡೆಸುತ್ತಾರೆ. ನಿರಂತರ ಸಮಾಜಸೇವೆ ಮತ್ತು ಧಾರ್ಮಿಕ ಕಾರ್ಯಗಳಿಂದ ಅವರು ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳಾಗಿ ಶ್ರೀಮಾನ್ ಮಹಾರಾಜ್ ನಿರಂಜನ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳಾಗಿ ಪೀಠವನ್ನು ಅಲಂಕರಿಸಿದ್ದಾರೆ. ಮುನವಳ್ಳಿ, ಸಿಂದೋಗಿಯ ಶಾಖೆಗಳು ಇವರ ಅಧೀನದಲ್ಲಿದ್ದು, ಅವುಗಳನ್ನು ನೋಡಿಕೊಂಡು ಹೋಗುವ ಜವಾಬ್ದಾರಿಯು ಇವರ ಮೇಲಿದೆ. ಈಗಲೂ ಸಮಾಜ ಸೇವೆ ಧಾರ್ಮಿಕ ಕಾರ್ಯಗಳಲ್ಲಿ ನಿರತರಾಗಿದ್ದಾರೆ.

**ವಿರಕ್ತಮಠ, ಅಕ್ಕಿ ಆಲೂರು**

ಇದು ಹಾನಗಲ್ಲು ವಿರಕ್ತಮಠ ಶಾಖೆಗಳಲ್ಲೊಂದು. ಮೊದಲು ವಿರಕ್ತಮಠದ ಆಡಳಿತಕ್ಕೊಳಪಟ್ಟಿತು. ಒಬ್ಬ ವಟುವನ್ನು ನೇಮಿಸಿದ ನಂತರ ಆ ಮಠವು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ.

**ಶಿವಲಿಂಗೇಶ್ವರ ವಿರಕ್ತಮಠ, ತುರಬಿಗುಡ್ಡ**

ಈ ವಿರಕ್ತಮಠವು ಕಟ್ಟಿಗೆಹಳ್ಳಿ ಸಿದ್ಧಲಿಂಗನ ಕಾಲದಲ್ಲಿ ಸ್ಥಾಪನೆಯಾಗಿದೆ ಎಂಬ ಪ್ರತೀತಿ ಇದೆ. ಕಾರಣ ಅವರು ಇದೇ ಪ್ರದೇಶದವರಾಗಿದ್ದು, ಇದು ಅವರ ಪ್ರಭಾವದಿಂದ ಉದ್ಭವಿಸಿರಬಹುದು. ಈ ಮಠವು ಮುರುಘಾ ಸಮಯದ ಸಂಪ್ರದಾಯಕ್ಕೆ ಸೇರಿದೆ. ಅವರ ಶಿಷ್ಯರಲ್ಲಿ ಒಬ್ಬರಾದ ಶಿವಲಿಂಗೇಶ್ವರ ಸ್ವಾಮಿಗಳು ಧರ್ಮ ಪ್ರಚಾರದಲ್ಲಿ ತೊಡಗಿದ್ದರೆಂದು ತಿಳಿದುಬರುತ್ತದೆ. ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರ ಶಿಷ್ಯರಾದ ಶಿವಲಿಂಗೇಶ್ವರರು ದೇಶ ಸಂಚಾರ ಮಾಡಿ, ತುರಬಿಗುಡ್ಡದಲ್ಲಿ ನೆಲೆನಿಂತು ಜೀವಂತ ಸಮಾಧಿ ಹೊಂದಿದರೆಂದೂ, ತಮ್ಮ ಸಮಾಧಿಯ ಮೇಲೆ ಬಿದಿರ ಮಳೆಯನ್ನು ಹಚ್ಚಲು ಹೇಳಿ, ಅದು ಚಿಗುರಿದರೆ ಹಾಗೆಯೇ ಬಿಡಿ, ಇಲ್ಲದಿದ್ದರೆ ಗದ್ದುಗೆ ಕಟ್ಟಿಸಿ ಎಂದು ಆದೇಶ ಮಾಡಿದ್ದರೆಂದು ಜನ ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಅವರ ಸಮಾಧಿಗೆ ಬಿದಿರು ಗದ್ದುಗೆಯನ್ನು ನಿರ್ಮಿಸಿದರು. ಪವಾಡ ಪುರುಷರಾದ ಇವರು ಅನೇಕ ಭಕ್ತಾದಿಗಳನ್ನು ಹೊಂದಿದ್ದರು. ಇವರಲ್ಲಿ ಸುಲಭೇಶ್ವರ ಸ್ವಾಮಿ ಮತ್ತು ಸಾವಳಿಗೇಶ್ವರ ಸ್ವಾಮಿ ಪ್ರಮುಖರು. ಸಾವಳಿಗೇಶ್ವರ ಸ್ವಾಮಿಯನ್ನು ಈ ಪೀಠದ ಅಧಿಪತಿಯನ್ನಾಗಿ ನೇಮಿಸಿದರು. ಅವರು ವೀರಶೈವ ಧರ್ಮವನ್ನು ಪ್ರಚಾರ ಮಾಡಿ ಅಲ್ಲಿಯೇ ಐಕ್ಯರಾಗಿದ್ದಾರೆ. ಅವರ ಗದ್ದುಗೆ ಶಿವಲಿಂಗೇಶ್ವರ ಸ್ವಾಮಿಯ ಗದ್ದುಗೆ ಪಕ್ಕದಲ್ಲಿದೆ.

ಸುಲಭೇಶ್ವರ ಸ್ವಾಮಿಗಳ ಗದ್ದುಗೆ ಹತ್ತಿರದ ಮೂಡಿಯಲ್ಲಿದೆ. ಮೂಡಿಯ ಜಾತ್ರಾ ಮಹೋತ್ಸವಕ್ಕೆ ತುರುಬೀಗುಡ್ಡದ ಶಿವಲಿಂಗೇಶ್ವರ ಮೂರ್ತಿಯನ್ನು ತೆಗೆದುಕೊಂಡು ಹೋಗಿ ಉತ್ಸವವನ್ನು ಮಾಡುವ ಪರಂಪರೆ ಇಂದಿಗೂ ಬೆಳೆದು ಬಂದಿದೆ. ಶಿವಲಿಂಗೇಶ್ವರ ಸ್ವಾಮಿಗಳ ಪರಂಪರೆ ಈ ಪೀಠದಲ್ಲಿ ಮುಂದುವರೆದ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಆದರೆ ೨೦ನೆಯ ಶತಮಾನದ ಆರಂಭದಲ್ಲಿ ನವಲ್ಯಪ್ಪ ಸ್ವಾಮಿಗಳು ಈ ಪೀಠಕ್ಕೆ ಅಧಿಪತಿಯಾಗಿದ್ದರು. ಇವರು ಅನೇಕ ಭಕ್ತಾದಿಗಳಿಂದ ದಾನ - ದತ್ತಿಗಳನ್ನು ತೆಗೆದುಕೊಂಡಿರುವ

ಮಾಹಿತಿಗಳು ದೊರೆಯುತ್ತವೆ. ತರುವಾಯ ಕ್ರಿ.ಶ. ೧೯೫೮ರ ಸುಮಾರಿಗೆ ಚನ್ನವೀರ ಮಹಾಸ್ವಾಮಿಗಳು ಈ ವಿರಕ್ತಮಠದ ಅಧಿಪತಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ೨೦೦೩ರಲ್ಲಿ ತಮ್ಮ ಉತ್ತರಾಧಿಕಾರಿಗಳಾಗಿ ಸದಾಶಿವ ಮಹಾಸ್ವಾಮಿಗಳನ್ನು ನೇಮಕ ಮಾಡಿದರು. ಅವರೂ ಕೂಡಾ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ.

**ತಿಪ್ಪಯ್ಯಮಠ, ಕೂಸನೂರು**

ಕೂಸನೂರಿನಲ್ಲಿ ತಿಪ್ಪಯ್ಯಸ್ವಾಮಿ ಮಠವಿದೆ. ವೇದಾಂತ ಶಿಖಾಮಣಿ ಎನಿಸಿರುವ ತಿಪ್ಪಯ್ಯಸ್ವಾಮಿ ಇಲ್ಲಿ ನೆಲೆಸಿ, ಈ ಭಾಗದ ಜನರಲ್ಲಿ ಸರ್ವ ಸಮಾನತೆಯನ್ನು ಸಾರಿದ್ದಾರೆ. ಇವರು ಕಾಶಿಯ ಕಾಳಿಕಾ ದೇವಿಯ ಜೊತೆ ಮಾತನಾಡಿ ಖಡ್ಗವನ್ನು ಕಾಣಿಕೆಯಾಗಿ ಪಡೆದರೆಂಬ ಪ್ರತೀತಿ. ಇವರ ಗದ್ದುಗೆಯ ಸಮೀಪ ಕಾಳಿಕಾ ಮಂದಿರವಿದೆ. ಇವರ ತರುವಾಯ ಬಸವಪ್ಪ ಸ್ವಾಮಿ ಈ ಮಠದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಉದ್ರಿ (ಸೊರಬ ತಾ.), ಹುಲಗಡ್ಡಿ, ಕೊಂಡೋಜಿ (ಹಾನಗಲ್ಲು ತಾ.), ಗುಳೇದಗುಡ್ಡ ಮೊದಲಾದ ಊರುಗಳ ಭಕ್ತರು ಈ ಮಠಕ್ಕೆ ಕಾಣಿಕೆ ಸಲ್ಲಿಸಿ ಬಡವರ ಸೇವೆಗೆ ಅನುಕೂಲ ಕಲ್ಪಿಸಿದ್ದಾರೆ. ಸ್ವಾಮಿಗಳು ಬಸವ ತತ್ವಗಳನ್ನು ಸಾಕಾರಗೊಳಿಸುವಲ್ಲಿ ಕಾರ್ಯತತ್ಪರರಾಗಿದ್ದಾರೆ.

**ಮುರುಘರಾಜೇಂದ್ರ ಮಠ, ಉಪ್ಪುಣಸಿ**

ಈ ಮಠದ ಇತಿಹಾಸ ಬಹಳ ಹಿಂದಿನದೆಂಬ ನಂಬಿಕೆ. ಊಹಿಸಿದ ಹಾಗೆ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಕಾಲದಲ್ಲಿ ಅವರ ಶಿಷ್ಯರಲ್ಲೊಬ್ಬ ಇಲ್ಲಿಗೆ ಬಂದು ನೆಲೆಸಿರಬೇಕು. ಆದರೆ ಇದರ ಪಾರಂಪರಿಕ ಚರಿತ್ರೆ ದೊರೆತಿಲ್ಲ. ಕಳೆದ ೩೦ ವರ್ಷದಿಂದ ಈಚೆಗೆ ಜಯಬಸವ ಮಹಾಸ್ವಾಮಿ ಬಂದು ನೆಲೆಸಿ, ಆ ಮಠದ ಸಂಪೂರ್ಣ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ. ಈ ಮಠದ ನಿರ್ಮಾಣದ ಸಮಕಾಲೀನರಲ್ಲಿ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಇನ್ನೊಬ್ಬ ಶಿಷ್ಯ ಹಿರಿಯ ಮಾಗಡಿಯಲ್ಲಿ (ತಾ. ಸೊರಬ) ಮುರುಘ ಮಠವನ್ನು ಸ್ಥಾಪಿಸಿದರೆಂಬ ಪ್ರತೀತಿ ಇದೆ.

**ಗುಬ್ಬಿನಂಜುಂಡೇಶ್ವರ ಮಠ, ಹೊಂಕಣ**

ವರದಾ ನದಿಯ ದಂಡೆಯ ಮೇಲಿರುವ ಇದು ಒಬ್ಬ ಪವಾಡ ಪುರುಷನಿಗೆ ಸಂಬಂಧಿಸಿದ ಮಠ. ಇದಕ್ಕೆ ಹೊಂದಿಕೊಂಡಂತೆ ರಾಮಲಿಂಗೇಶ್ವರ ದೇವಸ್ಥಾನವೂ ಇದೆ. ಪವಾಡ ಪುರುಷರಾದ ನಂಜುಂಡೇಶ್ವರ, ಶಿರಾ ತಾಲೂಕಿನ ಗುಬ್ಬಿಯವರು. ದೇಶ ಸಂಚಾರ ಮಾಡುತ್ತಾ ಹೊರಟು ಹಾನಗಲ್ಲು ತಾಲೂಕಿನ ಹೊಂಕಣ ಗ್ರಾಮಕ್ಕೆ ಬರುತ್ತಾರೆ. ಎಣ್ಣೆಗೊಪ್ಪ ಗ್ರಾಮದ (ಸೊರಬ ತಾಲೂಕ) ಮಲ್ಲಿಕಾರ್ಜುನ ಗೌಡ, ಒಬ್ಬ ಭಕ್ತನಿಗೆ ಅನ್ಯಾಯ ಮಾಡಿದ್ದರಿಂದ ಈ ವ್ಯಾಜ್ಯವನ್ನು ನಂಜುಂಡೇಶ್ವರರು ಮೈಸೂರು ಅರಸರಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ. ಮೂರು ದಿನಗಳ ವರೆಗೆ ಬಾಗಿಲಲ್ಲಿ ಕುಳಿತುಕೊಂಡು, ಅರಸನನ್ನು ಭೇಟಿಯಾಗಿ ನ್ಯಾಯ ಕೇಳುತ್ತಾರೆ. ಅರಸು ವಾಡಿಕೆಯಂತೆ ಗೌಡರ ತಪ್ಪಿಲ್ಲ, ಆದ್ದರಿಂದ ನಿಮಗೆ ತೀರ್ಪು ಕೊಡಲು ಬರುವುದಿಲ್ಲ ಎಂದು ಹೇಳುತ್ತಾನೆ. ಇದಕ್ಕೆ ಒಪ್ಪದಿದ್ದಾಗ, ಮಹಾರಾಜ ತಾನು ಕೊಟ್ಟ ತೀರ್ಪಿನ ನ್ಯಾಯಪೀಠದ ಮಹತ್ವವನ್ನು ತೋರಿಸಲು, ನೀವೆ ಬಂದು ನ್ಯಾಯ ಪೀಠದ ಮೇಲೆ ಕುಳಿತುಕೊಳ್ಳಿ ಎಂದು, ಆ ಪೀಟದ ಮೇಲೆ ಜೋಳ ಚೆಲ್ಲಿದರಂತೆ. ಆ ಜೋಳ ಹರಳಾದವಂತೆ. ಆಗ ನಂಜುಂಡೇಶ್ವರರು ಆಯಿತು ಎಂದು ಹೇಳಿ ಪೀಠದ ಮೇಲೆ ಕುಳಿತಾಗ ಅರಸರಿಗೆ ದಿಗ್ಭ್ರಮೆಯಾಯಿತು. ಆಗ ಗೌಡನಿಗೆ ಕೇವಲ ಒಂದು ದಾಂಬಡಿಬಿಲ್ಲಿ ದಂಡವನ್ನು ಹಾಕಿ, ನಿನ್ನ ಮನೆ ಹಾಳಾಗಲಿ, ನೀನು ದಾರಿಯಲ್ಲಿ ಬಿದ್ದು ಸಾಯಿ ಎಂದು ಶಾಪ ಕೊಡುತ್ತಾರೆ. ಅವರ ಶಾಪದಂತೆ ಘಟನೆ ನಡೆಯಿತೆಂಬ ಪ್ರತೀತಿ ಇದೆ. ಸಮೀಪದ ಮೂಡಿಯಲ್ಲಿ ಚನ್ನವೀರ ಮಹಾಸ್ವಾಮಿಗಳಿಗೆ ಮಠವನ್ನು ಏಕೆ ಕಟ್ಟುವೆ, ನಿನ್ನ ಮಠದ ಕಳಸದ ಮೇಲೆ ಗುಬ್ಬಿ ಕುಳಿತುಕೊಂಡು ನೀರನ್ನು ಕುಡಿಯುತ್ತದೆ ಎಂದಿದ್ದರಂತೆ. ಅಂತೆಯೆ ಇಂದು ವರದಾ ನದಿಗೆ ಬ್ಯಾತನಾಳದ ಸಮೀಪ ಆಣೆಕಟ್ಟೆಯನ್ನು ಕಟ್ಟಲು ಯೋಜನೆಯನ್ನು ಹಾಕಿದ್ದಾರೆ. ನೀವು ಮಠವೇಕೆ ಕಟ್ಟಬಾರದೆಂದು ಕೇಳಿದ್ದಕ್ಕೆ, ಘಟ ಹೋದಮೇಲೆ ಮಠ ಆಗುತ್ತದೆ ಎಂದಿದ್ದರಂತೆ. ಅಂತೆಯೇ ಹಿರೇಹಳ್ಳಿ (ಬ್ಯಾಡಗಿ ತಾಲೂಕ)ಯಲ್ಲಿ ನೀರಿನಲ್ಲಿ ಧ್ಯಾನ ಮಾಡುತ್ತ ಎರಡು ಮೂರು ದಿನಗಳು ಕಳೆದರೂ ಶ್ರೀಗಳು ಹೊರಗೆ ಬರದಿರಲು ಜನರು ಹೋಗಿ ನೋಡಿದರಂತೆ. ಶ್ರೀಗಳು ಧ್ಯಾನಾಸಕ್ತರಾಗಿದ್ದರು. ಜನರು ಹೋಗಿ ಮುಟ್ಟಿದಾಕ್ಷಣ, ಅವರು ಇಹಲೋಕ

ತ್ಯಜಿಸಿರುವುದು ತಿಳಿಯಿತು. ಹಿರೇಹಳ್ಳಿಯಿಂದ ಶವವನ್ನು ಹೊಂಕಣಕ್ಕೆ ತಂದರು. ಲಿಂಗೈಕ್ಯರಾದ ಮೇಲೆ ಹೊಂಕಣದಲ್ಲಿ ಅವರ ಹೆಸರಿನ ಮಠ ನಿರ್ಮಾಣವಾಯಿತು. ಇವರ ಪವಾಡಗಳನ್ನು ಕುರಿತು ನಾಟಕಗಳು ರಚನೆಯಾಗಿವೆ. ಅಲ್ಲದೆ ಈ ಪ್ರದೇಶದಲ್ಲಿ ಅವುಗಳನ್ನು ಆಡಿ ತೋರಿಸುತ್ತಿದ್ದುದರಿಂದ ಜನಮನದಲ್ಲಿ ಅಚ್ಚಳಿಯದೆ ಉಳಿದಿದೆ. ನಂಜುಂಡೇಶ್ವರ ಶಾಖಾ ಮಠಗಳು ಕರ್ಜಗಿ, ಮೋಟೆಬೆನ್ನೂರ, ಹಿರೇಹಳ್ಳಿಗಳಲ್ಲಿ ನಿರ್ಮಾಣಗೊಂಡಿವೆ.

**ದರ್ಗಾ**

ಮಠ ಮತ್ತು ದರ್ಗಾಗಳಲ್ಲಿ ಕೆಲವು ಧಾರ್ಮಿಕ ವಿಧಿವಿಧಾನಗಳನ್ನು ಬಿಟ್ಟರೆ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳಲ್ಲಿ ಸಾಮ್ಯತೆಯನ್ನು ಕಾಣಬಹುದು. ಮುಸ್ಲಿಂ ಧರ್ಮವು ಭಾರತಕ್ಕೆ ಪಾದಾರ್ಪಣೆ ಮಾಡಿದ್ದು ಉತ್ತರದ ನಾಡಿನಲ್ಲಿ. ಇಸ್ಲಾಂ ದೊರೆಗಳು ಭಾರತದ ಉತ್ತರದಿಂದ ದಕ್ಷಿಣದ ಗುಲ್ಬರ್ಗ, ವಿಜಾಪುರ, ಬೀದರ್ ಮೊದಲಾದ ಸ್ಥಳಗಳನ್ನು ಆಡಳಿತ ಕೇಂದ್ರಗಳನ್ನಾಗಿ ಮಾಡಿಕೊಂಡು ಅರಬ್ ರಾಷ್ಟ್ರದಿಂದ ಧರ್ಮಗುರುಗಳನ್ನು ಕರೆಯಿಸಿ, ಇಸ್ಲಾಂ ಧರ್ಮವು ಹರಡುವಂತೆ ಮಾಡಿದರು. ಧರ್ಮ ಪ್ರಚಾರಕ್ಕೆಂದು ಬಂದ ಮುಸ್ಲಿಂ ಮೌಲ್ವಿಗಳು ಇಡೀ ದೇಶಾದ್ಯಂತ ಇಸ್ಲಾಂ ಧರ್ಮವನ್ನು ಪ್ರಚಾರ ಮಾಡಿದರು. ಅದು ಹಾನಗಲ್ಲು ನಾಡಿಗೆ ಹೊರತಾಗಿರಲಿಲ್ಲ. ಸಮೀಪದ ಸವಣೂರು, ನವಾಬರ ಆಡಳಿತಕ್ಕೊಳಪಟ್ಟಿದ್ದರಿಂದ ಅನೇಕ ಮೌಲ್ವಿಗಳಿಗೆ ಆಶ್ರಯ ತಾಣವಾಗಿತ್ತು. ಅದರ ಪರಿಣಾಮ ಹಾನಗಲ್ಲು ಪ್ರದೇಶದ ಅನೇಕ ಗ್ರಾಮಗಳಲ್ಲಿ ಮೌಲ್ವಿಗಳು ತಂಗಿ ಪವಾಡಗಳ ಮೂಲಕ ಜನರ ಮನಸ್ಸನ್ನು ತಮ್ಮ ಕಡೆಗೆ ಸೆಳೆಯುವಂತೆ ಮಾಡಿದರು. ಹೀಗಾಗಿ ಹಾನಗಲ್ಲು ಪಟ್ಟಣ, ಅಕ್ಕಿಆಲೂರ, ತಿಳವಳ್ಳಿ, ಆಡೂರ, ಬೆಳಗಾಲಪೇಟೆ, ಶಿರಗೋಡ, ಬೊಮ್ಮನಹಳ್ಳಿ, ಕಲ್ಲಾಪುರ, ನರೇಗಲ್ಲ ಮೊದಲಾದ ಗ್ರಾಮಗಳಲ್ಲಿ ಹೆಚ್ಚಿನ ಜನರು ಮುಸ್ಲಿಂ ಧರ್ಮದ ಕಡೆಗೆ ವಾಲಿ ಆ ಧರ್ಮದ ಅನುಯಾಯಿಗಳಾಗಿದ್ದಾರೆ. ಧರ್ಮ ಪ್ರಚಾರಕ್ಕೆಂದು ಬಂದ ಮೌಲ್ವಿಗಳು ಅಲ್ಲಿಯೇ ಮರಣ ಹೊಂದಿದಾಗ, ಅವರಿಗೆ ಕಟ್ಟಿಸಿದ ಗೋರಿಗಳು ದೇವರ ಕಲ್ಪನೆಯಲ್ಲಿ ಪೂಜೆಗೊಳ್ಳುತ್ತಿವೆ. ಅಲ್ಲದೆ ಅವುಗಳ ಚಟುವಟಿಕೆಗಳು ಮಠಗಳಿಂದ ಭಿನ್ನವಾಗಿಲ್ಲ. ಪ್ರತಿ ವರ್ಷವೂ ಉರುಸನ್ನು (ಜಾತ್ರೆ) ಮಾಡುತ್ತ ಆ ಗೋರಿಗಳಿಗೆ ಗೌರವ ಸಲ್ಲಿಸುತ್ತಾರೆ. ಅಂತಹ ಪ್ರಸಿದ್ಧ ಉರುಸುಗಳು ಹಾನಗಲ್ಲು ನಾಡಿನಲ್ಲಿ ನಡೆಯುತ್ತವೆ.

**ಪೀರಸೈಯದ್ ಸಾಹಾತ್ ಶಾವಲಿ ದರ್ಗಾ**

ಹಾನಗಲ್ಲು ಪಟ್ಟಣದ ಪ್ರಸಿದ್ಧ ದರ್ಗಾಗಳಲ್ಲಿ ಇದು ಒಂದು. ಪೀರ ಸೈಯದ್ ಸಾಹಾತ್ ಶಾವಲಿ ಸಮಾಧಿ ಇದೆ. ಅವರು ಮೂಲತಃ ಕಾಶ್ಮೀರಿಯವರು. ತಮ್ಮ ನಾಡಿನಲ್ಲಿ ಶಿಕ್ಷಣ ಮುಗಿಸಿಕೊಂಡು ೧೮ನೆಯ ವಯಸ್ಸಿನಲ್ಲಿ ಮಹತಾಜ್ ಬಾನುವಿನ ಜೊತೆಗೆ ಲಗ್ನವಾಯಿತು. ನಂತರ ಅವರಿಗೆ ೨ ವರ್ಷಗಳಲ್ಲಿ ತಾಹಿರ್ ಬಾನು ಎಂಬ ಹೆಣ್ಣು ಮಗು ಜನಿಸಿತು. ಅದು ೩ ತಿಂಗಳಲ್ಲಿ ತೀರಿಕೊಂಡಿತು. ನಂತರ ತಮ್ಮ ತಾಯಿಯ ಮರಣದ ನಂತರ ಜೀವನದಲ್ಲಿ ಜಿಗುಪ್ಸೆಗೊಂಡು ಧರ್ಮ ಪ್ರಚಾರಕ್ಕಾಗಿ ಅಜ್ಮೀರಿ ದರ್ಗಾಕ್ಕೆ ಭೇಟಿ ಕೊಟ್ಟರು. ಅಲ್ಲಿಯ ಮೌಲ್ವಿಗಳು ಅವರಿಗೆ ಸುನ್ನಿ, ಹನಪಿ ಪಂಗಡಗಳ ಧಾರ್ಮಿಕ ಪ್ರಚಾರಕ್ಕಾಗಿ ದಕ್ಷಿಣ ಭಾಗಕ್ಕೆ ಹೋಗಲು ತಿಳಿಸಿದರು. ಅಲ್ಲಿಂದ ಹೊರಟು ಹಾನಗಲ್ಲು ನಗರಕ್ಕೆ ಬಂದು, ಅಲ್ಲಿಂದ ಅಕ್ಕಿಆಲೂರಿಗೆ ಹೋಗಿ ಕೆಲವು ತಿಂಗಳುಗಳವರೆಗೆ ಅಲ್ಲಿಯೇ ಇದ್ದು, ಅನೇಕ ಕಾಶ್ಮೀರಿ ವ್ಯಕ್ತಿಗಳನ್ನು ಭೇಟಿಯಾಗುತ್ತಾರೆ. ಅವರ ಅಣ್ಣನಾದ ಹಜರತ್ ಸೈಯದ್ ಯೂಸುಫ್ ಷಾ ಮತ್ತು ಮಕ್ಕಳಾದ ಹಜರತ್ ಪಪೀರ ಸೈಯದ್ ಮುಜಫರ್ ಷಾ ಖಾದ್ರಿಯವರೊಂದಿಗೆ ಇವರನ್ನು ಕರೆದುಕೊಂಡು ಹೋಗಲು ಬರುತ್ತಾರೆ. ಆದರೆ ಅವರ ಅಣ್ಣನ ಜೊತೆಗೆ ಹೋಗದೆ ಮೈಸೂರಿನ ಹತ್ತಿರ ಮಾಬಳ್ಳಿಗೆ ಹೋಗುತ್ತಾರೆ. ಕೆಲವು ದಿನಗಳ ನಂತರ ಮತ್ತೆ ಮರಳಿ ಹಾನಗಲ್ಲಿಗೆ ಬಂದು ಪ್ರಮುಖ ವ್ಯಕ್ತಿಗಳ ಸಹಾಯದಿಂದ ಜೀರ್ಣಾವಸ್ಥೆಗೆ ಬಂದಿದ್ದ ಕೊರಚಗೇರಿ ಮಸೀದಿ ಕೆಡವಿ ಕಟ್ಟಿಸುತ್ತಾರೆ. ೧೯೫೨ರಲ್ಲಿ ನಾಡಿನಾದ್ಯಂತ ಸಂಚರಿಸಿ ಧಾರ್ಮಿಕ ಭಾಷಣ ಮಾಡಿ ಧರ್ಮ ಪ್ರಚಾರ ಮಾಡುತ್ತಾರೆ. ಅದರ ಜೊತೆಗೆ 'ಅರಷಾದ' ಪತ್ರಿಕೆಯನ್ನು ಬಿಡುಗಡೆ ಮಾಡುತ್ತಾರೆ. ಅಲ್ಲದೆ ಇವರು ಬರಗಾಲದ ವೇಳೆಯಲ್ಲಿ ಮಳೆ ಬರುವಂತೆ ಮಾಡುವುದು, ಸಂತಾನ ಪ್ರಾಪ್ತಿ, ಮೈಗಂಟಿಕೊಂಡಿದ್ದ ಪಿಶಾಚಿಯನ್ನು ಓಡಿಸುವುದು ಮೊದಲಾದ ಪವಾಡಗಳನ್ನು ಮಾಡಿರುವ ನಿದರ್ಶನಗಳಿವೆ. ಇವರ ಹೆಸರಿನ ಮೇಲೆ ಪ್ರತಿ ವರ್ಷ ಸಫರೆ ತಿಂಗಳಲ್ಲಿ (ಮೊಹರಂ ತಿಂಗಳ ನಂತರ

೨೩ನೆಯ ದಿನಕ್ಕೆ) ಉರುಸು ನಡೆಯುತ್ತದೆ. ಒಂದು ವಾರದವರೆಗೆ ನಡೆಯುವ ಉರುಸುಗಳಲ್ಲಿ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

**ಹಜರತ್ ಸೈಯದ್ ಮರ್ದನೆ ಗೈಬ್ ದರ್ಗಾ**

ಇದನ್ನು ಮಜರೆ ದರ್ಗಾ ಎಂದು ಕರೆಯುತ್ತಾರೆ. ಹಜರತ್ ಸೈಯದ್ ಮರ್ದನೆ ಗೈಬ್ ಅರಬಸ್ಥಾನದಿಂದ ಬಂದವರು. ಈ ಸ್ಥಳಕ್ಕೆ ಬರುತ್ತಿದ್ದಾಗ, ದಟ್ಟವಾದ ಅರಣ್ಯದಲ್ಲಿ ಬಾಯಾರಿಕೆಯಾಯಿತು. ಇಲ್ಲಿಗೆ ಸುಮಾರು ೨೩ ಕಿ.ಮೀ. ದೂರದಲ್ಲಿ ದನ ಕಾಯುವ ಹುಡುಗರಿಬ್ಬರನ್ನು ಕರೆದು, ನೀರು ಎಲ್ಲಿ ಸಿಗುತ್ತದೆ ಎಂದು ಕೇಳಿದರು. ಅವರು, ನೀವು ಎಲ್ಲಿಂದ ಬಂದಿರುವಿರೊ ಅಷ್ಟೆ ದೂರದಲ್ಲಿ ಹೋಗಿ ಜಾಗ ಸಿಗುತ್ತದೆ ಎಂದರು. ಅಲ್ಲಿಂದ ದರ್ಗಾ ಇರುವ ಸ್ಥಳಕ್ಕೆ ಬಂದು ನೀರು ಕಾಣದಾಗಿ, ಭರ್ಚಿಯಿಂದ ನೆಲಕ್ಕೆ ತಿವಿದಾಗ ನೀರಿನ ಬುಗ್ಗೆ ಹರಿಯಿತು. ದರ್ಗಾದ ಎಡಭಾಗದ ಮೂಲೆಯಲ್ಲಿ ಆ ನೀರಿನ ಬಾವಿ ಇಂದಿಗೂ ಇದೆ. ಅಲ್ಲಿಯ ನೀರನ್ನು ಹೆಣ್ಣು ಮಕ್ಕಳು ಮುಟ್ಟುವ ಹಾಗಿಲ್ಲ. ಮುಟ್ಟಿದರೆ ಹುಳುಗಳಾಗುತ್ತವೆಂಬ ನಂಬಿಕೆ. ದನಗಳಿಗೆ ಉಣ್ಣೆ ಹತ್ತಿದಾಗ ಆ ಬಾವಿಯ ನೀರನ್ನು ಚಿಮುಕಿಸಿದರೆ ಹೋಗುತ್ತದೆ ಎಂಬ ನಂಬಿಕೆ ಇಂದಿಗೂ ರೂಢಿಯಲ್ಲಿದೆ. ಈ ದರ್ಗಾದ ಉರುಸು ಪ್ರತಿ ವರ್ಷ ರಜವಿ ತಿಂಗಳ ೧೧ರಿಂದ ೧೬ನೆಯ ತಾರೀಖಿನ ಅವಧಿಯೊಳಗೆ ನಡೆಯುತ್ತದೆ. ಗೈಬ್ ಗೋರಿಯ ಪಕ್ಕದಲ್ಲಿ ದೊಡ್ಡ ದೊಡ್ಡ ಗೋರಿಗಳಿವೆ. ಅವು ಅವರ ಶಿಷ್ಯರ ಗೋರಿಗಳಿರಬಹುದು. ಹಾನಗಲ್ಲಿನಲ್ಲಿ ಇನ್ನೊಂದು ಮಕಬೂಲಹ್ಮದ್ ಷಾ ಖಾದ್ರಿಯವರ ಉರುಸು ನಡೆಯುತ್ತದೆ.

**ರಾಜೇಭಾಗ ಸವಾರ್ ದರ್ಗಾ**

ಹಾನಗಲ್ಲು ನಾಡಿನ ಪ್ರಸಿದ್ಧ ಉರುಸುಗಳಲ್ಲಿ ಒಂದಾದ ಇದು ಪ್ರತಿವರ್ಷ ತಿಳವಳ್ಳಿಯಲ್ಲಿ ನಡೆಯುತ್ತದೆ. ಅದರಲ್ಲಿ ಸರ್ವ ಧರ್ಮದವರೂ ಪಾಲ್ಗೊಳ್ಳುವುದು ವಿಶೇಷ. ಹರಕೆ ಕೊಟ್ಟು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡು ಬರುತ್ತಾರೆ. ಈ ಸವಾರ್ ರು ಅನೇಕ ಪವಾಡಗಳನ್ನು ಮಾಡಿ ಈ ಭಾಗದ ಜನರ ಆಸೆ ಆಕಾಂಕ್ಷೆಯನ್ನು ಈಡೇರಿಸಿದರೆಂಬ ಉದಾಹರಣೆಗಳು ದೊರೆಯುತ್ತವೆ. ಹೀಗಾಗಿ ಸವಾರ್ ದರ್ಗಾ ಈ ಭಾಗದ ಜನರ ನಂಬಿಕೆಗಳಿಗೆ ಒಳಗಾಗಿದೆ.

ಇನ್ನೂ ಹಾನಗಲ್ಲಿನಲ್ಲಿ ಮೆಹಬೂಬ ಸುಭಾಹಾನಿ ಉರುಸು, ಶಾಬುಶಾವಲಿ ಉರುಸು, ಶಾಲುದ್ದೀನ್ ಶಾವಲಿ ಉರುಸು, ಶಿರಗೋಡಿನಲ್ಲಿ ಸೈಯದ್ ಚಮನಶಾವಲಿ ಉರುಸು ಮತ್ತು ಮತಂಗಿಯಲ್ಲಿ ಕರಾರ್ ಶಾವಲಿ ಉರುಸು ಮೊದಲಾದವುಗಳು ಪ್ರತಿವರ್ಷ ನಡೆಯುತ್ತವೆ. ಈ ಮೌಲ್ವಿಗಳಿಗೆ ಶರಣರೆಂದು ಕರೆಯುತ್ತಾರೆ. ಅಕ್ಕಿಆಲೂರಿನಲ್ಲಿ ಕಾಶ್ಮೀರ, ಅರಬಸ್ಥಾನದಿಂದ ಅನೇಕ ಮೌಲ್ವಿಗಳು ಬಂದು ಧರ್ಮ ಪ್ರಚಾರ ಮಾಡಿ ಮಹಾಪುರುಷರಾಗಿ ದೈವತ್ವಕ್ಕೇರಿದ್ದಾರೆ. ಇವರ ಗೋರಿಗಳಿಗೆ ಪೂಜಾ ವಿಧಿವಿಧಾನಗಳನ್ನು ಅನೇಕ ಭಕ್ತಾದಿಗಳು ನೆರವೇರಿಸುತ್ತಿರುವುದನ್ನು ಕಾಣಬಹುದು. ಕಲ್ಲಾಪುರದಲ್ಲಿ ಹಜರತ್ ಮಹಬೂಬ ಸುಬಾನಿ ದರ್ಗಾ, ಅದೆ ಹೆಸರಿನ ಇನ್ನೊಂದು ದರ್ಗಾ ತಿಳವಳ್ಳಿಯಲ್ಲಿದೆ. ಅಲ್ಲದೆ ತಿಳವಳ್ಳಿ ಮತ್ತು ಶಿರಗೋಡಿನಲ್ಲಿ ಚಮನಕಾವಲಿ ಎಂಬ ಹೆಸರಿನ ದರ್ಗಾಗಳು ಕೂಡಾ ಇವೆ.

ಹೀಗೆ ಹಾನಗಲ್ಲು ನಾಡಿನಲ್ಲಿ ಅನೇಕ ದರ್ಗಾಗಳಲ್ಲಿ ಉರುಸು, ಪೂಜೆ - ಪುನಸ್ಕಾರಗಳು ನಡೆಯುತ್ತವೆ. ಮಠಗಳಿಗೆ ಪರ್ಯಾಯವಾಗಿ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂಧಿಸುತ್ತ, ಅಭಿವೃದ್ಧಿಯತ್ತ ಮುಖಮಾಡಿವೆ.

**ಚರ್ಚು**

ಹಾನಗಲ್ಲು ನಗರದಲ್ಲಿ ಕ್ರೈಸ್ತ ಧರ್ಮದವರು ವಾಸವಾಗಿರುವುದು ಅಲ್ಪ ಸಂಖ್ಯೆಯಲ್ಲಿ. ಆದರೆ ಅವರ ಕಾರ್ಯ ಸಾಧನೆ ಅಪಾರ. ರೋಶನಿ ಚರ್ಚ(ದೇವಾಲಯ)ನ್ನು ನಿರ್ಮಿಸಿ, ಆಮೂಲಕ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸಿ ಹಿಂದುಳಿದ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣ ಒದಗಿಸಲಾಗುತ್ತದೆ. ಅಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ, ಸಾಮಾಜಿಕ ಸಮಸ್ಯೆಗಳ ನಿವಾರಣೆಯಲ್ಲಿ ಪಾಲ್ಗೊಂಡಿದ್ದಾರೆ. ಪ್ರತಿ ವರ್ಷವೂ ಡಿಸೆಂಬರ್ ತಿಂಗಳಿನಲ್ಲಿ ಕ್ರಿಸ್ ಮಸ್ ನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಾರೆ.

ಹಾನಗಲ್ಲು ಪರಿಸರ ಅನೇಕ ಧರ್ಮಗಳ ತವರೂರು. ಆಯಾ ಧರ್ಮಗಳಿಗೆ ಸಂಬಂಧಿಸಿದ ಮಠ, ದರ್ಗಾ, ಚರ್ಚು ಇತ್ಯಾದಿಗಳು ಸ್ಥಾಪನೆಯಾಗಿ, ಆ ಮೂಲಕ ಆಯಾ ಧಾರ್ಮಿಕ ಕಾರ್ಯಗಳ ಜೊತೆಗೆ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸ್ಪಂದಿಸುತ್ತಿವೆ.

# ೧೪. ಮೌಖಿಕ ಆಕರಗಳು

ಒಂದು ಪ್ರದೇಶದ ಸಮಗ್ರ ಅಧ್ಯಯನ ಕೈಗೊಳ್ಳುವುದರ ಮೂಲಕ ಆ ಪ್ರದೇಶದ ಸತ್ಯನಿಷ್ಠ ಹಾಗೂ ಪೂರ್ಣರೂಪದ ಚರಿತ್ರೆಯನ್ನು ಕಟ್ಟಲು ಸಾಧ್ಯವಿದೆ. ಆದರೆ ಇಲ್ಲಿಯವರೆಗೆ ಇತಿಹಾಸ ರಚನಾಕಾರರು ಲಿಖಿತ ಪರಂಪರೆಯನ್ನೇ ಅವಲಂಬಿಸಿ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಇದರಿಂದಾಗಿ ಬಹುಸಂಖ್ಯಾತ ಜನಸಮುದಾಯಗಳ ಭಾವನೆಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದರಿಂದ ಇತಿಹಾಸದಲ್ಲಿ ಸ್ಥಾನ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಈ ಕೊರತೆಯನ್ನು ತುಂಬಲು ಇಂದು ಮೌಖಿಕ ಪರಂಪರೆಯನ್ನು ಬಳಸಿಕೊಳ್ಳಲಾಗುತ್ತಿದೆ ಎಂಬುದು ಸಂತಸದ ಸಂಗತಿ. ಮೌಖಿಕ ಪರಂಪರೆಯ ಸಾಮಗ್ರಿಗಳಲ್ಲಿ ಕಾಲ್ಪನಿಕತೆ ಸೇರಿಕೊಂಡಿರಬಹುದು. ಹೆಸರುಗಳು ವ್ಯತ್ಯಾಸಗೊಂಡಿರಬಹುದು. ಆದರೆ ಬಹುಜನರ ನೋವು-ನಲಿವುಗಳು, ಆಸೆ-ಆಕಾಂಕ್ಷೆಗಳು ಬೇರೆ ಬೇರೆ ರೂಪಗಳಲ್ಲಿ ದಾಖಲಾಗಿ ಪ್ರಸರಿಸುತ್ತಾ ಇಂತಹ ಕಂಠಸ್ಥ ಪರಂಪರೆಯಾಗಿದೆ ಎನ್ನುವುದನ್ನು ಮರೆಯಲಾಗದು.

[1]

ಜನಪದರಲ್ಲಿ ಪುರಾಣ, ಕಥೆ, ಕಾವ್ಯ, ಐತಿಹ್ಯಗಳುಂಟು. ಅವುಗಳನ್ನೇ ಅವರು ಇತಿಹಾಸವೆಂದು ತಿಳಿದುಕೊಂಡಿದ್ದಾರೆ. ಮತ್ತು ಅದನ್ನೆ ಅವರು ನಿರೂಪಿಸುತ್ತಾರೆ. 'ಇತಿಹಾಸ ಸಂಶೋಧಕರಂತೆ ಜಾನಪದ ನಿರೂಪಕರಿಗೆ ದಾಖಲೆಗಳು ಬೇಕಾಗಿಲ್ಲ. ಅವರು ನಿರೂಪಿಸುವುದನ್ನೇ ಸತ್ಯವೆಂದು ನಂಬಿ ಅದನ್ನೆ ಪ್ರತಿಪಾದಿಸುತ್ತಾರೆ. ಪ್ರತಿಯೊಂದು ಪ್ರದೇಶದ ಮೌಖಿಕ ಪರಂಪರೆಯಲ್ಲಿರುವ ಪುರಾಣ, ಕಥೆ, ಕಾವ್ಯದ ಅಧ್ಯಯನಕ್ಕೆ ತೊಡಗಿದಾಗ, ಆ ಪ್ರದೇಶದ ಚರಿತ್ರೆಯ ಇನ್ನೊಂದು ಮುಖದ ಪರಿಚಯವಾಗುತ್ತದೆ.'[2] ಅಲ್ಲದೆ ಇತಿಹಾಸ ರಚನಾಕಾರರನಿಗೆ ಪರಂಪರೆ ತೋರದ ಅದೆಷ್ಟೋ ಸಂಗತಿಗಳನ್ನು ಮೌಖಿಕ ಸಾಹಿತ್ಯ ತೋರಿಸುತ್ತದೆ. ಹೀಗಾಗಿ ಮೌಖಿಕ ಸಾಹಿತ್ಯವನ್ನು ಬಳಸಿಕೊಳ್ಳುವುದರ ಮೂಲಕ ಇತಿಹಾಸವನ್ನು ಇನ್ನೂ ಸತ್ಯದ ನಿಖರತೆಯತ್ತ ಹೊರಳಿಸಲಿಕ್ಕೆ ಸಾಧ್ಯವಾಗುತ್ತದೆ ಅಥವಾ ಕಳಚಿಹೋದ ಇತಿಹಾಸದ ಕೊಂಡಿಯಾಗಿ ಜನಪದ ಸಾಹಿತ್ಯವನ್ನು ಬಳಸಿಕೊಳ್ಳಲು ಸಹಾಯಕವಾಗುತ್ತದೆ. ಕುಮ್ಮಟದುರ್ಗದಂತಹ ಪಾಳೆಯಗಾರರ ಹಾಗೂ ಕಿತ್ತೂರಿನಂತಹ ಸಂಸ್ಥಾನಗಳ ಇತಿಹಾಸ ರಚನಾ ಸಂದರ್ಭಗಳಲ್ಲಂತೂ ಬಹುಪಾಲು ಮೌಖಿಕ ಆಕರಗಳೇ ಆಧಾರವಾಗಿವೆಯೆಂಬುದನ್ನು ಇಲ್ಲಿ ಗಮನಿಸಬೇಕು. ಅದೇ ರೀತಿ ಹಾನಗಲ್ಲು ಪರಿಸರದಲ್ಲಿ ಸಂಗೊಳ್ಳಿ ರಾಯಣ್ಣನ ನಂತರದಲ್ಲಿ ಕಂಡುಬರುವ ಕನ್ನೇಶ್ವರರಾಮ ಪ್ರಾಯಶಃ ಈ ನಾಡಿನ ಜನರ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಹೋರಾಟಗಾರನಾಗಿ ಹೋರಾಡಿದ ಅನೇಕ ಘಟನೆಗಳನ್ನು ಮೌಖಿಕ ಸಾಹಿತ್ಯ ಒಳಗೊಂಡಿದೆ. ಈ ಮೌಖಿಕ ಆಕರಗಳ ಸಂಗ್ರಹ ಹಾಗೂ ಅಧ್ಯಯನ ಇನ್ನೂ ಆಗಬೇಕಾಗಿದೆ.

ಹಾನಗಲ್ಲನ್ನು ಕುರಿತ ಜನಪದ ಸಾಹಿತ್ಯ ಸಮೃದ್ಧಿಯಿಂದ ಕೂಡಿದೆ. ಅದನ್ನು ಅಧ್ಯಯನಕ್ಕೆ ಅಳವಡಿಸಿ ವಿಶ್ಲೇಷಿಸಿದಾಗ, ಕಳಚಿಹೋದ ಐತಿಹಾಸಿಕ ಕೊಂಡಿಗಳು ಸಿಗುತ್ತವೆ. ಅಲ್ಲದೆ ಹಾನಗಲ್ಲಿನ ಇನ್ನೊಂದು ಚರಿತ್ರೆಯೂ (ಮೌಖಿಕ ಚರಿತ್ರೆ) ದೊರೆಯುತ್ತದೆ. ಈ ನಿಟ್ಟಿನಲ್ಲಿ ಜನಪದ ಗೀತ ಸಾಹಿತ್ಯ, ಕಥೆ, ಪುರಾಣ ಹಾಗೂ ಐತಿಹ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಅವುಗಳನ್ನು ಈ ನಿಟ್ಟಿನಲ್ಲಿ ಕೆಲವು ದೃಷ್ಟಾಂತಗಳ ಮೂಲಕ ವಿಶ್ಲೇಷಿಸಲಾಗಿದೆ.

ಮೂಲತಃ ಹಾನಗಲ್ಲಿನಲ್ಲಿರುವ ದ್ಯಾಮವ್ವನನ್ನು ಕುರಿತಂತೆ, ಕಳ್ಳರು ಅವಳ ಮೈ ಮೇಲೆ ತೊಡಿಸಿರುವ ಆಭರಣಗಳ ಆಸೆಯಿಂದ ಅವಳನ್ನೇ ಕಳವು ಮಾಡಿಕೊಂಡು ಹೋಗಿ, ಆಭರಣಗಳನ್ನೆಲ್ಲಾ ತೆಗೆದುಕೊಂಡು, ದ್ಯಾಮವ್ವನನ್ನು ಶಿರಸಿಯ ಕೆರೆಯಲ್ಲಿ ಚೆಲ್ಲಿ ಹೋದರಂತೆ. ಆಗ ದ್ಯಾಮವ್ವ ದೇವತೆಯು ಶಿರಸಿಯಲ್ಲಿರುವ ನಾಡಗೇರ ಮನೆತನದವರ ಕನಸಿನಲ್ಲಿ ಬಂದು, “ನಾನು ಕೆರೆಯಲ್ಲಿದ್ದೇನೆ

ತೆಗೆದುಕೊಂಡು ಹೋಗಿರೆಂದು" ತಿಳಿಸಿದಳಂತೆ. ಆಗ ಕೆರೆಯ ನೀರು ಖಾಲಿ ಮಾಡಿ ನೋಡಿದಾಗ, ಅಲ್ಲಿ ದ್ಯಾಮವ್ವಳಿದ್ದಳಂತೆ. ಆಗ ಅವಳನ್ನು ತಂದು ಮಾರಿಕಾಂಬ ಎಂಬ ಹೆಸರಿನಿಂದ ಶಿರಸಿಯಲ್ಲಿ ಪ್ರತಿಷ್ಠಾಪನೆ ಮಾಡಿದರು ಎಂಬ ಕಥೆಯುಂಟು. ಮುಂದೆ ಹಾನಗಲ್ಲಿನಲ್ಲಿ ಗ್ರಾಮದೇವತೆಯು ಇಲ್ಲದ್ದರಿಂದ ಮತ್ತೊಬ್ಬ ದ್ಯಾಮವ್ವನನ್ನು ಅಲ್ಲಿ ಪ್ರತಿಷ್ಠಾಪನೆ ಮಾಡಿ ಆರಾಧಿಸಲು ಪ್ರಾರಂಭಿಸಿದರು. ಅಲ್ಲದೆ ಮೂಲ ದ್ಯಾಮವ್ವನ ನೆನಪಿಗೋಸ್ಕರ ಆನೆಕೆರೆ ದಂಡೆಯ ಮೇಲೆ ಶಿರಸಿಯ ಮಾರಿಕಾಂಬ ಪಾದಗಟ್ಟಿ ಕಟ್ಟಿ ಪೂಜೆಗೆ ಒಳಪಡಿಸಿದರು. ಹೀಗಾಗಿ ಶಿರಸಿಯ ಮಾರಿಕಾಂಬೆ ಮತ್ತು ಹಾನಗಲ್ಲಿನ ದ್ಯಾಮವ್ವ ಅಕ್ಕ- ತಂಗಿಯರೆಂದು ಜನ ತಿಳಿದಿದ್ದಾರೆ. ಜನಪದ ಲಾವಣಿಯೊಂದು ಸಹ ಅದನ್ನೆ ಖಚಿತಪಡಿಸುತ್ತದೆ.

"ಮಾಯಕಾರ್ತಿ ಮಾಯಮಾರಿಗಳಿಬ್ಬರೂ

ಹಾನಗಲ್ಲ ಶಿರಸಿ ಅಮ್ಮನವರುss

ಜಾತ್ರೆಗೊಂದ ಉಡಿಯನು ಕಳಹುವರು

ಜತ್ತಿಯಲ್ಲಿ ಅಕ್ಕ-ತಂಗಿಯರಿವರೂss

ಪ್ರೀತಿಯಲಿ ಬಹುಕಾಲ ನಡೆದವರೂ"

ಮೌಖಿಕ ಪುರಾಣ ಒಂದರಲ್ಲಿ ಹಾನಗಲ್ಲಿನ ದ್ಯಾಮವ್ವ ಶ್ರೀ ಬಾಲಗೌರಿ ಎಂಬ ಹೆಸರಿನ ಒಬ್ಬ ಬ್ರಾಹ್ಮಣ ಕನ್ಯೆ. ತಂದೆತಾಯಿಗಳಿಗೆ ಒಬ್ಬಳೆ ಮುದ್ದಿನ ಮಗಳು. ಅವರಿಗೆ ಗಂಡು ಮಕ್ಕಳಿರಲಿಲ್ಲ. ಸುಂದರನಾದ ಮಾದಿಗರ 'ಕರಿ'ಯನೆಂಬ ಹುಡುಗನೊಬ್ಬ ಮನೆ ಬಿಟ್ಟು ಬಂದು, ನಾನು ಬ್ರಾಹ್ಮಣ, ನನ್ನ ಹೆಸರು ಕರಿಯಂಭಟ್ಟನೆಂದು ನಂಬಿಸಿ ಬ್ರಾಹ್ಮಣರ ಮನೆಯನ್ನು ಸೇರಿಕೊಂಡ ಮತ್ತು ಮಾದರ ಹುಡುಗನೆಂಬ ಸಂಶಯ ಬರದಂತೆ ನಡೆದುಕೊಂಡ. ಹುಡುಗನ ನಡತೆಯನ್ನು ಮೆಚ್ಚಿ ಹುಡುಗಿ ಆತನನ್ನು ಪ್ರೀತಿಸಿ ವಿವಾಹವಾದಳು. ದಿನಗಳು ಕಳೆದ ಮೇಲೆ ಅವರಿಗೆ ಮಕ್ಕಳಾದವು. ಮಗು ತನ್ನ ತಂದೆಯ ಜೊತೆ ಆತನ ವೃತ್ತಿ ಮಾಡುವಲ್ಲಿಗೆ (ಚಪ್ಪಲಿ ಅಂಗಡಿಗೆ) ಹೋಗಿ ಬರುತ್ತಿತ್ತು. ಮಗು ಒಮ್ಮೆ ಹಿತ್ತಲಲ್ಲಿಯ ಬಾಳೆ ಎಲೆ ತೆಗೆದುಕೊಂಡು ಅದರಿಂದ ಚಪ್ಪಲಿಯನ್ನು ಹೊಲಿಯುತ್ತಿದ್ದುದನ್ನು ತಾಯಿ ನೋಡಿ ಗ್ರಹಿಸಿ, ಗಂಡ ಮಾದರವನೆಂದು ಅರ್ಥೈಸಿ, ಮಗುವನ್ನು ಕೊಲ್ಲಲು ಮುಂದಾದಳು. ಆಗ ಮಗು ತಪ್ಪಿಸಿಕೊಂಡು ಓಣಿಯಲ್ಲಿ ಓಡಿಹೋಯಿತು. ಬೆನ್ನಟ್ಟಿದ ತಾಯಿ ಕಲ್ಲು ಒಗೆದಳು. ಮಗುವಿನ ತಲೆಗೆ ತಾಗಿ ಮಗು ಬಿದ್ದು ಮತ್ತೆ ಎದ್ದು ತಪ್ಪಿಸಿಕೊಂಡಿತು. ಆಗ ತಾಯಿಯ ಕಣ್ಣು ಪತಿಯ ಮೇಲೆ ಹೋಯಿತು. ಆತನನ್ನು ಹುಡುಕುತ್ತಾ ಹೊರಟಳು. ದಾರಿಯಲ್ಲಿ ಸಿಕ್ಕ ಗಂಡನನ್ನು ಅಟ್ಟಿಸಿಕೊಂಡು ಹೋದಳು. ಆತನೂ ತಪ್ಪಿಸಿಕೊಂಡ. ಆಗ ಅವಳು ತಾನು ನಾಯಿ ಮುಟ್ಟಿದ ಗಡಿಗೆ ಎಂಬುದನ್ನು ಅರಿತುಕೊಂಡು ಬೆಂಕಿಗೆ ಆಹುತಿಯಾಗಿ ದೇಹ ತ್ಯಾಗ ಮಾಡಿದಳು. ಬೆಂಕಿಗೆ ಆಹುತಿಯಾಗುವುದಕ್ಕಿಂತ ಪೂರ್ವದಲ್ಲಿ ಅವಳು ಗಂಡನಿಗೆ "ಮುಂದಿನ ಜನ್ಮದಲ್ಲಿ ನಾನು ಮಾರಿಯಾಗಿ ಹುಟ್ಟುತ್ತೇನೆ, ನೀನು ಗೌಡರ ಮನೆಯ ಪಟ್ಟದ ಕೋಣವಾಗಿ ಹುಟ್ಟು, ಸರಿ ಮಧ್ಯರಾತ್ರಿ ನಿನ್ನ ಬಲಿ ತೆಗೆದುಕೊಳ್ಳುತ್ತೇನೆ" ಎಂದು ಹೇಳಿ ಸತ್ತಳಂತೆ. ಅದರಂತೆ ಮುಂದಿನ ಜನ್ಮದಲ್ಲಿ ಅವಳು ದ್ಯಾಮವ್ವಳಾಗಿ ಆತ ಗೌಡರ ಮನೆಯ ಪಟ್ಟದ ಕೋಣವಾಗಿ ಹುಟ್ಟಿ ಬಂದರು. ಕೋಣ ವಯಸ್ಸಿಗೆ ಬಂದ ನಂತರ ದ್ಯಾಮವ್ವ ಕೋಣವನ್ನು ಮಧ್ಯರಾತ್ರಿ ಬಲಿ ತೆಗೆದುಕೊಂಡಳು. ಇದಕ್ಕೂ ಮೊದಲು ಮತ್ತು ನಂತರ ಮಕ್ಕಳ ರೂಪದ ಆಡು, ಕುರಿ, ಕೋಳಿಗಳನ್ನು ಬಲಿ ತೆಗೆದುಕೊಂಡಳು.

ಒಟ್ಟಾರೆ ಗ್ರಾಮದೇವತೆಗೆ ಸಂಬಂಧಪಟ್ಟ ಈ ಪುರಾಣ ಕಥೆಯ ಆಶಯವು ಕೆಳವರ್ಗದವರು ಮೇಲುವರ್ಗದ ಸ್ತ್ರೀಯರ ಜೊತೆಗೆ ಯಾವುದೇ ರೀತಿಯ ದೈಹಿಕ ಸಂಪರ್ಕವನ್ನು ಬಯಸಬಾರದೆಂದೂ ಮತ್ತು ವರ್ಣವ್ಯವಸ್ಥೆ ಪರಿಪಾಲನೆಯಲ್ಲಿದ್ದ ಆ ಕಾಲದಲ್ಲಿ ಇಂಥ ಘಟನೆಗಳು ಸಮಾಜದಲ್ಲಿ ಜರುಗಬಾರದೆಂಬ ಕಾರಣಕ್ಕೆ ಇಂಥ ಪುರಾಣಗಳು ಸೃಷ್ಟಿಯಾಗಿರಬೇಕು. ಇನ್ನೊಂದು ರೀತಿಯಲ್ಲಿ, ಇದು ಸ್ತ್ರೀ ಪ್ರಾಧಾನ್ಯತೆಯನ್ನು ಮತ್ತು ದಲಿತರ ದಮನೀಯವಾದ ಬದುಕನ್ನು ಚಿತ್ರಿಸುತ್ತದೆ. ಆದರೆ ಮೂಲತಃ ದ್ಯಾಮವ್ವನ ಆರಾಧನೆಯ ಫಲ-ಸಮೃದ್ಧಿಯ ನೆಲೆ ಸಂಕೇತವನ್ನು ಹಾಗೂ ಗ್ರಾಮ ಮತ್ತು ಸಸ್ಯ ರಕ್ಷಣೆಯ ಅಧಿದೇವತೆಯಾಗಿರುವುದನ್ನು ತಿಳಿಸುತ್ತದೆ.

ಜನಪದ ಲಾವಣಿಯೊಂದರಲ್ಲಿ ಹಾನಗಲ್ಲು ಗ್ರಾಮದೇವತೆಯಾದ ದ್ಯಾಮವ್ವಳು ಹಾನಗಲ್ಲಿನ ಸುತ್ತ ಮುತ್ತಲಿನ ಹನ್ನೊಂದು ಹಳ್ಳಿಗೆ ಸಂಬಂಧಪಟ್ಟವಳು. ಈ ಮೊದಲು ಹಳೆಕೋಟೆಯಲ್ಲಿದ್ದಳು. ಈಗ ಹೊಸ ಊರಿನಲ್ಲಿ ಅವಳಿಗೆ ಗುಡಿಕಟ್ಟಿ, ಅಲ್ಲಿ ಪೂಜೆ ವಿಧಿ-ವಿಧಾನಗಳನ್ನು ನಡೆಸಲಾಗುತ್ತದೆ. ಹಳೆಕೋಟೆಯಲ್ಲಿ ದ್ಯಾಮವ್ವಳಿದ್ದಾಗ ಗಡಿ ದುರುಗವ್ವನನ್ನು ಪೂಜಿಸಿ, ಸೀಮೆ ದಾಟಿಸಿ ಬಿಟ್ಟು ಬಂದಿರುತ್ತಾರೆ. ಹಾನಗಲ್ಲಿನ ಮೂರು ಜನ ಪುಂಡರು ವ್ಯಾಪಾರಕ್ಕೆಂದು ಹೊರಟು, ಗಡಿ ದುರುಗವ್ವಳಿದ್ದಲ್ಲಿಗೆ ಬಂದು, ಎತ್ತುಗಳಿಗೆ ನೀರು ಕುಡಿಸಿ, ದುರುಗವ್ವನ ಸತ್ಯ ಪರೀಕ್ಷಿಸಲು, ಅವಳ ಹತ್ತಿರವಿದ್ದ ಎಲ್ಲಾ ದುಡ್ಡನ್ನು ತೆಗೆದುಕೊಂಡು ಕುರಿ ತಂದು ತಿನ್ನುತ್ತಾರೆ. ದೇವಿಯ ಹಣ ತೆಗೆದುಕೊಂಡು ಕುರಿ ತಿಂದಿದ್ದರಿಂದ ಅವರ ಮನಸ್ಸಿಗೆ ಕಸಿವಿಸಿಯಾಗಿ, ಅವರು ದೇವತೆಗೆ ಒಂದು ಚೀಲ ಉಪ್ಪನ್ನು ತಂದುಕೊಡುತ್ತೇವೆಂದು ಬೇಡಿಕೊಂಡು ವ್ಯಾಪಾರಕ್ಕೆ ಹೋಗುತ್ತಾರೆ. ಅಲ್ಲಿಂದ ಮರಳಿ ಬರುವಾಗ ಆಯಾಸವನ್ನು ಕಳೆಯುವಲ್ಲಿ, ಮಲಗಿದ ಪುಂಡರ ಕನಸಿನಲ್ಲಿ ದೇವತೆಯು ಬಂದು, ತನ್ನ ಕಾಣಿಕೆಯನ್ನು ಕೇಳಿದರೂ ಅವರು ಮನಸ್ಸಿಗೆ ಹಚ್ಚಿಕೊಳ್ಳದೇ ಊರಿಗೆ ಹಿಂತಿರುಗಿ ಬಂದರು. ಆಗ ದುರುಗವ್ವ

ಹೇಳಿ ಕೇಳಿ ರಾತ್ರಿ ಸಾರಿ ಹೊಕ್ಕಳು ಆರುತಾಸಿನಾಗ

ಮಲಗಿಸಿದ ಆಸಿಗೆಯ ಮ್ಯಾಲ

ಮುರಿದಳು ಕುತ್ತಿಗೆ ಮೂವರಿಗೆss

ಮುತ್ತಿಗೆ ಹಾಕ್ಯಾಳು ಊರಿಗೆ

ಹೀಗೆ ದುರುಗವ್ವ ಸಿಟ್ಟಿನಿಂದ ಮನೆ ಹೊಕ್ಕು ಮೂರು ಜನರನ್ನು ಬಲಿ ತೆಗೆದುಕೊಂಡಳು. ನಂತರ ಓಣಿ ಓಣಿಗೆ ದ್ಯಾಮವ್ವ ಹೊಕ್ಕು ಹೆಂಗಳೆಯರು ಮಕ್ಕಳೆನ್ನದೆ ಬಲಿ ತೆಗೆದುಕೊಳ್ಳುತ್ತಾಳೆ.

ಮಕ್ಕಳ ಮಾರಿ ನೋಡತ ನಿಂತಾರ ಹೌಹಾರಿ

ನೋಡಿ ಅಳತಾರೋ ಮಕ್ಕಳನ

ಬರಲಿಲ್ಲ ದುರುಗವ್ವಗ ಕರುಣಾss

ಹುಡುಕುತ ಹೊರಟಾಳು ಓಣಿ ಓಣಿಯನ

ಸರಕಾರಿ ವೈದ್ಯರನ್ನು ಕರೆಸಿ ಉಪಚರಿಸಿದರೂ ಫಲ ನೀಡಲಿಲ್ಲ. ಬಹುಪಾಲು ಜನ ಸತ್ತರು. ಒಮ್ಮೊಮ್ಮೆ ಸುಮಾರು ಮೂವತ್ತೆಂಟು ಹೆಣಗಳನ್ನು ಒಂದೇ ತಗ್ಗಿನಲ್ಲಿ ಹಾಕಿ ಮುಚ್ಚುವ ಪ್ರಸಂಗವು ಬಂದು ಹೋಗುತ್ತದೆ. ಸರಿಯಾಗಿ ಹುಗಿಯಲಿಕ್ಕಾಗದಿದ್ದಾಗ ನಾಯಿ-ನರಿಗಳು ಹಡ್ಡಿ ತಿನ್ನುತ್ತವೆ. ಸಾವಿನ ಸಂಖ್ಯೆ ಹೆಚ್ಚಾಗುತ್ತ ಹೋಗುತ್ತದೆ. ಊರಿನ ಜನಸಂಖ್ಯೆ ಬಹುಪಾಲು ಕಡಿಮೆಯಾಗುತ್ತದೆ. ಆಗ ಜನ ಸಾವು ನಿಲ್ಲದಿದ್ದನ್ನು ಕಂಡು ಊರಿಗೆ ಬೆಂಕಿ ಹಚ್ಚುತ್ತಾರೆ. ಮುಂದೆ ಹಕ್ಕಿ ಶಕುನ ಹೇಳುವವ, ಗಡಿ ದುರಗವ್ವನ ದುಡ್ಡು ತೆಗೆದುಕೊಂಡ ಕಥೆ ಹೇಳಿದಾಗ, ಜನ ಅವಳಿಗೆ ಕುರಿ, ಕೋಳಿ ಬಲಿಕೊಡುತ್ತಾರೆ. ಆಗ ದುರುಗವ್ವ ಶಾಂತಳಾಗಿ ಹಾನಗಲ್ಲು ಜನರಿಗೆ ಅಭಯ ಹಸ್ತ ನೀಡುತ್ತಾಳೆ. ದ್ಯಾಮವ್ವನ ಹೇಳಿಕೆಯಂತೆ ನಲವತ್ತು ವರ್ಷಗಳಿಂದ ನಿಂತ ಜಾತ್ರೆ ಮತ್ತೆ ಪ್ರಾರಂಭವಾಗುತ್ತದೆ. ತೇರು ಕಟ್ಟಿ ಅಕ್ಕ ಶಿರಸಿಯ ಮಾರಿಕಾಂಬೆಯನ್ನು ಜಾತ್ರೆಗೆ ಕರೆಸಿ, ಜಾತ್ರೆ ಪ್ರಾರಂಭ ಮಾಡಲಾಯಿತು. ಈಗ ಜಾತ್ರೆಯು ನಾಲ್ಕು ವರ್ಷಕ್ಕೊಮ್ಮೆ ನಡೆಯುತ್ತದೆ ಎಂಬ ಕಥೆಯನ್ನು ಲಾವಣಿಯು ತಿಳಿಸುತ್ತದೆ.

ಗ್ರಾಮದೇವತೆ ಅಥವಾ ಗಡಿ ದೇವತೆಗಳು ಊರನ್ನು ಕಾಯುವ, ಊರಿನ ಜನರನ್ನು ರಕ್ಷಿಸುವ ಬಹು ಮುಖ್ಯವಾದ ಹೊಣೆಯನ್ನು ಹೊತ್ತಿವೆ ಎಂದು ಜನರು ನಂಬಿಕೊಂಡು ಬಂದಿದ್ದಾರೆ. ಈ ದೇವತೆಗಳು ತಮ್ಮ ಬೇಡಿಕೆಯನ್ನು ಈಡೇರಿಸದಿದ್ದಾಗ, ರೊಚ್ಚಿಗೆದ್ದು ಪ್ಲೇಗು,

ಮಾರಿಯಂತಹ ರೋಗಗಳನ್ನು ಹರಡಿಸಿ ಜನರನ್ನು ಕೊಲ್ಲುವ, ಶಾಂತವಾದಾಗ ಹರಡಿದ ರೋಗಗಳನ್ನು ನಿಯಂತ್ರಿಸುವ ಶಕ್ತಿಯನ್ನು ಹೊಂದಿದವುಗಳೆಂದೆ ಜನ ತಿಳಿದುಕೊಂಡಿದ್ದಾರೆ. ಈ ನಂಬಿಕೆಗಳಿಂದ ಹಾನಗಲ್ಲಿನ ಜನರೇನೂ ಭಿನ್ನರಾಗಿಲ್ಲವೆಂಬುದು ಮೇಲಿನ ಲಾವಣಿಯಿಂದ ತಿಳಿದು ಬರುತ್ತದೆ.

ಈ ಲಾವಣಿಯು ನಲವತ್ತು ವರ್ಷಗಳವರೆಗೆ ಜಾತ್ರೆಯಾಗದೆ ನಿಂತು, ಮತ್ತೆ ಪ್ರಾರಂಭವಾದ ಇತಿಹಾಸವನ್ನು ತಿಳಿಸುತ್ತದೆ. ಅಲ್ಲದೆ ಲಾವಣಿ ತನ್ನ ಒಡಲಲ್ಲಿ ಈ ಕೆಳಗಿನ ಅನೇಕ ಐತಿಹಾಸಿಕ ಸತ್ಯಾಂಶಗಳನ್ನು ಇಟ್ಟುಕೊಂಡಿದೆ. ಗಡಿಮಾರಮ್ಮನಿಂದ ಅಥವಾ ಗ್ರಾಮದೇವತೆ ದ್ಯಾಮವ್ವನಿಂದ ಊರ ಜನರು ಸಾಯಲಿಲ್ಲ. ರೋಗದ ಇನ್ನೊಂದು ರೂಪವನ್ನು ಜನ ದೇವತೆಯೆಂದು ಅಥವಾ ಅವಳ ಕೋಪದ ಜ್ವಾಲೆ ಎಂದು ತಿಳಿದಿದ್ದರು. ಹಾನಗಲ್ಲಿನ ಪ್ಲೇಗು ಎಂಬ ಮಹಾಮಾರಿಯನ್ನು ಈ ದೇವತೆ ಹರಡಲಿಲ್ಲ, ವ್ಯಾಪಾರಕ್ಕೆಂದು ಹೋದ ಮೂರು ಜನ ಸ್ನೇಹಿತರು ಮರಳಿ ಊರಿಗೆ ಬರುವಾಗ ಪ್ಲೇಗನ್ನು ಹೊತ್ತುಕೊಂಡು ಬರುತ್ತಾರೆ. ಮುಂದೆ ಅದು ಹಂತ ಹಂತವಾಗಿ ಇಡೀ ಊರಿಗೆ ಹರಡುತ್ತದೆ. ಸಾವು ನೋವುಗಳನ್ನು ತಪ್ಪಿಸಲಿಕ್ಕೆ ಆಡಳಿತ ವರ್ಗದವರಿಂದಲೂ ಆಗದಿದ್ದಾಗ, ಕೊನೆಯ ಅಸ್ತ್ರವಾಗಿ (ಪ್ಲೇಗ್ ರೋಗದ ಮೂಲ ಆಶ್ರಯ ತಾಣವಾದ ಇಲಿಗಳನ್ನು ಕೊಲ್ಲಲಿಕ್ಕೆ) ಊರಿಗೆ ಬೆಂಕಿ ಹಚ್ಚುತ್ತಾರೆ. ಅದರ ಪ್ರಯುಕ್ತವಾಗಿಯೇ ಕೋಟೆಯಲ್ಲಿರುವ ಹಾನಗಲ್ಲು ಊರು ಸುಟ್ಟು ಹೋಗಿರಲಿಕ್ಕೆ ಸಾಧ್ಯವಿದೆ. ಇದನ್ನೂ ಕೋಟೆಯಲ್ಲಿ ಭೂ ಉತ್ಖನನ ಮಾಡುವುದರ ಮೂಲಕ ಇನ್ನೂ ಖಚಿತಪಡಿಸಬಹುದು.  ಪ್ರಾಯಶಃ ಕೋಟೆಯಲ್ಲಿದ್ದ ಊರು ಸುಟ್ಟ ಬಳಿಕ ಕೋಟೆಯ ಹೊರಗಡೆ ಊರನ್ನು ಕಟ್ಟಿ ವಾಸಿಸಲು ಪ್ರಾರಂಭಿಸಿದರು. ಅದೇ ಇಂದಿನ ಹಾನಗಲ್ಲು ಆಗಿದೆ. ಕೋಟೆಯ ಒಳಗಡೆ ಮೂಲ ಊರು ಸಂಪೂರ್ಣವಾಗಿ ಹಾಳಾಗಿ, ಅದು ಈಗ ಕೃಷಿ ಭೂಮಿಯಾಗಿದೆ. ಆದರೂ ಕೋಟೆಯ ಒಳಗಡೆ ಆ ನಿಟ್ಟಿನ ಅನೇಕ ಕುರುಹುಗಳನ್ನು ಕಾಣಲು ಸಾಧ್ಯವಿದೆ.

ಐತಿಹಾಸಿಕ ದಾಖಲೆಗಳಿಗನುಗುಣವಾಗಿ ೫ನೆಯ ಶತಮಾನದಿಂದಲೇ ಹಾನಗಲ್ಲು ಪ್ರದೇಶ ಪ್ರಸಿದ್ಧಿಗೆ ಬಂದಿತ್ತು. ಅಲ್ಲದೆ ಹಾನಗಲ್ಲಿನ ಈ ಕೋಟೆಯ ಪ್ರಸ್ತಾಪವು ಇತಿಹಾಸದಲ್ಲಿ ೧೧ನೆಯ ಶತಮಾನದ ವೇಳೆಗೆ ದೊರೆಯುತ್ತದೆ. ನಾಲ್ಕು ಸುತ್ತಿನ ಮಣ್ಣಿನ ಕೋಟೆ ಅತ್ಯಂತ ದೊಡ್ಡದು ಮತ್ತು ಪ್ರಸಿದ್ಧಿಯನ್ನು ಪಡೆದಿತ್ತು. ಇಂಥ ಬಲಿಷ್ಠ ಕೋಟೆಯನ್ನು ಗೆಲ್ಲುವುದು ಹೊಯ್ಸಳ ವಿಷ್ಣುವರ್ಧನನಿಗೆ ಹೆಮ್ಮೆಯ ವಿಷಯವಾಗಿತ್ತು.[3] ಈ ರೀತಿಯ ಐತಿಹಾಸಿಕ ದಾಖಲೆಯಿರುವ ಈ ಕೋಟೆಯನ್ನು ಮಹಾಭಾರತದ ಕಾಲದ ವಿರಾಟನ ಕೋಟೆ ಎಂದೇ ಜನ ಕರೆಯುತ್ತಾರೆ. ಹೀಗಾಗಿ ಹಾನಗಲ್ಲು ವಿರಾಟನಗರವಾಗಿತ್ತು (?).

'ಅರ್ಜುನ ಜೋಗಿ ಹಾಡಿನಲ್ಲಿ, ಚದುರಂಗ ಕುಸುಮಾಲೆಯರು ಮದುವೆಯಾದ ನಂತರ ೧೨ ವರ್ಷಗಳಾದರೂ ತಮ್ಮ ಪತಿಯಾದ ಅರ್ಜುನನು ಬರದಿರುವುದನ್ನು (ಗಂಡನ ಸುದ್ದಿ ತಮಗಿಲ್ಲವೆಂದು) ರಾಜನಾದ ತಂದೆಗೆ ತಿಳಿಸುತ್ತಾರೆ. ತಮಗೆ ಪತಿಯಿಲ್ಲದಿರುವುದರಿಂದ ಸಮಾಜದ ನಿಂದನೆಗಳಿಂದ ತಮಗಾಗುವ ವೇದನೆಗಳನ್ನು ತಿಳಿಸಿ, ತಂದೆಯಿಂದ ಪ್ರತ್ಯೇಕವಾಗಿರಲು ಅರಮನೆಯನ್ನು ಕಟ್ಟಿಸಿಕೊಂಡು ಅದರ ಉಪ್ಪರಿಗೆಯ ಮೇಲೆ ನಿಂತು ಈ ರೀತಿ ಡಂಗುರ ಸಾರುತ್ತಾರೆ.

"ಉಪ್ಪರಗಿ ಮೇಲ್ಹತ್ತಿ ಡಂಗುರವ ಸಾರ್‍ಯಾರ

ಅರ್ಜುನನ ಚಿತ್ರ ತದ್ರೂಪ ಹೊಯ್ದವಗ

ಆರೂರುಂಬಳಿ ಕೊಡತೀವ"[4]

ಜಾಣ ಶಿಲ್ಪಿಯೊಬ್ಬ ಅದನ್ನು ಕೇಳಿ ಅರ್ಜುನನ ಚಿತ್ರ ಬಿಡಿಸಲು ಸಿದ್ಧನಾಗುತ್ತಾನೆ. ಅದಕ್ಕಾಗಿ ಅರ್ಜುನನನ್ನು ನೋಡಲು ಹಾನಗಲ್ಲಿಗೆ ಬರುತ್ತಾನೆ.

"ಸೆಲ್ಲೆ ಮುಂಡಾಸ ಸುತ್ತಿ ಬತ್ತಲಗುದುರಿಯ ಹತ್ತಿ

ಒತ್ತರದಿ ಹಾನಗಲ್ಲ ಪಟ್ಟಣಕ | ನಡೆದಾಗ

ಇಳಿಹೊತ್ತಿಗೆ ಊರ ತಲುಪಿದ"[5]

ಹಾನಗಲ್ಲಿಗೆ ಬಂದು ಅರ್ಜುನನನ್ನು ಕಂಡು ಆತನ ಚಿತ್ರವನ್ನು ಬಿಡಿಸಿದ. ಆದರೆ ಇಲ್ಲಿ ಅರ್ಜುನ ೧೨ ವರ್ಷಗಳ ಕಾಲ ಕುಸುಮಾಲೆಯರಿಂದ ಕಣ್ಮರೆಯಾಗಿರುವುದು, ೧೨ ವರ್ಷಗಳ ಕಾಲದ ವನವಾಸವನ್ನು ತಿಳಿಸಿದರೆ, ಶಿಲ್ಪಿಯು ಹಾನಗಲ್ಲಿಗೆ ಬಂದು ಅರ್ಜುನನನ್ನು ಭೇಟಿಯಾಗುವುದು ಅಜ್ಞಾತವಾಸದ ಕೊನೆಯ ದಿನಗಳಲ್ಲಿ ಪಾಂಡವರು ವಿರಾಟನಗರ ಅರಸರ ಆಸ್ಥಾನದಲ್ಲಿದ್ದರೆಂಬುದನ್ನು ಸೂಚಿಸುತ್ತದೆ. ಹೀಗಾಗಿ ಜನಪದ ಕವಿಗೆ ಹಾನಗಲ್ಲು ನಗರ ವಿರಾಟನಗರವೇ ಆಗಿದೆ. ಈ ಮಾತನ್ನು ಸಮರ್ಥಿಸಲು ಅನೇಕ ಐತಿಹ್ಯಗಳುಂಟು.

**ಐತಿಹ್ಯಗಳು**

ಹಾನಗಲ್ಲು ವಿರಾಟನಗರವಾಗಿತ್ತೆಂದು ಅಲ್ಲಿಯ ಜನರು ನಂಬಿದ್ದಾರೆ. ಈ ಅಂಶವನ್ನು ಗಟ್ಟಿಗೊಳಿಸಲು ಭೌತಿಕ ಆಧಾರಗಳನ್ನು ಆಧರಿಸಿ ಕಲ್ಪಿತ ಕಥೆಗಳನ್ನು ಹೆಣೆದು ತಾವು ಹೇಳುತ್ತಿರುವುದು ಸತ್ಯವೆಂದು ನಂಬಿ, ಅದನ್ನೆ ಬಿಂಬಿಸುತ್ತಾರೆ. ಇಂಥವುಗಳನ್ನೇ ನಾವು ಐತಿಹ್ಯಗಳೆಂದು ಕರೆಯುತ್ತೇವೆ. ಐತಿಹ್ಯಗಳು ಪ್ರಾಚೀನವಾದ ಚಾರಿತ್ರಿಕ ಘಟನೆಗಳ ಪಳೆಯುಳಿಕೆಗಳು ಎಂಬಂತೆ ತೋರಿದರೂ, ಅವೆಲ್ಲವೂ ಸತ್ಯಾಂಶಗಳಿಂದ ಕೂಡಿದವುಗಳಲ್ಲ. ಅವು ಚಾರಿತ್ರಿಕ, ಪೌರಾಣಿಕ ಹಾಗೂ ಕಾಲ್ಪನಿಕ ಅಂಶಗಳಿಂದ ಕೂಡಿ ಆಕರ್ಷಕವಾಗಿರುತ್ತವೆ. ಅವುಗಳಲ್ಲಿಯ ಚಾರಿತ್ರಿಕ ಹಾಗೂ ಕಲ್ಪಿತ ಅಂಶಗಳನ್ನು ಸೂಕ್ಷ್ಮವಾಗಿ ಬೇರ್ಪಡಿಸಿ ಚಾರಿತ್ರಿಕ ಸತ್ಯವನ್ನು ಗುರುತಿಸುವುದು ಒಂದಾದರೆ, ನಂಬಿಕೊಂಡಿರುವ ಚಾರಿತ್ರಿಕ, ಪೌರಾಣಿಕ ಹಾಗೂ ಕಾಲ್ಪನಿಕತೆಗಳನ್ನೊಳಗೊಂಡ ಐತಿಹ್ಯಗಳೆ ಸತ್ಯ ಇತಿಹಾಸವೆಂದು ನಂಬಿಕೊಂಡಿರುವದು ಮತ್ತೊಂದಾಗಿದೆ. ಹೀಗಾಗಿ ಮೊದಲನೆಯದು ಶಿಷ್ಟ ಇತಿಹಾಸವಾದರೆ, ಎರಡನೆಯದು ಮೌಖಿಕ ಇತಿಹಾಸವಾಗಿದೆ. ಈ ನಿಟ್ಟಿನಲ್ಲಿ ಮೌಖಿಕ ದಾಖಲೆಗಳಿಗನುಗುಣವಾಗಿ ಜನಪದರಿಗೆ ಹಾನಗಲ್ಲು ಮೂಲತಃ ಮಹಾಭಾರತದ ವಿರಾಟನಗರವೆ ಆಗಿದೆ. ಅದಕ್ಕೆ ಸಂಬಂಧಿಸಿದಂತೆ ಐತಿಹ್ಯಗಳನ್ನು ಹೇಳುವುದುಂಟು.

**೧. ಬನ್ನಿ ಮುಡಿಯುವ ಕಾರ್ಯ**

ಪಾಂಡವರು ಅಜ್ಞಾತವಾಸಕ್ಕಾಗಿ ವಿರಾಟನಗರವನ್ನು ಪ್ರವೇಶಿಸಿದಾಗ, ತಮ್ಮ ಶಸ್ತ್ರಾಸ್ತ್ರಗಳನ್ನು ಮಲ್ಲಿಗಾರ ಗುಡ್ಡದಲ್ಲಿ (ರಾಮೇಶ್ವರ ಗುಡಿಯ ಹತ್ತಿರ) ಬನ್ನಿಯ ಗಿಡದಲ್ಲಿಟ್ಟಿದ್ದರು. ಮುಂದೆ ಅಜ್ಞಾತವಾಸ ಮುಗಿದ ನಂತರ, ವಿಜಯ ದಶಮಿಯ ದಿನ ಬನ್ನಿ ಗಿಡವನ್ನು ಪೂಜಿಸಿ, ಆಯುಧವನ್ನು ತೆಗೆದುಕೊಂಡರಂತೆ. ಅಂದಿನಿಂದ ವಿಜಯದಶಮಿಯಲ್ಲಿ ಊರ ಹೊರಗೆ ಸುಮಾರು ೨ ಕಿ.ಮೀ. ಅಂತರದಲ್ಲಿರುವ ಅದೇ ಬನ್ನಿ ಗಿಡವನ್ನು ಪೂಜಿಸಿ ಬನ್ನಿ ಮುಡಿಯುವ ಕಾರ್ಯಕ್ರಮಕ್ಕೆ ಅಣಿಯಾಗುವ ಪರಿಪಾಠ ಉಳಿದುಕೊಂಡು ಬಂದಿದೆ.

**೨. ಕುಂತಿಯ ದಿಬ್ಬ**

ಹಾನಗಲ್ಲಿನ ಪೂರ್ವಕ್ಕೆ ಅಚ್ಚಕೆರೆಯ ಹತ್ತಿರ ಕುಂತಿಯ ದಿಬ್ಬವೆಂಬ ಹೆಸರಿನ ದಿನ್ನೆಯುಂಟು. ಈ ದಿಬ್ಬವು ಶಂಖಾಕೃತಿಯಿಂದ ಕೂಡಿದೆ. ಇಲ್ಲಿ ಕುಂತಿಯು ಭತ್ತ ಕುಟ್ಟಿ ಅಕ್ಕಿಯನ್ನು ಕೇರಿ ತೆಗೆದ ಭತ್ತದ ಗೊಳಲಿ (ಖೊಬ್ಬಟ್ಟ) ದಿಬ್ಬವಾಗಿದೆ. ಭೀಮ ಹೆಚ್ಚಿನ ಪ್ರಮಾಣದಲ್ಲಿ ಆಹಾರವನ್ನು ಸೇವಿಸುತ್ತಿದ್ದುದರಿಂದ ಕುಂತಿಯು ಅನಿವಾರ್ಯವಾಗಿ ಹೆಚ್ಚು ಭತ್ತವನ್ನು ಕುಟ್ಟಬೇಕಾಗುತ್ತಿತ್ತು. ಆದ್ದರಿಂದಲೇ ದಿಬ್ಬ ದೊಡ್ಡದಾಗಿದೆ. ನಂತರದಲ್ಲಿ ಸುಟ್ಟ ಗೊಳಲಿಯ ಮೇಲೆ ಮಣ್ಣು ಆವರಿಸಿಕೊಂಡಿದೆ. ಆ ದಿಬ್ಬವನ್ನು ಇಂದಿಗೂ ಕುಂತಿಯ ದಿಬ್ಬವೆಂದು ಕರೆಯುತ್ತಾರೆ.

**೩. ಕೀಚಕನ ಗರಡಿ ಮನೆ**

ಹಾನಗಲ್ಲು ಕೋಟೆಯೊಳಗೆ ಉತ್ತರಿ ಮಂಟಪವೊಂದಿದೆ. ಅದರ ಹಿಂಬದಿಯಲ್ಲಿರುವ ಹಾಳು ದೇಗುಲಕ್ಕೆ ಭೀಮಸೇನನ ಗುಡಿ ಎಂದು ಕರೆಯುತ್ತಾರೆ. ಪೂರ್ವದಲ್ಲಿ ಅದು ಕೀಚಕನ ಗರಡಿಯ ಮನೆಯಾಗಿತ್ತು. ಕೀಚಕ ದ್ರೌಪದಿಯನ್ನು ಇಚ್ಛೆಪಟ್ಟು ಭೀಮನನ್ನು

ಎದುರಿಸಬೇಕಾಯಿತು. ಕೀಚಕನ ಗರಡಿಮನೆಯಲ್ಲಿ ಭೀಮ ಮತ್ತು ಕೀಚಕನ ಮಧ್ಯ ಹೋರಾಟವಾಯಿತು. ನೂರಾನೆಯ ಬಲವುಳ್ಳ ಕೀಚಕನನ್ನು ಭೀಮ ಕೊಂದು ಗರಡಿ ಮನೆಯನ್ನು ಸುಟ್ಟನು. ಮುಂದೆ ಅದೆ ಸ್ಥಳದಲ್ಲಿ ಭೀಮನ ಗುಡಿಯನ್ನು ಕಟ್ಟಿಸಲಾಯಿತು. ಅದು ಇಂದು ಭೀಮನ ಗುಡಿ ಎಂದು ಕರೆಸಿಕೊಳ್ಳುತ್ತಿದೆ.

**೪. ಧರ್ಮಾನದಿ**

ವಿರಾಟನಗರದಲ್ಲಿದ್ದ ಧರ್ಮರಾಜನು ಪ್ರತಿನಿತ್ಯ ಊರಿನ ಪಕ್ಕದಲ್ಲಿ ಹರಿಯುತ್ತಿದ್ದ ನದಿಗೆ ಹೋಗಿ ಸ್ನಾನ ಮಾಡಿ ಬರುತ್ತಿದ್ದುದರಿಂದ ಆ ನದಿಗೆ ಧರ್ಮಾನದಿ ಎಂದು ಹೆಸರು ಬಂದಿತು. ಇನ್ನೊಂದು ಹೇಳಿಕೆಯ ಪ್ರಕಾರ, ಧರ್ಮರಾಜನು ಪ್ರತಿದಿನ ನದಿ ದಂಡೆಯ ಆಚೆಗಿರುವ ದೇವಸ್ಥಾನಕ್ಕೆ ದೋಣಿ ಮೂಲಕ ಹೋಗಿ ಪೂಜೆ ಸಲ್ಲಿಸಿ ಬರುತ್ತಿದ್ದ. ಒಮ್ಮೆ ಭೀಮನು ತನ್ನ ಅಣ್ಣ ಪ್ರತಿದಿನ ಎಲ್ಲಿಗೆ ಹೋಗುತ್ತಿರುವನೆಂದು ತಿಳಿಯಲು ಆತನನ್ನು ಹಿಂಬಾಲಿಸಿದ. ಆತ ದೋಣಿಯಲ್ಲಿ ಹೋಗುತ್ತಿರುವುದನ್ನು ಕಂಡು ಭಿಮ, 'ಧರ್ಮಣ್ಣ ಹೋದ ನದಿಯೊಳಗೆ > ಧರ್ಮಣ್ಣ ಹೋದ ನದಿ - ಎಂದು ಉದ್ಗಾರ ಮಾಡಿದನು. ಮುಂದೆ ಅದೇ ಧರ್ಮಣ್ಣ ನದಿ > 'ಧರ್ಮಾನದಿ'ಯಾಯಿತು.

**೫. ವಿರಾಟನಗರದ ಗೋಗ್ರಹಣ**

ವಿರಾಟರಾಜನ ಆಸ್ಥಾನದಲ್ಲಿ ನಡೆದ ಗೋಗ್ರಹಣ ಅಣುಕುರೂಪವಾಗಿ ಇಂದಿಗೂ ದೀಪಾವಳಿಯಲ್ಲಿ ದನಗಳನ್ನು ಶೃಂಗರಿಸಿ ಬೆದರಿಸುವ ಕಾರ್ಯವನ್ನು ಮಾಡುತ್ತಾರೆ.

**೬. ಪಾಂಡವರ ಮೂರ್ತಿಗಳು**

ವಿಭಿನ್ನ ವೇಷಗಳಲ್ಲಿ ಪಾಂಡವರು ಬಂದು ವಿರಾಟನಗರದಲ್ಲಿ ವಾಸ್ತವ್ಯ ಹೂಡಿದರು. ಅಜ್ಞಾತವಾಸ ಮುಗಿಸಿ ತಮ್ಮ ನಿಜರೂಪ ತೋರಿ ತಾವು ಪಾಂಡವರೆಂದು ತೋರಿದಾಗ, ವಿರಾಟ ಅರಸ ತಾನು ಗೊತ್ತಾಗದೆ ಪಾಂಡವರನ್ನು ದುಡಿಸಿಕೊಂಡೆನೆಂದು ದುಃಖಿಸುತ್ತಾನೆ. ಆ ಪಾಪಪ್ರಜ್ಞೆಯ ಮುಕ್ತಿಗಾಗಿ ಜಕಣಾಚಾರ್ಯರಿಂದ ಅವರ ಮೂರ್ತಿಗಳನ್ನು ಕೆತ್ತಿಸಿ ಪೂಜಿಸುತ್ತಿದ್ದನಂತೆ. ಮುಂದೆ ಯವನರ ದಾಳಿಯಿಂದ ಆ ಮೂರ್ತಿಗಳು ಛಿದ್ರಗೊಂಡು ತಾರಕೇಶ್ವರ ದೇವಸ್ಥಾನದಲ್ಲಿ ಬಿದ್ದಿವೆ.

**೭. ಕುರಬಾವಿ**

ಗುರುಶಾಂತಯ್ಯ ಶಾಂತಪೂರಮಠ ಎಂಬುವರ ಹೊಲದಲ್ಲಿರುವ ಬೃಹತ್ ಬಾವಿಯನ್ನು ಪಾಂಡವರು ಕಟ್ಟಿಸಿದ್ದಾರೆ. ಮೂಲತಃ ಪಾಂಡವರು ಕುರುವಂಶದವರಾಗಿರುವದರಿಂದ ಅದಕ್ಕೆ 'ಕುರುಬಾವಿ' ಎಂಬ ಹೆಸರಿನಿಂದ ಕರೆಯುತ್ತಾರೆ.

**೮. ಬಂಕಾಪುರದಲ್ಲಿ ಬಕಾಸುರನನ್ನು ಕೊಂದದ್ದು**

ಬಂಕಾಪುರದಲ್ಲಿ ಬಕಾಸುರನಿದ್ದನು. ಆತ ಜನರನ್ನು ಪೀಡಿಸಿ ಹಿಡಿದು ತಿನ್ನುತ್ತಿದ್ದ. ಈ ತೊಂದರೆಯಿಂದ ತಪ್ಪಿಸಿಕೊಳ್ಳಲು ಆತನಿಗೆ ಪ್ರತಿದಿನ ಬಂಡಿ ಅನ್ನ ಕಳುಹಿಸಲಾಗುತ್ತಿತ್ತು. ಆದರೂ ಆತನ ಹಾವಳಿ ತಪ್ಪಿರಲಿಲ್ಲ. ಒಮ್ಮೆ ಜನರೆಲ್ಲ ಕೂಡಿ ಕುಂದೂರಿನ ಕುಂದಲಮ್ಮನಿಗೆ ಈ ಆಪತ್ತಿನಿಂದ ಪಾರಾಗಲು ಬೇಡಿಕೊಂಡರು. ಕುಂದಲಮ್ಮ ದೇವತೆ ಭೀಮನ ನೇತೃತ್ವದಲ್ಲಿ ಹೋಗಿ ಬಕಾಸುರನನ್ನು ಕೊಲ್ಲಲು ಸಾಧ್ಯವೆಂದು ತಿಳಿಸುತ್ತಾಳೆ. ಅದರಂತೆ ಜನ ಭೀಮನ ನೇತೃತ್ವದಲ್ಲಿ ಹೋಗಿ ಬಂಕಾಪುರದಲ್ಲಿದ್ದ ಬಕಾಸುರನನ್ನು ಕೊಂದರಂತೆ. ಆದ್ದರಿಂದಲೇ ಬಕಾಸುರನಪುರ 'ಬಂಕಾಪುರ' ವಾಯಿತಂತೆ.

**೯. ತುರಬೇಗುಡ್ಡದಲ್ಲಿ ದನಗಳ ಹೆಜ್ಜೆಗುರುತಗಳು**

ವಿರಾಟನಗರದಲ್ಲಿ ಅಜ್ಞಾತವಾಸ ಕಳೆಯುತ್ತಿರುವಾಗ, ಕಿರಿಯರಾದ ನಕುಲ-ಸಹದೇವರು ದನಗಳನ್ನು ಕಾಯುವ ವೃತ್ತಿ ಕೈಕೊಂಡಿದ್ದರು. ದನಗಳನ್ನು ಮೇಯಿಸಲಿಕ್ಕೆ ತುರಬೇಗುಡ್ಡಕ್ಕೆ ಹೋಗುತ್ತಿದ್ದರು. ಆ ದನಗಳ, ಆಡುಗಳ ಹೆಜ್ಜೆ ಗುರುತುಗಳು ಅಲ್ಲಿಯ ಶಿವಲಿಂಗ ಮಠದ

ಹತ್ತಿರ ಕಲ್ಲುಗಳ ಮೇಲೆ ಮೂಡಿವೆ. ಆ ಹೆಜ್ಜೆಗುರುತುಗಳು ಈಗಲೂ ನೋಡಲು ಸಿಗುತ್ತವೆ. ಅವೆಲ್ಲ ನಕುಲ-ಸಹದೇವರು ದನಗಳನ್ನು ಮೇಯಿಸಲಿಕ್ಕೆ ಬಂದಾಗ ಮೂಡಿದವುಗಳಾಗಿವೆ. ತುರು ಎಂದರೆ ಆಕಳು. ಆಕಳುಗಳನ್ನು ಮೇಯಿಸುವ ಗುಡ್ಡವೆ ತುರುಬೇಗುಡ್ಡವಾಗಿದೆ.

**೧೦. ಸ್ಥಳನಾಮ ನಿಷ್ಪತ್ತಿಗಳು**

ಹಾನಗಲ್ಲಿನ ದಕ್ಷಿಣಕ್ಕಿರುವ ನೆಲ್ಲಿಕೊಪ್ಪ ಗ್ರಾಮದಲ್ಲಿ ವಿರಾಟನಗರದ ಅರಸರು ಹಾಲು - ಮೊಸರುಗಳನ್ನು ನೆಲ್ಲಿಗೆಯಲ್ಲಿ (ನೆಲವುಗಳಲ್ಲಿ) ಸಂರಕ್ಷಿಸಿಡುತ್ತಿದ್ದರು. ನೆಲ್ಲಿಕೊಪ್ಪದ ದಕ್ಷಿಣಕ್ಕಿರುವ ದಡ್ಡಿಕೊಪ್ಪದಲ್ಲಿ ದನಗಳನ್ನು ಕಟ್ಟುತ್ತಿದ್ದರು. ದಡ್ಡಿಕೊಪ್ಪದ ದಕ್ಷಿಣಕ್ಕಿರುವ ತುರುಬೇಗುಡ್ಡದಲ್ಲಿ ದನಗಳನ್ನು ಮೇಯಿಸುತ್ತಿದ್ದರು. ತುರುಬೇಗುಡ್ಡದ ಆಗ್ನೇಯಕ್ಕಿರುವ ಹುಲಕಡ್ಡಿಯು ದನಗಳಿಗೆ ಹುಲ್ಲನ್ನು ಬೆಳೆಯುವ ಸ್ಥಳವಾಗಿತ್ತು. ಮುಂದೆ ಅವೆಲ್ಲವು ಕ್ರಮವಾಗಿ ನೆಲ್ಲಿಕೊಪ್ಪ, ದಡ್ಡಿಕೊಪ್ಪ, ತುರುಬೇಗುಡ್ಡ, ಹುಲಕಡ್ಡಿ ಗ್ರಾಮಗಳಾಗಿ ಹೆಸರನ್ನು ಹೊಂದಿವೆ.

ಹೀಗೆ ವಿರಾಟನಗರ ರಾಜ್ಯದ ಕಲ್ಪನೆಯನ್ನು ಗಟ್ಟಿಗೊಳಿಸಲು ಇನ್ನೂ ಇಂತಹ ಅನೇಕ ಐತಿಹ್ಯಗಳುಂಟು. ಈ ಐತಿಹ್ಯಗಳು ನಮಗೆ ಕಲ್ಪಿತವಾಗಿ, ಕಂಡರೂ ಹೇಳುವ ನಿರೂಪಕನಿಗೆ ಅವು ನಿಜವಾಗಿರುತ್ತವೆ. ಏಕೆಂದರೆ ನಿರೂಪಿಸುವವನು ತಾನು ನಿಜವನ್ನೆ ಹೇಳುತ್ತಿದ್ದೇನೆಂದು ನಂಬಿರುತ್ತಾನೆ. ಹಾಗಿರುವುದರಿಂದ ಆತನ ಪ್ರಕಾರ ಅವೆಲ್ಲ ಹಿಂದೆ ನಡೆದ ಘಟನೆಗಳೆ ಆಗಿರುತ್ತವೆ. ಹಾಗೆಂದುಕೊಂಡೆ ಆತ ತನ್ನ ಬದುಕನ್ನು ರೂಪಿಸಿಕೊಂಡು ಬದುಕಿರುತ್ತಾನೆ. ಭಾವನೆಗಳು ಮನುಷ್ಯನನ್ನು ರೂಪಿಸುತ್ತವೆ. ಭಾವನೆಗಳಿಗನುಗುಣವಾಗಿ ವ್ಯಕ್ತಿಯ ಸುತ್ತಲಿನ ಪರಿಸರವು ಅದಕ್ಕೆ ತಕ್ಕಂತೆ ನಿರ್ಮಾಣವಾಗುತ್ತದೆ. ಹೀಗಾಗಿ ಹಾನಗಲ್ಲಿನ ಜನ ತಾವು ವಿರಾಟನಗರದವರೆಂಬ ಭಾವನೆಗಳನ್ನಿಟ್ಟುಕೊಂಡಿರುವುದರಿಂದಲೇ ಪ್ರಾಯಶಃ ಹಾನಗಲ್ಲಿನ ಪರಿಸರದಲ್ಲಿ ಬಯಲಾಟಗಳ ಪ್ರಕಾರಗಳಲ್ಲಿ ದೊಡ್ಡಾಟ ಬಹುದೊಡ್ಡ ಪ್ರಚಾರವನ್ನು ಗಿಟ್ಟಿಸಿಕೊಂಡಿತು. ತಾವು ವಿರಾಟನಗರದವರೆಂಬ ಭಾವನೆಯಿಂದ ವೀರರ ಪ್ರಧಾನವಾದ ಆಟಗಳನ್ನು ಪ್ರೋತ್ಸಾಹಿಸಲು ಸಾಧ್ಯ.

ಪಾಂಡವರು ಅಜ್ಞಾತವಾಸದಲ್ಲಿ ವಿರಾಟರಾಜನ ಮತ್ಸ್ಯಪುರವೆಂಬ ರಾಜಧಾನಿಯಲ್ಲಿ ವಾಸಿಸಿದ್ದರೆಂದು ಮಹಾಭಾರತ ಹೇಳುತ್ತದೆ. ಮತ್ಸ್ಯಪುರವು ಹಾನಗಲ್ಲೆಂದು ಜನರ ಗ್ರಹಿಕೆಯಾಗಿದೆ. ಪಾಂಡವರು ಅಜ್ಞಾತವಾಸ ಮುಗಿಸಿದ ನಂತರ ಉಪಪ್ಲಾವ್ಯ ಎಂಬ ಗ್ರಾಮದಲ್ಲಿ ತಮ್ಮ ರಾಜ್ಯ ಸ್ಥಾಪಿಸಿದರೆಂದು ಮಹಾಭಾರತದಲ್ಲಿ ಉಲ್ಲೇಖವಿದೆ. ಅದು ಈಗ ತುಂಗಭದ್ರಾ ನದಿದಂಡೆಯ ಮೇಲೆ ಸಣ್ಣದೊಂದು ಹಳ್ಳಿಯಾಗಿದೆ. ಇದರ ಬಗ್ಗೆ ಆನೆಗುಂದಿಯಲ್ಲಿ ಪ್ರಮಾಣಗಳು ದೊರೆಯುತ್ತವೆ. ಆನೆಗುಂದಿಗೆ 'ದಕ್ಷಿಣದ ಹಸ್ತಿನಾವತಿ' ಎಂದು ಲಿಪಿಗಳು ಹೇಳುತ್ತವೆ. ಆನೆಗುಂದಿ ಎಂಬ ಹೆಸರಾದರೂ ಹಸ್ತಿನಾವತಿ ಎಂಬ ಹೆಸರಿನ ಕನ್ನಡ ಭಾಷಾಂತರವೇ ಆಗಿರುತ್ತದೆ. ಆನೆಗುಂದಿಯಲ್ಲಿ ಪಾಂಡವ ವಂಶದ ಅರಸರು ಬಹುಕಾಲ ಆಳಿದರೆಂದು ತಿಳಿಸುತ್ತಾರೆ. ಆನೆಗುಂದಿ, ಮಧುರೆ, ತಿರುವಕೊಂಡ ಮುಂತಾದ ಕಡೆಗಳಲ್ಲಿ ಆಳಿದ ಅರಸರು ಪಾಂಡವರ ವಂಶದವರೆಂದು ಅವರ ವಂಶಾವಳಿಗಳು ಹೇಳುತ್ತವೆ. ಅಲ್ಲದೆ ವಿರಾಟನ ರಾಜ್ಯಕ್ಕೆ ತ್ರಿಗರ್ತ ದೇಶದ ಸುಶರ್ಮನ ರಾಜ್ಯವು ಹೊಂದಿತ್ತೆಂದು ವಿರಾಟಪರ್ವದಲ್ಲಿ ಉಲ್ಲೇಖವಿದೆ. 'ತ್ರಿಗರ್ತ' ಎಂದರೆ ಮೂರು ತಗ್ಗುಗಳ ನಡುವಿನ ಸೀಮೆಯೆಂಬ ಅರ್ಥವಿದೆ. ಮೈಸೂರ ರಾಜ್ಯದ ಪೂರ್ವ, ಪಶ್ಚಿಮ, ದಕ್ಷಿಣ ಈ ಮೂರು ದಿಕ್ಕುಗಳಲ್ಲಿ ಪೂರ್ವಘಟ್ಟ, ಪಶ್ಚಿಮಘಟ್ಟ (ಸಹ್ಯಾದ್ರಿ), ದಕ್ಷಿಣಘಟ್ಟಗಳಲ್ಲಿ (ನೀಲಗಿರಿ) ಮೂರು ಪರ್ವತಗಳ ನಡುವೆ ತಗ್ಗುನೆಲವಿರುವ ಕಾರಣ ಮೈಸೂರಿನ ಸೀಮೆಯೇ ತ್ರಿಗರ್ತ ಪ್ರದೇಶವಾಗುತ್ತದೆಂದು ಊಹಿಸಬಹುದು. ಇನ್ನು 'ಭಾಗವತ ಪುರಾಣ'ದಲ್ಲಿ ಬಲರಾಮನು ತೀರ್ಥಯಾತ್ರೆ ಮಾಡುವಾಗ, ರಾಮೇಶ್ವರದಿಂದ ತ್ರಿಗರ್ತ ದೇಶದೊಳಗೆ ಹಾದು ಗೋಕರ್ಣಕ್ಕೆ ಹೋದನೆಂಬ ಉಲ್ಲೇಖವಿದೆ. ಈ ಕಾರಣಗಳಿಂದ ಮೈಸೂರು ಸೀಮೆ ತ್ರಿಗರ್ತ ದೇಶವೆಂತಲೂ ಆನೆಗುಂದಿ ಉಪಪ್ಲಾವ್ಯವೆಂತಲೂ, ಹಾನಗಲ್ಲು ಮತ್ಸ್ಯಪುರವೆಂತಲೂ ಅನುಮಾನ ಬರುತ್ತದೆ.[6] ಅಲ್ಲದೆ ಪಾಂಡವರು ತಮ್ಮ ೧೨ ವರ್ಷದ ವನವಾಸವನ್ನು ಕಳೆದು ಒಂದು ವರ್ಷದ ಅಜ್ಞಾತವಾಸಕ್ಕೆ ಹಾನಗಲ್ಲಿಗೆ ಬಂದಿದ್ದರೆಂದು ಮೌಖಿಕ ಆಕರಗಳಾದ ಕಾವ್ಯ, ಐತಿಹ್ಯಗಳು ತಿಳಿಸುತ್ತವೆ. ಇವೆಲ್ಲವುಗಳನ್ನು ಸಮರ್ಥಿಸಲು ೧೧ನೆಆರ ಶಾಸನವೊಂದರಲ್ಲಿ 'ಬಿಣಚೂರು ಗ್ರಾಮಂ ವಿರಾಟನಗರಿ ಪಂಚಶತಾಂತರ್ಗತ'[7] ಎಂದು ಉಲ್ಲೇಖಿಸಿರುವುದು ಹಾನಗಲ್ಲು ವಿರಾಟನಗರವಾಗಿತ್ತು ಎಂಬುದನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ.

ಹಾನಗಲ್ಲು ವಿರಾಟನಗರವಾಗಿತ್ತೆಂದು ಇಂದಿಗೂ ಜನಪದರು ನಂಬಿಕೊಂಡು ಬಂದಿದ್ದಾರೆ. ಇದಕ್ಕೆ ಅವರು ಹೇಳುವ ಮೌಖಿಕ ಸಾಹಿತ್ಯವೇ ಆಕರವಾಗಿದೆ. ಇದು ಅವರ ಇತಿಹಾಸವೂ ಆಗಿದೆ. ಆದರೆ ನಿಜ ಚರಿತ್ರೆಯೆ ಬೇರೆ. ಮೂಲಭೂತವಾಗಿ ಜನಪದರು ಹಾನಗಲ್ಲು ವಿರಾಟನಗರವೆಂದು ನಿರೂಪಿಸಲು ಹೇಳುವ ಅನೇಕ ಕುರುಹುಗಳು ನಂಬಲರ್ಹವಾದವುಗಳಾಗಿವೆ. ಈಗಾಗಲೆ ಮೇಲೆ ಉಲ್ಲೇಖಿಸಿರುವ 'ಬನ್ನಿ ಮುಡಿಯುವ ಕಾರ್ಯಕ್ರಮ' ಊರು ಹೊರಗಿನ ಬನ್ನಿಗಿಡದಿಂದಲೇ ಸಾಮಾನ್ಯವಾಗಿ ಎಲ್ಲಾ ಊರುಗಳಲ್ಲಿ ನಡೆಯುವಂತೆ, ಈ ಕಾರ್ಯಕ್ರಮ ಅಥವಾ ಈ ಗಿಡದಿಂದಲೇ ಹಾನಗಲ್ಲಿನ ಕದಂಬರು ಬನ್ನಿ ಮುಡಿಯುವ ಕಾರ್ಯಕ್ರಮ ಪ್ರಾರಂಭಿಸುತ್ತಿರಬಹುದು. ಅದೆ ಕಾರ್ಯವನ್ನು ಇಲ್ಲಿ ಪಾಂಡವರ ಘಟನೆಗೆ ಆರೋಪಿಸುತ್ತಿದ್ದಾರೆ.

'ಕುಂತಿಯ ದಿಬ್ಬ' ಐತಿಹ್ಯದಲ್ಲಿ ಕುಂತಿ ಅಜ್ಞಾತವಾಸದಲ್ಲಿದ್ದ ಪಾಂಡವರ ಊಟಕ್ಕಾಗಿ ಭತ್ತಕುಟ್ಟಿ ತೆಗೆದ ಗೊಳಲಿಯ ದಿಬ್ಬ ಎನ್ನಲಾಗುತ್ತದೆ. ವಾಸ್ತವಿಕವಾಗಿ ಕುಂತಿ ಪಾಂಡವರ ಜೊತೆ ವನವಾಸಕ್ಕೆ ಬಂದಿರಲಿಲ್ಲ. ಹೀಗಾಗಿ ಇದು ಬರಿ ಊಹೆ. ಸತ್ಯ ಶೋಧನೆಯ ನೆಲೆಯಿಂದ ಈ ಘಟನೆಯನ್ನು ವೀಕ್ಷಿಸಿದಾಗ, ಅದು ಹಾನಗಲ್ಲು ಕದಂಬ ಅರಸರ ಮಣ್ಣಿನ ಕೋಟೆಗೋಡೆಯ ಅಳಿದುಳಿದ ಭಾಗ. ಪ್ರಾಯಶಃ ಕೋಟೆಗೋಡೆಯ ಕಾವಲು ಬುರುಜು, (ರಕ್ಷಣಾ ಗೋಪುರ) ಆಗಿರುವ ಸಾಧ್ಯತೆ ಹೆಚ್ಚಾಗಿದೆ. ಹಾಗಿರುವುದರಿಂದಲೇ ಕುಸಿದ ಬುರುಜು ದಿಬ್ಬವಾಗಿ ಕಾಣುತ್ತದೆ. ಬುರುಜಿನ ಒಳಗೆ ಸುಟ್ಟ ಇಟ್ಟಿಗೆಗಳನ್ನು ಬಳಸಿ ಗೋಡೆ ಕಟ್ಟಿರುವುದರಿಂದ ಜನ ಐತಿಹ್ಯದಲ್ಲಿ ಗೊಳಲಿಯನ್ನು ಸುಟ್ಟು ಮೇಲೆ ಮಣ್ಣು ಹಾಕಿದ್ದಾರೆ ಎಂದು ಹೇಳುತ್ತಾರೆ. (ಒಳಗೆ ಸುಟ್ಟ ಇಟ್ಟಿಗೆಗಳು ಈಗಲೂ ದೊರೆಯುತ್ತವೆ) ಭತ್ತ, ಗೊಳಲಿಯ ಬೃಹತ್ ಗುಂಪಿ ಎಂಬ ಶಬ್ದಗಳು ಹಾನಗಲ್ಲು ಪ್ರದೇಶ ಭತ್ತದ ಖಣಜ ನಾಡಾಗಿರಬಹುದೆಂಬುದನ್ನು ನಿರೂಪಿಸುತ್ತದೆ. ಕೀಚಕನ ಗರಡಿಮನೆ ಇತ್ತು ಎಂದು ತೋರುವ ಐತಿಹ್ಯ ಮತ್ತು 'ಧರ್ಮಾನದಿ' ಹೆಸರಿನ ನಿಷ್ಪತ್ತಿ ಐತಿಹ್ಯಗಳು ಇವು ಊಹೆಯಿಂದ ಕೂಡಿದವುಗಳು. 'ಪಾಂಡವರ ಮೂರ್ತಿಗಳನ್ನು ಜಕಣಾಚಾರ್ಯ ಕೆತ್ತಿದನೆಂದು' ತಿಳಿಸುವ ಐತಿಹ್ಯದಲ್ಲಿ ವಿರಾಟನಗರ ಅರಸನ ಕಾಲಕ್ಕೂ ಮತ್ತು ಜಕಣಾಚಾರ್ಯನಿದ್ದನೆಂಬ ಕಾಲಕ್ಕೂ ಸಾಕಷ್ಟು ಅಂತರವಿದೆಯೆಂಬುದನ್ನು ಗಮನಿಸಬೇಕು. ಅಷ್ಟಾಗಿ ಅಲ್ಲಿರುವ ಮೂರ್ತಿಗಳು ದ್ವಾರಪಾಲಕ ಶಿಲ್ಪಗಳಾಗಿವೆ. ಕದಂಬರ ಕಾಲದಲ್ಲಿ ನಿರ್ಮಾಣವಾದ ಈ ದೇವಸ್ಥಾನ, ಕಲ್ಯಾಣದ ಚಾಲುಕ್ಯರ ಮತ್ತು ಹೊಯ್ಸಳರ ದೇವಸ್ಥಾನಗಳ ಅನೇಕ ಲಕ್ಷಣಗಳನ್ನು ಅಳವಡಿಸಿಕೊಂಡಿದೆ. ಹೀಗಾಗಿ ದೇವಾಲಯವನ್ನು ಹಾಗೂ ಅಲ್ಲಿಯ ಶಿಲ್ಪವನ್ನು ವಿರಾಟನಗರ ಸಾಮ್ರಾಜ್ಯದ ಕಾಲಘಟ್ಟಕ್ಕೆ ಒಯ್ಯಲಾಗದು. ಪಾಂಡವರು ಮೂಲತಃ ಕುರುವಂಶದವರು. ಅವರು ಕಟ್ಟಿಸಿದ ಬಾವಿ 'ಕುರುಬಾವಿ' ಎಂಬ ಐತಿಹ್ಯದ ವಾಸ್ತವಿಕತೆಯು, ಅದನ್ನು ಮೂಲತಃ ಕುರುಬ ಜನಾಂಗದವರು ಕಟ್ಟಿಸಿಕೊಂಡಿರುವುದಕ್ಕೊ ಅಥವಾ ಕುರುಬ ಜನಾಂಗದವರ ಬಳಕೆಗಾಗಿ ಕಟ್ಟಿಸಿದ ನಿಮಿತ್ತಕ್ಕೊ 'ಕುರುಬರಬಾವಿ' > 'ಕುರುಬಾವಿ'ಯಾಗಿದೆ. ಇಂದಿಗೂ ಬಾವಿಯ ಪಕ್ಕದಲ್ಲಿಯೇ ಕುರುಬ ಜನಾಂಗದವರ ಓಣಿ ಇರುವುದನ್ನು ಗಮನಿಸಬಹುದು.

ದೀಪಾಳಿಯಲ್ಲಿ ದನ ಬೆದರಿಸುವ ಕಾರ್ಯವನ್ನು 'ವಿರಾಟನಗರದ ಗೋಗ್ರಹಣ' ಪ್ರಸಂಗಕ್ಕೆ ತಳಕು ಹಾಕಲಾಗುತ್ತದೆ. ವಿರಾಟನಗರದಲ್ಲಿ ನಡೆದದ್ದು ಗೋಗ್ರಹಣವಾದರೆ, ದನ ಬೆದರಿಸುವ ಕಾರ್ಯ ಜನಪದರ ಆಚರಣೆಯಾಗಿದೆ. ರೈತ ದೀಪಾವಳಿಯ ನಂತರ ಬಿತ್ತನೆ ಕಾರ್ಯಗಳಿಗೆ ಅಣಿಯಾಗಬೇಕಾಗುತ್ತದೆ. ಅದಕ್ಕಾಗಿ ತನ್ನ ಎತ್ತುಗಳನ್ನು ಸಿದ್ಧಗೊಳಿಸಿ, ಪರೀಕ್ಷಿಸಿ ನೋಡುವ ಕ್ರಮ, ಆಚರಣೆಯ ಭಾಗವಾಗಿ ಇಂದು ಮನರಂಜನೆಯ ಆಟವಾಗಿದೆ. ಮನರಂಜನೆಯ ಭಾಗವಾದಾಗ, ಈ ಆಟವನ್ನು ಬೇರೆ ಬೇರೆ ಸಮಯದಲ್ಲಿ ರೂಢಿಗೊಳಿಸಿಕೊಂಡು ಆನಂದಿಸುವ ಪರಿಪಾಠ ಪ್ರಾರಂಭವಾಗಿರಬಹುದು. ದೀಪಾವಳಿಯಲ್ಲಿ ಗೌಳಿಗರು ತಮ್ಮ ಎಮ್ಮೆಗಳನ್ನು ಶೃಂಗರಿಸಿ ಮನೆಯಿಂದ ಕಂಬಳಿಯನ್ನು ಹಿಡಿದು ಕೇಕೆ ಹಾಕುತ್ತಾ ಓಡುತ್ತಿದ್ದರೆ, ಅವರನ್ನು ಎಮ್ಮೆಗಳು ಹಿಂಬಾಲಿಸುತ್ತವೆ. ಪ್ರಾಯಶಃ ಇದು ಕಾಡು ಪ್ರಾಣಿಗಳಿಂದ ತಮ್ಮ ಪ್ರಾಣಿಗಳನ್ನು ರಕ್ಷಿಸಿಕೊಳ್ಳಲು ಅವುಗಳಿಗೆ ತರಬೇತಿ ಕೊಡುವ ಕ್ರಮವಾಗಿದೆ. ಹೀಗಾಗಿ ಇವು ಗೋಗ್ರಹಣ ಕಥೆ ಹೇಳುವ ವಿರಾಟನಗರಕ್ಕೆ ಸಂಬಂಧಿಸಿದ್ದವುಗಳಲ್ಲ. ಇನ್ನೂ 'ಸ್ಥಳನಾಮಗಳ ನಿಷ್ಪತ್ತಿ'ಯನ್ನು ವಿಶ್ಲೇಷಿಸುವುದರ ಮೂಲಕ ವಿರಾಟನಗರಕ್ಕೆ ತಳಕು ಹಾಕುವ ಜನಪದ ಕ್ರಮ ಸ್ವಾರಸ್ಯಯುತವಾದದ್ದು. ಆದರೆ ಇಲ್ಲಿ ವಿಶ್ಲೇಷಿಸಲ್ಪಟ್ಟ ಸ್ಥಳನಾಮಗಳೆಲ್ಲ ಪಾಮರ ನಿಷ್ಪತ್ತಿಗಳಾಗಿ, ಅವುಗಳ ನಿಜ ನಿಷ್ಪತ್ತಿ ಇವುಗಳಿಗಿಂತ ಭಿನ್ನವಾಗಿದೆ.

ಮೈಸೂರು ರಾಜ್ಯವನ್ನು ತ್ರಿಗರ್ತವೆಂದು ಕರೆದಿರುವದು ಆನೆಗುಂದಿ, ಮಧುರೆ, ತಿರುವಕೊಂಡ ಮುಂತಾದ ಕಡೆಗಳಲ್ಲಿ ಆಳಿದ ಅರಸರು ಪಾಂಡವ ವಂಶದವರೆಂದು ಅವರ ವಂಶಾವಳಿ ತಿಳಿಸುತ್ತವೆಂದರೂ, ಊರು ಹಾಗೂ ಅರಸರು ತಮ್ಮ ಪ್ರಾಚೀನತೆಯನ್ನು ಮತ್ತು ಶ್ರೇಷ್ಠತೆಯನ್ನು ಹೆಚ್ಚಿಸಿಕೊಳ್ಳಲಿಕ್ಕೆ ಹೇಳಿದವುಗಳೇ ಆಗಿವೆ. ಅದರಂತೆ ಶಾಸನಗಳಲ್ಲಿ ಶ್ರೀರಾಮದತ್ತಿ ಅಗ್ರಹಾರ ಹಾಗೂ ಹರಿಶ್ಚಂದ್ರದತ್ತಿ ಅಗ್ರಹಾರ ಎಂದು ಕರೆದಿರುವುದುಂಟು. ಅಲ್ಲದೆ ಅರ್ಜುನವಾಡ ಶಾಸನದಲ್ಲಿ ದತ್ತಿ ಬಿಟ್ಟಿರುವುದನ್ನು 'ಈ ಹಳ್ಳಿ ಮಾಂಧಾತ ಚಕ್ರವರ್ತಿ ಬಿಟ್ಟಧರ್ಮ್ಮಂ' ಅದನ್ನು 'ಪೂರ್ವ್ವದತ್ತವೆಂದು ಧಾರಾಪೂರ್ವಕ್ಕಂ ಮಾಡಿಕೊಟ್ಟರು'[8] ಎಂಬ ಉಲ್ಲೇಖವುಂಟು. ಇವೆಲ್ಲವುಗಳಲ್ಲಿಯೂ ಪುರಾಣ ವ್ಯಕ್ತಿಗಳಾದ ಶ್ರೀರಾಮ, ಹರಿಶ್ಚಂದ್ರ, ಮಾಂಧಾತರ ಹೆಸರನ್ನು ಬಳಸಿಕೊಳ್ಳುವುದರ ಮೂಲಕ ತಮ್ಮ ಪ್ರಾಚೀನತೆ ಮತ್ತು ಶ್ರೇಷ್ಠತೆಯನ್ನು ಹೆಚ್ಚಿಸಿಕೊಂಡಿರುವುದನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಹಾನಗಲ್ಲಿಗೆ ವಿರಾಟನಗರವೆಂಬ ಶಾಸನದ ಬಳಕೆಯೂ ಬಂದಿರಲಿಕ್ಕೆ ಸಾಕು. ಆನೆಗುಂದಿಯನ್ನು ದಕ್ಷಿಣ ಹಸ್ತಿನಾವತಿ ಎಂದು ಲಿಪಿಗಳು ಹೇಳುತ್ತವೆ ಹೊರತು ಹಸ್ತಿನಾವತಿಯೇ ಆನೆಗುಂದಿಯಲ್ಲ. ಅದರಂತೆ 'ದಕ್ಷಿಣಕಾಶಿ' ಎಂಬ ಹೆಸರು ಅನೇಕ ಪ್ರದೇಶಗಳಿಗುಂಟು.* ಇದೆ ರೀತಿ ದಕ್ಷಿಣದಲ್ಲಿ ವಿರಾಟನಗರಕ್ಕೆ ಹೋಲುವ ನಗರ ಇದಾಗಿರುವ ಸಂಭಾವ್ಯತೆಯಿಂದ ಇದನ್ನು ದಕ್ಷಿಣದ ವಿರಾಟನಗರವೆಂದು ಕರೆದಿರಲಿಕ್ಕೆ ಸಾಕು. ಮೂಲ ಭಾರತದಲ್ಲಿ ವಿರಾಟನಗರವು ಹಸ್ತಿನಾವತಿಯಿಂದ ಒಬ್ಬ ಕುದುರೆ ಸವಾರನ ಒಂದು ದಿನದ ದಾರಿ ಎಂದು ಸೂಚಿತವಾಗಿದೆ. ಮತ್ತು ಇತಿಹಾಸ ತಜ್ಞರು ಈಗಾಗಲೇ ರಾಜಸ್ತಾನದಲ್ಲಿರುವ ಬೈರಾಟೆ ಎಂಬುವುದು ವಿರಾಟನಗರವಾಗಿತ್ತೆಂದು ಹೇಳುತ್ತಾರೆ. (ವಿರಾಟ>ಬೈರಾಟ) ಇವೆಲ್ಲ ಕಾರಣಗಳಿಂದ ಹಾನಗಲ್ಲು ವಿರಾಟನಗರವಲ್ಲ. ಅದು ಇತರ ಸ್ಥಳಗಳಂತೆ ದಕ್ಷಿಣದ ವಿರಾಟನಗರವಾಗಿತ್ತೆಂದು ಊಹಿಸಬಹುದಾಗಿದೆ.

ಇನ್ನು ಹಾನಗಲ್ಲು ಪ್ರದೇಶದಲ್ಲಿ ಅನೇಕ ಕೆರೆ - ಹೊಂಡಗಳು ಕಂಡುಬರುತ್ತವೆ. ಕೆರೆ - ಹೊಂಡಗಳಿಂದ ಆವೃತವಾದ ಹಾನಗಲ್ಲು ಪ್ರದೇಶವು ಸದಾ ಹಸುರಿನಿಂದ ಕಂಗೊಳಿಸುತ್ತಿದೆ. ಪ್ರಾಚೀನ ಕಾಲದಲ್ಲಿ ಮಳೆ ನೀರನ್ನು ವ್ಯವಸ್ಥಿತವಾಗಿ ಸಂಗ್ರಹಿಸುವ ಮತ್ತು ಬಳಸಿಕೊಳ್ಳುವ ಕ್ರಮ ಹಾನಗಲ್ಲು ಪರಿಸರದಲ್ಲಿತ್ತು. ಇಲ್ಲಿಯ ಯಾದಗಿರಿ ಕೊಪ್ಪದಿಂದ ಪ್ರಾರಂಭವಾದಂತಹ ಒಂದು ಹಳ್ಳ (ಕಾಲುವೆ) ಹುಣಿಶೆಟ್ಟಿಕೊಪ್ಪದ ಕೆರೆಯ ಮೂಲಕ ಹಾಯ್ದು ಆರೆಗೊಪ್ಪಕೆರೆಗೆ ತಲುಪಿ, ನಂತರ ಚಿಕ್ಕೇರಿಹೊಸಳ್ಳಿ ಕೆರೆಗೆ ಬಂದು, ಆನೆಕೆರೆಯನ್ನು ತುಂಬಿಸಿ, ಅಲ್ಲಿಂದ ಕೋಟೆ ಕೊಳ್ಳದ ಮೂಲಕ ಶಾಸ್ತ್ರೀಯ ಹೊಂಡಕ್ಕೆ ಬಂದು, ಅಚ್ಚಕೆರೆಯ ಮೂಲಕ ಧರ್ಮಾನದಿಯನ್ನು ಸೇರುತ್ತದೆ. ಹೀಗೆ ಹರಿದು ಬರುವ ಈ ಕಾಲುವೆಗೆ ಜಡೆಕಾಲುವೆ ಎಂಬ ಹೆಸರಿದೆ. ಈ ಕಾಲುವೆ ನಗರದ ನಡುವೆ ಹಾಯ್ದು ಹೋಗಿರುವುದರಿಂದ ಇಡೀ ನಗರವನ್ನು ಸುತ್ತಿಕೊಂಡಿರುವಂತೆ ಕಾಣುತ್ತದೆ. ಕೋಟೆಯ ಭದ್ರತೆಗಾಗಿಯೂ ಈ ಕಾಲುವೆಯ ನೀರು ಬಳಕೆಯಾಗುತ್ತಿತ್ತು. ಜಡೆಕಾಲುವೆ ಧರ್ಮಾನದಿ ಸೇರುವ ಪೂರ್ವದಲ್ಲಿ ಅನೇಕ ಕೆರೆಗಳನ್ನು ತುಂಬಿಸುತ್ತಾ ಸಾಗುತ್ತದೆ. ಹೀಗೆ ತುಂಬಿದ ಕೆರೆಗಳಲ್ಲಿ ಯಾವ ಕೆರೆಗಳಿಗೂ ಇಲ್ಲದ ಐತಿಹ್ಯಗಳು ಆನೆಕೆರೆಗೆ ಉಂಟು. ಐತಿಹಾಸಿಕ ಮಹತ್ವ ಪಡೆದಿರುವುದರಿಂದಲೇ ಪ್ರಾಯಶಃ ಈ ಕೆರೆಯ ಕುರಿತು ಅನೇಕ ಐತಿಹ್ಯಗಳುಂಟಾಗಿವೆ. ಅವುಗಳಲ್ಲಿ,

೧. ಈಗಿರುವ ಆನೆಕೆರೆಯ ಕೆಳಗಿನ ಪ್ರದೇಶವು ಓರ್ವ ಸೂಳೆಯದಾಗಿತ್ತು. ಇಂದಿಗೂ ಅದನ್ನು ಸೂಳೆಯ ಬೈಲ ಎಂದು ಕರೆಯುತ್ತಾರೆ. ಈ ಬೈಲಿನ ನೀರಾವರಿ ಕೃಷಿಗಾಗಿ ಅವಳು ಕೆರೆಯನ್ನು ಕಟ್ಟಿಸಿದಳು. ಆ ಕೆರೆಯನ್ನು ಸೂಳೆ ತನಗಾಗಿ ಕಟ್ಟಿಸಿದ್ದರಿಂದ ಜನ ಅದನ್ನು 'ಸೂಳೆಕೆರೆ' ಎಂದು ಕರೆಯುತ್ತಿದ್ದರು. ಮಡಿ-ಮೈಲಿಗೆಗಳನ್ನು ಪಾಲಿಸುವ ಜನರು ಕೆರೆ ಸೂಳೆಯದೆಂಬ ಕಾರಣಕ್ಕೆ ಅದರ ನೀರನ್ನು ಬಳಸಲಿಲ್ಲ. ಸೂಳೆ ತನ್ನ ಪುಣ್ಯಕ್ಕಾಗಿ ಜನ ನೀರನ್ನು ತೆಗೆದುಕೊಂಡು ಹೋಗಬೇಕೆಂದು ಯೋಚಿಸಿ, ಕೊನೆಗೆ ಕೆರೆಯ ದಿಬ್ಬದ ಮೇಲೆ ಕಲ್ಲಿನ ಬೃಹತ್ ಆನೆಯೊಂದನ್ನು ತಂದು ಇಟ್ಟಳು. ಕಲ್ಲಿನ ಆನೆಯನ್ನು ನೋಡಿದ ಜನರು, ಕ್ರಮೇಣ ಸೂಳೆಕೆರೆ ಮರೆತು ಆನೆಕೆರೆ ಎಂದು ಕರೆದು, ಅದರ ನೀರಿನ ಬಳಕೆಯನ್ನು ಮಾಡಿಕೊಂಡರಂತೆ.

೨. ಚಿಕ್ಕೇರಿ ಹೊಸಳ್ಳಿಯಿಂದ ನೋಡಿದರೆ, ಈ ಕೆರೆ ಭೌತಿಕವಾಗಿ ಆನೆಯ ಹಾಗೆ ಕಾಣುತ್ತದೆ. ಕೆರೆಯ ನಡುವೆ ಆನೆಯ ಹೊಟ್ಟೆಯಂತೆ ಅಗಲವಾಗಿಯೂ, ಕೊನೆಯ ಭಾಗ ಆನೆಯ ಬಾಲದಂತೆಯೂ, ಮುಂಭಾಗ ಸೊಂಡಿಲದಂತೆಯೂ ಕಾಣುತ್ತಿದ್ದುದರಿಂದ ಈ ಕೆರೆಯನ್ನು ಆನೆಕೆರೆಯೆಂದು ಕರೆಯುವ ವಾಡಿಕೆ ಬಂದಿದೆ.

೩. ಹಾನಗಲ್ಲು ಕದಂಬ ಅರಸರ ಕಾಲದಲ್ಲಿ ಆನೆಗಳನ್ನು ಆ ಕೆರೆಯಲ್ಲಿ ಮೈತೊಳೆಯುತ್ತಿದ್ದರು ಹಾಗೂ ಆನೆಗಳು ಆ ಕೆರೆಯಲ್ಲಿ ಜಲಕ್ರೀಡೆಯಾಡುತ್ತಿದ್ದುದರಿಂದ ಆನೆಕೆರೆ ಎಂಬ ಹೆಸರು ಬಂದಿತ್ತೆನ್ನುತ್ತಾರೆ. ಅಲ್ಲದೆ ಹಾನಗಲ್ಲಿನ ಭದ್ರವಾದ ಕೋಟೆ ಕಟ್ಟಲು ಈ ಕೆರೆಯ ಮಣ್ಣನ್ನು ಉಪಯೋಗಿಸಲಾಗಿದೆಯಂತೆ. ಆ ಮಣ್ಣನ್ನು ಆನೆಗಳ ಮೂಲಕ ತರಲಾಯಿತು. ಹೀಗಾಗಿ ಆ ಕೆರೆಗೂ, ಆನೆಗೂ ಈ ರೀತಿಯ ಅನೇಕ ನಂಟುಗಳಿರುವುದರಿಂದ ಅದನ್ನು ಆನೆಕೆರೆಯೆಂದು ಕರೆಯಲಾಯಿತೆಂಬ ಮತ್ತೊಂದು ಐತಿಹ್ಯವೂ ಉಂಟು.

ಒಟ್ಟಾರೆ ಆನೆಕೆರೆಯು ಜನರ ಮನದಂಗಳದಲ್ಲಿ ಉಳಿದುಕೊಂಡು, ಹೀಗೆ ಅನೇಕ ಐತಿಹ್ಯಗಳನ್ನು ಹೊಂದಿದ ಈ ಕೆರೆ ಜನರ ಜೀವನದ ಮೇಲೆ ಮಹತ್ವದ ಪ್ರಭಾವ ಬೀರಿರುವ ಸಾಧ್ಯತೆ ಹೆಚ್ಚಾಗಿದೆ. ಹೀಗಾಗಿ ಕದಂಬರ ಇತಿಹಾಸ ಕಾಲದಲ್ಲಿ ಆನೆಕೆರೆಯ ಪ್ರಸ್ತಾಪ ಹಾಗೂ ಮಹತ್ವ ಬಹುದೊಡ್ಡದಾಗಿರಲೇ ಬೇಕು. ಈ ಕುರಿತ ಅಧ್ಯಯನಕ್ಕೆ ಐತಿಹ್ಯಗಳು ದಾರಿ ಮಾಡಿಕೊಡುತ್ತವೆ.

**ಜನಪದ ಕಥೆಗಳು**

ಜನಪದ ಕಥೆಗಳನ್ನು ಸಾಮಾನ್ಯವಾಗಿ ಎಲ್ಲಾ ಪ್ರದೇಶ, ಜನಾಂಗ, ಧರ್ಮ, ದೇಶಗಳಲ್ಲಿ ಹೇಳುವುದನ್ನು ಕಾಣುತ್ತೇವೆ. ಜನಪದ ಕಥೆಗಳು ರಮ್ಯತೆಯಿಂದ ಕೂಡಿದ್ದರೂ, ಅದರೊಳಗೆ ಆ ಪ್ರದೇಶದ ಅನೇಕ ಸಾಂಸ್ಕೃತಿಕ ಅಂಶಗಳು ಹುದುರಿಕೊಂಡಿರುತ್ತವೆ. ಹೀಗಾಗಿ ಜನಪದ ಕಥೆಗಳು ತಮ್ಮ ಕಾಲಘಟ್ಟದ (ಪ್ರಾಚೀನ) ವಿಷಯವನ್ನು ಹೊತ್ತುಕೊಂಡು ಬಂದಿರುತ್ತವೆಂಬುದು ಸತ್ಯ. ಅಂಥ ಕಥೆಗಳನ್ನು ಹಾನಗಲ್ಲು ಪರಿಸರದಲ್ಲಿ ಅನೇಕ ಜನ ಹೇಳುತ್ತಾರೆ. ಹಾನಗಲ್ಲು ತಾಲೂಕಿನ ಆಲದಕಟ್ಟೆ ಗ್ರಾಮದವರಾದ ಫಕೀರಪ್ಪ ಯಲ್ಲಪ್ಪ ಶ್ರೀಗಿರಿ ಅವರು ಏಕಪತಿವ್ರತೆಯ ಕಥೆ, ಮಾನವ ಮನೆ ಪಯಣ, ಧರ್ಮಶೇಖರ ರಾಜ, ದಾಸಪ್ಪನ ಕಥೆ, ಮಹಾಕಾಳಿಯ ಶಾಪ, ಅಣ್ಣ-ತಮ್ಮ, ಕವಡಿಭಾವ (ಮಾಂತ್ರಿಕ ಕಥೆ) ಮುಗ್ಗಗಾರನ ಕಥೆ, ಚಿತ್ರಶೇಖರ-ರಾಜಶೇಖರ ಕಥೆ, ಚಕ್ಕುಲಿಯ ಕಥೆ ಮೊದಲಾದವುಗಳನ್ನು ಹೇಳುತ್ತಾರೆ. ಅದೆ ಗ್ರಾಮದ ದಿ.ಆನಂದಪ್ಪ ಫಕೀರಪ್ಪ ಶ್ರೀಗಿರಿ ಅವರು ಪಾಪಾತ್ಮ ರಾಜನ ಕಥೆ, ಬಾಂಬಿ ರಾಕ್ಷಸಿ, ರುದ್ರಶೇಖರ ಮಹಾರಾಜನ ಕಥೆ, ಪುಣ್ಯಾತ್ಮ ರಾಜ - ಪಾಪಾತ್ಮ ರಾಜನ ಕಥೆ, ನಾಗಲೋಕದ ಸುಂದರಿ, ಬಂದೂಕ ಬೇಟೆಗಾರನ ಕಥೆ, ಮುಂಗಲು ಭಾವನ ಕಥೆ, ಬಾಳೆಹಣ್ಣು ತಿಂದು ಬಂದ ಕಥೆ, ಅಜ್ಜಿ ಮೊಮ್ಮಗನ ಕಥೆ, ನೀಲಿಗಿರಿ ನಿಂಬತಕ್ಕನ ಕಥೆ ಇತ್ಯಾದಿಗಳನ್ನು ಹೇಳುತ್ತಾರೆ. ತಿಳಿವಳ್ಳಿ ಗ್ರಾಮದವರಾದ ಗೋಣಿಯಪ್ಪ ಸಿದ್ಧಪ್ಪ ಚವ್ಹಾಣ ಇವರು ಬಂಗಾಲ ಗಿರಿಬಾಬಾ, ರಾಜಹಂಸ ಪರಮಹಂಸ, ಶಿವಲೋಚನಿ ಕೂರ್ಮರಾಜ, ಬಸವಕುಮಾರ-ಲೋಹಿತಕುಮಾರ ಕಥೆ, ಲಕ್ಷಾಪತಿರಾಜನ ಕಥೆ ಇತ್ಯಾದಿಗಳನ್ನು ಹೇಳುತ್ತಾರೆ. ಅದರಂತೆ ನಾಗರಾಜ ತೊಂಬ್ರಿ, ನಾಗರಾಜ ಜೋಗಿ, ಆನಂದಪ್ಪ ಜೋಗಿ-ಮುಂತಾದ ಅನೇಕರು ಕಥೆಗಳನ್ನು ಹೇಳುವುದುಂಟು.

**ಗಾದೆಗಳು**

ಗಾದೆಗಳು ಅನುಭಾವಿಗಳ ಅನುಭವದಿಂದ ಮೂಡಿ ಬಂದ ಸತ್ರರೂಪದ ವಾಕ್ಯಗಳು. ವೇದ ಸುಳ್ಳಾಗಬಹುದು ಗಾದೆ ಸುಳ್ಳಾಗಲಾರದು ಎಂಬ ಗಾದೆ ಮಾತು ಗಾದೆಗಳ ಸತ್ಯಪ್ರಮಾಣ ನಿಷ್ಠತೆಯನ್ನು ತಿಳಿಸುತ್ತದೆ. ಆಡು ಮುಟ್ಟದ ಗಿಡವಿಲ್ಲ, ಗಾದೆ ಹೇಳದೆ ಇರುವ ವಿಷಯವಿಲ್ಲ ಎಂಬಂತೆ ಗಾದೆಗಳ ವ್ಯಾಪ್ತಿಯೂ ಬಹು ದೊಡ್ಡದು. ಇಂಥ ಗಾದೆಗಳನ್ನು ಬಳಸಿಕೊಳ್ಳುವುದರ ಮೂಲಕ ಪ್ರಾದೇಶಿಕ ಚರಿತ್ರೆ ಅಧ್ಯಯನವನ್ನು ಇನ್ನಷ್ಟು ಗಟ್ಟಿಗೊಳಿಸಬಹುದು. ಹಾನಗಲ್ಲು ಪ್ರದೇಶಕ್ಕೆ ಸಂಬಂಧಪಟ್ಟಂತೆ, “ಹಾನಗಲ್ಲ ಹಾದ್ಯಾಗ ಹಾಯಬಾರದು, ಹಾವೇರ‍್ಯಾಗ ಸಾಯಬಾರದು, ಶಿಗ್ಗಾವ್ಯಾಗ ಸಿಗಬಾರದು” ಎಂಬ ಗಾದೆ ಮಾತು ಉಂಟು. ಅದು ಹಾನಗಲ್ಲ, ಹಾವೇರಿ ಹಾಗೂ ಶಿಗ್ಗಾವಿಗಳ ಕುರಿತಾದ ಒಂದು ಅನುಭವವನ್ನು ಹೇಳುವಂತಹದ್ದು, ಹಾನಗಲ್ಲ ಹಾದ್ಯಾಗ ಹಾಯಬಾರದು ಎಂಬ ಮಾತು ಹಾನಗಲ್ಲಿನಲ್ಲಿ ಬಹುಪಾಲು ಜನ ಶ್ರೀಮಂತರು ಹಾಗೂ ಭೂಮಲಿಕರು, ಕೆಲಸವಿಲ್ಲದೆ ಹರಟೆಗಾಗಿ ಕಟ್ಟೆ ಮೇಲೆ ಕುಳಿತು ಹಾದಿಹೋಕರನ್ನು ಟೀಕಿಸುತ್ತಿದ್ದರಂತೆ. ಇನ್ನೊಂದು ವಾದದಂತೆ ಈ ಗ್ರಾಮದಲ್ಲಿ ವಿದ್ವತ್ ಪೂರ್ಣ ಜನ ಹೆಚ್ಚಿರುವುದರಿಂದ ಆ ಜನರ ಮುಂದೆ ತಿರುಗಾಡಬಾರದು ಎಂಬ ಕಾರಣಗಳಿಂದ ಮೇಲಿನ ನುಡಿ ಹುಟ್ಟಿಕೊಂಡಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

‘ಹಾವೇರ್ಯಾಗ ಸಾಯಬಾರದು’ ಎಂಬ ಮಾತು ಹಾವೇರಿಯಲ್ಲಿ ಈ ಮೊದಲು ಹೆಣಗಳನ್ನು ಸರಿಯಾಗಿ ಶೃಂಗರಿಸದೆ, ಸಂಪ್ರದಾಯಗಳನ್ನು ವಿಧಿವತ್ತಾಗಿ ಮಾಡದೆ, ಸರಿಯಾಗಿ ಹೂಳುವ ಕ್ರಮವಿಲ್ಲದ್ದರಿಂದ ಅಥವಾ ಅಲ್ಲಿಯ ಸ್ಮಶಾನ ಹಾವೇರಿಯಿಂದ ಬಹುದೂರವಿರುವುದರಿಂದ ಅಥವಾ ಹೆಣಗಳ ದಫನದ ನಂತರ ಸ್ನಾನ ಮಾಡಲಿಕ್ಕೆ ನೀರು ಸಿಗುತ್ತಿರಲಿಲ್ಲವಂತೆ. ಈ ಕಾರಣ(ಗಳಿಂದ)ದಿಂದ ಮೇಲಿನ ಮಾತು ಬಂದಿರಬಹುದು.

ಇನ್ನೂ ‘ಶಿಗ್ಗಾಂವ್ಯಾಗ ಸಿಗಬಾರದು’ ಎಂಬ ಮಾತು ಶಿಗ್ಗಾಂವಿಯಲ್ಲಿ ಸಿಕ್ಕುಬಿಟ್ಟರೆ, ಅಲ್ಲಿಯ ಜನರು ಬಿಡುವುದೆ ಇಲ್ಲವಂತೆ, ಪಂಟಮಾತು ಹಚ್ಚಿಕೊಂಡು ತಮಗೆ ಬೇಕಾದ್ದನ್ನು ಸಾಧಿಸುತ್ತಾರೆ ಎಂಬ ಕಾರಣದಿಂದ ಈ ಮೇಲಿನ ಮಾತು ಹುಟ್ಟಿಕೊಂಡಿದೆ.

ಹಾನಗಲ್ಲು ಪರಿಸರದಲ್ಲಿ ಸ್ತ್ರೀಯರು ಬಳಸಿದ ಪ್ರಾಸಬದ್ಧ ಅಶ್ಲೀಲ ಮಾತಿನ ವರಸೆಯೊಂದು ಈ ರೀತಿ ಇದೆ. ಅಗಡಿ ಗ್ರಾಮದ ಹೆಣ್ಣು ಮಕ್ಕಳು ಹಾನಗಲ್ಲಿನ ಕನ್ಯಾ ನೋಡಲಿಕ್ಕೆ ಬಂದಾಗ, ಹಾನಗಲ್ಲಿನ ಸ್ತ್ರೀಯರು ವ್ಯಂಗ್ಯವಾಗಿ ‘ಅಗಡಿ ಬುಗಡ್ಯಾರು ಇಲ್ಯಾದಕ್ಕ ಬಂದರು’ ಎಂದರೆ, ಅದಕ್ಕೆ ಉತ್ತರವಾಗಿ ಅಗಡಿ ಸ್ತ್ರೀಯರು ‘ಹಾನಗಲ್ಲ ಹಾದರಗಿತ್ತಿ ನೋಡಲಿಕ್ಕೆ ಬಂದೇವಿ’ ಎಂದರಂತೆ. ಈ ರೀತಿಯ ಇನ್ನೂ ಎಷ್ಟೋ ಮಾತಿನ ಚಮತ್ಕಾರಿಕ ವರಸೆಗಳು, ನುಡಿಗಟ್ಟುಗಳು ಇದ್ದಿರಬಹುದು. ಅವೆಲ್ಲವುಗಳ ಸಂಗ್ರಹ ಮತ್ತು ವಿಶ್ಲೇಷಣೆಯಿಂದ ಹಾನಗಲ್ಲಿನ ಅನೇಕ ಸಾಂಸ್ಕೃತಿಕ ಅಂಶಗಳನ್ನು ತಿಳಿಯಲಿಕ್ಕೆ ಸಾಧ್ಯವಿದೆ.

**ಬಯಲಾಟಗಳು**

ಜನಪದರು ತಮ್ಮ ಅಂತರಂಗದ ಅನಿಸಿಕೆಗಳನ್ನು ಹೊರಹಾಕಲು ಕಂಡುಕೊಂಡ ಅನೇಕ ಮಾರ್ಗಗಳಲ್ಲಿ ಬಯಲಾಟ ಮಾರ್ಗವೂ ಒಂದು. ಪ್ರಾಚೀನ ಕಾಲದಿಂದಲೂ ಜನಪದ ಆಟಗಳು ಪ್ರಚಲಿತವಿದ್ದವೆಂಬುದಕ್ಕೆ ಅನೇಕ ಕುರುಹುಗಳುಂಟು. ಬಯಲಾಟದಲ್ಲೂ ಯಕ್ಷಗಾನ, ದೊಡ್ಡಾಟ, ಸಣ್ಣಾಟಗಳೆಂಬ ಪ್ರಬೇಧಗಳುಂಟು. ಯಕ್ಷಗಾನವು ವಿಶೇಷವಾಗಿ ಮಲೆನಾಡಿನಲ್ಲಿ ಪ್ರದರ್ಶನಗೊಂಡರೆ, ದೊಡ್ಡಾಟ ಹಾಗೂ ಸಣ್ಣಾಟಗಳು ಬಯಲುನಾಡಿನಲ್ಲಿ ಪ್ರದರ್ಶನಗೊಳ್ಳುತ್ತ ಬಂದಿವೆ. ಮಲೆನಾಡಿನ ಸೆರಗಿನಲ್ಲಿರುವ ಹಾನಗಲ್ಲು ಪಶ್ಚಿಮಕ್ಕೆ ಮಲೆನಾಡಿನ ಪ್ರದೇಶವನ್ನು, ಪೂರ್ವಕ್ಕೆ ಬಯಲುನಾಡನ್ನು ಹೊಂದಿರುವ ವಿಶಿಷ್ಟ ನೆಲೆ. ಹಾನಗಲ್ಲು ಬಯಲಾಟದ ಪ್ರಕಾರವಾದ ಯಕ್ಷಗಾನ ಪರಿಸರಕ್ಕೆ ಅತ್ಯಂತ ಸಮೀಪದಲ್ಲಿದ್ದರೂ, ಬೆಳವಲ ನಾಡಿನ ಬಯಲಾಟ ಪ್ರಕಾರವಾದ ದೊಡ್ಡಾಟಕ್ಕೆ ಪ್ರಸಿದ್ಧಿಯನ್ನು ಪಡೆದಿತ್ತು. ೧೯ನೆಯ ಶತಮಾನದ ಪ್ರಾರಂಭದ ಭಾಗದಲ್ಲಿ ದೊಡ್ಡಾಟವನ್ನು ಹಾನಗಲ್ಲು ಪರಿಸರದಲ್ಲಿ ಉತ್ಕೃಷ್ಟ ಮಟ್ಟದಲ್ಲಿ ಪ್ರಸಾರಗೊಳಿಸಿ ಉಳಿಸಿ ಬೆಳೆಸಿದ ಕೀರ್ತಿಗೆ ದಿವಂಗತ ಕರಿಯಪ್ಪ ಈಶ್ವರಪ್ಪ ಕಾಟೇಕರ ಕಾರಣಕರ್ತೃವಾಗಿದ್ದಾರೆ. ಇವರು ವೃತ್ತಿಯಿಂದ ಕ್ಷೌರಿಕರಾಗಿದ್ದರೂ ಪ್ರವೃತ್ತಿಯಿಂದ ದೊಡ್ಡಾಟದ ಕಲಾವಿದರಾಗಿ, ಭಾಗವತರಾಗಿ ಅಥವಾ ಆಟದ ಮಾಸ್ತರರಾಗಿ ಪ್ರಸಿದ್ಧಿಯನ್ನು ಪಡೆದವರು. ಬಹುದೊಡ್ಡ ಕಲಾವಿದರಾದ ಇವರು ತಮ್ಮ ಅದ್ಭುತ ನಟನೆಯಿಂದ ಜನರ ಮನಸ್ಸನ್ನು ಸೂರೆಗೊಂಡವರು. ಯಾವುದೆ ಕುಣಿತ, ಸಂಗೀತ, ಮಾತಿನ ವರಸೆ, ಹಾವಭಾವಗಳನ್ನು ಅತ್ಯಂತ ನಿರಾಳವಾಗಿ ಮಾಡಿ ತೋರಿಸುವ ತಾಕತ್ತಿನ ವ್ಯಕ್ತಿಯಾಗಿದ್ದರು. ಆಡುಮುಟ್ಟದ ಗಿಡವಿಲ್ಲವೆಂಬಂತೆ ಕಾಟೇಕರ ಅವರು ದೊಡ್ಡಾಟದಲ್ಲಿ ಮುಟ್ಟದ ವಿಷಯವಿಲ್ಲ ಎಂಬ ಮಟ್ಟದಲ್ಲಿ ಕಲೆಯನ್ನು ಕರತಲಾಮಲಕ ಮಾಡಿಕೊಂಡಿದ್ದರು.

ದಿ.ಕರಿಯಪ್ಪ ಕಾಟೇಕರ ಅವರು ೧೯೪೦ರಲ್ಲಿ “ತರುಣ ನಾಟಕ (ಬೈಲಾಟ) ಮಂಡಳ“ವನ್ನು ಹುಟ್ಟು ಹಾಕಿ, ಹಾನಗಲ್ಲು ಪರಿಸರದಲ್ಲಿ ದೊಡ್ಡಾಟದ ಚಟುವಟಿಕೆಗಳನ್ನು ಚುರುಕುಗೊಳಿಸಿದರು. ಅನಾನುಭವಿ ಅವಿದ್ಯಾವಂತ ಯುವಕರನ್ನು ಒಗ್ಗೂಡಿಸಿ, ಕಠಿಣ ಪರಿಶ್ರಮ ರಂಗತಾಲೀಮಿನ ಮೂಲಕ ಉತ್ಕೃಷ್ಟ ಮಟ್ಟದ ಆಟ ಪ್ರದರ್ಶಿಸಿ ಜನಮನ ಗೆದ್ದವರು. ಜನರು ಈತನ ದೊಡ್ಡಾಟದ ರುಚಿ ಉಂಡು ಅನುಭವಿಸಿ ಸಂತೋಷಪಟ್ಟು, ಮನಸೋತು ಮತ್ತೆ ಮತ್ತೆ ಹಣಕೊಟ್ಟು ಆಡಿಸಿ ನೋಡಿ ಸಂತೋಷಪಟ್ಟರೆಂಬುದನ್ನು ಅರಿತಾಗ, ಆತನ ಮಾಸ್ತರಿಕೆಯ ಹಿಂದಿನ ಕೌಶಲ್ಯ ಎಂತಹದೆಂಬುದು ಎಲ್ಲರಿಗೂ ಮನವರಿಕೆಯಾಗುತ್ತದೆ. ಈ ಮೇಳವನ್ನು ಕಟ್ಟಿಕೊಂಡು ಹಾನಗಲ್ಲಿನ ಪ್ರದೇಶದುದ್ದಕ್ಕೂ ತಿರುಗಿ ಪ್ರದರ್ಶಿಸಿ ಜನಮನದಲ್ಲಿ ಉಳಿದರು. ಕ್ರಿ.ಶ. ೧೯೪೦ರಿಂದ ಪ್ರಾರಂಭವಾದ ದೊಡ್ಡಾಟ ಪ್ರದರ್ಶನವು

೧೯೮೩ರ ವರೆಗೆ ಸುದೀರ್ಘ ೪೩ ವರ್ಷಗಳ ಕಾಲ ನಿರಂತರವಾಗಿ ಕಾಟೇಕರವರ ನಿರ್ದೇಶನದಲ್ಲಿ ನಡೆಯಿತು. ಈ ಅವಧಿಯಲ್ಲಿ ಕೃಷ್ಣಾರ್ಜುನರ ಕಾಳಗ, ಕರ್ಣಪರ್ವ, ಅರಚಂಡಾಸುರ - ಪ್ರಚಂಡಾಸುರ ಕಾಳಗ, ಭೀಮಾರ್ಜುನ ಕಾಳಗ, ತಾಮ್ರಧ್ವಜನ ಕಾಳಗ, ಸಂಪೂರ್ಣ ರಾಮಾಯಣ, ವಿರಾಟಪರ್ವ, ಸುದನ್ವ ಬಬ್ರುವಾಹನ ಕಾಳಗ, ರಥಿ ಕಲ್ಯಾಣ, ಷಣ್ಮುಖ ವಿಜಯ, ದ್ರೌಪದಿ ವಸ್ತ್ರಾಪಹರಣ, ಐರಾವಣ ಮೈರಾವಣ, ಸುಗಂಧ ಪುಷ್ಪ ಹರಣ, ಕುರುಕ್ಷೇತ್ರ, ದಕ್ಷಬ್ರಹ್ಮ, ಸತಿ ಅನಸೂಯಾ, ಸುಭದ್ರ ಕಲ್ಯಾಣ, ಇಂದ್ರಜಿತ ಕಾಳಗ ಇತ್ಯಾದಿಗಳನ್ನು ಪ್ರದರ್ಶಿಸಿ ಜನಮನ ಸೂರೆಗೊಂಡರು. ಕರಿಯಪ್ಪ ಕಾಟೇಕರ ಅವರ ಶಿಷ್ಯರಾದ ಪಕ್ಕಿರಪ್ಪ ಕೊಲ್ಲಾಪುರ, ಲಕ್ಷ್ಮಣ ಕಲ್ಯಾಪುರ, ವಿಷ್ಣುರಾವ್ ಪಕಾಳೆ, ಶಿವರಾಮ ಬಂಕಾಪುರ, ಶಿವಪ್ಪ ಜಿಡ್ಡಿ, ಚನ್ನಪ್ಪ ಕಮಾಟ, ನಾಗಪ್ಪ ಗುಲಗಂಜಿ, ಯಲ್ಲಪ್ಪ ಕಿತ್ತೂರು, ಆರ್.ಟಿ.ನಿಂಗೋಜಿ ಮುಂತಾದವರಿಂದ ನಾಟಕಗಳನ್ನೂ ಯಶಸ್ವಿಯಾಗಿ ಪ್ರದರ್ಶಿಸಿ ಜನಮನ ಗೆದ್ದ ಚಿರಸ್ಮರಣೀಯರಾದ ನಾಟಕಕಾರರು.[9] ಕಾಟೇಕರವರು ತಮ್ಮ ಮೇಳದೊಂದಿಗೆ ದೊಡ್ಡಾಟವನ್ನು ಧಾರವಾಡದ ಆಕಾಶವಾಣಿಯ ಮೂಲಕ ಪ್ರದರ್ಶಿಸಿದ್ದಾರೆ. ದೊಡ್ಡಾಟದ ಕಲೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟ ಕರಿಯಪ್ಪ ಕಾಟೇಕರ ಅವರನ್ನು ಜನ ಸಂಗೀತ ವಿದ್ವಾನ್ ಪಂಡಿತರು, ಕಲಾ ಸಾವುಕಾರ, ಬಯಲಾಟ ಕಲೆಯ ಪ್ರವೀಣ, ರೇಡಿಯೋ ಸ್ಟಾರ್ ಎಂಬ ಬಿರುದುಗಳಿಂದ ಕೊಂಡಾಡಿದ್ದಾರೆ. ತರುಣ ನಾಟಕ (ಬಯಲಾಟ) ಮಂಡಳಿಯು ತನ್ನ ೨೫ನೆಯ ವರ್ಷದ ರಜತ ಮಹೋತ್ಸವದಲ್ಲಿ (೧೯೬೫) 'ಐರಾವಣ - ಮೈರಾವಣ' ಆಟವನ್ನು ಪ್ರದರ್ಶಿಸಿತು. ಅದರ ಕರ್ತೃ ಕರ್ನಾಟಕ ಕವಿಚಂದ್ರ ಪಂಡಿತ ಶ್ರೀಕಂಠಶಾಸ್ತ್ರಿ ನಲವಡಿ ಅವರಿಂದ ಕಾಟೇಕರರಿಗೆ 'ನಾಟಕ ರತ್ನಾಕರ' ಪ್ರಶಸ್ತಿಯನ್ನು ನೀಡಲಾಯಿತು. ಅದರಂತೆ ಮುಂದೆ ಗಂಗೂಬಾಯಿ ಹಾನಗಲ್ಲ, ನಾರಾಯಣ ಗಂಗಾಧರ ದೇಶಪಾಂಡೆ ಮುಂತಾದವರಿಂದ ಈತನೊಬ್ಬ ದೊಡ್ಡಾಟದ ಬಹುದೊಡ್ಡ ಕಲಾವಿದ ಎಂಬ ಪ್ರಶಸ್ತಿ ಪತ್ರಗಳನ್ನು ನೀಡಿ ಜನ ಗೌರವಿಸಿದರು. ಆದರೆ ಸರಕಾರ, ಸಂಘ - ಸಂಸ್ಥೆಗಳು ಬಹುದೊಡ್ಡ ಕಲಾವಿದನನ್ನು ಗುರುತಿಸಿ ಸನ್ಮಾನಿಸಿ ಆರ್ಥಿಕವಾಗಿ ಆತನನ್ನು ಸದೃಢನನ್ನಾಗಿ ಮಾಡದೆ ಹೋದದ್ದು ಮಾತ್ರ ದುರಂತ. ತನ್ನ ಕೊನೆಯ ದಿನಗಳಲ್ಲಿ ಆರ್ಥಿಕ ಕೊರತೆಯಿಂದ ಹೀನಾಯವಾದ ಸ್ಥಿತಿಯನ್ನು ಅನುಭವಿಸಿ ಪರಲೋಕ ಯಾತ್ರೆಗೈದು ದೊಡ್ಡಾಟದ ಯುಗವೂ ಮುಗಿದಂತಾಯಿತು.

ಕರಿಯಪ್ಪ ಕಾಟೇಕರ ದೊಡ್ಡಾಟಗಳ ಜೊತೆಗೆ ಸಣ್ಣಾಟಗಳನ್ನೂ ಪ್ರದರ್ಶಿಸಿದ್ದಾರೆಂಬ ಹೇಳಿಕೆಯುಂಟು. ಆದರೆ ಸಂಖ್ಯಾ ಪ್ರಮಾಣ ಅತ್ಯಂತ ಕಡಿಮೆ. ಆತನ ತಮ್ಮ ಫಕ್ಕೀರಪ್ಪ ಕಾಟೇಕರ, ಯಲ್ಲಪ್ಪ ಕಿತ್ತೂರು, ರಾಮಚಂದ್ರ ತೋಟಪ್ಪ ನಿಂಗೋಜಿ ಮುಂತಾದವರುಗಳು ಪಾತ್ರಧಾರಿಗಳಾಗಿ, ಭಾಗವತರಾಗಿ ಕೆಲವು ಸಣ್ಣಾಟಗಳನ್ನು ಪ್ರದರ್ಶಿಸಿದ್ದಾರೆ. ಆದರೆ ಅವ್ಯಾವುವೂ ದೊಡ್ಡಾಟಗಳಷ್ಟು ಜನಮನ ಸೂರೆಗೊಳ್ಳಲಿಲ್ಲ. ವೀರರಸ ಪ್ರಧಾನವಾದ ದೊಡ್ಡಾಟಗಳು ಹಾನಗಲ್ಲಿನ ಜನರ ಮನ ಗೆಲ್ಲಲು ವಿರಾಟನಗರದ ರಾಜಧಾನಿ ಹಾಗೂ ಸ್ವತಂತ್ರ ಸಾಮಂತ ಅರಸರಾದ ಹಾನಗಲ್ಲು ಕದಂಬ ಅರಸರ ಶೌರ್ಯ ಪರಾಕ್ರಮಗಳು ಜನಮನದಲ್ಲಿ ಎಲ್ಲೋ ಅವ್ಯಕ್ತವಾಗಿ ಕುಳಿತಿರುವ ಅವರ ಸ್ಥಿತಿ, ವೀರರಸ ಪ್ರಧಾನ ಆಟಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿರಬಹುದಾಗಿದೆ. ಈ ಹಿನ್ನೆಲೆಯಲ್ಲಿ ಜನಪದ ರಂಗಭೂಮಿ ಹಾನಗಲ್ಲಿನಲ್ಲಿ ಜನಪ್ರಿಯತೆಗಳಿಸಿಕೊಂಡಿತ್ತು.

ಒಟ್ಟಾರೆ ಸ್ಥಳಿಯ ಚರಿತ್ರೆ ಅಲಕ್ಷಿತರನ್ನು, ದುರ್ಬಲರನ್ನು ಕುರಿತು ವಿಶ್ಲೇಷಿಸುವ ಹಾಗೂ ಸ್ಥಳೀಯ ಸಮುದಾಯಗಳ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಬೌದ್ಧಿಕ ಇತ್ಯಾದಿ ಸಂಗತಿಗಳನ್ನು ಸಂಗ್ರಹಿಸಿಕೊಡುವ ವಿಪುಲ ಕಾರ್ಯವನ್ನು ಮಾಡುತ್ತದೆ. ಈ ನಿಟ್ಟಿನಲ್ಲಿ ಹಾನಗಲ್ಲಿನ ಜನಪದ ಜೀವನಕ್ಕೆ ಸಂಬಂಧಿಸಿದ ಮೌಖಿಕ ಚರಿತ್ರೆಯನ್ನು ಕಟ್ಟಲಾಗಿದೆ. ಇನ್ನೂ ಹಾನಗಲ್ಲು ಸುತ್ತಮುತ್ತಲಿನ ಪ್ರದೇಶದಲ್ಲಿ ಜಾನಪದ ಅಧ್ಯಯನ ಅಷ್ಟಾಗಿ ನಡೆದಿಲ್ಲ. ಅದು ಕೆನೆ ನೆಲವಾಗಿಯೇ ಉಳಿದುಕೊಂಡಿದೆಯೆಂಬುದು ಸತ್ಯ. ಈ ಪರಿಸರದಲ್ಲಿ ಜಾನಪದ ಅಧ್ಯಯನ ಕೈಗೊಳ್ಳುವವರಿಗೆ ಸಮೃದ್ಧವಾದ ಹಾಗೂ ಮೌಲಿಕವಾದ ಸಾಮಗ್ರಿ ದೊರೆಯಲು ಸಾಧ್ಯವಿದೆ. ಆದ್ದರಿಂದ ಈ ಲೇಖನ ಹಾನಗಲ್ಲಿನ ಮೌಖಿಕ ಆಕರಗಳು ಸಂಶೋಧಕರಿಗೆ ಸ್ಫೂರ್ತಿಯಾಗಬಲ್ಲದೆಂದು ಭಾವಿಸಿದ್ದೇನೆ.

[1] ವಿವೇಕ ರೈ ಬಿ.ಎ., ಅನ್ವಯಿಕ ಜಾನಪದ, ಪು. ೧೦೪ - ೧೦೫, ಬೆಂಗಳೂರು - ೧೯೯೫

[2] ಬಾಲಸುಬ್ರಮಣ್ಯ, (ಸಂ), ಕುರುಗೋಡು, ಲೇ.ಗಂಗಾಧರ ದೈವಜ್ಞ, ಮೌಖಿಕ ಆಕರಗಳು, ಪು. ೧೩೫, ಹಂಪಿ - ೨೦೦೪

[3] ಚನ್ನಕ್ಕ ಪಾವಟೆ, ಹಾನಗಲ್ಲ ಕದಂಬರು, ಪು. ೨೨೭, ಧಾರವಾಡ - ೧೯೯೮

[4] ಗದ್ದಗಿ ಮಠ ಬಿ.ಎಸ್., ಕನ್ನಡ ಜಾನಪದ ಗೀತೆಗಳು, ಪು.೩೪೨, ಧಾರವಾಡ - ೧೯೬೯

[5] ಅದೆ

[6] ರುದ್ರಪ್ಪ ತಳವಾರ, ಹಾನಗಲ್ಲ : ಒಂದು ಸಾಂಸ್ಕೃತಿಕ ಅಧ್ಯಯನ, ಪು. ೧೦ - ೧೧

[7] K.I., IV, 55, Hulagur, (1245 A.D.)

[8] ಹಿರೇಮಠ ಆರ್.ಸಿ. ಹಾಗೂ ಕಲಬುರ್ಗಿ ಎಂ.ಎಂ., ಕನ್ನಡ ಶಾಸನ ಸಂಪದ, ಪು. ೧೦೩, ಕರ್ನಾಟಕ ಧಾರವಾಡ - ೧೯೯೫

* ಇವೆಲ್ಲವುಗಳ ಬಹುದೂರದ ಕಾಶಿಗೆ ಹೋಗಲು ಅಸಾಧ್ಯವಾಗಿದ್ದರಿಂದ ಕಾಶಿಯನ್ನು ಹತ್ತಿರದಿಂದ ಕಾಣಲು ಸೃಷ್ಟಿಗೊಂಡ ಸ್ಥಳಗಳು.

[9] ಶಾಂತಪುರಮಠ ವ್ಹಿ.ಜಿ., ವಿರಾಟನಗರ, (ಅಪ್ರಕಟಿತ)

# ೧೫. ನಂಬಿಕೆ - ಆಚರಣೆ

ನಂಬಿಕೆ ಮತ್ತು ಆಚರಣೆಗಳು ಸಂಸ್ಕೃತಿಯ ಒಂದು ಭಾಗ. ಮನುಕುಲಕ್ಕೆ ಬಹುಮುಖ್ಯವಾದ ಸಂಸ್ಕೃತಿ ಬಹಳ ವ್ಯಾಪಕ ಅರ್ಥವನ್ನು ಒಳಗೊಂಡಿದೆ. ನ್ಯಾಯ, ನೀತಿ, ಸತ್ಯ, ಧರ್ಮ, ಪ್ರಾಮಾಣಿಕತೆ ಇವೆಲ್ಲವನ್ನು ಒಳಗೊಂಡಿರುವುದೇ ಸಂಸ್ಕೃತಿ. ಸಂಸ್ಕೃತಿಯಲ್ಲಿ ಸಂಗೀತ, ಸಾಹಿತ್ಯ, ಕಲೆ, ನಂಬಿಕೆ, ಸಂಪ್ರದಾಯ, ಜಾತ್ರೆ, ಉತ್ಸವ ಮೊದಲಾದವುಗಳು ಸಮಾವೇಶಗೊಂಡಿರುತ್ತವೆ. ಒಂದು ಜನಾಂಗದ ಸಂಸ್ಕೃತಿಯನ್ನು ತಿಳಿದುಕೊಳ್ಳುವಲ್ಲಿ ಈ ಎಲ್ಲ ಕ್ಷೇತ್ರಗಳು ನಿರ್ಧರಿತ ಅಂಶಗಳಾಗಿವೆ. ಸಂಸ್ಕೃತಿಯು ಎಂದೂ ನಿಂತ ನೀರಾಗುವುದಿಲ್ಲ. ನಿರಂತರ ಬೆಳವಣಿಗೆಯೇ ಸಂಸ್ಕೃತಿಯ ವಿಶೇಷತೆ. ಭಾರತೀಯ ಸಂಸ್ಕೃತಿ ಸಂಪದ್ಭರಿತ ಮತ್ತು ಶ್ರೀಮಂತಿಕೆಯಿಂದ ಕೂಡಿದೆ. ಉಚ್ಚ ಸಂಸ್ಕೃತಿಯ ಜೊತೆಗೆ ಉಪ ಸಂಸ್ಕೃತಿಗಳು ಇಲ್ಲಿವೆ. ಶಾಸ್ತ್ರೀಯ ಕಲೆ, ಸಂಗೀತದ ಜೊತೆಗೆ ಜಾನಪದ ಕಲೆ, ಸಂಗೀತಗಳು ಹೇರಳವಾಗಿವೆ. ಆದರೆ ಈಗ ಜಾನಪದ ಕಲೆಗಳು ನಶಿಸತೊಡಗಿವೆ. ಮನುಷ್ಯ ಅಕ್ಷರ ಬಲ್ಲವನಾಗುತ್ತಿದ್ದಂತೆಯೇ ಪರಂಪರಾಗತ ಕಲೆ, ಸಂಗೀತ, ನಂಬಿಕೆ, ಆಚರಣೆ, ಉತ್ಸವ ಇತ್ಯಾದಿ ಚಟುವಟಿಕೆಗಳು ದೂರಾಗುವ ಅಪಾಯ ನಡೆದಿದೆ. ಈ ಹಿನ್ನೆಲೆಯಲ್ಲಿ ಅವುಗಳ ಕುರಿತ ಅಧ್ಯಯನಕ್ಕೂ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಹಾವೇರಿ ಜಿಲ್ಲೆಯ ಹಾನಗಲ್ಲು ಪರಿಸರದಲ್ಲಿ ಪ್ರಾಚೀನ ಕಾಲದಿಂದಲೂ ಮುಂದುವರೆದುಕೊಂಡು ಬಂದಿರುವ ವಿಶಿಷ್ಟ ನಂಬಿಕೆ, ಸಂಪ್ರದಾಯ, ಆಚರಣೆ ಹಾಗೂ ಉತ್ಸವಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

**ನಾಡಹಬ್ಬ**

ಋತುಗಳು ಬದಲಾದಂತೆ ಧಾರ್ಮಿಕ ಉತ್ಸವಗಳನ್ನು ಆಚರಿಸುವುದು ಭಾರತದಲ್ಲಿ ಬೆಳೆದುಬಂದ ಸಂಪ್ರದಾಯ. ನವರಾತ್ರಿ ಹಾಗೂ ದುರ್ಗಾಪೂಜೆಯನ್ನು ಭಾರತದ ಎಲ್ಲಾ ಭಾಗಗಳಲ್ಲಿ ವಿವಿಧ ರೀತಿಯಲ್ಲಿ ಆಚರಿಸಲಾಗುತ್ತದೆ. ಈ ಆಚರಣೆಗಳಲ್ಲಿ ವಿವಿಧತೆ ಇದ್ದರೂ ಉತ್ಸವ ಕಾಲ ಮಾತ್ರ ಒಂದೇ ಆಗಿದೆ. ಶರದೃತುವಿನ ಆಶ್ವಿಜ ಮಾಸ ಮಳೆಯ ಆರ್ಭಟ ನಿಂತು ಜನರೆಲ್ಲ ಹರ್ಷದಿಂದ ಇರುವಾಗ, ಈ ಹಬ್ಬದ ಆಚರಣೆ ನಡೆಯುತ್ತದೆ. ಹಸಿರು ಹೊಲ, ಸೂಸುತ್ತಿರುವ ತಂಗಾಳಿ, ಹೊಳೆಯುವ ಸೂರ್ಯ, ಮಳೆಗಾಲದಲ್ಲಿ ಮಣ್ಣಾಗಿದ್ದ ಪ್ರಕೃತಿಗೆ

ಹಾಗೂ ಮಾನವನಿಗೆ ಚೈತನ್ಯವನ್ನುಂಟುಮಾಡುವ ಸಂದರ್ಭದಲ್ಲಿ ಅನಿಷ್ಟಗಳನ್ನು ದೂರ ಮಾಡಿ ಅಭಿಷ್ಠಗಳನ್ನು ಪೂರೈಸುವ ದೇವಿ ದುರ್ಗಿಗೆ ಭಕ್ತಿಯ ಪೂಜೆಯನ್ನು ಅರ್ಪಿಸಲಾಗುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮಹಾರಾಷ್ಟ್ರದಲ್ಲಿ ಗಣೇಶ ಉತ್ಸವವು ಜನ ಜಾಗೃತಿಗೆ ಕಾರಣವಾಗಿ ರಾಷ್ಟ್ರೀಯ ಹಬ್ಬವಾಗಿರುಂತೆ, ಬಂಗಾಳದಲ್ಲಿ ನವರಾತ್ರಿ ಸಂದರ್ಭದಲ್ಲಿ ದುರ್ಗಾ ಪೂಜೆ, ರಾಮಲೀಲಾ ಮಹೋತ್ಸವವನ್ನು ಆಚರಿಸುವ ಸಂಪ್ರದಾಯವಿದೆ. ರಾಮಾಯಣದ ಅನೇಕ ದೃಶ್ಯಗಳನ್ನು ಅಭಿನಯಿಸುವ ಮೂಲಕ ವಿಜಯ ದಶಮಿ ದಿನ ರಾವಣನ ಆಕೃತಿಯ ದಹನ ಮಾಡುತ್ತಾರೆ.

**ವಿಜಯನಗರ ಕಾಲ**

ವಿಜಯನಗರ ಸಾಮ್ರಾಜ್ಯದ ವೈಭವದ ದಿನಗಳಲ್ಲಿ ಹಂಪಿಯಲ್ಲಿ ದಸರಾ ಮಹೋತ್ಸವವನ್ನು ಆಚರಿಸಲಾಗುತ್ತಿತ್ತು. ಅಂದು ವಿಜಯ ನಗರಕ್ಕೆ ಭೇಟಿ ನೀಡಿದ ಅರಬ ಮತ್ತು ಪೋರ್ಚುಗೀಸ್ ಪ್ರವಾಸಿಗರು ಕಂಡು ಉಲ್ಲೇಖಿಸಿದ ಹಬ್ಬದ ವೈಭವವನ್ನು ಓದಿದಾಗ, ಕಲ್ಪನೆಯ ಚಿತ್ರ ಕಣ್ಣ ಮುಂದೆ ಸುಳಿಯುತ್ತದೆ. ವಿಜಯ ನಗರದ ಅರಸರು ವಿಜೃಂಭಣೆಯಿಂದ ಆಚರಿಸುತ್ತಿದ್ದ ನವರಾತ್ರಿ ಉತ್ಸವ ಧಾರ್ಮಿಕ, ಸಾಂಸ್ಕೃತಿಕ ಪುಸರುಜ್ಜೀವನದ ಸಂಕೇತವಾಗಿತ್ತು. ಈ ಉತ್ಸವ ಪ್ರಜೆಗಳ ಧರ್ಮನಿಷ್ಠೆ ಹಾಗೂ ಕಲಾಭಿಮಾನಗಳ ದ್ಯೋತಕವಾಗಿತ್ತು. ಸುಖ ಸಮೃದ್ಧಿಯ ನಾಡಾದ ವಿಜಯ ನಗರದ ದಸರಾ ಉತ್ಸವಕ್ಕೆ ರಾಜ್ಯದ ಎಲ್ಲಾ ಸಾಮಂತರು, ಸರ್ದಾರರು ಹಂಪಿಯ ಮಹಾನವಮಿ ದಿಬ್ಬದಲ್ಲಿ ಬಂದು ಸೇರುತ್ತಿದ್ದರು. ಗಾಯನ, ನೃತ್ಯ, ಮಲ್ಲಯುದ್ಧಗಳಿಗೆ ಪ್ರೋತ್ಸಾಹ ನೀಡಿ ಪ್ರತಿಭಾವಂತರನ್ನು ಗುರುತಿಸುವ ಸಂಪ್ರದಾಯವಿತ್ತು.

**ವಿಜಯದ ಸಂಕೇತ**

ದುಷ್ಟ ಶಕ್ತಿಯ ಸಂಹಾರದ ಸಂಕೇತವಾಗಿ ವಿಜಯೋತ್ಸವ ಎಲ್ಲಾ ಕಡೆ ನವರಾತ್ರಿಯಾಗಿ ವಿಸ್ತ್ರತಗೊಂಡಿದೆ. ಉತ್ಸವದಲ್ಲಿ ಶ್ರೀ ರಾಮಚಂದ್ರನು ರಾವಣನ ಸಂಹಾರದ ಸಂಕೇತವಾಗಿ ನವರಾತ್ರಿಯನ್ನು ಆಚರಿಸಲಾಗುತ್ತದೆ. ಅಲ್ಲದೆ ಮುಖ್ಯವಾಗಿ ಬಂಗಾಳ ಹಾಗೂ ಇತರೆಡೆಗಳಲ್ಲಿ ಜಗನ್ಮಾತೆ ದುರ್ಗಿಯು ಮಹಿಷಾಸುರನನ್ನು ಸಂಹರಿಸಿದ ದ್ಯೋತಕವಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ರಾವಣ ಮತ್ತು ಮಹಿಷಾಸುರ ದುಷ್ಟ ಶಕ್ತಿಯ ಪ್ರತೀಕ. ಅವರ ಅಟ್ಟಹಾಸ ಮಣಿಸಲು ೯ ರಾತ್ರಿಗಳ ಸಮಯ ಬೇಕಾಯಿತು. ಅದರ ನೆನಪೆ "ನವರಾತ್ರಿ". ೧೦ನೆಯದು ವಿಜಯದ ದಿನ "ವಿಜಯದಶಮಿಯಾಯಿತು". ನವರಾತ್ರಿ ಹಬ್ಬವನ್ನು ದಸರಾ ಎಂದು ಕರೆದು ವಿಜಯದ ಸಂಕೇತದಲ್ಲಿ ದೇವಿಯನ್ನು ಚಿತ್ರಿಸಲಾಗಿದೆ. ದಶಭುಜಗಳೊಡನೆ ಒಂದೊಂದು ಕೈಯಲ್ಲಿ ಆಯುಧ ಹಿಡಿದು ಸಿಂಹದ ಮೇಲೆ ಕುಳಿತಿರುವುದು ಸರ್ವೇಸಾಮಾನ್ಯ. ಈ ದೃಶ್ಯ ಒಂದು ದಿನಕ್ಕೆ ಒಂದೊಂದು ಆಯುಧ ೧೦ನೆಯ ದಿನಕ್ಕೆ ಶಿವನ ಪ್ರಸಾದವಾದ ತ್ರಿಶೂಲದ ವಿವರಣೆ ಇದೆ. ದೇವಸ್ಥಾನದಲ್ಲಿ ದೇವಿಯನ್ನು ಅಲಂಕರಿಸಿದರೆ, ಮನೆ ಮನೆಗಳಲ್ಲಿ ಗೊಂಬೆ ಅಲಂಕರಿಸುವುದು ದಕ್ಷಿಣ ಭಾರತದಲ್ಲಿ ವಿಶೇಷವಾಗಿದೆ.

**ಆಯುಧ ಪೂಜೆ**

ಮಹಾನವಮಿಯ ಆಯುಧ ಪೂಜೆಯ ದಿನದಂದು ಕ್ಷತ್ರಿಯರು ಶಸ್ತ್ರಗಳನ್ನು ಪೂಜಿಸಿದರೆ, ರೈತರು ಕೃಷಿ ಉಪಕರಣಗಳನ್ನು ಪೂಜಿಸುತ್ತಾರೆ. ಯಂತ್ರೋಪಕರಣ, ವಾಹನಗಳನ್ನು ಶುಚಿಗೊಳಿಸಿ ಅವುಗಳಿಗೆ ಪೂಜಿಸುವ ಸಂಪ್ರದಾಯ ನಮ್ಮಲ್ಲಿ ಬೆಳೆದು ಬಂದಿದೆ. ಅಂದು ಸೀಮೋಲ್ಲಂಘನ ಮಾಡಿ, ಪರಸ್ಪರರಲ್ಲಿ ಬನ್ನಿ ವಿನಿಮಯ ಮಾಡುವ ಪರಿಪಾಠ ವಿಜಯ ನಗರ ಕಾಲದಿಂದಲೂ ರೂಢಿಯಲ್ಲಿದೆ.

ಹಾನಗಲ್ಲಿನ ನಾಡ ಹಬ್ಬವನ್ನು ೧೯೩೭ರಿಂದ ವಿಜೃಂಭಣೆಯಿಂದ ಆಚರಿಸುವ ಸಂಪ್ರದಾಯ ಪ್ರಾರಂಭವಾಯಿತು. ಅದು ಇಂದಿಗೆ ೬೭ನೆಯ ವರ್ಷದಲ್ಲಿ ಪಾದಾರ್ಪಣೆ ಮಾಡಿದೆ. ಸ್ತ್ರೀಯೊಬ್ಬಳು ಮದುವೆಯಾಗಿ ಬಲಗಾಲನಿಟ್ಟು ಗಂಡನ ಮನೆ ಪ್ರವೇಶಿಸಿ, ತನ್ನ ಮನೆಯ ಶ್ರೇಯೋಭಿವೃದ್ಧಿ ಮತ್ತು ಸರ್ವಾಂಗೀಣ ಬೆಳವಣಿಗೆಗೆ ಹಗಲಿರುಳು ಶ್ರಮವಹಿಸಿ ಬಾಳು ಬೆಳಗುವಂತೆ, ಇಲ್ಲಿಯ ನಾಡಹಬ್ಬ ಹಾನಗಲ್ಲು ಜನತೆಯ ಸರ್ವಾಂಗೀಣ ಬೆಳವಣಿಗೆಗೆ ಕಾರಣವಾಗಿದೆ. ಜೊತೆಗೆ ಅನೇಕ ನಾಟಕ, ಸಂಗೀತ, ನೃತ್ಯ ಮತ್ತು ಸಾಹಿತಿಗಳನ್ನು ಪೋಷಿಸಿ,

ಗೌರವಿಸಿ ಇಡೀ ಕರ್ನಾಟಕಕ್ಕೆ ಮಾದರಿಯಾಗಿದೆ. ಸುಮಾರು ೬೭ ವರ್ಷ ತುಂಬಿದ ನಾಡಹಬ್ಬವು ತನ್ನ ಮೂಲ ಸ್ವರೂಪವನ್ನು ಬದಲಿಸಿದೆ. ಇಲ್ಲಿಯ ನಾಡಹಬ್ಬ ಪ್ರಾರಂಭವಾದುದು ಒಂದು ಅಭೂತಪೂರ್ವ ಕ್ಷಣವೆಂದೇ ಹೇಳಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡ ನಾಡಿನ ಜನಜಾಗೃತಿಯ ಅವಶ್ಯಕತೆ ಇರುವ ದಿನಗಳಲ್ಲಿ ಸಾಹಿತ್ಯಾಸಕ್ತಿಯ ಕ್ರಿಯಾಶೀಲ ಗೆಳೆಯರು ೧೯೩೬ರಲ್ಲಿ ವಸಂತ ಸಾಹಿತ್ಯೋತ್ಸವ ನಾಡಹಬ್ಬಕ್ಕೆ ನಾಂದಿಯಾದುದು ಬಿ.ಎಂ.ಶ್ರೀ. ಅವರ ಮಾತುಗಳ ಪ್ರೇರಣೆಯಿಂದ. ೧೯೩೭ರಲ್ಲಿ ದಿ.ಕೃಷ್ಣ ಚಿಮ್ಮಲಗಿ ಹಾಗೂ ಗೆಳೆಯರ ಬಳಗ ಸಾಂಸ್ಕೃತಿಕ ಬದುಕಿನ ವೇದಿಕೆಯನ್ನು ಹಾನಗಲ್ಲು ನಗರದ ಮಧ್ಯದಲ್ಲಿರುವ ವಿಠೋಬಾ ದೇವಸ್ಥಾನದಲ್ಲಿ ಪ್ರಾರಂಭಿಸಿತು. ದಿ.ಅನಂತ ಭಟ್ಟ ಕುಂದಪುರ ಮಾಸ್ತರರ ಮಾರ್ಗದರ್ಶನ, ಎಂ.ಕೆ. ನರಸಿಂಹಯ್ಯ ಅವರ ಅಧ್ಯಕ್ಷತೆಯಲ್ಲಿ ನಾಡ ಪೂಜೆ ನೆರವೇರಿಸಲಾಯಿತು. ಇದನ್ನು ಅವಿಚ್ಛಿನ್ನವಾಗಿ ಇಲ್ಲಿಯವರೆಗೂ ಮುಂದುವರೆಸಿಕೊಂಡು ಬಂದಿದ್ದು ದಿ.ತಮ್ಮಣ್ಣ ದೇಸಾಯಿ, ದಿ.ಶ್ರೀಮಾರ್ತಂಡರಾವ ಕುಲಕರ್ಣಿ ಹಾಗೂ ಇಂದಿನ ಯುವ ತರುಣರು ಮೊದಲ್ಗೊಂಡಂತೆ ಅನೇಕರು ಕಾರಣರಾಗಿದ್ದಾರೆ. ಅಲ್ಲದೆ ಸಮಸ್ತ ಹಾನಗಲ್ಲು ನಾಗರಿಕರು ನಾಡಹಬ್ಬವನ್ನು ವಿಜಯ ನಗರದ ಕಾಲದಂತೆ ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತ ಬಂದಿದ್ದಾರೆ. ಪ್ರತಿ ವರ್ಷವು ನಾಡಹಬ್ಬದ ಮೊದಲನೆಯ ದಿನ ತಾರಕೇಶ್ವರ ದೇವಸ್ಥಾನದಿಂದ ನಾಡದೇವಿಯ ಮೆರವಣಿಗೆ ಪ್ರಾರಂಭವಾಗುವುದು. ಈ ಕಾರ್ಯಕ್ರಮದ ಸನ್ನಿಧಾನವನ್ನು ವಿರಕ್ತಮಠದ ಶ್ರೀಗುರು ವಹಿಸುವರು. ಇತ್ತೀಚಿನ ವರ್ಷಗಳಲ್ಲಿ ಪ್ರತಿವರ್ಷ ತಪ್ಪದೆ ವಿರಕ್ತಮಠದ ಶ್ರೀಗಳು ಹಾಗೂ ಮೂರುಸಾವಿರಮಠದ ೧೦೦೮ ಗಂಗಾಧರ ರಾಜಯೋಗಿಂದ್ರರು ಸನ್ನಿಧಾನವನ್ನು ವಹಿಸುತ್ತ ಬಂದಿದ್ದಾರೆ. ಹಾನಗಲ್ಲು ತಾಲೂಕಿನ ತಹಶಿಲ್ದಾರರ ಅಧ್ಯಕ್ಷತೆಯಲ್ಲಿ ಮೆರವಣಿಗೆಗೆ ಚಾಲನೆ ನೀಡುವರು. ಮೆರವಣಿಗೆಯಲ್ಲಿ ಹಾನಗಲ್ಲು ಸಮಸ್ತ ನಾಗರಿಕರು, ವಿವಿಧ ವಾದ್ಯಗೋಷ್ಠಿಗಳೊಂದಿಗೆ ಗ್ರಾಮಕೇಂದ್ರಕ್ಕೆ ಆಗಮಿಸಿ, ದೇವಿಯ ಪ್ರತಿಷ್ಠಾಪನೆಯನ್ನು ಮಾಡುತ್ತಾರೆ. ೯ ದಿನಗಳವರೆಗೆ ಪ್ರತಿದಿನ ಸಾಯಂಕಾಲ ನಡೆಯುವ ಕಾರ್ಯಕ್ರಮದಲ್ಲಿ ಭಾಷಣ, ನಾಟಕ, ಸಂಗೀತ ಮತ್ತು ನೃತ್ಯ ಮೊದಲಾದವು ಪ್ರದರ್ಶನಗೊಳ್ಳುತ್ತವೆ. ವಿಜಯ ದಶಮಿ ದಿನ ಸೀಮೋಲ್ಲಂಘನದ ನಂತರ ತಾರಕೇಶ್ವರ ಗುಡಿಯಿಂದ ಊರಿನ ಓಣಿಗಳ ಮೂಲಕ ಬಂದ ಪಲ್ಲಕ್ಕಿಯ ಜೊತೆಗೆ ಸಮಸ್ತ ನಾಗರಿಕರು ಹವಳಿ ಹನುಮಂತ, ನಂತರ ಮಲ್ಲಿಗಾರದ ಸಿದ್ಧರಾಮೇಶ್ವರ ದೇವರ ದರ್ಶನ ಮಾಡಿ ಬನ್ನಿ ಮುಡಿಯುವರು. ಎಲ್ಲರೂ ಬನ್ನಿಯನ್ನು ತಮ್ಮ ತಮ್ಮಲ್ಲಿಯೇ ಪ್ರೀತಿ, ವಿಶ್ವಾಸದ ದ್ಯೋತಕವಾಗಿ ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಈ ರೀತಿಯಾಗಿ ಪ್ರಾಚೀನ ಕಾಲದ ನಾಡಹಬ್ಬದ ಉತ್ಸವ ಮತ್ತು ಸಂಪ್ರದಾಯವನ್ನು ಹಾನಗಲ್ಲು ನಾಗರಿಕರು ಉಳಿಸಿ ಬೆಳೆಸುತ್ತ ಬಂದಿದ್ದಾರೆ.

**ಹಾನಗಲ್ಲು ನಗರದ ಜಾತ್ರೆಗಳು**

ಮಾನವ ತನ್ನ ಬೆಳವಣಿಗೆಯ ಆರಂಭದ ದಿನಗಳಲ್ಲಿ ನಡೆಸುತ್ತಿದ್ದ ಆಚರಣೆ ಪದ್ಧತಿಗಳೆಲ್ಲ ಧಾರ್ಮಿಕ ಭಾವನೆಯ ಪ್ರೇರಕ ಹಿನ್ನೆಲೆಯಾಗಿತ್ತು. ಜನತೆಯ ಬದುಕಿನ ಭಾಗವಾಗಿ ನಡೆಯುವ ಪ್ರತಿ ಆಚರಣೆಗಳಲ್ಲಿ ಧಾರ್ಮಿಕ ಭಾವನೆಗಳನ್ನು ಕಾಣುತ್ತೇವೆ. ಮಾನವನ ಮನಸ್ಸು ಪಕ್ವಗೊಂಡಂತೆಲ್ಲಾ ಧರ್ಮದ ಬಗೆಗಿನ ಭಾವನೆಗಳು ನಾನಾ ರೀತಿಯಾಗಿ ರೂಪಗೊಂಡವು. ಪ್ರಕೃತಿಯಲ್ಲಿ ಕಾಣಿಸಿಕೊಳ್ಳುವ ಮಳೆ, ಗುಡುಗು, ಮಿಂಚು ಇತ್ಯಾದಿಗಳಲ್ಲಿ ತನ್ನದೆ ಆದ ನಿಲುವು ತಾಳಿದ. ಇವುಗಳ ಆರ್ಭಟಗಳೆಲ್ಲ ಬೆಳಕಿನಲ್ಲಿ ಕಾಣದ ಶಕ್ತಿಯ ಕೈವಾಡವಿದೆ ಎಂದು ಭಾವಿಸಿದ. ಅಂತಹ ಅಗೋಚರ ಶಕ್ತಿಯನ್ನು ಆರಾಧಿಸುತ್ತಾ ಬಂದ. ಕಲ್ಲು, ಮರ, ಮಣ್ಣುಗಳಲ್ಲಿ ದೈವತ್ವದ ಅಂಶಗಳನ್ನು ಕಂಡುಕೊಳ್ಳುತ್ತಾ ಅಂದಿನಿಂದ ಇಂದಿನ ವರೆಗೂ ಮನುಷ್ಯ ತಿಳಿದೊ ತಿಳಿಯದೆಯೊ ಹಲವಾರು ಆಚರಣೆಗಳನ್ನು ರೂಢಿಸಿಕೊಂಡು ಬಂದಿದ್ದಾನೆ.

ಪ್ರತಿನಿತ್ಯವು ನಿಸರ್ಗದ ಮಡಿಲಲ್ಲಿ ನಿರಂತರವಾಗಿ ಶ್ರಮವಹಿಸಿ ದುಡಿಯುವ ಜನತೆ, ಆ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ನೆಮ್ಮದಿಯ ಉಸಿರು ಬಿಡಲು ಹಬ್ಬ, ಹರಿದಿನ, ಉತ್ಸವ ಜಾತ್ರೆ ಮೊದಲಾದ ಸಾಮಾಜಿಕ ಆಚರಣೆಗಳನ್ನು ಕಂಡುಕೊಂಡರು. ಈ ಆಚರಣೆಗಳೆಲ್ಲ ಹುಟ್ಟಿಕೊಂಡಿದ್ದು ಸಂತೋಷದ ಜೀವನ ನಡೆಸಬೇಕೆಂಬ ಉದ್ದೇಶದಿಂದ. ಈ ವಿಧಿಗಳೆಲ್ಲ ಜಾನಪದದ ಭಾಗವೇ ಆಗಿರುವುದರಿಂದ ಇವುಗಳಲ್ಲಿ ವೈಯಕ್ತಿಕ ಕಾಳಜಿಗಿಂತ ಸಮಷ್ಠಿಯ ಹಿತಾಸಕ್ತಿಯ ಕಡೆಗೆ ಹೆಚ್ಚು ಒಲವು ಮೂಡಿತು. ಇಂತಹ ಉದ್ದೇಶವನ್ನು ಬಿಂಬಿಸುವ ಹಲವು ಆಚರಣೆಗಳಲ್ಲಿ ಜಾತ್ರೆಗಳು ತುಂಬಾ ಪ್ರಮುಖ ಪಾತ್ರವಹಿಸುತ್ತವೆ. ಜಾತ್ರೆಗಳು ನಮ್ಮ ನಾಡಿನಲ್ಲಿ

ಜರುಗುವ ಸ್ಥಳದ ಹೆಸರಿನಿಂದ ಅಥವಾ ಅಲ್ಲಿಯ ದೈವದ ಹೆಸರಿನಿಂದ ಜನಪ್ರಿಯವಾಗಿದೆ. ಈ ಜಾತ್ರೆಗಳಿಂದ ಪರಸ್ಪರ ಸ್ನೇಹ ಸಹಕಾರ ಬೆಳೆಯುತ್ತವೆ. ಜಾತ್ರೆ ನಡೆಯುವ ದಿನವನ್ನು ಊರಿನ ಪ್ರಮುಖರೆ ನಿರ್ಧರಿಸುವರು. ಪ್ರತಿ ಗ್ರಾಮಗಳಲ್ಲಿ ನಡೆಯುವಂತೆ, ಹಾನಗಲ್ಲು ನಗರದಲ್ಲಿ ತಾರಕೇಶ್ವರ, ಗ್ರಾಮದೇವತೆ, ರಾಮಲಿಂಗೇಶ್ವರ ಜಾತ್ರೆಗಳನ್ನು ವಿಜೃಂಭಣೆಯಿಂದ ಆಚರಿಸುತ್ತ ಬರಲಾಗಿದೆ.

**ತಾರಕೇಶ್ವರ ಜಾತ್ರೆ**

ಹಾನಗಲ್ಲಿನ ತಾರಕೇಶ್ವರ ದೇವಾಲಯ ವಾಸ್ತುಶಿಲ್ಪ ಕಲೆಯಿಂದ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಹಾನಗಲ್ಲಿಗೆ ಬಂದವರು ಸೂಕ್ಷ್ಮ ಕೆತ್ತನೆಯಿಂದ ಕೂಡಿದ ತಾರಕೇಶ್ವರ ದೇವಸ್ಥಾನ ಮತ್ತು ದೇವಾಲಯದಲ್ಲಿನ ರಾಮಾಯಣ, ಮಹಾಭಾರತ, ಕೃಷ್ಣಾವತಾರದ ಚಿತ್ರಗಳನ್ನು ನೋಡಲಿಕ್ಕೇ ಬೇಕು. ಕದಂಬರ ಕಾಲದಲ್ಲಿ ನಿರ್ಮಾಣವಾದ ತಾರಕೇಶ್ವರ ಗುಡಿಯ ಹತ್ತಿರ ಪ್ರಾಥಮಿಕ ಶಾಲೆಗೆ ಹೊಂದಿಕೊಂಡು ಇರುವುದೇ ತೇರಿನ ಮನೆ. ಅದರಲ್ಲಿ ಸುಂದರ ಕಲಾಕೃತಿಯ ಅತ್ಯಂತ ಭವ್ಯವಾದ ಕಟ್ಟಿಗೆಯ ತೇರು ಪ್ರಾಚೀನ ಕಾಲದ್ದು. ಇದರಿಂದ ಹಾನಗಲ್ಲಿನ ಪೂರ್ವಿಕರು ತಾರಕೇಶ್ವರ ಜಾತ್ರೆಯನ್ನು ಪ್ರತಿವರ್ಷವು ಆಚರಿಸುತ್ತಿದ್ದರೆಂದು ಸ್ಪಷ್ಟವಾಗಿ ಹೇಳಬಹುದು. ಗುಡಿಯ ಅರ್ಚಕರು, ಊರಿನ ಹಿರಿಯ ನಾಗರಿಕರು ೧೯೬೦ ತಾರಕೇಶ್ವರನ ಕೊನೆಯ ಜಾತ್ರೆಯೆಂದು ಹೇಳುತ್ತಾರೆ. ಇವರ ಪ್ರಕಾರ ಈ ಜಾತ್ರೆಗೆ ಸುತ್ತಮುತ್ತಲಿನ ಗ್ರಾಮಸ್ಥರು ಬರುತ್ತಿದ್ದರು. ಜಾತ್ರೆಯ ಪರಸೆ (ಅಂಗಡಿ)ಗಳು ಗುಡಿಯ ಮುಂಭಾಗದಿಂದ ಸೋಮವಾರ ಪೇಟೆಯಲ್ಲಿರುವ ಬಸವಣ್ಣ ದೇವರ ಗುಡಿಯ ವರೆಗೂ ಇರುತ್ತಿದ್ದವು. ತಾರಕೇಶ್ವರ ದೇವಾಲಯದ ಮುಂಭಾಗ ವಿಶಾಲವಾದ ತೇರು ಬೀದಿಯ ಅಕ್ಕ ಪಕ್ಕದಲ್ಲಿ ಪ್ರಾಚೀನ ಕಾಲದ ಮಂಟಪಗಳ ಅವಶೇಷಗಳು ಹರಡಿವೆ. ಈ ಮಂಟಪಗಳನ್ನು ಅಂಗಡಿ ಸಾಲುಗಳಿಗಾಗಿ ನಿರ್ಮಿಸಿರಬಹುದು. ಕಾಲಾನಂತರದಲ್ಲಿ ಈ ಜಾತ್ರೆ ನಿಂತು ಹೋಗಿರುವುದಕ್ಕೆ ಕಾರಣ ತಿಳಿದುಬಂದಿಲ್ಲ.

**ಗ್ರಾಮದೇವಿಯ ಜಾತ್ರೆ**

ಕರ್ನಾಟಕದಲ್ಲಿ ಸವದತ್ತಿಯ ಯಲ್ಲಮ್ಮದೇವಿ, ಶಿರಸಿಯ ಮಾರಿಕಾಂಬಾದೇವಿ ಹಾಗೂ ಚಂದ್ರಗುತ್ತಿಯ ಜಾತ್ರೆಗಳಂತೆ, ಹಾನಗಲ್ಲಿನ ಗ್ರಾಮದೇವಿಯ ಜಾತ್ರೆಯು ಪ್ರಸಿದ್ಧಿಯನ್ನು ಪಡೆದಿದೆ. ಈ ಜಾತ್ರೆ ೧೯೮೫ರಲ್ಲಿ ಸಿ.ಎಂ. ಉದಾಸಿಯವರ ಅಧ್ಯಕ್ಷತೆಯಲ್ಲಿ ಪ್ರಥಮಬಾರಿಗೆ ಪ್ರಾರಂಭವಾಯಿತು. ಅವರು ತಮ್ಮ ಗೆಳೆಯರೊಂದಿಗೆ ಸೇರಿ ಜಾತ್ರೆಯ ಸಮಿತಿಯನ್ನು ನಿರ್ಮಾಣ ಮಾಡಿ, ಸಮಸ್ತ ನಾಗರಿಕರಿಂದ ನಾಲ್ಕು ವರ್ಷಗಳಿಗೊಮ್ಮೆ ಜಾತ್ರೆ ನಡೆಯುವಂತೆ ವ್ಯವಸ್ಥೆಗೊಳಿಸಿದರು. ಈಗ ೯ ದಿನಗಳ ಕಾಲ ಜಾತ್ರೆ ಮಾಡಲಾಗುತ್ತದೆ. ಈ ಜಾತ್ರೆಯಲ್ಲಿ ಮೊದಲನೆಯ ದಿನ ಅಲಂಕೃತ ತೇರಿನಲ್ಲಿ ಗ್ರಾಮದೇವಿಯ ಮೂರ್ತಿಯನ್ನು ಊರಿನ ಪ್ರಮುಖ ಬೀದಿಗಳಲ್ಲಿ ವಿವಿಧ ವಾದ್ಯಗಳೊಂದಿಗೆ ಮೆರವಣಿಗೆ ಮಾಡಿ, ನಂತರ ಬೆಳಿಗ್ಗೆ ಪಾದಗಟ್ಟೆಯಲ್ಲಿ ಗ್ರಾಮದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾರೆ.

ಇನ್ನುಳಿದ ೭ ದಿನಗಳವರೆಗೆ ವಿಚಾರಗೋಷ್ಠಿ, ನಾಟಕ, ನೃತ್ಯ, ಸಂಗೀತ, ಯಕ್ಷಗಾನ ಹಾಗೂ ಕುಸ್ತಿ ಸ್ಪರ್ಧೆ ಮುಂತಾದ ಮನರಂಜನೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಜಾತ್ರೆಯಲ್ಲಿ ಅಂಗಡಿಗಳ ಸಾಲು ಬಹುಸಂಖ್ಯೆಯಲ್ಲಿರುತ್ತವೆ. ಸುತ್ತಮುತ್ತಲಿನ ಗ್ರಾಮಸ್ಥರು ಸೇರಿ ಈ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

**ರಾಮಲಿಂಗೇಶ್ವರ ಜಾತ್ರೆ**

ಹಾನಗಲ್ಲು ನಗರದ ಪೂರ್ವ ದಿಕ್ಕಿನಲ್ಲಿ ಧರ್ಮಾ ನದಿಯ ದಂಡೆಯ ಮೇಲೆ ಪೂರ್ವಾಭಿಮುಖವಾಗಿ ರಾಮಲಿಂಗೇಶ್ವರ ಗುಡಿ ಇದೆ. ಗುಡಿಯ ಎದುರಿಗೆ ಧರ್ಮಾ ನದಿಯು ದಕ್ಷಿಣ ಉತ್ತರ ಅಭಿಮುಖವಾಗಿ ಹರಿದಿದೆ. ರಾಮಲಿಂಗೇಶ್ವರ ಜಾತ್ರೆಯ ಪ್ರಾರಂಭದ ಹಿನ್ನೆಲೆ ಕುರಿತು ರೋಚಕ ಕಥೆಯಿದೆ. ಹಾನಗಲ್ಲು ನಗರದ ದಿ. ನಾಗೇಂದ್ರಪ್ಪ, ಹನುಮಂತಪ್ಪ ಕಲಾಲ ಅವರು ಪ್ರತಿ ದಿನ ಬೆಳಿಗ್ಗೆ ರಾಮಲಿಂಗೇಶ್ವರ ದೇವರಿಗೆ ನದಿಯ ನೀರಿನಿಂದ ಅಭಿಷೇಕ ಮಾಡುತ್ತಿದ್ದರು. ಒಂದು ದಿನ ಪೂಜೆ ಮಾಡುವಾಗ, ರಾಮಲಿಂಗೇಶ್ವರನ ಜಾತ್ರೆ ಮಾಡಬೇಕೆಂಬ ಪ್ರೇರಣೆಯಾಯಿತು. ಈ ಪ್ರೇರಣೆಯಿಂದಲೇ ೧೯೬೫ರ ಪೂರ್ವದಲ್ಲಿಯೆ ಊರಿನ ನಾಗರಿಕರೊಂದಿಗೆ ಸಮಾಲೋಚನೆ ಮಾಡಿ ಜಾತ್ರೆಯನ್ನು ಪ್ರಾರಂಭಿಸಿದರು. ಪ್ರತಿವರ್ಷ ಜನವರಿ ೧೪ರಿಂದ (ಸಂಕ್ರಮಣ ದಿನ) ಪ್ರಾರಂಭವಾಗಿ ೭

ದಿನಗಳವರೆಗೆ ಈ ಜಾತ್ರೆಯನ್ನು ಧರ್ಮಾನದಿ ದಂಡೆಯ ಮೇಲೆ ನಡೆಸಲಾಗುವುದು. ಸಂಕ್ರಮಣದ ಮರು ದಿವಸ ರಾಮಲಿಂಗೇಶ್ವರ ಮೂರ್ತಿಯನ್ನು ತೇರಿನಲ್ಲಿಟ್ಟು ಹಾನಗಲ್ಲಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ. ಇನ್ನುಳಿದ ದಿನಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ.

**ದಿಂಡಿ ಉತ್ಸವ**

ಹಾನಗಲ್ಲು ನಗರದಲ್ಲಿ ಪ್ರತಿವರ್ಷ ಎರಡು ದಿಂಡಿ ಉತ್ಸವಗಳು ನಡೆಯುತ್ತವೆ. ಈ ಉತ್ಸವದಲ್ಲಿ ಸಮಾಜ ಸಂಘಟನೆ, ಆಧ್ಯಾತ್ಮಿಕ ವಿಚಾರ ಮಂಥನ ಮೊದಲಾದ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ದಿಂಡಿ ಉತ್ಸವವನ್ನು ಪ್ರಾರಂಭದಲ್ಲಿ ಭಾವಸಾರ ಕ್ಷತ್ರಿಯ ಮತ್ತು ನ್ಯಾದಿ ಸಮಾಜದವರು ಕೂಡಿ ಆಚರಿಸುತ್ತಿದ್ದರು. ಇತ್ತೀಚೆಗೆ ಈ ಎರಡು ಸಮಾಜದವರು ಬೇರೆ ಬೇರೆ ದಿಂಡಿ ಉತ್ಸವವನ್ನು ಆಚರಿಸುತ್ತಿದ್ದಾರೆ. ಶ್ರಾವಣ ಮಾಸದ ಒಂದು ತಿಂಗಳ ವಿಠ್ಠಲ ಮಂದಿರದಲ್ಲಿ ಜ್ಞಾನೇಶ್ವರಿ ಪಾರಾಯಣ ಹಾಗೂ ವಾಸುದೇವ ಫೇರಾ (ನಗರ ಪ್ರದಕ್ಷಿಣೆ)ಗಳನ್ನು ನಡೆಸುತ್ತಾರೆ.

ನ್ಯಾವಿ ಸಮಾಜದವರು ಕಳೆದ ೬ ವರ್ಷದಿಂದಲೂ ಹಾನಗಲ್ಲಿನ ಲಕ್ಷ್ಮೀ ನಾರಾಯಣ ದೇವಸ್ಥಾನದಲ್ಲಿ ದಿಂಡಿ ಉತ್ಸವವನ್ನು ಆಚರಿಸುತ್ತಿದ್ದಾರೆ. ಮೂರು ದಿನಗಳ ಕಾಲ ನಡೆಯುವ ದಿಂಡಿ ಉತ್ಸವವನ್ನು ಚೈತ್ರಶುದ್ಧ ದಶಮಿಯಂದು ಪ್ರಾರಂಭಿಸಿ, ದಶಮಿಯ ದಿನದಂದು "ಪ್ರವೃತ್ತಿ" (ಜ್ಞಾನೇಶ್ವರಿ) ಗ್ರಂಥ ಸ್ಥಾಪನೆಯ ನಂತರ ಭಜನೆ ಕೀರ್ತನೆ ಮಾಡುವರು. ಏಕಾದಶಿಯಂದು ನಾಮಜಪ, ಪ್ರವಚನ, ಕೀರ್ತನ, ಭಜನಾ ಕಾರ್ಯಕ್ರಮ ಹಾಗೂ ದ್ವಾದಶಿಯಂದು ನಗರ ಪ್ರದಕ್ಷಿಣೆ ಮಾಡುತ್ತಾರೆ.

**ದತ್ತ ಜಯಂತಿ ಉತ್ಸವ**

ಹಾನಗಲ್ಲಿನ ದತ್ತ ಮಂದಿರದಲ್ಲಿ ಪ್ರತಿವರ್ಷ ಕಾರ್ತಿಕ ಬಹುಳ ದಶಮಿಯಿಂದ ದತ್ತ ಜಯಂತಿಯನ್ನು ಆಚರಿಸುತ್ತಾರೆ. ೧೯೯೩ರಲ್ಲಿ ಪಾಲ್ಗುಣ ಬಹುಳ ಸಪ್ತಮಿಯಂದು ದತ್ತನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಈ ಜಯಂತಿಯಲ್ಲಿ ತೊಟ್ಟಿಲೋತ್ಸವ, ಸತ್ಯ ನಾರಾಯಣ ಪೂಜೆ ಹಾಗೂ ಮದುಕರಿ ಅಂದರೆ ೭ ಜನರು ಶ್ರೀ ಸದ್ಗುರು ದತ್ತ ಸ್ವರೂಪದಲ್ಲಿ "ದಿಗಂಬರಾ ದಿಗಂಬರಾ ಶ್ರೀಪಾದ ವಲ್ಲಭ ದಿಗಂಬರಾ" ಎಂದು ಭಜನೆ ಮಾಡುತ್ತಾ ಭಕ್ತಾದಿಗಳ ಮನೆಗೆ ಭವತಿ ಬೇಡಲು ಹೋಗುತ್ತಾರೆ.

**ಹನುಮ ಜಯಂತಿ**

ಸೋಮವಾರ ಪೇಟೆಯಲ್ಲಿರುವ ಮಾರುತಿ ದೇವಸ್ಥಾನದಲ್ಲಿ ಚೈತ್ರ ಮಾಸದಲ್ಲಿ ಹನುಮ ಜಯಂತಿ, ವೈಶಾಖ ಮಾಸದಲ್ಲಿ ರಾಮನವಮಿ, ಶ್ರಾವಣ ಮಾಸದಲ್ಲಿ ಗೋಕುಲಾಷ್ಟಮಿಗಳನ್ನು ಆಚರಿಸಲಾಗುತ್ತದೆ.

**ಗೋಪಾಲ ಕಾವಲಿ**

ಹಾನಗಲ್ಲು ನಗರದ ಮಧ್ಯಭಾಗದಲ್ಲಿರುವ ವಿಠ್ಠಲ ಮಂದಿರದಲ್ಲಿ ವರ್ಷಕ್ಕೆ ೨ ಬಾರಿ ಗೋಪಾಲ ಕಾವಲಿಯನ್ನು ಆಚರಿಸುತ್ತಾ ಬಂದಿದ್ದಾರೆ. ಶ್ರಾವಣ ಶುದ್ಧದಂದು ಮನೆ ಮನೆಗೆ ತೆರಳುತ್ತಾರೆ. ಹೆಣ್ಣು ಮಕ್ಕಳು ಗೋಪಾಲ ಕಾವಲಿಗೆ ಅರಿಶಿಣ ಕುಂಕುಮದಿಂದ ಪೂಜಿಸಿ ಆರತಿ ಮಾಡಿ ಗಡಿಗೆಯಲ್ಲಿ ಅವಲಕ್ಕಿ ಅಥವಾ ಭತ್ತದ ಅಳ್ಳು ಹಾಕುತ್ತಾರೆ. ನಂತರ ಕಾವಲಿಯನ್ನು ವಿಠ್ಠಲ ದೇವರ ಮೂರ್ತಿಯ ಮೇಲೆ ಕಟ್ಟಿ, ಭಜನೆ, ಕೋಲಾಟ ಮುಂತಾದ ಮನರಂಜನೆ ಕಾರ್ಯಕ್ರಮಗಳನ್ನು ಏರ್ಪಡಿಸಿ, ಕಡಗೋಲದ ಮೂಲಕ ಗೋಪಾಲ ಕಾವಲಿಯನ್ನು ಒಡೆಯುತ್ತಾರೆ. ದೇವರ ಮೇಲೆ ಬಿದ್ದ ಅವಲಕ್ಕಿ, ಮೊಸರನ್ನು ಪ್ರಸಾದ ರೂಪದಲ್ಲಿ ಎಲ್ಲ ಭಕ್ತಾದಿಗಳಿಗೆ ಹಂಚುತ್ತಾರೆ. ಎರಡನೆಯ ಬಾರಿ ಗೋಪಾಲ ಕಾವಲಿಯನ್ನು ಆಶಾಢ ಶುದ್ಧದಲ್ಲಿ ಆಚರಿಸುವ ಸಂಪ್ರದಾಯವಿದೆ. ಇದು ಪ್ರಾಚೀನ ಕಾಲದಿಂದ ಇಂದಿನವರೆಗೂ ಅವಿರತವಾಗಿ ನಡೆದು ಬಂದ ಒಂದು ಸಾಂಸ್ಕೃತಿಕ ಆಚರಣೆಯಾಗಿದೆ.

**ರಾಮೋತ್ಸವ**

ಹಾನಗಲ್ಲಿನ ರಾಮ ಮಂದಿರದಲ್ಲಿ ೬೯ ವರ್ಷಗಳಿಂದ ರಾಮೋತ್ಸವವನ್ನು ಆಚರಿಸುತ್ತ ಬರಲಾಗಿದೆ. ಯುಗಾದಿಯ ನಂತರ ೯ ದಿನಗಳ ವರೆಗೆ ನಡೆಯುವ ಆಚರಣೆಯಲ್ಲಿ ಪ್ರತಿ ದಿನ ಸಂಜೆ ವಿದ್ವಾಂಸರು, ಸ್ವಾಮಿಗಳು, ಉಪನ್ಯಾಸ ಪಾರಾಯಣವನ್ನು ಮಾಡುತ್ತಾರೆ. ಬೆಳಿಗ್ಗೆ ಮತ್ತು ಸಂಜೆ ಕಾಕಡಾರತಿ ಮತ್ತು ತೊಟ್ಟಿಲೋತ್ಸವ ನಡೆಸುತ್ತಾರೆ.

**ಕುಮಾರೇಶ್ವರ ಜಯಂತಿ**

ಈ ಜಯಂತಿಯನ್ನು ಸುಮಾರು ೭೪ ವರ್ಷಗಳಿಂದ ಅತ್ಯಂತ ವೈಭವದಿಂದ ಶ್ರದ್ಧೆ - ಭಕ್ತಿಯಿಂದ ಆಚರಿಸಲಾಗುತ್ತದೆ. ಇದು ಪ್ರತಿ ವರ್ಷ ಮಾಘ ಬಹುಳ ಶಷ್ಠಿ ಫೇಬ್ರುವರಿ ತಿಂಗಳಲ್ಲಿ ಮೂರು ದಿನಗಳವರೆಗೆ ನಡೆಯುತ್ತದೆ.

**ದನ ಬೆದರಿಸುವ ಕಾರ್ಯಕ್ರಮ**

ದೀಪಾವಳಿಯಲ್ಲಿ ದನ ಬೆದರಿಸುವ ಕಾರ್ಯಕ್ರಮವನ್ನು ರಾಷ್ಟ್ರಮಟ್ಟದಲ್ಲಿ ಆಚರಿಸುವ ಪದ್ಧತಿ ರೂಢಿಯಲ್ಲಿದೆ. ಹಾನಗಲ್ಲು ನಗರದಲ್ಲಿ ಪ್ರತಿ ವರ್ಷ ಈ ಕಾರ್ಯಕ್ರಮವನ್ನು ಕಮಾಟಗೇರಿ ಓಣಿಯಲ್ಲಿ ಅತ್ಯಂತ ಶಿಸ್ತು ಅಚ್ಚುಕಟ್ಟುತನದಿಂದ ನಡೆಸಲಾಗುತ್ತದೆ. ಮೊದಲು ಇದು ಕುರುಬಗೇರಿಯ ಗೌಳಿ ಓಣಿಯಲ್ಲಿ ನಡೆಯುತ್ತಿತ್ತು. ಕೆಲವು ಶಾಸನಗಳಲ್ಲಿ ಹಾಗೂ ಮಹಾಕಾವ್ಯದಲ್ಲಿ ಇದರ ಪ್ರಸ್ತಾಪವಿದೆ. ಅಲ್ಲದೆ ಗೋಗ್ರಹಣ ಕಾವ್ಯದಲ್ಲಿ ವಿರಾಟನ ಗೋಗೃಹಣದ ಬಗ್ಗೆ ಉಲ್ಲೇಖಿಸಲಾಗಿದೆ. ಇದರಿಂದ ದನ ಬೆದರಿಸುವ ಕಾರ್ಯಕ್ರಮವನ್ನು ಪ್ರಾಚೀನ ಕಾಲದಿಂದಲೂ ಆಚರಿಸಿಕೊಂಡು ಬಂದಿದ್ದು ಸ್ಪಷ್ಟವಾಗುತ್ತದೆ. ದನ ಬೆದರಿಸುವ ಕಾರ್ಯಕ್ರಮಕ್ಕಿಂತ ಪೂರ್ವದಲ್ಲಿ ಬೆಳಿಗ್ಗೆ ಎಲ್ಲರ ಮನೆಯಲ್ಲಿಯೂ ದನಗಳ ಪೂಜೆ, ಹಟ್ಟಿಯ ಪೂಜೆ ಮಾಡುತ್ತಾರೆ. ದೀಪಾವಳಿಯ ವಿಶೇಷ ಪೂಜೆ ಎಂದರೆ ಸಗಣಿಯಿಂದ ಹಟ್ಟಿಯನ್ನು ತಯಾರಿಸಿ ಪಾಂಡವ, ಕೌರವರನ್ನು ಪ್ರತಿಷ್ಠಾಪಿಸಿ, ಅದನ್ನು ಕಬ್ಬು, ಜೋಳದ ತೆನೆಯಿಂದ ಶೃಂಗರಿಸುತ್ತಾರೆ. ಪೂಜೆಯ ಕಾಲದಲ್ಲಿ ದೀಪವನ್ನು ಹಚ್ಚಿ, ಅದು ನಂದದಂತೆ ಮನೆಯ ಹಿರಿಯರು ಲಕ್ಷ್ಯವಿಟ್ಟು ಗಮನಿಸುತ್ತಾರೆ. ಹಟ್ಟಿ ಪೂಜೆಯಾದ ನಂತರ ದನಗಳನ್ನು ಶೃಂಗರಿಸಿ ದನ ಬೆದರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಗೌಳಿಗರಿಂದ ಎಮ್ಮೆಗಳನ್ನು ಬೆದರಿಸುವ ಕಾರ್ಯಕ್ರಮ ನಡೆಯುತ್ತದೆ. ಪ್ರತಿಯೊಬ್ಬ ಗೌಳಿ ಕುರುಬಗೇರಿ ಓಣಿಯಲ್ಲಿರುವ ಕರೆಮ್ಮನ ಗುಡಿಗೆ ಹೋಗಿ ಬರಬೇಕೆಂಬ ಅನಾದಿ ಕಾಲದಿಂದಲೂ ಬಂದ ಒಂದು ಸಂಪ್ರದಾಯ. ಇದನ್ನು ಗೌಳಿಗರು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾ ಬಂದಿದ್ದಾರೆ. ದೀಪಾವಳಿಯ ಮುಂಜಾನೆ ಗೌಳಿಗರು ಎಮ್ಮೆಗಳನ್ನು ಶೃಂಗರಿಸಿ, ಸಂಜೆ ತಮ್ಮ ತಮ್ಮ ಮನೆಯಿಂದ ಕೈಯಲ್ಲಿ ಕಂಬಳಿಯನ್ನು ಹಿಡಿದು ಕೇಕೆ ಹಾಕುತ್ತಾ ಓಡುತ್ತಾರೆ. ಇವರ ಹಿಂದೆ ಎಮ್ಮೆಗಳು ಸಹ ಹಿಂಬಾಲಿಸುತ್ತವೆ. ಕುರುಬಗೇರಿಗೆ ಬಂದು ಮಾರೆಮ್ಮ ದೇವಿಗೆ ಪೂಜಿಸಿದ ನಂತರ ಈ ಕಾರ್ಯಕ್ರಮ ಮುಕ್ತಾಯಗೊಳ್ಳುತ್ತದೆ.

**ಗೌರಿ ಹಬ್ಬ**

ಹೆಣ್ಣು ಮಕ್ಕಳು ತಮ್ಮ ಮನೆಗಳಲ್ಲಿ ಗೌರಿ ಹಬ್ಬವನ್ನು ಆಚರಿಸುತ್ತಾರೆ. ಇದು ಸೀಗೆ ಹುಣ್ಣಿಮೆಯಿಂದ ಪ್ರಾರಂಭವಾಗುತ್ತದೆ. ದೀಪಾವಳಿ, ತುಳಸಿ ಲಗ್ನದ ನಂತರ ನಂದಿಯ ಮೇಲೆ ಕುಳಿತುಕೊಂಡ ಶಿವ, ಪಾರ್ವತಿಯ ಮೂರ್ತಿಯನ್ನು ತಯಾರಿಸಿ, ೯ ದಿನಗಳ ವರೆಗೆ ಪೂಜಿಸುತ್ತಾರೆ. ಈ ಕಾರ್ಯಕ್ರಮದಲ್ಲಿ ಗೌರಿಯನ್ನು ತೊಟ್ಟಿಲಲ್ಲಿ ಹಾಕುವುದು, ಸಕ್ಕರೆ ಆರತಿಯನ್ನು ಬೆಳಗುವುದು, ಕೊನೆಯ ೨ ದಿನಗಳಲ್ಲಿ 'ಕೋಲ ಗೌರಿ ಕೋಲ', 'ಕಂಚಿನ ಗೌರಿ ಕೋಲ' ಎಂಬ ಜಾನಪದ ಹಾಡು, ಭಾವಗೀತೆ, ಭಕ್ತಿಗೀತೆ ಮೊದಲಾದ ಮನೋರಂಜನೆ ಕಾರ್ಯಕ್ರಮಗಳನ್ನು ನಡೆಸುತ್ತಾರೆ.

ಇದೆ ರೀತಿಯಾಗಿ ಪ್ರತಿಯೊಂದು ಮನೆ ಮನೆಯಲ್ಲಿ ತುಳಸಿ ಲಗ್ನ, ಮಣ್ಣೆತ್ತಿನ ಮತ್ತು ಗಣಪತಿ ಮೊದಲಾದ ಹಬ್ಬಗಳನ್ನು ಆಚರಿಸುವ ರೂಢಿ ಸಂಪ್ರದಾಯ ಹಾನಗಲ್ಲು ನಗರದಲ್ಲಿ ಬೆಳೆದು ಬಂದಿದೆ. ಗಣಪತಿಯ ಹಬ್ಬದಲ್ಲಿ ಹೆಣ್ಣು ಮಕ್ಕಳು ಘಟ್ಟವನ್ನು ಹಾಕಿರುತ್ತಾರೆ. ಮಣ್ಣಿನ ಮಡಿಕೆಯಲ್ಲಿ ಮಣ್ಣು ತುಂಬಿ ಅದರಲ್ಲಿ ಗೋದಿಕಾಳು ಅಥವಾ ಭತ್ತವನ್ನು ತುಂಬಿಟ್ಟು ವಿಜಯ ದಶಮಿಯವರೆಗೂ ಮೊಳಕೆಯನ್ನು

ಬೆಳೆಸುತ್ತಾರೆ. ಇದಕ್ಕೆ ಘಟ್ಟ ಎಂದು ಕರೆಯುತ್ತಾರೆ. ವಿಜಯ ದಶಮಿ ದಿನ ಗಂಡು ಮಕ್ಕಳು ಬನ್ನಿ ಮುಡಿಯಲು ಹೋದರೆ, ಹೆಣ್ಣು ಮಕ್ಕಳು ಘಟ್ಟವನ್ನು ತಲೆಯ ಮೇಲೆ ಹೊತ್ತುಕೊಂಡು ಆನೆಕೆರೆಗೆ ಹೋಗಿ, ಗಂಗಾ ಪೂಜೆ ಮಾಡಿ ತುಂಬಿದ ಆನೆಕೆರೆಯಲ್ಲಿ ಘಟ್ಟ ಬಿಡುತ್ತಾರೆ.

ಮೇಲಿನ ಆಚರಣೆಗಳಲ್ಲದೆ ಪ್ರತಿ ವರ್ಷ ಯುಗಾದಿಯ ನಂತರ ಮೇ ತಿಂಗಳಲ್ಲಿ ಬರುವ ಅಕ್ಷತೃತೀಯ ದಿನದಂದು ಶಂಕರಾಚಾರ್ಯ, ಬಸವ ಮತ್ತು ಶಿವಾಜಿಯ ಜಯಂತಿಗಳನ್ನು ಆಚರಿಸುವುದು ಸಾಮಾನ್ಯವಾಗಿ ನಡೆದು ಬಂದಿದೆ.

ಹಾನಗಲ್ಲು ಬಹು ಸಮಾಜದಿಂದ ಕೂಡಿದ ನಗರ. ಇಲ್ಲಿ ವಾಸವಾಗಿರುವ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದವರು ತಮ್ಮದೇ ಆದ ನಂಬಿಕೆ, ಸಂಪ್ರದಾಯಗಳಲ್ಲಿ ಅನೇಕ ಹಬ್ಬಗಳನ್ನು ಆಚರಿಸುತ್ತ ಬಂದಿದ್ದಾರೆ.

ಇಂದಿನ ನಗರೀಕರಣ, ಜಾಗತೀಕರಣ ಮತ್ತು ವೈಜ್ಞಾನಿಕ ಯುಗದಲ್ಲಿ ನಂಬಿಕೆ, ಸಂಪ್ರದಾಯಗಳು ಮರೆಯಾಗುತ್ತಿವೆ. ಆದರೂ ಹಾನಗಲ್ಲು ನಗರದ ಜನತೆ ಇವುಗಳ ಆಚರಣೆಯಲ್ಲಿ ಉತ್ಸಾಹವನ್ನು ಕಳೆದುಕೊಂಡಿಲ್ಲ. ಈ ಮೂಲಕ ಪರಸ್ಪರ ವಿಶ್ವಾಸ, ಸೌಹಾರ್ದತೆಯನ್ನು ಬೆಳೆಸಿಕೊಂಡು ಬರುವಲ್ಲಿ ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳು ಮಹತ್ವದ ಪಾತ್ರವನ್ನು ವಹಿಸಿವೆ.